ಮಾರ್ಚ್ 2016 ಸಂಚಿಕೆ – 8 ಸಂಪುಟ – 31

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................... 2

ಕೇಂದ್ರ ಮುಂಗಡ ಪತ್ರ 2016–17 .................... 3
* **ಯೋಜನಾ ಸಂಪಾದಕೀಯ ಮಂಡಳಿ**

ರೈಲ್ವೆ ಬಜೆಟ್ 2016–17 .................... 17
* **ಯೋಜನಾ ಸಂಪಾದಕೀಯ ಮಂಡಳಿ**

ಕೇಂದ್ರ ಆಯವ್ಯಯ 2016–17 : ಕೃಷಿಯತ್ತಲೇ ಚಿತ್ತ .................... 20
* **ಸಿಎಸ್‌ಸಿ ಶೇಖರ್**

ಮೂಲಸೌಕರ್ಯ : ಕಾರ್ಯತಂತ್ರ ಮತ್ತು ಅನುಷ್ಠಾನದ ಸವಾಲು 23
* **ಜಿ ರಘುರಾಮ್**

ಸಾಂಪ್ರದಾಯಿಕ ಅಭಿವೃದ್ಧಿ ಅಂದಾಜು ಏಕೆ? .................... 26
* **ಡಿಹೆಚ್ ಪೈ ಪನಂದಿಕರ್**

ರೈಲ್ವೆ ಬಜೆಟ್ 2016–17; ವಿಶ್ಲೇಷಣೆ .................... 29
* **ಶಾಂತಿ ನಾರೈನ್**

ಬಜೆಟ್: ಬ್ಯಾಂಕಿಂಗ್ ಕ್ಷೇತ್ರವನ್ನು ಪುನಶ್ಚೇತನಗೊಳಿಸಬಲ್ಲದೆ? ... 31
* **ಎನ್‌ಆರ್ ಭಾನುಮೂರ್ತಿ, ಮನೀಶ್ ಪ್ರಸಾದ್**

ಮೂಲಸೌಕರ್ಯ ಮತ್ತು ವಿದ್ಯುದೀಕರಣ .................... 34
* **ಹಿರಣ್ಮಯ್ ರಾಯ್, ಅನಿಲ್ ಕುಮಾರ್, ಪ್ರಸೂಮ್ ದ್ವಿವೇದಿ**

ಬೃಹತ್ ಉದ್ಯೋಗ ಸೃಷ್ಟಿ, ಬೆಳವಣಿಗೆಗೆ ಚಾಲನೆ .................... 37
* **ನೀರಜ್ ಬಾಜಪೇಯಿ**

ಬಜೆಟ್; ತೆರಿಗೆ ಲೆಕ್ಕಾಚಾರ .................... 40
* **ಜಯಂತ್ ರಾಯ್ ಚೌಧರಿ**

ಮುಂಗಡ ಪತ್ರ ಮತ್ತು ಲಿಂಗ ಸಂವೇದನೆ .................... 42
* **ಪ್ರೊ. ಹೆಚ್.ಆರ್. ಉಮ**

ಕರ್ನಾಟಕ ಬಜೆಟ್ 2016–17 .................... 44

ನಿಮಗಿದು ತಿಳಿದಿದೆಯೇ? .................... 71

ವಾರ್ತಾ ವಿಶೇಷ .................... 72

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಳಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತವೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

# ಕಟ್ಟೋಣ ಭಾರತವ




ಕೇಂದ್ರದ 2016–17ನೇ ಸಾಲಿನ ಮುಂಗಡಪತ್ರವನ್ನು ರೈತಪರ, ಬಡವರ ಪರ ಮತ್ತು ಬೆಳವಣಿಗೆ ಪರ ಎಂದು ವ್ಯಾಪಕವಾಗಿ ಬಣ್ಣಿಸಲಾಗಿದೆ. ಈ ಗ್ರಹಿಕೆ ಏಕೆ? ಕೃಷಿ, ದೇಶದ ಒಟ್ಟು ದೇಶೀಯ ಉತ್ಪನ್ನ – ಜಿಡಿಪಿಗೆ ಸುಮಾರು ಶೇ 17ರಷ್ಟು ಕೊಡುಗೆ ನೀಡುತ್ತಿದ್ದು, ದೇಶದ ಅರ್ಧದಷ್ಟು ಕಾರ್ಯಪಡೆ ಇದರಲ್ಲಿ ತೊಡಗಿರುವ ಕಾರಣ, ಒಟ್ಟಾರೆ ಆರ್ಥಿಕತೆಯಲ್ಲಿ ಕೃಷಿ ಮಹತ್ವದ ಪಾತ್ರ ವಹಿಸುತ್ತಿದೆ. 2020ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಬೇಕೆನ್ನುವ ಸರ್ಕಾರದ ಉದ್ದೇಶ ಮಹತ್ವಾಕಾಂಕ್ಷೆಯದ್ದೆನಿಸಿದರೂ ಕೃಷಿ ಮತ್ತು ರೈತರ ಕಲ್ಯಾಣಕ್ಕಾಗಿ, ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಎರಡುಪಟ್ಟು ಹೆಚ್ಚು, ಅಂದರೆ ಸುಮಾರು 45,000 ಕೋಟಿ ರೂಪಾಯಿ ನಿಗದಿಪಡಿಸಿರುವುದು, ರೈತರಲ್ಲಿ ನಿಶ್ಚಿತವಾಗಿ ಆದಾಯ ಭದ್ರತೆ ಭಾವನೆ ಮೂಡಿಸಿದೆ.

ಕಳೆದೆರಡು ವರ್ಷಗಳಿಂದ ಸತತ ಕಡಿಮೆ ಮಳೆಯಿಂದಾಗಿ ರೈತರು ಪಟ್ಟ ಬವಣೆ ಹಿನ್ನೆಲೆಯಲ್ಲಿ ಇಂತಹದ್ದೊಂದು ಉಪಕ್ರಮ ಅತ್ಯವಶ್ಯಕವಾಗಿತ್ತು. 'ಪ್ರಧಾನಮಂತ್ರಿ ಸಿಂಚಾಯಿ ಯೋಜನೆ' ನೀರಾವರಿ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶ ಹೊಂದಿದ್ದು, ಇದರನ್ವಯ ಹೆಚ್ಚುವರಿಯಾಗಿ 28.5 ಲಕ್ಷ ಹೆಕ್ಟೇರು ಜಮೀನನ್ನು ನೀರಾವರಿಗೊಳಪಡಿಸುವ ಬದ್ಧತೆ ವ್ಯಕ್ತಪಡಿಸಲಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕ್–ನಬಾರ್ಡ್ ಅಡಿ 20,000 ಕೋಟಿ ರೂ. ಮೊತ್ತದ ನೀರಾವರಿ ನಿಧಿ ಸ್ಥಾಪನೆ ಮತ್ತು ಹವಾಮಾನ ವೈಪರಿತ್ಯದಿಂದ ಉಂಟಾಗುವ ಫಸಲು ವೈಫಲ್ಯ, ಬವಣೆ ನಿವಾರಿಸಲು ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಗೆ 5,500 ಕೋಟಿ ರೂ. ನೀಡಿಕೆ ಕೂಡ ಸದೃಢ ಉಪಕ್ರಮಗಳಾಗಿವೆ.

ಬಜೆಟ್‌ನಲ್ಲಿ ಜನಪ್ರಿಯತೆಗಿಂತ ಆರ್ಥಿಕತೆಯ ಮೂಲಭೂತ ಅಂಶಗಳ ಮೇಲೆ ಗಮನಹರಿಸಲು ಪ್ರಯತ್ನಿಸಲಾಗಿದೆ. ಪ್ರತಿಯೊಂದು ಕ್ಷೇತ್ರದ ಅವಶ್ಯಕತೆ ಆಧರಿಸಿ ಹಣಕಾಸು ಹಂಚಿಕೆ ಮಾಡಲಾಗಿದೆ. ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಕ್ಷೇತ್ರಕ್ಕೆ ಹಣ ಬಟವಡೆಯನ್ನು ಒಟ್ಟಾರೆಯಾಗಿ 87,765 ಕೋಟಿ ರೂಗಳಿಗೆ ಹೆಚ್ಚಿಸುವ ಮೂಲಕ ಆದ್ಯತೆ ನೀಡಲಾಗಿದೆ. ಬಜೆಟ್‌ನಲ್ಲಿ ಗ್ರಾಮಪಂಚಾಯತ್, ಮತ್ತು ನಗರಸಭೆಗಳಿಗೆ ಒಟ್ಟಾರೆಯಾಗಿ 2.87 ಲಕ್ಷ ಕೋಟಿ ರೂಪಾಯಿ ಅನುದಾನ ನೆರವು ಒದಗಿಸಲಾಗಿದ್ದು ಇದು ಬಂಪರ್ ಕೊಡುಗೆಯಾಗಿದೆ. ಇದು ಕಳೆದ ಐದು ವರ್ಷಗಳಿಗೆ ಹೋಲಿಸಿದಲ್ಲಿ ಶೇ.228 ರಷ್ಟು ಹೆಚ್ಚಾಗಿದೆ. ಅಂದರೆ ಸರಾಸರಿ ಅನುದಾನ ಪ್ರತಿ ಗ್ರಾಮಪಂಚಾಯತ್‌ಗೆ ರೂ.80 ಲಕ್ಷಕ್ಕೂ ಹೆಚ್ಚು ಹಾಗೂ ನಗರ ಸ್ಥಳೀಯ ಸಂಸ್ಥೆ 21 ಕೋಟಿ ರೂಗಳಿಗೂ ಹೆಚ್ಚು ದೊರಕಲಿದೆ. ಕೃಷಿಯೇತರ ಗ್ರಾಮೀಣ ಕ್ಷೇತ್ರದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ 38,500 ಕೋಟಿ ರೂ. ನಿಗದಿಪಡಿಸಿರುವುದು ಹಳ್ಳಿ ಮತ್ತು ಸಣ್ಣ ಪಟ್ಟಣಗಳನ್ನು ರೂಪಾಂತರಿಸಲು ನೆರವಾಗಲಿದೆ. ಇದಲ್ಲದೆ ಪ್ರಧಾನಮಂತ್ರಿ ಗ್ರಾಮ್‌ಸಡಕ್ ಯೋಜನಾದಡಿ, ಗ್ರಾಮೀಣ ರಸ್ತೆಗಳಿಗಾಗಿ ಹಣ ಹಂಚಿಕೆ, ಮೂಲಸೌಕರ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಹಣಕಾಸು ವೆಚ್ಚ, ರೈತರ ಕಲ್ಯಾಣ ಮತ್ತು ಗ್ರಾಮೀಣ ಆರ್ಥಿಕತೆ ಅಭಿವೃದ್ಧಿ ಮೇಲೆ ಸಕಾರಾತ್ಮಕ ಧನಾತ್ಮಕ ಪರಿಣಾಮ ಬೀರಲಿವೆ.

ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ಸಾಮಾಜಿಕ ಕ್ಷೇತ್ರಕ್ಕೆ ಬೃಹತ್ ಒತ್ತು ನೀಡುವ ಉದ್ದೇಶದಿಂದ ಸರ್ಕಾರ ಮಹಿಳೆಯರ ಮೇಲಿನ ಮುಂಗಡ ಪತ್ರ ವೆಚ್ಚವನ್ನು ಸಚಿವ ಖಾತೆಯಾದ್ಯಂತ ಒಟ್ಟಾರೆಯಾಗಿ ಶೇ.55ರಷ್ಟು ಹೆಚ್ಚಿಸಿದೆ. ಮಹಿಳಾಸಶಕ್ತೀಕರಣದ ರಾಷ್ಟ್ರೀಯ ದೀಕ್ಷಾದಳಕ್ಕೆ ದುಪ್ಪಟ್ಟು ಹಣ ನೀಡಿಕೆ, ನಿರ್ಭಯಾ ಯೋಜನೆಗೆ ಹೆಚ್ಚಿನ ಹಣನೀಡಿಕೆ, ಗ್ರಾಮೀಣ ಕುಟುಂಬಗಳಲ್ಲಿ ಮಹಿಳೆಯರ ಹೆಸರಿನಲ್ಲಿ ಎಲ್‌ಪಿಜಿ ಅಡುಗೆ ಅನಿಲ ಸಂಪರ್ಕ ನೀಡಿಕೆಗಾಗಿ 2000 ಕೋಟಿ ರೂಪಾಯಿ ಮೀಸಲು, ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ, ಎಸ್‌ಸಿ/ಎಸ್‌ಟಿ ಮತ್ತು ಮಹಿಳಾ ಉದ್ದಿಮೆದಾರರಿಗಾಗಿ 500 ಕೋಟಿ ರೂ. ಹಣ ನೀಡಿಕೆ ಮೊದಲಾದ ಕ್ರಮಗಳು ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲಗೊಳಿಸುವ ಉದ್ದೇಶ ಹೊಂದಿವೆ.

ಭಾರತವನ್ನು ಜಗತ್ತಿನ ಕೌಶಲ್ಯ ರಾಜಧಾನಿಯಾಗಿಸುವ ನಿಟ್ಟಿನಲ್ಲಿ ಬದ್ಧತೆಯನ್ನು ಪುನರುಚ್ಚರಿಸಲಾಗಿದ್ದು, ದೇಶಾದ್ಯಂತ 1500 ಬಹುಕೌಶಲ್ಯ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು 1,700 ಕೋಟಿ ರೂಪಾಯಿ ತೆಗೆದಿರಿಸಲಾಗಿದೆ. ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆಯಡಿ, ಯುವಜನತೆಯ ಮನೆ ಬಾಗಿಲಿಗೇ ಉದ್ಯಮಶೀಲತೆ ತಂದು ಉದ್ಯೋಗಾವಕಾಶ ಕಲ್ಪಿಸುವ ಸರ್ಕಾರದ ಸದಿಚ್ಛೆಯನ್ನು ಇದು ವ್ಯಕ್ತಪಡಿಸುತ್ತದೆ.

ಕಾರ್ಪೊರೆಟ್ ರಂಗದಲ್ಲಿ, ಕಳೆದ ಬಜೆಟ್‌ನಲ್ಲಿ ಮಾಡಲಾದ ಘೋಷಣೆಯ ಮುಂದುವರಿಕೆಯಾಗಿ, ಮೂಲ ತೆರಿಗೆ ದರವನ್ನು ಸದ್ಯದ ಶೇ.30 ರಿಂದ 25ಕ್ಕೆ ಹಂತ ಹಂತವಾಗಿ ಇಳಿಸುವ ನಿರೀಕ್ಷೆ ಮಾಡಲಾಗಿತ್ತು. ಆದರೆ, ಆರ್ಥಿಕ ಕೊರತೆ ಹತ್ತಿಕ್ಕುವ ಉದ್ದೇಶದಿಂದ ತೆರಿಗೆ ದರದಲ್ಲಿ ಯಾವುದೇ ಕಡಿತ ಪ್ರಸ್ತಾಪಿಸಲಾಗಿಲ್ಲ. ಆದರೂ "ಮೇಕ್ ಇನ್ ಇಂಡಿಯಾ" ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಗಾಗಿ ಸ್ಟಾರ್ಟ್‌ಅಪ್‌ಗಳಿಗೆ ಮೂರುವರ್ಷಗಳ ತೆರಿಗೆ ವಿನಾಯ್ತಿ ಪ್ರಕಟಿಸಲಾಗಿದೆ. ಸ್ವಉದ್ಯೋಗ ಹೊಂದಿರುವ ಕಡಿಮೆ ಆದಾಯದ ವೈಯಕ್ತಿಕ ತೆರಿಗೆ ಪಾವತಿದಾರರಿಗೆ ಮನೆ ಬಾಡಿಗೆ ಭತ್ಯೆ ವಿನಾಯ್ತಿ ಮಿತಿಯೇರಿಸುವ ಮೂಲಕ ಅಲ್ಪ ಪರಿಹಾರ ಒದಗಿಸಲಾಗಿದೆ. ಮೇಲ್ಮಟ್ಟದ ಶೇ.1ರ ವೈಯಕ್ತಿಕ ತೆರಿಗೆ ಪಾವತಿದಾರರಿಗೆ ಮತ್ತು ಅತಿ ಶ್ರೀಮಂತರಿಗೆ ಶೇ.3ರ ಹೆಚ್ಚುವರಿ ತೆರಿಗೆ ಪ್ರಸ್ತಾಪಿಸಲಾಗಿದೆ. ಕೆಲ ತಿದ್ದುಪಡಿಗಳನ್ನು ಪೂರ್ವಾನ್ವಯವಾಗುವಂತೆ ಮಾಡದಿರುವ ಕ್ರಮ ಹಾಗೂ ತೆರಿಗೆ ಅಧಿಕಾರಿಗಳ ವಿವೇಚನೆ ಅಂಶ ತೆಗೆದು ಹಾಕುವ ಮೂಲಕ ತೆರಿಗೆ ಪ್ರಕ್ರಿಯೆ ಸರಳೀಕರಿಸುವ ಪ್ರಯತ್ನಗಳಿಂದ ತೆರಿಗೆ ನಿಶ್ಚಿತತೆ ತಂದು ಬಂಡವಾಳ ಹೂಡಿಕೆದಾರರ ವಿಶ್ವಾಸ ಪುನರ್‌ಸ್ಥಾಪಿಸಲು ಯತ್ನಿಸಲಾಗಿದೆ.

ಬಂಡವಾಳ ಹೂಡಿಕೆ ಆಕರ್ಷಿಸಲು, ಸದೃಢವಾದ ಮೂಲಭೂತ ಸೌಕರ್ಯ ಅಗತ್ಯವೆಂಬುದನ್ನು ಗಮನದಲ್ಲಿರಿಸಿ, ಈ ಕ್ಷೇತ್ರಕ್ಕೆ ಸರ್ಕಾರ 2.21 ಲಕ್ಷ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿದೆ. ಈ ರೀತಿಯ ಆದ್ಯ ಗಮನದಿಂದ ರಸ್ತೆ, ರೈಲು, ಬಂದರು, ವಿಮಾನ ನಿಲ್ದಾಣಗಳ ಸಂಪರ್ಕ ಜಾಲ ಬಲಗೊಳ್ಳಲು ಒತ್ತು ದೊರೆತು ಉದ್ಯೋಗ ಸೃಷ್ಟಿಗೆ, ಅಭಿವೃದ್ಧಿಗೆ ಅವಕಾಶವಾಗಲಿದೆ.

ಕೈಗೆಟಕುವ ದರದ ವಸತಿ, ಡೆವಲಪರ್ಸ್ ಮತ್ತು ವ್ಯಕ್ತಿಗಳಿಗೆ ತೆರಿಗೆ ವಿನಾಯ್ತಿ ಕ್ರಮಗಳು ಈ ಕ್ಷೇತ್ರದ ಬೆಳವಣಿಗೆಗೆ ನೆರವಾಗಲಿವೆ.

ಸುಲಭ ವ್ಯಾಪಾರ ವಾತಾವರಣ, ತೆರಿಗೆ ಪ್ರಕ್ರಿಯೆ ಸರಳೀಕರಣ ಮೊದಲಾದವುಗಳಿಗಾಗಿ ಸರ್ಕಾರ ಅನುಸರಿಸಿದ ಒಂಭತ್ತು ಸ್ತಂಭಗಳ ಉಪಕ್ರಮ, ನೈಜ ಭಾರತಕ್ಕಾಗಿ ತೋರಿದ ನೈಜ ಕಳಕಳಿ ಅಷ್ಟೇ ಅಲ್ಲ; ದೀರ್ಘಾವಧಿ ಅಭಿವೃದ್ಧಿಗಾಗಿ ನಿರೂಪಿಸುವ ಮಾರ್ಗನಕ್ಷೆಯಾಗಿದೆ! ❑

ಪರಿಕಲ್ಪನೆ

# ಕೇಂದ್ರ ಮುಂಗಡ ಪತ್ರ 2016–17



**ಕೃಷಿ, ಗ್ರಾಮೀಣ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ, ರಸ್ತೆಗೆ ಭರಪೂರ ಅನುದಾನ, ಬಡವರಿಗೆ ಆರೋಗ್ಯ ವಿಮೆ, ಗ್ಯಾಸ್ ಸಂಪರ್ಕ, ಉದ್ಯೋಗ ಖಾತ್ರಿ ಮತ್ತಿತರ ನೆರವು, ಆದಾಯ ತೆರಿಗೆ ಬದಲಾಗದಿದ್ದರೂ ಅಲ್ಪ ತೆರಿಗೆ ವಿನಾಯ್ತಿ, ಸೇವಾ ತೆರಿಗೆಗೆ ಹೆಚ್ಚುವರಿಯಾಗಿ ಕೃಷಿ ತೆರಿಗೆ ಸೇರ್ಪಡೆ, ಐಷಾರಾಮಿ ವಸ್ತು–ವಾಹನ ದುಬಾರಿ, ಕೌಶಲ್ಯ ಶಿಕ್ಷಣ, ಉದ್ಯೋಗ ಸೃಷ್ಟಿ, ಹೂಡಿಕೆಗೆ ಅವಕಾಶ, ಆರ್ಥಿಕತೆ ಸುಧಾರಣೆ, ಸರಳ ಆಡಳಿತ, ವಿತ್ತೀಯ ಶಿಸ್ತು ಪಾಲನೆ... ಇವಿಷ್ಟು ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿ ಫೆಬ್ರವರಿ 29ರಂದು ಮಂಡಿಸಿದ, 2016–17ನೇ ಸಾಲಿನ ಸಾಮಾನ್ಯ ಬಜೆಟ್‌ನ ತಿರುಳು.**

'ದೇಶದ ಆಹಾರ ಭದ್ರತೆಗೆ ರೈತರೇ ಬೆನ್ನೆಲುಬು' ಎಂದಿರುವ ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿ, ಈ ಬಾರಿಯ ಮುಂಗಡ ಪತ್ರದಲ್ಲಿ ಕೃಷಿ ಕ್ಷೇತ್ರಕ್ಕೆ 44,485 ಕೋಟಿ ರೂ. ಮೀಸಲಿಟ್ಟಿದ್ದಾರೆ. 2014–15ನೇ ಸಾಲಿನಲ್ಲಿ 25,917 ಕೋಟಿ, 2015–16ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ 22,958 ಕೋಟಿ ರೂ. ಹಣವನ್ನು ಕೃಷಿಗೆ ತೆಗೆದಿರಿಸಲಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಕೃಷಿ ವಲಯಕ್ಕೆ ಬಹುತೇಕ ಡಬಲ್ ಅನುದಾನ ಸಿಕ್ಕಿರುವುದು ಗಮನಾರ್ಹ.

ಮತ್ತೊಂದೆಡೆ ಕೃಷಿ ಸಾಲದ ಮೊತ್ತವನ್ನು ಸಾರ್ವಕಾಲಿಕ 9 ಲಕ್ಷ ಕೋಟಿ ರೂ. ಗೆ ಏರಿಸಲಾಗಿದೆ.

### ಕಾಂಪೋಸ್ಟ್ ಗೊಬ್ಬರ

ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯನ್ನು ಹೆಚ್ಚಿನ ಉತ್ಸಾಹದೊಂದಿಗೆ ಜಾರಿಗೆ ತರಲಾಗುವುದು. ಈ ಯೋಜನೆಯಿಂದಾಗಿ ಮಣ್ಣಿನಲ್ಲಿರುವ ಪೌಷ್ಟಿಕಾಂಶದ ಮಾಹಿತಿ ರೈತರಿಗೆ ಲಭಿಸುತ್ತದೆ. ತನ್ಮೂಲಕ ರೈತರು ವಿವೇಕಯುತವಾಗಿ ರಸಗೊಬ್ಬರಗಳನ್ನು ಬಳಸಬಹುದಾಗಿರುತ್ತದೆ. 2017ರ ಮಾರ್ಚ್‌ನೊಳಗೆ ದೇಶದ ಎಲ್ಲ 14 ಕೋಟಿ ರೈತರಿಗೂ ಮಣ್ಣಿನ ಆರೋಗ್ಯ ಕಾರ್ಡ್ ವಿತರಿಸುವ ಗುರಿ ಹೊಂದಲಾಗಿದೆ.

ಮಣ್ಣಿನ ಆರೋಗ್ಯ ಹಾಗೂ ಫಲವತ್ತತೆಗೆ ಸಂಬಂಧಿಸಿದ ಯೋಜನೆಗಾಗಿ 368 ಕೋಟಿ ರೂ. ಮೀಸಲಿಡಲಾಗಿದೆ ಎಂದು ವಿತ್ತ ಸಚಿವರು ಹೇಳಿದ್ದಾರೆ. ಇದರ ಜತೆಗೆ ಮುಂದಿನ ಮೂರು ವರ್ಷಗಳಲ್ಲಿ ರಸಗೊಬ್ಬರ ಕಂಪನಿಗಳ 2000 ಮಾದರಿ ಚಿಲ್ಲರೆ ಮಳಿಗೆಗಳನ್ನು ತೆರೆಯಲಾಗುವುದು. ಅಲ್ಲಿ ಮಣ್ಣು ಹಾಗೂ ಬೀಜ ಪರೀಕ್ಷಾ ಸೌಲಭ್ಯ ಕಲ್ಪಿಸಲಾಗುವುದು.

### ಸಾವಯವ ಕೃಷಿ

ದೇಶದ ಒಟ್ಟು ಕೃಷಿ ಪ್ರದೇಶದ ಪೈಕಿ ಶೇ.55 ಭಾಗ ಮಳೆಯಾಶ್ರಿತವಾಗಿದೆ. ಅಂತಹ ಪ್ರದೇಶದಲ್ಲಿ ಬೆಳೆ ಇಳುವರಿ ಹೆಚ್ಚಿಸಲು ಸಾವಯವ ಕೃಷಿ ಉತ್ತೇಜಿಸಲಾಗುವುದು. ಈ ಸಲುವಾಗಿ ಕೇಂದ್ರ ಸರ್ಕಾರ 2 ಯೋಜನೆಗಳನ್ನು ಈಗಾಗಲೇ ಜಾರಿಗೆ ತಂದಿದೆ. ಮೊದಲನೆಯದ್ದು, 'ಪರಂಪರಾಗತ ಕೃಷಿ ವಿಕಾಸ ಯೋಜನೆ'. ಇದರಡಿ 3 ವರ್ಷಗಳಲ್ಲಿ 5 ಲಕ್ಷ ಎಕರೆಯನ್ನು ಸಾವಯವ ಕೃಷಿ ವ್ಯಾಪ್ತಿಗೆ ತರುವ ಉದ್ದೇಶ ಹೊಂದಲಾಗಿದೆ. ಎರಡನೆಯದ್ದು, ಈಶಾನ್ಯ ಭಾರತದಲ್ಲಿ ಸಾವಯವ ಉತ್ಪನ್ನಗಳ ಮಾರಾಟ ಸರಪಳಿ ಅಭಿವೃದ್ಧಿ ಯೋಜನೆ. ಈಶಾನ್ಯ ಭಾರತದಲ್ಲಿ ಬೆಳೆಯಲಾಗುವ ಸಾವಯವ ಬೆಳೆಗಳಿಗೆ ದೇಶೀಯವಾಗಿ ಹಾಗೂ ರಫ್ತು ಮಾರುಕಟ್ಟೆಗಳಲ್ಲಿ ಸ್ಥಾನ ದೊರಕಿಸುವುದು ಇದರ ಉದ್ದೇಶ. ಈ ಯೋಜನೆಗಳಿಗಾಗಿ 412 ಕೋಟಿ ರೂ. ಮೀಸಲಿಡಲಾಗಿದೆ.

### ಕನಿಷ್ಠ ಬೆಂಬಲ ಬೆಲೆ

ಕೇಂದ್ರದ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಲಾಭ ಎಲ್ಲ ರೈತರಿಗೂ ಲಭಿಸುವಂತಾಗಲು 2016–17ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 3 ನಿರ್ದಿಷ್ಟ ಕ್ರಮಗಳನ್ನು ಜಾರಿಗೆ ತರಲಿದೆ. ಮೊದಲನೆಯದ್ದಾಗಿ, ವಿಕೇಂದ್ರೀಕೃತ ಖರೀದಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಉತ್ತೇಜನ ನೀಡುವುದು. ಎರಡನೆಯದ್ದಾಗಿ, ಭಾರತೀಯ ಆಹಾರ ನಿಗಮದ ಮೂಲಕ ಆನ್‌ಲೈನ್ ಖರೀದಿ ವ್ಯವಸ್ಥೆ ಅಳವಡಿಕೆ. ಈ ಕ್ರಮಗಳಿಂದ ಬೆಳೆ ಮಾರಾಟಕ್ಕೆ ನೊಂದಣಿ ಮಾಡಿಸಿಕೊಳ್ಳಲು ಹಾಗೂ ನಿಗಾ ವಹಿಸಲು ರೈತರಿಗೆ ಅನುಕೂಲವಾಗುತ್ತದೆ. ತನ್ಮೂಲಕ ಪಾರದರ್ಶಕತೆ ಸೃಷ್ಟಿಯಾಗುತ್ತದೆ.

* ಯೋಜನಾ ಸಂಪಾದಕೀಯ ಮಂಡಳಿ. ಮಾಹಿತಿ, ಗ್ರಾಫಿಕ್ ಚಿತ್ರ ಕೃಪೆ : ಹಣಕಾಸು ಸಚಿವಾಲಯ, ಪಿಐಬಿ.

### ೯ ಸ್ತಂಭಗಳು

ಕೃಷಿಕರ ಆದಾಯವನ್ನು 2022 ರೊಳಗೆ ದ್ವಿಗುಣಗೊಳಿಸುವುದು ಸೇರಿದಂತೆ ಮುಂದಿನ ಹಣಕಾಸು ವರ್ಷದಲ್ಲಿ ಭಾರತವನ್ನು ಪರಿವರ್ತಿಸಲು ೯ ಸ್ತಂಭಗಳನ್ನು ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಅವರು ಗುರುತಿಸಿದ್ದಾರೆ. ಬಜೆಟ್ ಭಾಷಣದಲ್ಲಿ ಜೇಟ್ಲಿ ಅವರು ಈ ಕುರಿತು ಪ್ರಸ್ತಾಪ ಮಾಡಿದ್ದಾರೆ. ಅವರ ಪ್ರಕಾರ, ಭಾರತದ ಪರಿವರ್ತನೆಗೆ ಬಳಕೆಯಾಗುವ ೯ ಸ್ತಂಭಗಳು ಇಂತಿವೆ.

1. ಮುಂದಿನ 5 ವರ್ಷಗಳಲ್ಲಿ ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶದೊಂದಿಗೆ ಕೃಷಿ ಹಾಗೂ ರೈತರ ಕಲ್ಯಾಣ.
2. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು.
3. ಸರ್ವರಿಗೂ ಸಮಾಜ ಕಲ್ಯಾಣ, ಆರೋಗ್ಯ ಸೇವೆ
4. ಜ್ಞಾನಾಧಾರಿತ ಹಾಗೂ ಉತ್ಪಾದಕ ಸಮಾಜಕ್ಕಾಗಿ ಶಿಕ್ಷಣ, ಕೌಶಲ್ಯ ಹಾಗೂ ಉದ್ಯೋಗ ಸೃಷ್ಟಿ.
5. ಜೀವನ ಕ್ಷಮತೆ, ಗುಣಮಟ್ಟ ಹೆಚ್ಚಿಸಲು ಮೂಲಸೌಕರ್ಯ ಮತ್ತು ಹೂಡಿಕೆಗೆ ಆದ್ಯತೆ.
6. ಪಾರದರ್ಶಕತೆ ಹಾಗೂ ಸ್ಥಿರತೆಗಾಗಿ ಹಣಕಾಸು ವಲಯದಲ್ಲಿ ಸುಧಾರಣೆ.
7. ಜನರು ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಉತ್ತಮ ಆಡಳಿತ ಹಾಗೂ ಉದ್ದಿಮೆ ಸ್ನೇಹಿ ವಾತಾವರಣ
8. ಅಗತ್ಯವಿರುವವರಿಗೆ ಸೌಲಭ್ಯಗಳನ್ನು ತಲುಪಿಸಲು ಹಾಗೂ ಸರ್ಕಾರದ ಹಣಕಾಸನ್ನು ವಿವೇಕದಿಂದ ನಿರ್ವಹಿಸಲು ವಿತ್ತೀಯ ಶಿಸ್ತು ಪಾಲನೆ
9. ನಾಗರಿಕರಲ್ಲಿ ವಿಶ್ವಾಸವಿಟ್ಟು, ತೆರಿಗೆ ಬದ್ಧತೆ ಹೊರೆ ತಗ್ಗಿಸುವ ನಿಟ್ಟಿನಲ್ಲಿ ತೆರಿಗೆ ಕ್ಷೇತ್ರದಲ್ಲಿ ಸುಧಾರಣೆ.

### ಬಜೆಟ್‌ನಲ್ಲಿರುವ ೯ ವಿಭಾಗಗಳು

1. ಸಣ್ಣ ತೆರಿಗೆದಾರರಿಗೆ ರಿಯಾಯಿತಿ 2. ಅಭಿವೃದ್ಧಿ, ಉದ್ಯೋಗ ಸೃಷ್ಟಿಸಲು ಒತ್ತು 3. ಮೇಕ್ ಇನ್ ಇಂಡಿಯಾಗೆ ನೆರವಾಗಲು ದೇಶೀಯ ಮೌಲ್ಯವರ್ಧನೆಗೆ ಪ್ರೋತ್ಸಾಹ. 4. ಪಿಂಚಣಿ ಸಮಾಜದತ್ತ ಸಾಗಲು ಕ್ರಮಗಳು 5. ಅಗ್ಗದ ವಸತಿ ಯೋಜನೆ ಉತ್ತೇಜನಕ್ಕೆ ಕ್ರಮಗಳು 6. ಕೃಷಿ, ಗ್ರಾಮೀಣ ಆರ್ಥಿಕತೆ ಹಾಗೂ ಸ್ವಚ್ಛ ವಾತಾವರಣಕ್ಕೆ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ. 7. ವ್ಯಾಜ್ಯ ಕಡಿಮೆ ಮಾಡಿ, ತೆರಿಗೆ ಪದ್ಧತಿಯಲ್ಲಿ ನಿಶ್ಚಿತತೆ ಕಲ್ಪಿಸುವುದು. 8. ತೆರಿಗೆಗಳ ಸರಳೀಕರಣ. 9. ಹೊಣೆಗಾರಿಕೆ ಸೃಷ್ಟಿಸಲು ತಂತ್ರಜ್ಞಾನ ಬಳಕೆ.

## ಬಜೆಟ್‌ನತ್ತ ಪಕ್ಷಿನೋಟ

| ಕೋಟಿ ರೂ. ಗಳಲ್ಲಿ. | 2014-15 ನೈಜ | 2015-16 ಬಜೆಟ್ ಅಂದಾಜು | 2015-16 ಪರಿಷ್ಕೃತ ಅಂದಾಜು | 2016-17 ಬಜೆಟ್ ಅಂದಾಜು |
|---|---|---|---|---|
| ಆದಾಯ ಸ್ವೀಕೃತಿ | 11,01,472 | 11,41,575 | 12,06,084 | **13,77,022** |
| ಬಂಡವಾಳ ಸ್ವೀಕೃತಿ | 5,62,201 | 6,35,902 | 5,79,307 | **6,01,038** |
| ಒಟ್ಟು ಸ್ವೀಕೃತಿ | 16,63,673 | 17,77,477 | 17,85,391 | **19,78,060** |
| ಯೋಜನೇತರ ವೆಚ್ಚ | 12,01,029 | 13,12,200 | 13,08,194 | **14,28,050** |
| ಯೋಜನಾ ವೆಚ್ಚ | 4,62,644 | 4,65,277 | 4,77,197 | **5,50,010** |
| ಒಟ್ಟು ವೆಚ್ಚ | 16,63,673 | 17,77,477 | 17,85,391 | **19,78,060** |
| ಆದಾಯ ಕೊರತೆ | 3,65,519 | 3,94,472 | 3,41,589 | **3,54,015** |
| ಒಟ್ಟಾರೆ ಆದಾಯ ಕೊರತೆ | 2,34,759 | 2,68,000 | 2,09,585 | **1,87,175** |
| ಆರ್ಥಿಕ ಕೊರತೆ | 5,10,725 | 5,55,649 | 5,35,090 | **5,33,904** |
| ಪ್ರಾಥಮಿಕ ಕೊರತೆ | 1,08,281 | 99,504 | 92,469 | **41,234** |



ಮೂರನೆಯದ್ದು, ಬೇಳೆಕಾಳು ಖರೀದಿಗೆ ಪರಿಣಾಮಕಾರಿ ವ್ಯವಸ್ಥೆ ಜಾರಿಗೆ ತರಲಾಗುವುದು.

### ಹೈನುಗಾರಿಕೆ


ಬರಗಾಲದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರೈತರು ಆದಾಯ ವೃದ್ಧಿಸಲು ಉಪಕಸುಬು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹೈನುಗಾರಿಕೆಯನ್ನು ರೈತರಿಗೆ ಮತ್ತಷ್ಟು ಲಾಭದಾಯಕವಾಗಿಸಲು 4 ಹೊಸ ಯೋಜನೆಗಳನ್ನು ಜಾರಿಗೆ ತರಲಾಗುತ್ತದೆ. 'ಪಶುಧನ ಸಂಜೀವಿನಿ' ಎಂಬ ಯೋಜನೆಯಡಿ ರಾಸುಗಳ ಆರೋಗ್ಯ ವೃದ್ಧಿಗೆ ಕ್ರಮ ಕೈಗೊಳ್ಳುವುದಲ್ಲದೆ, ಪ್ರಾಣಿ ಆರೋಗ್ಯ ಕಾರ್ಡ್ (ನಕುಲ್ ಸ್ವಾಸ್ಥ್ಯ ಪತ್ರ) ವಿತರಿಸಲಾಗುತ್ತದೆ. ಇದಲ್ಲದೆ ಅತ್ಯಾಧುನಿಕ ಬ್ರೀಡಿಂಗ್ ತಂತ್ರಜ್ಞಾನ, ಬ್ರೀಡರ್‌ಗಳು ಹಾಗೂ ರೈತರ ನಡುವೆ ಸಂಪರ್ಕ ಬೆಸೆಯಲು ಇ–ಮಾರುಕಟ್ಟೆ ಜಾಲ ತಾಣ, ದೇಶಿ ತಳಿಯ ಹಸುಗಳಿಗಾಗಿ ರಾಷ್ಟ್ರೀಯ ಜೀನೋಮಿಕ್ಸ್ ಕೇಂದ್ರ ಕಾರ್ಯಕ್ರಮಗಳನ್ನು 850 ಕೋಟಿ ರೂ. ವೆಚ್ಚದಲ್ಲಿ ಜಾರಿಗೆ ತರಲಾಗುವುದು ಎಂದು ಶ್ರೀ ಜೇಟ್ಲಿ ಹೇಳಿದ್ದಾರೆ.

### ಸಕಾಲಕ್ಕೆ ಸಾಲ

ರೈತರಿಗೆ ಸಕಾಲಕ್ಕೆ, ಸಾಕಷ್ಟು ಸಾಲ ಲಭ್ಯವಾಗುವಂತೆ ನೋಡಿಕೊಳ್ಳಲು ವಿಶೇಷ ಗಮನಹರಿಸಲಾಗುವುದು. 2015–16ನೇ ಸಾಲಿನಲ್ಲಿ 8.5 ಲಕ್ಷ ಕೋಟಿ ರೂ. ಸಾಲವನ್ನು ಕೃಷಿಕರಿಗೆ ಒದಗಿಸಲಾಗಿತ್ತು. 2016–17ನೇ ಸಾಲಿನಲ್ಲಿ ಸಾರ್ವಕಾಲಿಕ ದಾಖಲೆಯ 9 ಲಕ್ಷ ಕೋಟಿ ರೂ. ಸಾಲ ವಿತರಣೆ ಉದ್ದೇಶ ಹೊಂದಲಾಗಿದೆ. ಸಕಾಲಕ್ಕೆ ಸಾಲ ಮರುಪಾವತಿಸುವ ರೈತರ ಮೇಲಿನ ಹೊರೆಯನ್ನು ತಗ್ಗಿಸುವ ಸಲುವಾಗಿ ಬಡ್ಡಿ ರಿಯಾಯಿತಿ ಒದಗಿಸಲು 15 ಸಾವಿರ ಕೋಟಿ ರೂ. ಮೊತ್ತವನ್ನು ಒದಗಿಸಲಾಗುತ್ತದೆ ಎಂದು ಶ್ರೀ ಜೇಟ್ಲಿ ವಿವರಿಸಿದ್ದಾರೆ.

### ಫಸಲು ಬಿಮಾ ಯೋಜನೆ

ಅತ್ಯಂತ ಕಡಿಮೆ ಪ್ರೀಮಿಯಂ ಮೊತ್ತದಲ್ಲಿ ರೈತರಿಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸುವ 'ಪ್ರಧಾನಮಂತ್ರಿ ಫಸಲು ಬಿಮಾ' ಯೋಜನೆಗೆ ಕೇಂದ್ರ ಸರ್ಕಾರ ಈಗಾಗಲೇ ಅನುಮತಿ ನೀಡಿದೆ. ಇದರ ಪರಿಣಾಮಕಾರಿ ಅನುಷ್ಠಾನಕ್ಕೆ 5500 ಕೋಟಿ ರೂ. ಒದಗಿಸುವುದಾಗಿ ವಿತ್ತ ಸಚಿವರು ತಿಳಿಸಿದ್ದಾರೆ. ಈ ಯೋಜನೆಯಡಿ, ಮಳೆಯಾಗಿಲ್ಲ ಎಂದು ರೈತರು ಬಿತ್ತನೆ ಮಾಡದೇ ಇದ್ದರೂ, ಬೆಳೆ ಕೊಯ್ಲಿನ ನಂತರ ಸಂಭವಿಸುವ ನಷ್ಟಕ್ಕೂ ಪರಿಹಾರ ದೊರೆಯಲಿದೆ. ಬೆಳೆ ನಷ್ಟವಾದ ಕೂಡಲೇ ಶೇ.25ರಷ್ಟು ಪರಿಹಾರ ಲಭಿಸುತ್ತದೆ. ಬೆಳೆ ನಷ್ಟ ಅಂದಾಜು ಮಾಡಲು ಸ್ಮಾರ್ಟ್‌ಫೋನ್ ಬಳಕೆ ಮಾಡಿಕೊಳ್ಳಲಾಗುತ್ತದೆ. ಈ ವಿಮೆ ಯೋಜನೆಯ ಸೌಲಭ್ಯ ಪಡೆಯಲು ಒಟ್ಟು ವಿಮಾ ಮೊತ್ತದ ಪೈಕಿ ಮುಂಗಾರು ಹಂಗಾಮಿನಲ್ಲಿ ಶೇ.1.5, ಹಿಂಗಾರಿನಲ್ಲಿ ಶೇ.2ರಷ್ಟು ಕಂತನ್ನು ಮಾತ್ರ ರೈತರು ತುಂಬಬೇಕಾಗುತ್ತದೆ. ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ರೈತರಿಗೆ ನೆರವಾಗಲು ರಾಷ್ಟ್ರೀಯ ವಿಪತ್ತು ನಿರ್ವಹಣಾ




ನಿಯಮದಡಿ ನೀಡಲಾಗುವ ನೆರವಿಗೆ ಸಂಬಂಧಿಸಿದ ನಿಯಮಗಳನ್ನು 2015ರ ಏಪ್ರಿಲ್‌ನಲ್ಲಿ ಪರಿಷ್ಕರಿಸಲಾಗಿದೆ ಎಂದು ಶ್ರೀ ಜೇಟ್ಲಿ ಮಾಹಿತಿ ನೀಡಿದ್ದಾರೆ.

### ಸಬ್ಸಿಡಿ ಕಡಿತ

ಆರ್ಥಿಕ ಹೊರೆಯನ್ನು ಇಳಿಸಿಕೊಳ್ಳುವ ಕ್ರಮಗಳನ್ನು ಕೇಂದ್ರ ಸರ್ಕಾರ ಮತ್ತಷ್ಟು ಮುಂದುವರಿಸಿದ್ದು, ಈ ಬಾರಿಯ ಬಜೆಟ್‌ನಲ್ಲಿ ಆಹಾರ, ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರಗಳ ಮೇಲಿನ ಸಬ್ಸಿಡಿಯಲ್ಲಿ ಶೇ.4 ರಷ್ಟು ಕಡಿತ ಮಾಡಿದೆ.

ಇದರಿಂದ 2016–17 ನೇ ಸಾಲಿನಲ್ಲಿ ಒಟ್ಟು ಸಬ್ಸಿಡಿ ಬಿಲ್ಲಿನ ಮೊತ್ತ 2.31 ಲಕ್ಷ ಕೋಟಿ ರೂ. ಆಗಲಿದೆ ಎಂದು ಬಜೆಟ್ ಭಾಷಣದಲ್ಲಿ ಕೇಂದ್ರ ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿ ಹೇಳಿದರು.

ಶೇ.4ರಷ್ಟು ಸಬ್ಸಿಡಿ ಕಡಿತದಿಂದ ಆಹಾರದ ಮೇಲಿನ ಸಬ್ಸಿಡಿ ಬಿಲ್ಲಿನ ಮೊತ್ತ ನಿರೀಕ್ಷೆಯ 1.39 ಲಕ್ಷ ಕೋಟಿ ರೂ. ಗಳಿಂದ, 1.34 ಲಕ್ಷ ಕೋಟಿ ರೂ. ಆಗಲಿದೆ. ಹಾಗೆಯೇ ರಸಗೊಬ್ಬರಗಳ ಮೇಲಿನ ಸಬ್ಸಿಡಿ ಬಿಲ್ಲಿನ ಮೊತ್ತ ನಿರೀಕ್ಷೆಯ 72,437 ಕೋಟಿ ರೂ. ಗಳಿಂದ, ಈ ಅವಧಿಯಲ್ಲಿ 70 ಸಾವಿರ ಕೋಟಿ ರೂ. ಆಗಲಿದೆ. ಪೆಟ್ರೋಲಿಯಂ ಮೇಲಿನ ಸಬ್ಸಿಡಿ ಬಿಲ್ಲಿನ ಮೊತ್ತ ನಿರೀಕ್ಷೆಯ 30 ಸಾವಿರ ಕೋಟಿ ರೂ.ನಿಂದ 26,947 ಕೋಟಿ ರೂ. ಆಗಲಿದೆ. ಹಾಗೆಯೇ ಎಲ್‌ಪಿಜಿ ಮೇಲಿನ ಸಬ್ಸಿಡಿ ಬಿಲ್ಲಿನ ಮೊತ್ತ ನಿರೀಕ್ಷೆಯ 26,947 ಕೋಟಿ ರೂ.ಗಳಿಗೆ ಬದಲಾಗಿ 19,802 ಕೋಟಿ ರೂ. ಆಗಲಿದೆ.

### ಅಂತರ್ಜಲ

ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಲು ನೀರಾವರಿ ಅಗತ್ಯ ಎಂಬುದು ಪ್ರಮುಖ ಅಂಶ. ದೇಶದಲ್ಲಿ ಬಳಕೆಯಾಗುತ್ತಿರುವ 141 ದಶಲಕ್ಷ ಹೆಕ್ಟೇರ್ ಪೈಕಿ ನೀರಾವರಿ ವ್ಯಾಪ್ತಿಗೆ ಒಳಪಟ್ಟಿರುವುದು ಕೇವಲ ಶೇ.46ರಷ್ಟು ಪ್ರದೇಶ ಮಾತ್ರ. ಹೀಗಾಗಿ ದೇಶದ ಎಲ್ಲ ಜಮೀನಿಗೂ ನೀರೊದಗಿಸಲು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ರೂಪಿಸಿರುವ ಮಹತ್ವಾಕಾಂಕ್ಷಿ ಕಾರ್ಯಕ್ರಮ 'ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ'ಯನ್ನು ಬಲಪಡಿಸಲಾಗುವುದು. ಅಭಿಯಾನದ ರೀತಿಯಲ್ಲಿ ಇದನ್ನು ಜಾರಿಗೊಳಿಸಲಾಗುವುದು. ಈ ಯೋಜನೆಯಡಿ 28.5 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲಾಗುವುದು ಎಂದು ಶ್ರೀ ಅರುಣ್ ಜೇಟ್ಲಿ ತಮ್ಮ ಬಜೆಟ್‌ನಲ್ಲಿ ತಿಳಿಸಿದ್ದಾರೆ. ತ್ವರಿತ ನೀರಾವರಿ ಸೌಲಭ್ಯ ಯೋಜನೆಯಡಿ 89 ನೀರಾವರಿ ಯೋಜನೆಗಳಿಗೆ ವೇಗ ನೀಡಲಾಗುವುದು. ಇದರಿಂದಾಗಿ 80.6 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲು ಅನುಕೂಲವಾಗುತ್ತದೆ. ಈ ಯೋಜನೆಗೆ ಮುಂದಿನ ವರ್ಷ 17 ಸಾವಿರ ಕೋಟಿ ಹಾಗೂ ಮುಂದಿನ ಐದು ವರ್ಷಗಳಲ್ಲಿ 86,500 ಕೋಟಿ ರೂ. ಬೇಕಾಗುತ್ತದೆ. 2017ರ ಮಾರ್ಚ್ 31ರೊಳಗೆ 23 ಯೋಜನೆಗಳು ಮುಗಿಯುವಂತೆ ನೋಡಿಕೊಳ್ಳಲಾಗುತ್ತದೆ ಎಂದು ಘೋಷಿಸಿದ್ದಾರೆ. 20 ಸಾವಿರ ಕೋಟಿ ರೂ. ಮೂಲನಿಧಿಯೊಂದಿಗೆ ನಬಾರ್ಡ್‌ನಲ್ಲಿ ವಿಶೇಷ ದೀರ್ಘಾವಧಿ ನೀರಾವರಿ ನಿಧಿಯನ್ನು ಸ್ಥಾಪಿಸಲಾಗುವುದು. ಈ ಎಲ್ಲ ಗುರಿಗಳನ್ನು ಸಾಧಿಸಲು ಬಜೆಟ್ ಅನುದಾನ ಹಾಗೂ ಮಾರುಕಟ್ಟೆ ಸಾಲದ ಮೂಲಕ 2016–17ನೇ ಸಾಲಿನಲ್ಲಿ 12517 ಕೋಟಿ ರೂ. ಒದಗಿಸಲಾಗುವುದು ಎಂದು ಹೇಳಿದ್ದಾರೆ. ಜಮೀನುಗಳನ್ನು ನೀರಾವರಿ ವ್ಯಾಪ್ತಿಗೆ ಒಳಪಡಿಸುವ ಜತೆಯಲ್ಲೇ ಅಂತರ್ಜಲ ಸಂಪನ್ಮೂಲದ ಸುಸ್ಥಿರ ನಿರ್ವಹಣೆಗಾಗಿ 6000 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದಿದ್ದಾರೆ.

### ಕೃಷಿ ಹೊಂಡ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು. ಅದರಡಿ, ಮಳೆಯಾಶ್ರಿತ ಪ್ರದೇಶಗಳಲ್ಲಿ ಕನಿಷ್ಠ 5 ಲಕ್ಷ ಕೃಷಿ ಹೊಂಡ ಹಾಗೂ ಬಾವಿಗಳನ್ನು ನಿರ್ಮಿಸಲಾಗುವುದು. ಸಾವಯವ ಗೊಬ್ಬರ ತಯಾರಿಸಲು 10 ಲಕ್ಷ ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಾಣ ಮಾಡಲಾಗುವುದು.

### ಆನ್ ಲೈನ್ ಮಾರಾಟ

'ರೈತರಿಗೆ ಆದಾಯ ಲಭಿಸುವಲ್ಲಿ ಮಾರುಕಟ್ಟೆ ಸಂಪರ್ಕ ಪ್ರಮುಖ ಪಾತ್ರ ವಹಿಸುತ್ತದೆ. ಇದಕ್ಕಾಗಿ ದೇಶದ ಆಯ್ದ 585 ನಿಯಂತ್ರಿತ ಸಗಟು ಮಾರುಕಟ್ಟೆಗಳಲ್ಲಿ ಸಾಮಾನ್ಯ ಇ–ಮಾರುಕಟ್ಟೆ ವೇದಿಕೆಯನ್ನು ಸೃಷ್ಟಿಸುವ ಏಕರೂಪದ ಕೃಷಿ ಮಾರುಕಟ್ಟೆ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿದೆ. ಇ–ವೇದಿಕೆ ಸೇರಲು ರಾಜ್ಯ ಸರ್ಕಾರಗಳು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರುವುದು ಅತ್ಯಗತ್ಯ. ಈಗಾಗಲೇ 12 ರಾಜ್ಯಗಳು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ

ತಂದಿವೆ. ಮತ್ತಷ್ಟು ರಾಜ್ಯಗಳು ಇ–ವೇದಿಕೆ ಸೇರಲು ಸಜ್ಜಾಗಿವೆ. ಮುಂದಿನ ವರ್ಷ ಮತ್ತಷ್ಟು ರಾಜ್ಯಗಳು ಸೇರಿಕೊಳ್ಳುವ ನಿರೀಕ್ಷೆ ಇದೆ. ಈ ಏಕರೂಪದ ಕೃಷಿ ಮಾರುಕಟ್ಟೆ ಇ–ವೇದಿಕೆಯನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನವಾದ ಏಪ್ರಿಲ್ 14ರಂದು ಲೋಕಾರ್ಪಣೆ ಮಾಡಲಾಗುತ್ತದೆ' ಎಂದು ಶ್ರೀ ಜೇಟ್ಲಿ ತಿಳಿಸಿದ್ದಾರೆ.


### ಜೇನು ರಫ್ತು

2013–14ನೇ ಸಾಲಿನಲ್ಲಿ ಪ್ರತಿ ಬಾಕ್ಸ್‌ನಿಂದ ವರ್ಷಕ್ಕೆ 18ರಿಂದ 20 ಕೆ.ಜಿ. ಜೇನು ಉತ್ಪಾದನೆಯಾಗುತ್ತಿತ್ತು. 2015–16ನೇ ಸಾಲಿನಲ್ಲಿ ಇದು 25 ಕೆ.ಜಿ.ಗೆ ಏರಿಕೆಯಾಗಿದೆ. 2014– 15ನೇ ಸಾಲಿನಲ್ಲಿ 76,150 ಮೆಟ್ರಿಕ್ ಟನ್‌ನಷ್ಟಿದ್ದ ಜೇನು ಉತ್ಪಾದನೆ ಈಗ 86,500 ಮೆಟ್ರಿಕ್ ಟನ್‌ಗೆ ಏರಿಕೆಯಾಗಿದೆ. ದೇಶದಲ್ಲಿ ಉತ್ಪಾದನೆಯಾಗುವ ಶೇ.90ರಷ್ಟು ಜೇನು ರಫ್ತಾಗುತ್ತಿದೆ ಎಂದು ಹಣಕಾಸು ಸಚಿವರು ಮಾಹಿತಿ ನೀಡಿದರು.

### ಸಹಾಯ ಧನ

ಅರ್ಹರಿಗೆ ಮಾತ್ರ ಸಬ್ಸಿಡಿ ಹಣ ಸೇರುವಂತೆ ಮಾಡಲು ಸರ್ಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ 3 ನಿರ್ದಿಷ್ಟ ಉದ್ದೇಶಿತ ಯೋಜನೆಗಳನ್ನು ಜಾರಿಗೊಳಿಸಲು ನಿರ್ಧರಿಸಿದೆ.

* **ಆಧಾರ್ ಆಧರಿತ ಸಬ್ಸಿಡಿ ವಿನಿಯೋಗ:** ಆಧಾರ್ ನಂಬರ್ ಚೌಕಟ್ಟಿನಲ್ಲೇ ಹೊಸ ವ್ಯವಸ್ಥೆಯೊಂದನ್ನು ರೂಪಿಸಿ ಅದರ ಮೂಲಕವೇ ವಿವಿಧ ರೀತಿಯ ಸಬ್ಸಿಡಿ ಹಣ ವಿತರಣೆಯ ಯೋಜನೆ ಜಾರಿಗೆ ಸರ್ಕಾರ ನಿರ್ಧರಿಸಿದೆ. ಈ ಕುರಿತ ಮಸೂದೆಯನ್ನು ಪ್ರಸಕ್ತ ಬಜೆಟ್ ಅಧಿವೇಶನದಲ್ಲೇ ಮಂಡಿಸಲಾಗುವುದು. * **ರಸಗೊಬ್ಬರಕ್ಕೂ ಡಿಬಿಟಿ:** ಎಲ್‌ಪಿಜಿ ಸಬ್ಸಿಡಿ ವಿತರಣೆ ವೇಳೆ ಗ್ರಾಹಕರ ಬ್ಯಾಂಕ್ ಖಾತೆಗೇ ನೇರ ಸಬ್ಸಿಡಿ ವಿತರಣೆ ಯೋಜನೆ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ, ರಸಗೊಬ್ಬರ ಸಬ್ಸಿಡಿ ವಿತರಣೆಗೂ ಡಿಬಿಟಿ ಜಾರಿಗೊಳಿಸಲು ನಿರ್ಧರಿಸಿದೆ. * **ನ್ಯಾಯಬೆಲೆ ಅಂಗಡಿಗಳಲ್ಲಿ ಹೊಸ ವ್ಯವಸ್ಥೆ:** ದೇಶಾದ್ಯಂತ 5.35 ಲಕ್ಷ ನ್ಯಾಯಬೆಲೆ ಅಂಗಡಿಗಳಿದ್ದು, 2017ರ ಮಾರ್ಚ್ ತಿಂಗಳೊಳಗೆ 3 ಲಕ್ಷ ನ್ಯಾಯಬೆಲೆ ಅಂಗಡಿಗಳಲ್ಲಿ ಸ್ವಯಂ ಚಾಲಿಯ ವ್ಯವಸ್ಥೆ ಜಾರಿಗೊಳಿಸಲಾಗುವುದು.




### ಗ್ರಾಮೀಣ ಆರ್ಥಿಕತೆ

ಗ್ರಾಮೀಣ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಒಟ್ಟಾರೆಯಾಗಿ 87,765 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಗ್ರಾಮ ಮತ್ತು ಸಣ್ಣ ಪಟ್ಟಣಗಳ ಅಭಿವೃದ್ಧಿ ಹೊಣೆಯನ್ನು ಅಲ್ಲಿನ ಸ್ಥಳೀಯಾಡಳಿತಕ್ಕೇ ನೀಡಬೇಕು ಎಂಬ 14ನೇ ಹಣಕಾಸು ಆಯೋಗದ ಶಿಫಾರಸು ಪಾಲನೆಗೆ ಮುಂದಾಗಿರುವ ಕೇಂದ್ರ ಸರ್ಕಾರ, ಗ್ರಾಮ ಪಂಚಾಯತ್‌ಗಳು ಮತ್ತು ಮುನಿಸಿಪಲ್‌ಗಳಿಗೆ 2.87 ಲಕ್ಷ ಕೋಟಿ ರೂ.ಗಳ ಭರ್ಜರಿ ಅನುದಾನ ಘೋಷಿಸಿದೆ. ಕಳೆದ 5 ವರ್ಷಗಳಿಗೆ ಹೋಲಿಸಿದರೆ, ಈ ವರ್ಷ ನೀಡುತ್ತಿರುವ ಅನುದಾನದಲ್ಲಿ ಶೇ.228ರಷ್ಟು ಹೆಚ್ಚಳ ಮಾಡಲಾಗಿದೆ. 2.87 ಲಕ್ಷ ಕೋಟಿ ರೂ.ಗಳ ಅನುದಾನವನ್ನು ದೇಶದಲ್ಲಿ ಇರುವ ಎಲ್ಲಾ ಗ್ರಾಮ ಪಂಚಾಯತ್‌ಗಳು ಮತ್ತು ಮುನಿಪಲ್‌ಗಳಿಗೆ ಹಂಚಿದರೆ, ಪ್ರತಿ ಗ್ರಾಮ ಪಂಚಾಯತ್‌ಗೆ ವಾರ್ಷಿಕ ಸರಾಸರಿ 80 ಲಕ್ಷ ರೂ. ಮತ್ತು ಮುನಿಸಿಪಲ್‌ಗೆ 21 ಕೋಟಿ ರೂ. ಅನುದಾನ ಸಿಗಲಿದೆ. ಈ ಹಣವನ್ನು ಹೇಗೆ ವೆಚ್ಚ ಮಾಡಬಹುದು ಎಂಬುದರ ಕುರಿತು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು, ರಾಜ್ಯ ಸರ್ಕಾರಗಳ ಜೊತೆಗೆ ಚರ್ಚಿಸಿ ಬಳಿಕ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಿದೆ. ಈ ಹಣವು ಗ್ರಾಮ ಪಂಚಾಯತ್‌ಗಳು ಮತ್ತು ಮುನಿಸಿಪಲ್ ವ್ಯಾಪ್ತಿಯ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಬಜೆಟ್ ಹೇಳಿದೆ.

### ಸ್ವಸಹಾಯ ಸಂಘಗಳಿಗೆ ಹೊಸ ಹೊಣೆ

ಬರಪೀಡಿತ ಮತ್ತು ಸಂಕಷ್ಟದಲ್ಲಿರುವ ಗ್ರಾಮೀಣ ಪ್ರದೇಶಗಳ ಜನರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ನೆರವು ನೀಡಲು ನಿರ್ಧರಿಸಿರುವ ಕೇಂದ್ರ ಸರ್ಕಾರ ಇದಕ್ಕಾಗಿ ಸ್ವಸಹಾಯ ಗುಂಪುಗಳ ನೆರವು ಪಡೆಯಲು ನಿರ್ಧರಿಸಿದೆ. ಸಂಕಷ್ಟಕ್ಕೆ ಒಳಗಾಗಿರುವ


**ಆರ್ಥಿಕ ಕುಸಿತ ತಡೆಗೆ 3 ಸೂತ್ರ. 1. ಸೂಕ್ಷ್ಮ ಆರ್ಥಿಕ ಸಮತೋಲನ, ಮತ್ತು ಸಮರ್ಪಕ ವಿತ್ತೀಯ ನಿರ್ವಹಣೆ. 2. ವಿದೇಶಿ ಮಾರುಕಟ್ಟೆ ಅಸ್ಥಿರ. ಹಾಗಾಗಿ, ದೇಶಿ ಮಾರುಕಟ್ಟೆ ಮೇಲೆ ಹೆಚ್ಚಿನ ಅವಲಂಬನೆ. 3. ಆರ್ಥಿಕ ಸುಧಾರಣೆ ಕ್ರಮ ಮುಂದುವರಿಕೆ**




ಗ್ರಾಮಗಳನ್ನು 'ದೀನ್ ದಯಾಳ್ ಅಂತ್ಯೋದಯ' ಯೋಜನೆಯಡಿ ಗುರುತಿಸಿ, ಅಲ್ಲಿ ಸ್ವಸಹಾಯ ಸಂಘಗಳನ್ನು ರಚಿಸಲಾಗುವುದು. ಅವುಗಳ ಮೂಲಕ ಒಂದಕ್ಕಿಂತ ಹೆಚ್ಚಿನ ರೀತಿಯಲ್ಲಿ ಆದಾಯ ಸಿಗುವಂತೆ ನೋಡಿಕೊಳ್ಳಲಾಗುವುದು. ಈ ಪ್ರದೇಶಗಳಲ್ಲಿ ನೀರಿನ ನಿರ್ವಹಣೆ ಮತ್ತು ಸಂಪನ್ಮೂಲ ನಿರ್ವಹಣೆಗೆ 'ಮನರೇಗಾ' ಯೋಜನೆಯಡಿ ತಂಡಗಳನ್ನು ರಚಿಸಲಾಗುವುದು. ಈ ಜಿಲ್ಲೆಗಳನ್ನು 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ' ಯೋಜನೆಗೂ ಒಳಪಡಿಸಲಾಗುವುದು ಎಂದು ಸರ್ಕಾರ ಹೇಳಿದೆ. ಜೊತೆಗೆ ಮನರೇಗಾ ಯೋಜನೆಗೆ 38500 ಕೋಟಿ ರೂ. ನೀಡುವುದಾಗಿ ಬಜೆಟ್ ಹೇಳಿದೆ.

### 300 ಸ್ಮಾರ್ಟ್ ಹಳ್ಳಿಗಳ ನಿರ್ಮಾಣ

ಸ್ಮಾರ್ಟ್‌ಸಿಟಿ ಮಾದರಿಯಲ್ಲೇ ಗ್ರಾಮೀಣ ಪ್ರದೇಶಗಳಲ್ಲೂ ಅತ್ಯಾಧುನಿಕ ಸೌಲಭ್ಯ ಕಲ್ಪಿಸಲು 'ಶ್ಯಾಮ್‌ಪ್ರಸಾದ್ ಮುಖರ್ಜಿ ರುರ್ಬನ್ ಮಿಷನ್' ಜಾರಿಗೆ ಸರ್ಕಾರ ನಿರ್ಧರಿಸಿದೆ. ಈ ಯೋಜನೆಯಡಿ 300 ರುರ್ಬನ್ ವಲಯಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ.




ಅಂದಾಜು 25000 ಜನ ವ್ಯಾಪ್ತಿಯ ಪ್ರದೇಶವನ್ನು ಒಂದು ಕ್ಲಸ್ಟರ್ ಎಂದು ಗುರುತಿಸಿ, ಅಲ್ಲಿನ ಜನರಿಗೆ ನಗರ ಪ್ರದೇಶದ ಎಲ್ಲಾ ಸೌಲಭ್ಯಗಳು ಸಿಗುವಂತೆ ಮಾಡಲಾಗುವುದು. ಈ ಮೂಲಕ ಗ್ರಾಮೀಣ ಭಾಗದ ಜನತೆ ನಗರ ಪ್ರದೇಶಕ್ಕೆ ವಲಸೆ ಹೋಗುವಂತೆ ತಡೆಯುವ ಯೋಜನೆ ರೂಪಿಸಲಾಗಿದೆ.

### ಹಳ್ಳಿಗಳಿಗೆ ವಿದ್ಯುತ್

2015ರ ಏಪ್ರಿಲ್ 1ರವರೆಗಿನ ಲೆಕ್ಕಾಚಾರದ ಪ್ರಕಾರ ದೇಶದ 18542 ಹಳ್ಳಿಗಳು ಇನ್ನೂ ವಿದ್ಯುತ್ ಸಂಪರ್ಕ ಪಡೆದುಕೊಂಡಿರಲಿಲ್ಲ. ಮುಂದಿನ 1000 ದಿನಗಳ ಅವಧಿಯಲ್ಲಿ ಅಂದರೆ ಹೆಚ್ಚೂ ಕಡಿಮೆ 3 ವರ್ಷಗಳ ಅವಧಿಯಲ್ಲಿ ದೇಶದ ಪ್ರತಿಯೊಂದು ಹಳ್ಳಿಗೂ ವಿದ್ಯುತ್ ಸಂಪರ್ಕ ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಸರ್ಕಾರ ರೂಪಿಸಿದೆ. 2016ರ ಫೆಬ್ರವರಿ 23ರವರೆಗೆ 5542 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇದು ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಒಟ್ಟು ಸಂಪರ್ಕಕ್ಕಿಂತ ಹೆಚ್ಚು. 2018ರ ಮೇ ಒಂದರೊಳಗೆ ಉಳಿದ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಸಂಪರ್ಕ ನೀಡುವ ಕಾರ್ಯ ಪೂರ್ಣಗೊಳ್ಳಲಿದೆ. ಇದಕ್ಕಾಗಿ ರೂಪಿಸಲಾಗುವ ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಮತ್ತು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ 8500 ಕೋಟಿ ರೂ. ವೆಚ್ಚ ಮಾಡುವ ಪ್ರಸ್ತಾಪವಿದೆ.

### ಸ್ವಚ್ಛ ಭಾರತಕ್ಕೆ 9000 ಕೋಟಿ

ಸ್ವತಂತ್ರ ಭಾರತದ ಅತಿದೊಡ್ಡ ಸ್ವಚ್ಛತಾ ಯೋಜನೆಯಾದ ಸ್ವಚ್ಛ ಭಾರತ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ 9000 ಕೋಟಿ ರೂ. ಅನುದಾನ ನೀಡಲು ಉದ್ದೇಶಿಸಲಾಗಿದೆ. ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛ ಭಾರತ ಯೋಜನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಬಯಲು ಶೌಚಾಲಯ ಮುಕ್ತ ಗ್ರಾಮಗಳಿಗೆ ಕೇಂದ್ರ ಸರ್ಕಾರದ ಯೋಜನೆಗಳನ್ನು ಬಹುಮಾನವಾಗಿ ಒದಗಿಸಲಾಗುವುದು.

### ಗ್ರಾಮೀಣರಿಗೆ ಕಂಪ್ಯೂಟರ್ ಅರಿವು


ದೇಶದ 16.8 ಕೋಟಿ ಗ್ರಾಮೀಣ ಕುಟುಂಬಗಳ ಪೈಕಿ 12 ಕೋಟಿ ಕುಟುಂಬಗಳು ಕಂಪ್ಯೂಟರ್ ಹೊಂದಿಲ್ಲ. ಬಹುತೇಕ ಜನ ಡಿಜಿಟಲ್ ಸಾಕ್ಷರತೆ ಹೊಂದಿಲ್ಲ. ಹೀಗಾಗಿ ಗ್ರಾಮೀಣ ಭಾಗದ ಜನರಿಗೆ ಕಂಪ್ಯೂಟರ್ ಕುರಿತ ಮಾಹಿತಿ ಒದಗಿಸಲು ಡಿಜಿಟಲ್ ಲಿಟರಸಿ ಮಿಷನ್ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಇದರನ್ವಯ ಮುಂದಿನ 3 ವರ್ಷಗಳಲ್ಲಿ 6 ಕೋಟಿ ಹೆಚ್ಚುವರಿ ಕುಟುಂಬಗಳಿಗೆ ಡಿಜಿಟಲ್ ಸಾಕ್ಷರತೆ ನೀಡಲಾಗುವುದು.


### ಡಿಜಿಟಲೀಕರಣ

ಭೂದಾಖಲೆಗಳ ಡಿಜಿಟಲೀಕರಣ ಭೂದಾಖಲೆಗಳ ಕುರಿತ ಗೊಂದಲವನ್ನು ಪರಿಹರಿಸುವ ನಿಟ್ಟಿನಲ್ಲಿ, ಭೂದಾಖಲೆಗಳ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದನ್ನು ಕೇಂದ್ರ ಸರ್ಕಾರದ ಯೋಜನೆ ಎಂದು ಪರಿಗಣಿಸಿ 2016ರ ಏ.1ರಿಂದ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಬಜೆಟ್‌ನಲ್ಲಿ 150 ಕೋಟಿ ರೂ. ಅನುದಾನ ಒದಗಿಸಲಾಗುತ್ತಿದೆ.

### ಪಂಚಾಯತ್ ಆಡಳಿತ ಸುಧಾರಣೆ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಡಳಿತ ಸುಧಾರಣೆಗೆ ಒತ್ತು ನೀಡಬೇಕಿದೆ ಎಂದು ಅಭಿಪ್ರಾಯಪಟ್ಟಿರುವ ಕೇಂದ್ರ ಸರ್ಕಾರ ಇದಕ್ಕಾಗಿ ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಆರಂಭಿಸಲು ನಿರ್ಧರಿಸಿದೆ. ಇದಕ್ಕಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ 655 ಕೋಟಿ ರೂ. ಒದಗಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಗೆ 87765 ಕೋಟಿ ಗ್ರಾಮೀಣ ಪ್ರದೇಶಗಳ ಒಟ್ಟಾರೆ ಅಭಿವೃದ್ಧಿಗೆ 2016-17ನೇ ಸಾಲಿನಲ್ಲಿ ಒಟ್ಟಾರೆ 87765 ಕೋಟಿ ರೂ. ಒದಗಿಸಲಾಗಿದೆ ಎಂದು ಶ್ರೀ ಅರುಣ್ ಜೇಟ್ಲಿ ಹೇಳಿದ್ದಾರೆ.






### ಹಳ್ಳಿಗಳಿಗೆ ರಸ್ತೆ ಸಂಪರ್ಕ


ರಸ್ತೆ ಇಲ್ಲದ ದೇಶದ ಹಳ್ಳಿಗಳಿಗೆ ಸರ್ವಋತು ರಸ್ತೆ ಸಂಪರ್ಕ ನಿರ್ಮಿಸಲು 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ'ಗೆ ಶ್ರೀ ಅರುಣ್ ಜೇಟ್ಲಿ 19 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ರಾಜ್ಯಗಳ ಪಾಲೂ ಸೇರಿದರೆ ಈ ಯೋಜನೆಗೆ 2016–17ನೇ ಸಾಲಿನಲ್ಲಿ 27 ಸಾವಿರ ಕೋಟಿ ರೂ. ಸಿಗಲಿದೆ. ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಗೆ ಈ ಹಿಂದೆ ಕಡಿಮೆ ಹಣ ಮೀಸಲಿಡಲಾಗುತ್ತಿತ್ತು. ಇದರಿಂದ ಯೋಜನೆಗೆ ಹಿನ್ನಡೆಯಾಗಿತ್ತು. 2012–13, 2013–14ನೇ ಸಾಲಿನಲ್ಲಿ ಕ್ರಮವಾಗಿ 8885 ಕೋಟಿ ಹಾಗೂ 9805 ಕೋಟಿ ರೂ. ಅನುದಾನ ಕೊಡಲಾಗಿತ್ತು. ಆದರೆ ಸರ್ಕಾರ ಅನುದಾನವನ್ನು ಕಳೆದ 2 ವರ್ಷಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಿದೆ. 2016–17ನೇ ಸಾಲಿನಲ್ಲಿ 19 ಸಾವಿರ ಕೋಟಿ ರೂ.ಗೆ ಹೆಚ್ಚಳ ಮಾಡಲಾಗಿದೆ. 2.23 ಲಕ್ಷ ಕಿ.ಮೀ. ರಸ್ತೆ ನಿರ್ಮಾಣ ಮಾಡುವ ಮೂಲಕ 65 ಸಾವಿರ ಅರ್ಹ ಜನವಸತಿ ಪ್ರದೇಶಗಳಿಗೆ ಸಂಪರ್ಕ ಬೆಸೆಯಲು ಉದ್ದೇಶಿಸಲಾಗಿದೆ. 2011–14ರವರೆಗೆ ಈ ಯೋಜನೆಯಡಿ ನಿತ್ಯ 73.5 ಕಿ.ಮೀ.ನಷ್ಟು ರಸ್ತೆ ನಿರ್ಮಾಣ ಮಾಡಲಾಗುತ್ತಿತ್ತು. ಸದ್ಯ ನಿತ್ಯ 100 ಕಿ.ಮೀ. ನಿರ್ಮಿಸಲಾಗುತ್ತಿದೆ ಎಂದು ವಿತ್ತ ಸಚಿವರು ತಿಳಿಸಿದರು.

### ವಿದ್ಯುತ್ ವಲಯ

ವಿದ್ಯುತ್ ಸ್ವಾವಲಂಬನೆಯತ್ತ ಹೆಚ್ಚಿನ ಗಮನ ಕೇಂದ್ರಿಕರಿಸಿರುವ ಕೇಂದ್ರ ಸರ್ಕಾರ ಇದಕ್ಕಾಗಿ ಬಜೆಟ್‌ನಲ್ಲಿ ಪ್ರತಿ ವರ್ಷ ಸಾರ್ವಜನಿಕ ಹೂಡಿಕೆ ಜತೆಗೆ 3 ಸಾವಿರ ಕೋಟಿ ರೂ. ಮೀಸಲಿರಿಸಿದೆ. ವಿದ್ಯುತ್ ಉತ್ಪಾದನೆಗೆ ಅಗತ್ಯವಾದ ಹೂಡಿಕೆ ಮಾಡುವ ಮೂಲಕ ಮುಂದಿನ 15ರಿಂದ 20 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ಗುರಿ ಹೊಂದಿದೆ.

### 'ಸ್ಟ್ಯಾಂಡಪ್ ಇಂಡಿಯಾ'

ಇತ್ತೀಚೆಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಪ್ರಕಟಿಸಿದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಸ್ಟ್ಯಾಂಡಪ್ ಇಂಡಿಯಾ'ಗೆ ಬಜೆಟ್‌ನಲ್ಲಿ 500 ಕೋಟಿ ರೂ. ಅನುದಾನ ನೀಡಲಾಗಿದೆ. ಈ ಹಣದಲ್ಲಿ 2016–17ನೇ ಸಾಲಿನಲ್ಲಿ 2.5 ಲಕ್ಷ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮತ್ತು ಮಹಿಳಾ ಸ್ವಯಂ ಉದ್ಯೋಗಾಕಾಂಕ್ಷಿಗಳಿಗೆ ಸಾಲ ನೀಡುವ ಗುರಿ ಹೊಂದಲಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ದಲಿತ ಉದ್ಯಮಿಗಳು ಹಾಗೂ ಮಹಿಳೆಯರು ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪಿಸಿ ಯಶಸ್ವಿಯಾಗುವ ಮೂಲಕ ಭರವಸೆ ಮೂಡಿಸುತ್ತಿದ್ದಾರೆ. ದಲಿತರು ಕೆಲಸ ಕೇಳುವವರಾಗಬಾರದು, ಬದಲಿಗೆ ಕೆಲಸ ಕೊಡುವವರಾಗಬೇಕು ಎಂದು ಪ್ರಧಾನ ಮಂತ್ರಿ ಶ್ರೀ ಮೋದಿಯವರು ಕರೆ ನೀಡಿದ್ದರು. ಅದನ್ನು ನನಸು ಮಾಡಲು ಸ್ಟ್ಯಾಂಡಪ್ ಇಂಡಿಯಾ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮತಿ ನೀಡಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಬಜೆಟ್‌ನಲ್ಲಿ 500 ಕೋಟಿ ರೂ. ತೆಗೆದಿರಿಸಿ, ಪ್ರತಿ ಬ್ಯಾಂಕ್ ಶಾಖೆಯಿಂದ ತಲಾ ಇಬ್ಬರು ಎಸ್‌ಸಿ, ಎಸ್‌ಟಿ ಮತ್ತು ಮಹಿಳಾ ಸ್ವಯಂ ಉದ್ಯೋಗಾಕಾಂಕ್ಷಿಗಳಿಗೆ ಸಾಲ ಸಿಗುವಂತೆ ನೋಡಿಕೊಳ್ಳಲಾಗುವುದು ಎಂದು ಶ್ರೀ ಅರುಣ್ ಜೇಟ್ಲಿ ಹೇಳಿದ್ದಾರೆ. ಈ ವರ್ಷ ಡಾ. ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮದಿನಾಚರಣೆ ಮಾಡಲಾಗುತ್ತಿದೆ. ಇದು ದಲಿತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ವರ್ಷವಾಗಬೇಕು. ಈ ಹಿನ್ನೆಲೆಯಲ್ಲಿ ದಲಿತರಿಗೆ ಪೂರಕವಾದ ಔದ್ಯೋಗಿಕ ವಾತಾವರಣ ನಿರ್ಮಿಸಲು ದಲಿತ್ ಇಂಡಿಯಾ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಜೊತೆಗೆ ವಿಸ್ತೃತವಾಗಿ ಚರ್ಚೆ ನಡೆಸಲಾಗಿದೆ. ಅಲ್ಲಿ ಬಂದ ಸಲಹೆಯಂತೆ ಕಿರು, ಸಣ್ಣ




ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಸಚಿವಾಲಯದ ಮೂಲಕ ರಾಷ್ಟ್ರೀಯ ಎಸ್‌ಸಿ, ಎಸ್‌ಟಿ ಹಬ್ ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಹಬ್‌ನಲ್ಲಿ ಎಸ್‌ಸಿ, ಎಸ್‌ಟಿ ಉದ್ಯಮಿಗಳಿಗೆ ಉದ್ಯೋಗಕ್ಕೆ ಸಂಬಂಧಪಟ್ಟ ನೆರವು, ಸಲಹೆ, ತರಬೇತಿ ಸಿಗಲಿದೆ ಎಂದು ಸಚಿವರು ತಿಳಿಸಿದರು.

### ಉದ್ಯೋಗ ಸೃಷ್ಟಿಗೆ ಒತ್ತು

ಬಹುಕೌಶಲ್ಯ ಅಭಿವೃದ್ಧಿ, ಸರ್ಕಾರದಿಂದಲೇ 3 ವರ್ಷ ಭವಿಷ್ಯನಿಧಿ, ಮಾಲ್ ರೀತಿ 7 ದಿನವೂ ಅಂಗಡಿಗಳ ವ್ಯಾಪಾರ ಅವಕಾಶ ಪ್ರಕಟಿಸಲಾಗಿದೆ.

### ಬ್ಯಾಂಕ್‌ಗಳ ಪುನಃಶ್ಚೇತನ

* ಬ್ಯಾಂಕು, ವಿಮಾ ಕಂಪನಿ ಮತ್ತಿತರ ಹಣಕಾಸು ಸಂಸ್ಥೆಗಳು ದಿವಾಳಿಯಾಗುವ ಸಂದರ್ಭ ತಡೆಯಲು ಹೊಸ ಮಸೂದೆ ಮಂಡನೆ. ಹಣಕಾಸು ಸ್ಥಿತಿಗತಿ ಅರಿಯಲು ವಿತ್ತೀಯ ದತ್ತಾಂಶ ನಿರ್ವಹಣಾ ಕೇಂದ್ರ ಸ್ಥಾಪನೆ. * ಅನಕ್ಷರಸ್ಥ ಹಾಗೂ ಬಡ ಹೂಡಿಕೆದಾರರು ಅಕ್ರಮ ಠೇವಣಿ ಜಾಲಕ್ಕೆ ಬಲಿಯಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ತಡೆಗಟ್ಟುವ ಸಲುವಾಗಿ ಸಮಗ್ರ ಕೇಂದ್ರೀಯ ಕಾಯ್ದೆ. ಇದಲ್ಲದೆ ಸೆಬಿ ಕಾಯ್ದೆಗೂ ತಿದ್ದುಪಡಿ. * ಸರ್ಕಾರಿ ಬ್ಯಾಂಕ್ ಪುನರುತ್ಥಾನಕ್ಕೆ ಈಗಾಗಲೇ ಇಂದ್ರಧನುಷ್ ಹೆಸರಿನ ಯೋಜನೆ ಪ್ರಗತಿಯಲ್ಲಿ. ಜತೆಗೆ, ಬಂಡವಾಳದ ನೆರವು ನೀಡಲು 25 ಸಾವಿರ ಕೋಟಿ ರೂ. ಅನುದಾನ. * ಮುದ್ರಾ ಬ್ಯಾಂಕ್‌ನಿಂದ ಸಣ್ಣ ಉದ್ದಿಮೆದಾರರಿಗೆ ಸಾಲ ನೀಡಿಕೆ 1 ಲಕ್ಷ ಕೋಟಿಯಿಂದ 1.8 ಲಕ್ಷ ಕೋಟಿಗೆ ಹೆಚ್ಚಳ. ಪೋಸ್ಟ್ ಆಫೀಸ್‌ಗಳಲ್ಲಿ ಎಟಿಎಂಗಳ ಸ್ಥಾಪನೆ ಪ್ರಮಾಣವೂ ಹೆಚ್ಚಿಸಲು ಕ್ರಮ.

### ಹೂಡಿಕೆಗೆ ಹೊಸ ಅವಕಾಶ

* ಬಂಡವಾಳ ಹೂಡಿಕೆದಾರರಿಗೆ ಹೊಸ ಹೊಸ ಅವಕಾಶ ಕಲ್ಪಿಸಲು ಮಾರುಕಟ್ಟೆಗೆ ಸೆಬಿಯಿಂದ ಮತ್ತಷ್ಟು ಸರಕುಗಳ ಸೇರ್ಪಡೆ. ಕಾರ್ಪೊರೇಟ್ ಬಾಂಡ್ ಕ್ಷೇತ್ರದಲ್ಲಿ ಹೂಡಿಕೆಗೂ ಹೊಸ ಉತ್ಪನ್ನಗಳ ಸೇರ್ಪಡೆ. * ಆಳಸಮುದ್ರ ಸೇರಿದಂತೆ ವಿವಿಧ ನೈಸರ್ಗಿಕ ಅನಿಲ ನಿಕ್ಷೇಪ ಶೋಧಕ್ಕೆ ಉತ್ತೇಜನ ನೀಡಲು ಮಾರುಕಟ್ಟೆ ಸ್ವಾತಂತ್ರ್ಯ, ದರ ಮಿತಿಯಂತಹ ವ್ಯವಸ್ಥೆ. ಅಣು ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆಗೆ ಹೊಸ ಸಮಗ್ರ ನೀತಿ. * ಖಾಸಗಿ ಹೂಡಿಕೆ ಉತ್ತೇಜಿಸಲು ಕಾನೂನು ತಿದ್ದುಪಡಿ ಸೇರಿ ಮೂರು ಹೊಸ ಉಪಕ್ರಮ. ಷೇರುಪೇಟೆ, ಪಿಂಚಣಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮತ್ತಷ್ಟು ವಿದೇಶಿ ಹೂಡಿಕೆ ಮಾಡಲು ಅವಕಾಶ.


### 3 ಹೊಸ ಸೆಸ್

ಬಜೆಟ್‌ನಲ್ಲಿ 3 ಹೊಸ ಮೇಲ್ತೆರಿಗೆಗಳನ್ನು ಶ್ರೀ ಜೇಟ್ಲಿ ಪರಿಚಯಿಸಿದ್ದಾರೆ. ಇವುಗಳಿಂದಾಗಿ ಎಲ್ಲಾ ಸೇವೆಗಳು, ಕಾರುಗಳು ಹಾಗೂ ವಿದ್ಯುತ್ ಬೆಲೆ ದುಬಾರಿಯಾಗಲಿದೆ.

1. ಕೃಷಿ ಕಲ್ಯಾಣ ಸೆಸ್ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಹಣ ಸಿಗುವಂತೆ ಮಾಡಲು ಸೇವಾ ತೆರಿಗೆಯ ಮೇಲೆ ಶೇ.0.5 ಮೇಲ್ತೆರಿಗೆ ವಿಸ್ತರಿಸಲಾಗಿದೆ. ಇದರಿಂದಾಗಿ ಎಲ್ಲಾ ಸೇವೆಗಳೂ ಕೊಂಚ ದುಬಾರಿಯಾಗಲಿವೆ. ಈ ಸೆಸ್ ಜೂನ್ 1ರಿಂದ ಜಾರಿಗೆ ಬರಲಿದೆ.

2. ಸ್ವಚ್ಛ ಇಂಧನ ಸೆಸ್ ಕಲ್ಲಿದ್ದಲಿನ ಮೇಲೆ ವಿಧಿಸುತ್ತಿದ್ದ ಸ್ವಚ್ಛ ಇಂಧನ ಮೇಲ್ತೆರಿಗೆಯನ್ನು ಶೇ.100ರಷ್ಟು ಹೆಚ್ಚಿಸಲಾಗಿದೆ. ಅಂದರೆ ಪ್ರತಿ ಟನ್ ಕಲ್ಲಿದ್ದಲಿಗೆ ಇಷ್ಟು ದಿನ ವಿಧಿಸಲಾಗುತ್ತಿದ್ದ 200 ರೂ. ಸೆಸ್ 400 ರೂ. ಗೆ ಏರಿಕೆಯಾಗಲಿದೆ. ಇದರಿಂದ ವಿದ್ಯುತ್ ದರ ಏರಿಕೆಯಾಗಲಿದೆ.

3. ಮೂಲಸೌಕರ್ಯ ಸೆಸ್ ಪೆಟ್ರೋಲ್, ಸಿಎನ್‌ಜಿ ಮತ್ತು ಎಲ್‌ಪಿಜಿಯಿಂದ ಓಡುವ ಸಣ್ಣ ಕಾರುಗಳ ಮೇಲೆ ಶೇ.1, ಡೀಸೆಲ್ ಕಾರುಗಳ ಮೇಲೆ ಶೇ.2.5 ಹಾಗೂ ಶಕ್ತಿಶಾಲಿ ಎಂಜಿನ್ ಹೊಂದಿರುವ ಎಸ್‌ಯುವಿಗಳ ಮೇಲೆ ಶೇ.4ರಷ್ಟು ಮೇಲ್ತೆರಿಗೆ ವಿಧಿಸಲಾಗಿದೆ. ಇದರಿಂದ ಕಾರುಗಳು ದುಬಾರಿಯಾಗಲಿವೆ.





### ಶ್ರೀಮಂತರಿಗೆ ಮತ್ತಷ್ಟು ತೆರಿಗೆ

ವಾರ್ಷಿಕ 1 ಕೋಟಿ ರೂಪಾಯಿಗೂ ಹೆಚ್ಚಿನ ತೆರಿಗೆ ಆದಾಯ ಹೊಂದಿದ್ದವರಿಗೆ ವಿಧಿಸಲಾಗುತ್ತಿದ್ದ ಮೇಲ್ತೆರಿಗೆ ಪ್ರಮಾಣವನ್ನು ಶೇ.12 ರಿಂದ ಶೇ.15ಕ್ಕೆ ಏರಿಸಲಾಗಿದೆ. ಈ ನಿಯಮ ಕಂಪನಿಗಳು, ಸಹಕಾರ ಸಂಘಗಳಿಗೆ ಅನ್ವಯವಾಗದು.

### ಸಕ್ರಮ

ಈ ಬಾರಿಯ ಬಜೆಟ್‌ನಲ್ಲಿ ದೇಶದೊಳಗೆ ಕಪ್ಪು ಹಣ ಸಂಗ್ರಹಿಸಿರುವವರು ಅದನ್ನು ಘೋಷಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಒಟ್ಟು ಶೇ.45ರಷ್ಟು ದಂಡ ಹಾಗೂ ತೆರಿಗೆ ಪಾವತಿಸಿ ಅಕ್ರಮ ಹಣವನ್ನು ಸಕ್ರಮ ಮಾಡಿಕೊಳ್ಳುವ ಯೋಜನೆಯಿದು. ಇದಕ್ಕಾಗಿ 4 ತಿಂಗಳ ಅವಕಾಶ ನೀಡಲಾಗಿದೆ. ಈ ವರ್ಷದ ಜೂನ್ 1ರಿಂದ ಸೆಪ್ಟೆಂಬರ್ 30ರೊಳಗೆ ದೇಶದಲ್ಲಿ ಕಪ್ಪು ಹಣ ಇರಿಸಿಕೊಂಡವರು ಅದನ್ನು ಆದಾಯ ತೆರಿಗೆ ಇಲಾಖೆಗೆ ಸ್ವಯಂ ಘೋಷಣೆ ಮಾಡಿಕೊಳ್ಳಬಹುದು. ಇದಕ್ಕಾಗಿ ಪ್ರತ್ಯೇಕ ಕೇಂದ್ರ ತೆರೆಯಲಾಗುತ್ತದೆ.

ಹೀಗೆ ಘೋಷಣೆ ಮಾಡಿಕೊಂಡ ನಂತರ 2 ತಿಂಗಳೊಳಗೆ ಶೇ.30ರಷ್ಟು ತೆರಿಗೆ, ಶೇ.7.5ರಷ್ಟು ಮೇಲ್ತೆರಿಗೆ, ಶೇ.7.5ರಷ್ಟು ದಂಡ – ಒಟ್ಟು ಶೇ.45 – ಪಾವತಿಸಬೇಕು. ನಂತರ ಉಳಿಯುವ ಹಣ ಸಕ್ರಮವಾಗುತ್ತದೆ ಎಂದು ಬಜೆಟ್‌ನಲ್ಲಿ ಶ್ರೀ ಅರುಣ್ ಜೇಟ್ಲಿ ಹೇಳಿದ್ದಾರೆ. ಕಪ್ಪು ಹಣ ಘೋಷಿಸಿಕೊಂಡವರಿಗೆ ಯಾವುದೇ ಶಿಕ್ಷೆ ನೀಡುವುದಿಲ್ಲ ಮತ್ತು ಅವರ ಆಸ್ತಿಗಳ ತಪಾಸಣೆಯನ್ನೂ ನಡೆಸುವುದಿಲ್ಲ. ಬೇನಾಮಿ ವ್ಯವಹಾರಗಳಿಗೂ ಕೆಲ ಷರತ್ತುಗಳು ಅನ್ವಯಿಸುವಂತೆ ಇದನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದ್ದಾರೆ.




ಕಳೆದ ವರ್ಷದ ಬಜೆಟ್‌ನಲ್ಲಿ ವಿದೇಶದಲ್ಲಿ ಕಪ್ಪು ಹಣ ಇರಿಸಿದವರಿಗೆ ಅದನ್ನು ಘೋಷಿಸಿಕೊಳ್ಳಲು ಇದೇ ರೀತಿಯ 3 ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅದಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ. ತೆರಿಗೆ ವಂಚನೆಯನ್ನು ಕಟ್ಟುನಿಟ್ಟಾಗಿ ಮಟ್ಟಹಾಕಲಾಗುವುದು.

ತಂತ್ರಜ್ಞಾನ ಸುಧಾರಣೆಯಾದಂತೆ ತೆರಿಗೆ ವಂಚನೆಯನ್ನು ಪತ್ತೆಹಚ್ಚುವ ಆದಾಯ ತೆರಿಗೆ ಇಲಾಖೆಯ ಸಾಮರ್ಥ್ಯ ಕೂಡ ಹೆಚ್ಚಾಗಿದೆ. ದೇಸೀ ಕಪ್ಪು ಹಣ ಘೋಷಿಸಿಕೊಳ್ಳಲು ಈಗ ನೀಡಿರುವ ಅವಕಾಶ ಬಳಸಿಕೊಳ್ಳದೆ, ನಂತರದ ದಿನಗಳಲ್ಲಿ ಸಿಕ್ಕಿಬಿದ್ದರೆ ಕಪ್ಪು ಹಣ ಹೊಂದಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ಕಪ್ಪು ಹಣ ಘೋಷಿಸಿಕೊಳ್ಳುವರಿಗೆ ವಿಧಿಸುವ ಶೇ.7.5ರಷ್ಟು ಮೇಲ್ತೆರಿಗೆಯನ್ನು 'ಕೃಷಿ ಕಲ್ಯಾಣ ಮೇಲ್ತೆರಿಗೆ' ಎಂದು ಕರೆಯಲಾಗುತ್ತದೆ. ಈ ಹಣವನ್ನು ಕೃಷಿ ಕ್ಷೇತ್ರ ಹಾಗೂ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಬಳಸಿಕೊಳ್ಳಲಾಗುವುದು. ಕಪ್ಪು ಹಣ ಪತ್ತೆಹಚ್ಚಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

### ಗೃಹಸಾಲ

* ಮೊದಲ ಮನೆ ಸಾಲದ ಬಡ್ಡಿಗೆ ತೆರಿಗೆ ವಿನಾಯ್ತಿ ಮಿತಿ ಹೆಚ್ಚಳ. * ಗೃಹಸಾಲದ ಬಡ್ಡಿಗೆ 2.5 ಲಕ್ಷ ರೂ. ವರೆಗೆ ತೆರಿಗೆ ವಿನಾಯ್ತಿ. * ತೆರಿಗೆ ವಿನಾಯ್ತಿ 2 ಲಕ್ಷ ರೂ.ನಿಂದ 2.5 ಲಕ್ಷ ರೂ.ಗೆ ಹೆಚ್ಚಳ. * 50 ಲಕ್ಷ ರೂ. ಮೌಲ್ಯದ, 35 ಲಕ್ಷ ರೂ. ಸಾಲದ ಮನೆಗೆ ಅನ್ವಯ.

### ಮನೆ ಬಾಡಿಗೆ ಭತ್ಯೆ


ಮನೆ ಬಾಡಿಗೆ ಭತ್ಯೆ ಮೇಲಿನ ತೆರಿಗೆ ವಿನಾಯಿತಿ ಮಿತಿಯನ್ನು ಈಗಿನ 24 ಸಾವಿರ ರೂಪಾಯಿಯಿಂದ 60 ಸಾವಿರ ರೂಪಾಯಿಗೆ ಏರಿಸಲಾಗಿದೆ. ತೆರಿಗೆ ಕಾಯ್ದೆಯ 80 ಜಿಜಿ ನಿಯಮದ ಅಡಿ, 2016–17ನೇ ಸಾಲಿನಲ್ಲಿ ವಾರ್ಷಿಕ 60 ಸಾವಿರ ರೂ.ವರೆಗಿನ ಮನೆ ಬಾಡಿಗೆಯು ತೆರಿಗೆ ವ್ಯಾಪ್ತಿಗೆ ಒಳಪಡದು.

### ಎನ್‌ಆರ್‌ಐಗಳಿಗೆ ಪ್ಯಾನ್ ಕಡ್ಡಾಯವಲ್ಲ

ತೆರಿಗೆ ಪದ್ಧತಿಗಳನ್ನು ಸರಳಗೊಳಿಸುವ ಉದ್ದೇಶದಿಂದ ವಿವಿಧ ಸಚಿವಾಲಯಗಳು

**ಏಕ್ ಭಾರತ, ಶ್ರೇಷ್ಠ ಭಾರತ್**

**2017ಕ್ಕೆ ದೇಶಕ್ಕೆ 70 ವರ್ಷದ ಸ್ವಾತಂತ್ರೋತ್ಸವ ಸಂಭ್ರಮ. ವೈವಿಧ್ಯತೆಯಲ್ಲಿ ಏಕತೆಯ ಲಾಭ ಪಡೆದುಕೊಳ್ಳುವ ನಿಟ್ಟಿನಲ್ಲಿ ಮತ್ತು ಪರಸ್ಪರ ನಡುವೆ ಸ್ನೇಹ ಸಂಬಂಧವನ್ನು ವೃದ್ಧಿಸುವ ನಿಟ್ಟಿನಲ್ಲಿ ಏಕ್ ಭಾರತ– ಶ್ರೇಷ್ಠ ಭಾರತ್ ಎಂಬ ಯೋಜನೆ ಜಾರಿಗೆ ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಯೋಜನೆ ಅನ್ವಯ ರಾಜ್ಯ–ರಾಜ್ಯಗಳ ನಡುವೆ, ಜಿಲ್ಲೆ–ಜಿಲ್ಲೆಗಳ ನಡುವಿನ ಜನರ ಸಂಬಂಧ ಬೆಸೆಯಲು ವಾರ್ಷಿಕ ಕಾರ್ಯಕ್ರಮ ಆಯೋಜಿಸಲಾಗುವುದು. ಈ ಮೂಲಕ ಪರಸ್ಪರ ಭಾಷೆ, ಸಂಸ್ಕೃತಿ, ವ್ಯಾಪಾರ, ಅರಿಯಲು ಅವಕಾಶ ಮಾಡಿಕೊಡಲಾಗುವುದು. ಇದು ಪ್ರವಾಸೋದ್ಯಮಕ್ಕೂ ನೆರವು ನೀಡಲಿದೆ ಎಂದು ಸರ್ಕಾರ ಹೇಳಿದೆ.**




ಹಾಕಿದ್ದ 13 ಸೆಸ್‌ಗಳನ್ನು ರದ್ದುಗೊಳಿಸುವುದಾಗಿ ವಿತ್ತ ಸಚಿವರು ಪ್ರಕಟಿಸಿದ್ದಾರೆ. ಈ ಸೆಸ್‌ಗಳಿಂದ ವಾರ್ಷಿಕ 50 ಕೋಟಿ ರೂ. ಗಿಂತ ಕಡಿಮೆ ತೆರಿಗೆ ಸಂಗ್ರಹ ಆಗುತ್ತಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಜರುಗಿಸಲಾಗಿದೆ. ಇದೇ ವೇಳೆ ಅನಿವಾಸಿ ಭಾರತೀಯರು ಇನ್ನು ವಹಿವಾಟಿನ ಸಂದರ್ಭದಲ್ಲಿ 'ಪ್ಯಾನ್' ಸಂಖ್ಯೆಯ ಬದಲು ಪರ್ಯಾಯ ದಾಖಲೆಗಳನ್ನು ನೀಡಬಹುದು. ಟಿಡಿಎಸ್ (ಮೂಲ ತೆರಿಗೆ ಕಡಿತ) ವ್ಯವಸ್ಥೆಯನ್ನೂ ಸರಳೀಕರಣಗೊಳಿಸಲಾಗುವುದು ಎಂದು ಪ್ರಕಟಿಸಲಾಗಿದೆ.

### ಸಣ್ಣ ಉದ್ದಿಮೆ ವಹಿವಾಟು ಮಿತಿ ಹೆಚ್ಚಳ

ಸಣ್ಣ ಉದ್ದಿಮೆದಾರರ ವಹಿವಾಟು ಮಿತಿಯನ್ನು ಸಂಭಾವ್ಯ ತೆರಿಗೆ ಯೋಜನೆಯ ಅಡಿ ಈಗಿನ 1 ಕೋಟಿ ರೂ.ನಿಂದ 2 ಕೋಟಿ ರೂ.ಗೆ ಹೆಚ್ಚಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವಿದೆ. ಆದಾಯ ತೆರಿಗೆ ಕಾಯ್ದೆಯ 44 ಎಡಿ ನಿಯಮದನ್ವಯ ಇದನ್ನು ಜಾರಿಗೊಳಿಸುವ ಬಗ್ಗೆ ತಿಳಿಸಲಾಗಿದೆ. ಇದರಿಂದ ಸುಮಾರು 30 ಲಕ್ಷ ರೂ. ಸಣ್ಣ ಉದ್ದಿಮೆದಾರರಿಗೆ ಅನುಕೂಲವಾಗಲಿದೆ.

### ಇ–ಸಹಯೋಗ್

ಸಣ್ಣಪುಟ್ಟ ಪ್ರಕರಣಗಳಿಗೂ ತೆರಿಗೆದಾರರು, ತೆರಿಗೆ ಇಲಾಖೆ ಕಚೇರಿಗೆ ಬಂದು ಹೋಗುವುದನ್ನು ತಪ್ಪಿಸುವ ನಿಟ್ಟಿಯಲ್ಲಿ, ಇ–ಸಹಯೋಗ್ ಎಂಬ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಈ ಯೋಜನೆಯಡಿ ತೆರಿಗೆ ಮಾಹಿತಿ ಸಲ್ಲಿಕೆ, ಮಾಹಿತಿ ಪರಿಶೀಲನೆ, ಹೆಚ್ಚಿನ ಮಾಹಿತಿ ಕೋರಿಕೆ, ಅದಕ್ಕೆ ಉತ್ತರ ಸಲ್ಲಿಸುವುದು ಹೀಗೆ ಎಲ್ಲಾ ಪ್ರಕ್ರಿಯೆಗಳನ್ನು ಇನ್ನು ಆನ್‌ಲೈನ್ ಮೂಲಕವೇ ಮಾಡಬಹುದಾಗಿದೆ. ಇದರಿಂದಾಗಿ ತೆರಿಗೆದಾರರು ಪ್ರತಿ ಬಾರಿಯೂ ತೆರಿಗೆ ಕಚೇರಿಗೆ ಬಂದು ಹೋಗುವ ಪ್ರಮೇಯ ತಪ್ಪುತ್ತದೆ. ತೀರಾ ಅನಿವಾರ್ಯ ಎನ್ನಿಸಿದ ಹಂತದಲ್ಲಿ ಇಲ್ಲವೇ ಕಡೆಯ ಹಂತದಲ್ಲಿ ಮಾತ್ರವೇ ತೆರಿಗೆದಾರರು ಕಚೇರಿಗೆ ಬಂದು ಹೋದರೆ ಸಾಕಾಗುತ್ತದೆ. ಪ್ರಾಯೋಗಿಕವಾಗಿ ಜಾರಿಯಾಗಿದ್ದ ಈ ಯೋಜನೆ ಕುರಿತು ಗ್ರಾಹಕರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಯೋಜನೆಯನ್ನೂ 7 ಪ್ರಮುಖ ನಗರಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ವಿಳಂಬಕ್ಕೆ ದಂಡ : ಯಾವುದೇ ತೆರಿಗೆ ವಿವಾದದ ಪ್ರಕರಣಗಳಲ್ಲಿ ಮೇಲ್ಮನವಿ ನ್ಯಾಯಾಧಿಕರಣಗಳ ತೀರ್ಪಿನ ಜಾರಿಯಲ್ಲಿ 90 ದಿನಕ್ಕಿಂತ ವಿಳಂಬವಾದಲ್ಲಿ, ಅದಕ್ಕೆ ಈಗ ಇರುವ ಶೇ.6ರ ಬದಲಾಗಿ ಶೇ.9ರಷ್ಟು ಬಡ್ಡಿ ನೀಡಲಾಗುವುದು.

### ವಿಮಾನ ನಿಲ್ದಾಣ

ದೇಶದಲ್ಲಿರುವ ಸುಮಾರು 160 ಹಿಂದುಳಿದ ಹಾಗೂ ತೀರ ಹಿಂದುಳಿದ ವಿಮಾನನಿಲ್ದಾಣಗಳ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಪ್ರತಿ ವಿಮಾನನಿಲ್ದಾಣಗಳ ಪುನಶ್ಚೇತನಕ್ಕೆ 50 ರಿಂದ 100 ಕೋಟಿ ರೂ. ಅನುದಾನ ನೀಡುವುದಾಗಿ ಸಚಿವ ಶ್ರೀ ಅರುಣ್ ಜೇಟ್ಲಿ ತಿಳಿಸಿದರು. ಇನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಕಾರಕ್ಕೆ ಸೇರಿದ ಸ್ಥಗಿತಗೊಂಡಿರುವ 10ರಿಂದ 25 ವಿಮಾನನಿಲ್ದಾಣ ಅಭಿವೃದ್ಧಿ ಮಾಡಲಾಗುವುದು ಎಂದರು.

### ಅಮೃತ್

ಅಟಲ್ ಮಿಶನ್ ಫಾರ್ ರೀಜೂವಿನೇಷನ್ ಆ್ಯಂಡ್ ಅರ್ಬನ್ ಟ್ರಾನ್‌ಫಾರ್ಮೇಷನ್ (ಅಮೃತ್) ಮತ್ತು ಸ್ಮಾರ್ಟ್‌ಸಿಟಿಗಳ ನಿರ್ಮಾಣ ಯೋಜನೆಗೆ ಈ ಬಾರಿಯ ಬಜೆಟ್ ನಲ್ಲಿ 7,296 ಕೋಟಿ ರೂ. ಅನುದಾನ ನೀಡಲಾಗಿದೆ. 2020ರ ವೇಳೆಗೆ ದೇಶದೆಲ್ಲೆಡೆ 100 ಸ್ಮಾರ್ಟ್ ಸಿಟಿ ನಿರ್ಮಾಣಕ್ಕೆ ಬಜೆಟ್‌ನಲ್ಲಿ 3,205 ಕೋಟಿ ರೂ. ತೆಗೆದಿರಿಸಲಾಗಿದೆ. ಅದೇ ರೀತಿ ಅಮೃತ್ ಯೋಜನೆಗೆ 4,091 ಕೋಟಿ ರೂ. ಒದಗಿಸಲಾಗಿದೆ. ಸ್ಮಾರ್ಟ್ ಸಿಟಿಗಳ ನಿರ್ಮಾಣ ಯೋಜನೆಯ ಮೊದಲ ಹಂತದಲ್ಲಿ ಭುವನೇಶ್ವರ್, ಅಹಮದಾಬಾದ್, ಪುಣೆ, ಚೆನ್ನೈ ಮತ್ತು ಭೋಪಾಲ್ ಸೇರಿದಂತೆ 20 ನಗರಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಶುದ್ಧ ಕುಡಿಯುವ ನೀರು, ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆ, ಸಾರ್ವಜನಿಕ ಸಾರಿಗೆ ಮತ್ತು ಮನೆಗಳ ನಿರ್ಮಾಣಕ್ಕೆ ಅನುದಾನಗಳು ಬಳಕೆಯಾಗಲಿವೆ. ಯೋಜನೆಯ ಅಡಿಯಲ್ಲಿ ಆಯ್ದ ನಗರಗಳಿಗೆ ಮುಂದಿನ 5 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರ 500 ಕೋಟಿ ರೂ. ಒದಗಿಸಲಿದೆ.

### ದೀನ್ ದಯಾಳ್, ಗುರುಗೋವಿಂದ್ ಜಯಂತಿಗೆ 200 ಕೋಟಿ

ಭಾರತೀಯ ಜನಸಂಘದ ಪ್ರಮುಖ ನಾಯಕ ದೀನ್ ದಯಾಳ್ ಉಪಾಧ್ಯಾಯ ಮತ್ತು ಸಿಖ್ ಧರ್ಮ ಗುರು ಗುರು ಗೋವಿಂದ್ ಸಿಂಗ್ ಜನ್ಮ ದಿನಾಚರಣೆ ಸಲುವಾಗಿ ಈ ಬಾರಿಯ ಬಜೆಟ್‌ನಲ್ಲಿ 200 ಕೋಟಿ ರೂ. ಹಣ ಮೀಸಲಿರಿಸಲಾಗಿದೆ. ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮ ಶತಮಾನೋತ್ಸವ ಮತ್ತು ಗುರು ಗೋವಿಂದ್ ಸಿಂಗ್‌ರ 350ನೇ ಜನ್ಮ ದಿನಾಚರಣೆ ಆಚರಿಸಲು ಸರ್ಕಾರ ನಿರ್ಧರಿಸಿದೆ. ಎರಡೂ ಆಚರಣೆಗಳಿಗೆ ಪ್ರತ್ಯೇಕವಾಗಿ ರೂ. 100 ಕೋಟಿ ಹಣ ಮೀಸಲಿಡಲಾಗಿದೆ ಎಂದು ಶ್ರೀ ಜೇಟ್ಲಿ ತಿಳಿಸಿದರು.

### ಅಂಕಪಟ್ಟಿ

ಅಂಕಪಟ್ಟಿ, ಕಾಲೇಜು ಡಿಗ್ರಿಗಳು, ಶೈಕ್ಷಣಿಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ ಇಡುವ ಉದ್ದೇಶದಿಂದ 'ಡಿಜಿಟಲ್ ಡಿಪಾಸಿಟರಿ' ಸ್ಥಾಪನೆಗಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಇಂಥ ಅಮೂಲ್ಯ ಪ್ರಮಾಣಪತ್ರಗಳನ್ನು ಡಿಜಿಟಲ್ ರೂಪದಲ್ಲಿ ಈ 'ದತ್ತಾಂಶ ಸಂಗ್ರಹಾಗಾರ'ದಲ್ಲಿ ಸಂಗ್ರಹಿಸಿ ಇಡಲಾಗುತ್ತದೆ. ಇದರಿಂದ 'ಹಾರ್ಡ್ ಕಾಪಿ' ತಾಪತ್ರಯವು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ತಪ್ಪುತ್ತದೆ

### ಶಿಕ್ಷಣ

ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಬಜೆಟ್‌ನಲ್ಲಿ ಸರ್ಕಾರ ಹಲವಾರು ಕ್ರಮಗಳನ್ನು ಪ್ರಕಟಿಸಿದೆ. ಐಐಟಿಯಂಥ ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರವು 1000 ಕೋಟಿ ರೂ. ಮೂಲ ಬಂಡವಾಳದೊಂದಿಗೆ ಉನ್ನತ ಶಿಕ್ಷಣ ಸಾಲ ವಿತರಣಾ ಸಂಸ್ಥೆ ಸ್ಥಾಪನೆಗೆ ಸರ್ಕಾರ ನಿರ್ಣಯಿಸಿದೆ. ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸುವ ಈ ಸಂಸ್ಥೆಯು, ಆ

ಹಣ ಮತ್ತು ದೇಣಿಗೆಗಳಿಂದ ಸಂಗ್ರಹವಾದ ಹಣವನ್ನು ಉನ್ನತ ಶಿಕ್ಷಣ ಸಂಸ್ಥೆಗಳ ಶಿಕ್ಷಣ ಗುಣಮಟ್ಟ ಮತ್ತು ಮೂಲಸೌಕರ್ಯ ಅಭಿವೃದ್ಧಿ ಪಡಿಸಲು ವಿನಿಯೋಗಿಸಲಿದೆ. ಇದು ಲಾಭಾಪೇಕ್ಷೆಯಿಲ್ಲದ ಸಂಸ್ಥೆಯಂತೆ ಕಾರ್ಯನಿರ್ವಹಿಸಲಿದೆ. ಅಲ್ಲದೆ, 10 ಖಾಸಗಿ ಮತ್ತು 10 ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ವಿಶ್ವದರ್ಜೆಯ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳನ್ನಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ. ಇದರಿಂದ ಜನಸಾಮಾನ್ಯರೂ ವಿಶ್ವದರ್ಜೆ ಶಿಕ್ಷಣವನ್ನು ಕೈಗೆಟಕುವ ಶುಲ್ಕದಲ್ಲಿ ಪಡೆಯುವಂತೆ ಮಾಡುವುದು ಸರ್ಕಾರದ ಉದ್ದೇಶ. ಈ ಕುರಿತ ಸವಿಸ್ತಾರ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ನೀಡಲಾಗುತ್ತದೆ ಎಂದು ಬಜೆಟ್ ಮಂಡನೆ ವೇಳೆ ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿ ತಿಳಿಸಿದರು. ನವೋದಯ ವಿದ್ಯಾಲಯಗಳಿಂದ ವಂಚಿತವಾಗಿರುವ ಜಿಲ್ಲೆಗಳಲ್ಲಿ 62 ನವೋದಯ ವಿದ್ಯಾಲಯಗಳನ್ನು ಇನ್ನೆರಡು ವರ್ಷಗಳಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಸರ್ವಶಿಕ್ಷಣ ಅಭಿಯಾನಕ್ಕೆ ಹಂಚಿಕೆಯಾಗುವ ಮೊತ್ತವನ್ನೂ ಹೆಚ್ಚಿಸುವುದಾಗಿ ಘೋಷಣೆ ಮಾಡಲಾಗಿದೆ.

### ಬಂದರು

ಬಂದರು ಕ್ಷೇತ್ರ ಅಭಿವೃದ್ಧಿಗಾಗಿ ಈ ಬಾರಿಯ ಬಜೆಟ್‌ನಲ್ಲಿ 800 ಕೋಟಿ ರೂ. ಹಣ ನೀಡಲಾಗಿದೆ ಎಂದು ಹಣಕಾಸು ಸಚಿವರು ತಿಳಿಸಿದರು. ಭಾರಿ ಸರಕುಗಳ ಹಡಗು ನಿಲುಗಡೆ ಅವಕಾಶವಾಗುವಂತೆ ಭಾರತದ ಪ್ರಮುಖ ಬಂದರುಗಳನ್ನು ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ ಹಲವಾರು ಬಂದರುಗಳ ಆಧುನೀಕರಣ ಮತ್ತು ಅವುಗಳ ಸಾಮರ್ಥ್ಯ ಹೆಚ್ಚಿಸಲು ಸರಣಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಹೊಸ ಪರಿಸರ ಸ್ನೇಹಿ ಬಂದರು ನಿರ್ಮಿಸಲು ಯೋಜನೆ ತಯಾರಿಸಲಾಗುತ್ತಿದೆ.

### ಕಾನೂನು ನೆರವು


ಸಮರ್ಪಕ ನ್ಯಾಯ ನಿರ್ವಹಣೆಗಾಗಿ ಕಾನೂನು ಸಚಿವಾಲಯಕ್ಕೆ ನೆರವಾಗಲು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ 900 ಕೋಟಿ ರೂ. ನೀಡಲಾಗಿದೆ. ಕೋರ್ಟ್‌ಗಳ ಮುಂದೆ ಬಾಕಿ ಇರುವ ಮೊಕದ್ದಮೆಗಳ ವಿಲೇವಾರಿ, ಜಿಲ್ಲಾ ಮಟ್ಟದಲ್ಲಿ ಇ–ಕೋರ್ಟ್ ಸ್ಥಾಪನೆ, ಮಾದರಿ ಕೋರ್ಟ್ ಸ್ಥಾಪನೆ, ನ್ಯಾಯಾಂಗ ಸುಧಾರಣೆ ಮತ್ತು ಅಧೀನ ನ್ಯಾಯಾಲಗಳ ಬಲವರ್ಧನೆ ಯೋಜನೆಗಳು ಈ ಅನುದಾನದಲ್ಲಿ ಸೇರಿವೆ. ತಳಮಟ್ಟದ ನ್ಯಾಯಾಂಗದ ಎದುರು ಸುಮಾರು 2.61 ಕೋಟಿ ಮೊಕದ್ದಮೆಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ.

### ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ವಿನಾಯ್ತಿ

ಸ್ಟಾರ್ಟ್‌ಆಪ್ (ನವೋದ್ಯಮ)ಗಳಿಗೆ ಪ್ರಾಥಮಿಕ ಹಂತದಲ್ಲಿ ಉತ್ತೇಜನ ನೀಡುವ ನಿಟ್ಟಿನಲ್ಲಿ ಅವುಗಳಿಗೆ ತೆರಿಗೆ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ. ಈ ಯೋಜನೆ ಅನ್ವಯ ಸ್ಟಾರ್ಟ್‌ಅಪ್ ಗಳಿಗೆ ಲಾಭದ ಮತ್ತು ಗಳಿಕೆ ಮೇಲೆ ಶೇ.100ರಷ್ಟು ತೆರಿಗೆ ವಿನಾಯಿತಿ ನೀಡಲಾಗುವುದು. ಇದಲ್ಲದೇ ಸ್ಟಾರ್ಟ್‌ಅಪ್ ವಾತಾವರಣ ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ಸ್ಟಾರ್ಟ್‌ಅಪ್ ಇಂಡಿಯಾ ಕಾರ್ಯಯೋಜನೆ ರೂಪಿಸಲಾಗುವುದು. ಇದರಡಿ ಪ್ರತಿ ವರ್ಷ 2500 ಕೋಟಿ ರೂ. ನಂತೆ 4 ವರ್ಷಗಳ ಕಾಲ ನಿಧಿ ಸಂಗ್ರಹಿಸಲಾಗುವುದು. ಇದರ ಮೂಲಕ ಸ್ಟಾರ್ಟ್‌ಪ್‌ಗಳಿಗೆ ಧನಸಹಾಯ ಒದಗಿಸಲಾಗುವುದು. ಇಂಥ ಉದ್ಯಮಗಳಿಗೆ ಕ್ಯಾಪಿಟಲ್ ಗೇನ್ ಟ್ಯಾಕ್ಸ್‌ನಿಂದ ವಿನಾಯಿತಿ ನೀಡಲು ಹೊಸ ಸೆಕ್ಷನ್ 54 ಇಇ ಸೇರ್ಪಡೆ ಮಾಡಲಾಗುವುದು.

### ವಾಣಿಜ್ಯೋದ್ಯಮ ಶಿಕ್ಷಣ

ದೇಶಾದ್ಯಂತ ಉದ್ಯಮಗಳನ್ನು ಹುಟ್ಟುಹಾಕುವ ಸಲುವಾಗಿ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಯುವಕರಿಗೆ ವಾಣಿಜ್ಯೋದ್ಯಮ ಶಿಕ್ಷಣ ನೀಡುವ ಹೊಸ ಯೋಜನೆಗೆ ಮುಂದಡಿ ಇಟ್ಟಿದೆ. ವಾಣಿಜ್ಯೋದ್ಯಮ ಶಿಕ್ಷಣ ಅಡಿಯಲ್ಲಿ 2200 ಕಾಲೇಜುಗಳು, 300 ಶಾಲೆಗಳು, 500 ಸರ್ಕಾರಿ ಐಟಿಐ ಕಾಲೇಜುಗಳು ಮತ್ತು 50 ಅರೆ ಕಾಲಿಕ ತರಬೇತಿ ಕೇಂದ್ರಗಳಲ್ಲಿ ಭಾರೀ ಪ್ರಮಾಣದಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ನಡೆಸಲು ಉದ್ದೇಶಿಸಿದೆ. ವಿಶೇಷವಾಗಿ ದೇಶದ ದೂರದ ಪ್ರದೇಶಗಳನ್ನು ಗುರಿಯಾಗಿಸಿ ಈ ಯೋಜನೆ ಜಾರಿಯಾಗಲಿದೆ. ಇನ್ನು ಯುವಕರಲ್ಲಿ ಕೌಶಲ್ಯಾಭಿವೃದ್ಧಿ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ (ಪಿಎಂಕೆವಿವೈ) ಸ್ಥಾಪಿಸಲಾಗಿದೆ.





ಇದರಡಿಯಲ್ಲಿ ದೇಶಾದ್ಯಂತ ವಿವಿಧ ಕೌಶಲ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಕೌಶಲ್ಯಾಭಿವೃದ್ಧಿಗೆ ಈ ಸಾಲಿನಲ್ಲಿ 1700 ಕೋಟಿ ರೂ. ಮೀಸಲಿಡಲಾಗಿದೆ. ಈವರೆಗೆ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಮಿಷನ್ ಅಡಿ 76 ಲಕ್ಷ ಮಂದಿಗೆ ತರಬೇತಿ ನೀಡಲಾಗಿದೆ. ಜೊತೆಯಲ್ಲಿ ಕೌಶಲ್ಯಾಭಿವೃದ್ಧಿ ಕುರಿತ ರಾಷ್ಟ್ರೀಯ ಮಂಡಳಿಯನ್ನೂ ಸ್ಥಾಪಿಸಲಾಗುವುದು. ಇದು ಉದ್ಯಮ ವಲಯ, ಶಿಕ್ಷಣ ವಲಯದೊಂದಿಗೆ ಸರ್ಟಿಫಿಕೇಶನ್ ನೀಡುವ ಉದ್ದೇಶಹೊಂದಿದೆ. ಪಿಎಂಕೆವಿವೈ ಅಡಿಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ 3 ಕೋಟಿ ಮಂದಿ ಯುವಕರಿಗೆ ತರಬೇತಿ ನೀಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಹಣಕಾಸು ಸಚಿವರು ತಿಳಿಸಿದ್ದಾರೆ.

### ಉದ್ಯೋಗ ಖಾತ್ರಿಗೆ 38,500 ಕೋಟಿ ರೂ. ಮೀಸಲು

ಈ ಬಾರಿಯ ಬಜೆಟ್‌ನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ 38,500 ಕೋಟಿ ರೂ. ಮೀಸಲಿಡಲಾಗಿದೆ. ಕಳೆದ ಸಾಲಿಗಿಂತ 3,800 ಕೋಟಿ ರೂ. ಏರಿಕೆ ಮಾಡಲಾಗಿದೆ.

### ಸಮುದ್ರ ತಳದಲ್ಲಿ ನೈಸರ್ಗಿಕ ಅನಿಲ ಶೋಧ

ನೈಸರ್ಗಿಕ ಅನಿಲ ಮತ್ತು ತೈಲದಲ್ಲಿ ಸಾಕಷ್ಟು ಸಂಪನ್ಮೂಲ ಹೊಂದಿದ್ದರೂ, ಉತ್ಪಾದನೆ ಮತ್ತು ಶೋಧದಲ್ಲಿ ಭಾರತ ಹಿಂದೆ ಬಿದ್ದಿದೆ. ಸ್ವಾವಲಂಬನೆ ಸಾಧಿಸಲಾಗುತ್ತಿಲ್ಲ. ಹೀಗಾಗಿ ನೈಸರ್ಗಿಕ ಅನಿಲದಲ್ಲಿ ಸ್ವಾವಲಂಬನೆ ನಿರ್ಮಾಣ ಗುರಿಯೊಂದಿಗೆ ಮಹದೋದ್ದೇಶದ ಯೋಜನೆಗಳನ್ನು ಹಮ್ಮಿಕೊಳ್ಳುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.




### ಜನೌಷಧ

ಜನರಿಕ್ ಔಷಧ ಪೂರೈಕೆ ಯೋಜನೆಯನ್ನು ಚುರುಕುಗೊಳಿಸಿ ದೇಶಾದ್ಯಂತ ಸೋವಿ ಬೆಲೆಗೆ ಔಷಧ ಮಾರಾಟ ಮಾಡುವ 3000 ಜನೌಷಧ ಮಳಿಗೆಗಳನ್ನು ತೆರೆಯಲಾಗುವುದು. ಜನಸಾಮಾನ್ಯರಿಗೆ ಸೋವಿ ಬೆಲೆಯಲ್ಲಿ ಔಷಧ ಪೂರೈಕೆ ಮಾಡುವುದು ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ಜನೌಷಧ ಯೋಜನೆಯಡಿ ಪರಿಷ್ಕರಿಸಿ ಜನರಿಕ್ ಔಷಧ ಮಳಿಗೆಗಳನ್ನು ತೆರೆಯುವ ಕಾರ್ಯ ಚುರುಕುಗೊಳಿಸಲಾಗುವುದು.

### ಜಿಲ್ಲಾಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರ

ದೇಶದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲೂ ಡಯಾಲಿಸಿಸ್ ಕೇಂದ್ರಗಳು ಆರಂಭವಾಗಲಿವೆ ಮತ್ತು ಅಲ್ಲಿ ಕಡಿಮೆ ಬೆಲೆಗೆ ಡಯಾಲಿಸಿಸ್ ಸೌಲಭ್ಯ ದೊರಕಲಿದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಈ ಯೋಜನೆ ಆರಂಭಿಸಲಾಗುವುದು ಎಂದು ಬಜೆಟ್‌ನಲ್ಲಿ ಶ್ರೀ ಅರುಣ್ ಜೇಟ್ಲಿ ಪ್ರಕಟಿಸಿದ್ದಾರೆ. ಡಯಾಲಿಸಿಸ್‌ಗೆ ತಗಲುವ ವೆಚ್ಚ ಕಡಿಮೆ ಮಾಡಲು ಡಯಾಲಿಸಿಸ್ ಉಪಕರಣಗಳಿಗೆ ಕೇಂದ್ರ ಸರ್ಕಾರ ವಿಧಿಸುವ ಕಸ್ಟಂ ಸುಂಕ, ಅಬಕಾರಿ ಸುಂಕಗಳಿಂದ ವಿನಾಯ್ತಿ ನೀಡಲಾಗುವುದು ಎಂದಿದ್ದಾರೆ. ಪ್ರತಿ ವರ್ಷ ದೇಶದಲ್ಲಿ 2.2 ಜನರು ಹೊಸತಾಗಿ ಗಂಭೀರ ಕಿಡ್ನಿ ಸಮಸ್ಯೆಗೆ ತುತ್ತಾಗುತ್ತಿದ್ದಾರೆ. ಅವರಿಗೆ ಕಾಲಕಾಲಕ್ಕೆ ಡಯಾಲಿಸಿಸ್ ಮಾಡಬೇಕಾಗುತ್ತದೆ. ಇದರಿಂದ ಒಟ್ಟಾರೆ ದೇಶದಲ್ಲಿ ಪ್ರತಿವರ್ಷ 3.4 ಕೋಟಿ ಡಯಾಲಿಸಿಸ್‌ಗಳು ನಡೆಯುತ್ತವೆ. ಆದರೆ, ದೇಶದಲ್ಲಿರುವ ಒಟ್ಟು 4950 ಡಯಾಲಿಸಿಸ್ ಕೇಂದ್ರಗಳಲ್ಲಿ ಹೆಚ್ಚಿನವು ಖಾಸಗಿ ಆಸ್ಪತ್ರೆಗಳಲ್ಲಿವೆ. ಮೇಲಾಗಿ, ಅವು ಪ್ರಮುಖ ನಗರಗಳಲ್ಲಿ ಮಾತ್ರ ಇವೆ. ಹಾಗಾಗಿ ಡಯಾಲಿಸಿಸ್ ಮಾಡಿಸಬೇಕು ಎಂದಿರುವ ರೋಗಿಗಳಲ್ಲಿ ಶೇ.50ರಷ್ಟು ರೋಗಿಗಳಿಗೆ ಮಾತ್ರ ಈ ಸೌಲಭ್ಯ ಸಿಗುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಒಮ್ಮೆ ಡಯಾಲಿಸಿಸ್ ಮಾಡಲು 2000 ರೂ. ತೆರಬೇಕಿದೆ. ಅದರಿಂದ ಒಬ್ಬ ಕಿಡ್ನಿ ರೋಗಿಗೆ ವಾರ್ಷಿಕ 3 ಲಕ್ಷ ರೂ. ಖರ್ಚಾಗುತ್ತದೆ. ಡಯಾಲಿಸಿಸ್ ಮಾಡಿಸಲು ರೋಗಿಗಳು ದೂರದ ನಗರಗಳಿಗೆ ಪ್ರಯಾಣ ಮಾಡಬೇಕಾಗುತ್ತದೆ. ಇದಕ್ಕಾಗಿ ಜಿಲ್ಲಾಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರ ತೆರೆಯಲಾಗುವುದು ಎಂದು ಸಚಿವರು ತಿಳಿಸಿದರು.

### ಬಡವರಿಗೆ ಆರೋಗ್ಯ ವಿಮೆ

ದೇಶದ ಎಲ್ಲಾ ಬಡ ಕುಟುಂಬಗಳಿಗೆ ವಾರ್ಷಿಕ 1 ಲಕ್ಷ ರೂ. ಆರೋಗ್ಯ ವಿಮೆ ಸೌಕರ್ಯವನ್ನು ಪ್ರಕಟಿಸಲಾಗಿದೆ. ಕುಟುಂಬದಲ್ಲಿ 60 ವರ್ಷಕ್ಕೂ ಮೇಲ್ಪಟ್ಟ




ಹಿರಿಯ ನಾಗರಿಕರಿದ್ದರೆ ಅವರಿಗೆ 30 ಸಾವಿರ ರೂ. ಹೆಚ್ಚುವರಿ ವಿಮೆ ನೀಡುವುದಾಗಿಯೂ ಘೋಷಿಸಿದ್ದಾರೆ. ಬಡ ಕುಟುಂಬಗಳಲ್ಲಿ ಅನಾರೋಗ್ಯದ ಸಮಸ್ಯೆ ಎದುರಾದರೆ ಚಿಕಿತ್ಸೆಕೊಡಿಸಲು ಮಾಡುವ ವೆಚ್ಚ ದೊಡ್ಡ ಹೊರೆಯಾಗುತ್ತದೆ. ಪ್ರತಿ ವರ್ಷ ಆಸ್ಪತ್ರೆಗೆ ಹಣ ಖರ್ಚು ಮಾಡಿಯೇ ದೇಶದಲ್ಲಿ ಲಕ್ಷಾಂತರ ಕುಟುಂಬಗಳು ಬಡತನ ರೇಖೆಗಿಂತ ಕೆಳಗೆ ಹೋಗುತ್ತಿವೆ. ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾದರಂತೂ ಕುಟುಂಬದ ಬುಡವೇ ಅಲ್ಲಾಡಿಹೋಗುತ್ತದೆ. ಈ ಹಿನ್ನೆಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆರೋಗ್ಯ ರಕ್ಷಣೆ ನೀಡುವ ಯೋಜನೆ ಸಿದ್ಧಪಡಿಸಲಾಗಿದೆ ಎಂದು ಶ್ರೀ ಜೇಟ್ಲಿ ಹೇಳಿರು.

**ಮಹಿಳೆಯರ ಹೆಸರಲ್ಲಿ ಬಡ ಕುಟುಂಬಕ್ಕೆ ಗ್ಯಾಸ್ ಸಂಪರ್ಕ**

ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕ ನೀಡಲು ಈ ವರ್ಷ 2000 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆ.

2016–17ನೇ ಸಾಲಿನಲ್ಲಿ 1.5 ಕೋಟಿ ಬಡ ಕುಟುಂಬಗಳಿಗೆ ಉಚಿತ ಎಲ್‌ಪಿಜಿ ಸಂಪರ್ಕ (ಸಂಪರ್ಕ ಉಚಿತ, ಆದರೆ ಸಿಲಿಂಡರ್‌ಗೆ ಹಣ ನೀಡಬೇಕು) ನೀಡುವ ಗುರಿ ಹೊಂದಲಾಗಿದೆ. ಇನ್ನೆರಡು ವರ್ಷ ಈ ಯೋಜನೆ ಮುಂದುವರಿಸಿ ಒಟ್ಟಾರೆ ದೇಶದ 5 ಕೋಟಿ ಬಡ ಕುಟುಂಬಗಳಿಗೆ ಸಬ್ಸಿಡಿಸಹಿತ ಎಲ್‌ಪಿಜಿ ಸಂಪರ್ಕ ನೀಡುವ ಗುರಿಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಕೆಲ ವರ್ಷಗಳ ಹಿಂದೆ ಎಲ್‌ಪಿಜಿ ಸಿಲಿಂಡರ್ ಸಂಪರ್ಕವನ್ನು ಶ್ರೀಮಂತರು ಮಾತ್ರ ಹೊಂದಿರುತ್ತಿದ್ದರು. ಈಗ ಮಧ್ಯಮ ವರ್ಗದ ಕುಟುಂಬಗಳಿಗೂ ಅದು ದೊರೆತಿದೆ. ಆದರೆ, ದೇಶದ ಬಡವರು ಮಾತ್ರ ಇವತ್ತಿಗೂ ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರೆ. ಇದು ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದೆ. ತಜ್ಞರ ಪ್ರಕಾರ ಒಂದು ತಾಸು ಸೌದೆ ಒಲೆಯ ಮುಂದೆ ಮಹಿಳೆಯೊಬ್ಬರು ಕುಳಿತರೆ ಆಕೆ 400 ಸಿಗರೇಟ್ ಹೊಗೆ ಸೇವಿಸಿದಂತಾಗುತ್ತದೆ. ಮಹಿಳೆಯರ ಆರೋಗ್ಯ ಕಾಪಾಡಲು ಹಾಗೂ ಅಡುಗೆ ಮಾಡುವ ಸಮಯ ಉಳಿತಾಯ ಮಾಡಲು ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ನೀಡಲು ನಿರ್ಧರಿಸಲಾಗಿದೆ ಎಂದು ಸಚಿವರು ಹೇಳಿದರು.

ಎಲ್‌ಪಿಜಿ ಸಬ್ಸಿಡಿ ತ್ಯಜಿಸಿ ಎಂಬ ಪ್ರಧಾನ ಮಂತ್ರಿಯವರ ಕರೆಗೆ ಓಗೊಟ್ಟು ಇಲ್ಲಿಯವರೆಗೆ ಸಬ್ಸಿಡಿ ತ್ಯಜಿಸಿದ 75 ಲಕ್ಷ ಮಧ್ಯಮ ವರ್ಗ ಹಾಗೂ ಕೆಳ ಮಧ್ಯಮ ವರ್ಗದವರ ಔದಾರ್ಯಕ್ಕೂ ಅವರು ಧನ್ಯವಾದ ಹೇಳಿದರು.

**ಎಫ್‌ಡಿಐ ವಿಸ್ತೃತ**

ಈ ಬಾರಿಯ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಕುರಿತ ನೀತಿಯನ್ನು ಮತ್ತಷ್ಟು ವಿಸ್ತಾರಗೊಳಿಸಿದೆ. ಹಣ್ಣು, ತರಕಾರಿ ಬೆಳೆವ ದೇಶದ ರೈತಾಪಿ ವರ್ಗಕ್ಕೆ ನೆರವಾಗುವ ದೃಷ್ಟಿಯಿಂದ ಮತ್ತು ಅದನ್ನು ಸಂಸ್ಕರಿಸುವ ಉದ್ಯಮಗಳಿಗೆ ಪೂರಕವಾಗಿ ಶೇ.100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲು ಉದ್ದೇಶಿಸಿದೆ. ರೈತರು ಬೆಳೆದ ಹಣ್ಣು, ತರಕಾರಿಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ದೇಶದಲ್ಲೇ ಬೆಳೆದ ಸಂಸ್ಕರಿತ ಹಣ್ಣು, ತರಕಾರಿಗಳನ್ನು ಮಾರುಕಟ್ಟೆ ಮಾಡುವಲ್ಲಿ ಶೇ.100 ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವರು ಹೇಳಿದರು


* ವಿಮೆ ಮತ್ತು ನಿವೃತ್ತಿ ವೇತನ ವಲಯದಲ್ಲಿ ಶೇ.49ರಷ್ಟು ಎಫ್‌ಡಿಐ ಹೂಡಿಕೆಗೆ ಸಮ್ಮತಿ. ಈ ಮೊದಲು ಈ ಕ್ಷೇತ್ರದಲ್ಲಿ ಶೇ.26ರಷ್ಟು ಮಾತ್ರ ಹೂಡಿಕೆಗೆ ಅನುಮತಿ ಇತ್ತು. * ಆಸ್ತಿ ಪುನರ್‌ನಿರ್ಮಾಣ ಕಂಪನಿಗಳಲ್ಲಿ ಶೇ.100ರಷ್ಟು ಸಹಜ ಮಾರ್ಗದಲ್ಲಿ ಎಫ್‌ಡಿಐಗೆ ಅವಕಾಶ. * ಭಾರತದ ಷೇರು ಮಾರುಕಟ್ಟೆಯಲ್ಲಿ ವಿದೇಶಿ ಸಂಸ್ಥೆಗಳ ಹೂಡಿಕೆ ಮಿತಿಯನ್ನು ದೇಶೀಯ ಸಂಸ್ಥೆಗಳಿಗೆ ಸರಿಸಮವಾಗಿ ಶೇ.5ರಿಂದ ಶೇ.15ಕ್ಕೇರಿಕೆ. * ವಿಶೇಷ ಬ್ಯಾಂಕೇತರ ಹಣಕಾಸು ಕಂಪನಿಗಳ ಚಟುವಟಿಕೆಗೆ ಸಹಜಮಾರ್ಗದಲ್ಲಿ ಶೇ.18ಕ್ಕಿಂತ ಹೆಚ್ಚು ಎಫ್‌ಡಿಐ ಹೂಡಿಕೆಗೆ ಅವಕಾಶ. * ಕೇಂದ್ರೀಯ ಸಾರ್ವಜನಿಕ ವಲಯದ ಕಂಪನಿಗಳಲ್ಲಿ (ಬ್ಯಾಂಕ್‌ಗಳನ್ನು ಹೊರತುಪಡಿಸಿ, ಷೇರು ಮಾರುಕಟ್ಟೆಯಲ್ಲಿ ಪಟ್ಟಿ ಮಾಡಲ್ಪಟ್ಟ ಕಂಪನಿಗಳು) ವಿದೇಶಿ ಹೂಡಿಕೆ ಮಿತಿ ಶೇ.24ರಿಂದ ಶೇ.49ಕ್ಕೇರಿಕೆ. ಇದಕ್ಕೆ ಸರ್ಕಾರದ ಪೂರ್ವಾನುಮತಿ ಅಗತ್ಯ.

**ತೆರಿಗೆ ಹೆಚ್ಚಳ**

ಶೇ.14.5ರಷ್ಟಿದ್ದ ಸೇವಾ ತೆರಿಗೆ ಮೇಲೆ ಶೇ.0.5ರಷ್ಟು ಕೃಷಿ ಕಲ್ಯಾಣ ಸೆಸ್ ವಿಧಿಸುವ ಪರಿಣಾಮ ಹೋಟೆಲ್ ನಲ್ಲಿ ಊಟ, ಪ್ರಯಾಣ, ಸಿನೆಮಾ ವೀಕ್ಷಣೆ, ಬಿಲ್ ಪಾವತಿ ಸೇರಿದಂತೆ ಎಲ್ಲಾ ಸೇವೆಗಳು ಮತ್ತಷ್ಟು ದುಬಾರಿಯಾಗಲಿವೆ. ಇನ್ನು ಬೀಡಿ ಹೊರತುಪಡಿಸಿ ತಂಬಾಕು ಉತ್ಪನ್ನಗಳ ಮೇಲಿನ ಅಬಕಾರಿ ಸುಂಕ ಶೇ.10ರಿಂದ ಶೇ.15ಕ್ಕೆ ಹೆಚ್ಚಳ ಆಗಲಿದೆ.

ವಾಹನಗಳ ಮೇಲೆ ಶೇ.1ರಿಂದ ಶೇ.4ರವರೆಗೆ ಮೂಲಸೌಕರ್ಯ ಸೆಸ್ ಹೇರಿರುವ ಕಾರಣ ಕಾರಿನ ಬೆಲೆಯಲ್ಲಿ ಕನಿಷ್ಠ 3000 ರೂ.ನಿಂದ ಗರಿಷ್ಠ 1 ಲಕ್ಷ ರೂ.ವರೆಗೆ ಏರಿಕೆಯಾಗಲಿದೆ. ವೈಮಾನಿಕ ಇಂಧನದ ಮೇಲಿನ ಸುಂಕವನ್ನು ಶೇ.8ರಿಂದ ಶೇ.14ಕ್ಕೆ ಹೆಚ್ಚಳ ಮಾಡಲಾಗಿದೆ. ಹೀಗಾಗಿ ವಿಮಾನದ ಟಿಕೆಟ್ ದರ ಮತ್ತು ಅದರ ಮೇಲಿನ ಸೇವಾ ತೆರಿಗೆಯೂ ಸೇರಿ ವಿಮಾನಯಾನ ದುಬಾರಿ ಎನಿಸಲಿದೆ.

ತಂಪುಪಾನೀಯ, ಸಂಸ್ಕರಿಸಿದ ನೀರಿನ ಮೇಲಿನ ಅಬಕಾರಿ ಸುಂಕವನ್ನು ಶೇ.18ರಿಂದ ಶೇ.21ಕ್ಕೆ ಹೆಚ್ಚಳ ಮಾಡಲಾಗಿದೆ. 1000 ರೂ. ಮೇಲ್ಪಟ್ಟ ಬ್ರ್ಯಾಂಡೆಡ್ ರೆಡಿಮೇಡ್ ಬಟ್ಟೆಗಳ ಮೇಲಿನ ಅಬಕಾರಿ ಸುಂಕ ಶೇ.10ರಿಂದ ಶೇ.15ಕ್ಕೆ ಹೆಚ್ಚಿಸಲಾಗಿದೆ. ಸೋಲಾರ್ ವಾಟರ್ ಹೀಟರ್ ಮೇಲಿನ ಸೀಮಾ ಸುಂಕವನ್ನು ಶೇ.7.5ರಿಂದ ಶೇ.10ಕ್ಕೆ ಹೆಚ್ಚಿಸಲಾಗಿದೆ. ಸ್ಥಳೀಯವಾಗಿ ಉತ್ಪಾದಿಸುವ ಮೊಬೈಲ್‌ಗಳಲ್ಲಿ ಬಳಸುವ ಆಮದು ಮಾಡಿಕೊಂಡ ಸರ್ಕಿಟ್ ಬೋರ್ಡ್ ಮೇಲಿನ ಸುಂಕವನ್ನು ಶೇ.1ರಷ್ಟು ಹೆಚ್ಚಿಸಲಾಗಿದೆ. ಕಾನೂನು ಸೇವೆ ನೀಡುವ ಸಂಸ್ಥೆಗಳ ಮೇಲೆ ಮತ್ತು ವಕೀಲರ ಸೇವೆ ಮೇಲೆ ಶೇ.14ರಷ್ಟು ಸೇವಾ ತೆರಿಗೆ ವಿಧಿಸಲು




ನಿರ್ಧರಿಸಲಾಗಿದೆ. ಮನೆ ಬದಲಾವಣೆ ವೇಳೆ ಸಾಮಾನು ಸಾಗಿಸುವ ಸೇವೆ ಮೇಲೆ ಸೇವಾ ತೆರಿಗೆಯನ್ನು ಶೇ.4.2ರಿಂದ ಶೇ.5.6ಕ್ಕೆ ಹೆಚ್ಚಿಸಲಾಗಿದೆ. ಲಾಟರಿ ಟಿಕೆಟ್‌ಗಳ ಮೇಲೆ ಶೇ.7.5ರಷ್ಟು ಸೀಮಾ ಸುಂಕ ಹೇರಲಾಗಿದೆ.

### ಸೆಟ್‌ಟಾಪ್ ಬಾಕ್ಸ್, ಸೌರದೀಪ ಅಗ್ಗ

ಸೋಲ್ಸ್, ಹೀಲ್ಸ್‌ಗಳಿಗೆ ಬಳಸಲಾಗುವ ರಬ್ಬರ್ ಶೀಟ್, ರಬ್ಬರ್ ಶೀಟ್‌ಗಳ ಮೇಲಿನ ಉತ್ಪಾದನಾ ತೆರಿಗೆಯನ್ನು ಬಜೆಟ್‌ನಲ್ಲಿ ಶೇ.12.5 ರಿಂದ ಶೇ.6 ಕ್ಕೆ ಇಳಿಕೆ ಮಾಡಲಾಗಿದೆ. ಇದರಿಂದ ಚಪ್ಪಲಿ ಬೆಲೆ ಇಳಿಕೆಯಾಗಲಿದೆ. ಈ ಹಿಂದೆ ಸೌರ ದೀಪಗಳಿಗೆ ಶೇ.12.5ರಷ್ಟು ಉತ್ಪಾದನಾ ಸುಂಕ ವಿಧಿಸಲಾಗುತ್ತಿತ್ತು. ಅದನ್ನು ಈಗ ರದ್ದುಗೊಳಿಸಲಾಗಿದೆ. ಹೀಗಾಗಿ ಸೋಲಾರ್ ದೀಪಗಳ ಬೆಲೆಯಲ್ಲಿ ಇಳಿಕೆ ಕಾಣಲಿದೆ. ಬ್ರಾಡ್ ಬ್ಯಾಂಡ್ ಮೋಡೆಮ್, ರೂಟರ್ ಹಾಗೂ ಕೇಬಲ್ ಟೀವಿ ಸೆಟ್ ಟಾಪ್ ಬಾಕ್ಸ್‌ಗಳ ಮೇಲಿನ ಸೆನ್‌ವ್ಯಾಟ್ ರಹಿತ ಉತ್ಪಾದನಾ ತೆರಿಗೆಯನ್ನು ಶೇ.12.5ರಿಂದ ಶೇ.4ಕ್ಕೆ ಇಳಿಕೆ ಮಾಡಲಾಗಿದೆ. ಹೀಗಾಗಿ ಇವುಗಳ ಬೆಲೆ ತಗ್ಗಲಿದೆ.

### ಸಿಸಿಟಿವಿ ಬೆಲೆ ಇಳಿಕೆ

ಡಿಜಿಟಲ್ ವಿಡಿಯೊ ರೆಕಾರ್ಡರ್ ಹಾಗೂ ಸಿಸಿಟಿವಿ ಕ್ಯಾಮೆರಾಗಳಿಗೆ ಈವರೆಗೆ ಶೇ.12.5 ಉತ್ಪಾದನಾ ತೆರಿಗೆ ವಿಧಿಸಲಾಗುತ್ತಿತ್ತು. ಅದನ್ನು ಈಗ ರದ್ದುಗೊಳಿಸಲಾಗಿರುವುದರಿಂದ ಅವುಗಳ ಬೆಲೆ ಇಳಿಕೆ ಕಾಣಲಿವೆ. ಹೈಬ್ರಿಡ್ ಎಲೆಕ್ಟ್ರಿಕ್ ವಾಹನಗಳ ಮೇಲಿನ ಉತ್ಪಾದನಾ ಸುಂಕವನ್ನು ಶೇ.12.5ರಿಂದ ಶೇ.6ಕ್ಕೆ ಇಳಿಕೆ ಮಾಡಲಾಗಿದೆ. ಹೀಗಾಗಿ ಆ ವಾಹನ ಅಗ್ಗವಾಗಲಿವೆ. ಮೂತ್ರಪಿಂಡ ಸಮಸ್ಯೆ ಉಪಚಾರದ ಉಪಯೋಗಕ್ಕೆ ಬರುವ ಬಳಸಿ ಬಿಸಾಡುವ ಸ್ಟೆರಿಲೈಸ್ಡ್ ಡಯಲೈಸರ್ ಮೇಲಿನ ಶೇ.12.5 ಉತ್ಪಾದನಾ ಸುಂಕ ತೆಗೆದುಹಾಕಲಾಗಿದೆ. ಹೀಗಾಗಿ ಡಯಾಲಿಸಿಸ್ ಚಿಕಿತ್ಸಾ ವೆಚ್ಚ ಇಳಿಕೆಯಾಗಲಿದೆ. ಮೈಕ್ರೋವೇವ್ ಓವನ್‌ಗಳನ್ನು ದೇಶದಲ್ಲಿ ಉತ್ಪಾದಿಸುವ ಕಂಪನಿಗಳು ಅದಕ್ಕೆ ಬೇಕಾದ 1 ಕಿಲೋ ವ್ಯಾಟ್‌ನಿಂದ 1.5 ಕಿಲೋವ್ಯಾಟ್ ಸಾಮರ್ಥ್ಯದ ಮ್ಯಾಗ್ನೆಟ್ರಾನ್‌ಗಳನ್ನು ಆಮದು ಮಾಡಿಕೊಳ್ಳುತ್ತಿವೆ. ಈಗ ಆ ಉಪಕರಣಕ್ಕೆ ವಿಧಿಸಲಾಗುತ್ತಿರುವ ಶೇ.10 ಸೀಮಾಸುಂಕವನ್ನು ರದ್ದುಗೊಳಿಸಲಾಗಿದೆ. ಮರಳದ ತಿರುಳು, ಹೀರಿಕೊಳ್ಳುವ ಪಾಲಿಮರ್‌ಗಳ ಮೇಲಿನ ಸೀಮಾಸುಂಕವನ್ನು ಶೇ.2.5ರಷ್ಟು ಇಳಿಕೆ ಮಾಡಲಾಗಿದೆ. ಹೀಗಾಗಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳು ಹಾಗೂ ಟ್ಯಾಂಪನ್‌ಗಳು ಅಗ್ಗವಾಗಲಿವೆ. ಅಂಧರ ಅನುಕೂಲಕ್ಕಾಗಿ ಬ್ರೈಲ್ ಕಾಗದಕ್ಕೆ ಸೀಮಾಸುಂಕದಿಂದ ವಿನಾಯಿತಿ ನೀಡಲಾಗಿದೆ.

### ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್‌ಗಳ ಓಡಾಟಕ್ಕೆ ಅನುಮತಿ

ದೇಶದ ಸಾರಿಗೆ ಕ್ಷೇತ್ರವನ್ನು ಆಮೂಲಾಗ್ರ ಬದಲಾವಣೆ ಮಾಡುವ ನಿಟ್ಟಿನಲ್ಲಿ ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚು ಹೆಚ್ಚು ಖಾಸಗಿ ಬಸ್‌ಗಳ ಓಡಾಟಕ್ಕೆ ಅನುಮತಿ ನೀಡುವ ಕ್ರಮವನ್ನು ಪ್ರಸ್ತಾವಿಸಲಾಗಿದೆ. ಸದ್ಯ

ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸರ್ಕಾರಿ ವಾಹನಗಳನ್ನು ಓಡಿಸಲು ಮಾತ್ರ ಸೀಮಿತ ಅನುಮತಿ ಇದ್ದು, ಇದನ್ನು ಖಾಸಗಿಯವರಿಗೂ ಮುಕ್ತ ಮಾಡಲಾಗುವುದು. ಈ ಮೂಲಕ ಉದ್ಯಮಶೀಲತೆಗೆ ಯುವಕರಿಗೆ, ಹೊಸ ಉದ್ಯಮ ಸ್ಥಾಪಿಸುವ ಆಸಕ್ತಿ ಇರುವವರಿಗೆ ಅವಕಾಶವಾಗಲಿದೆ. ಜೊತೆಗೆ ನಾಗರಿಕರಿಗೆ ಸಾರಿಗೆ ಸವಲತ್ತು ಹೆಚ್ಚೆಚ್ಚು ಲಭ್ಯವಾಗಲಿದೆ. ಪರ್ಮಿಟ್ ರಾಜ್ ಮುಕ್ತಗೊಳಿಸುವುದು ಮಧ್ಯಮ ಅವಧಿಯ ಗುರಿಯಾಗಿದೆ. ಇದಕ್ಕಾಗಿ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಶ್ರೀ ಜೇಟ್ಲಿ ಹೇಳಿದರು.

**'ಸೂರ್ಯಾಸ್ತ' ನಿಯಮ ಜಾರಿ**

ಇಷ್ಟು ವರ್ಷ ಹೊಸ ಹೊಸ ಯೋಜನೆ ಹಾಗೂ ಕಾಯ್ದೆಗಳನ್ನು ಕೇಂದ್ರ ಸರ್ಕಾರ ರೂಪಿಸಿ ಅವುಗಳನ್ನು ಅನಿರ್ದಿಷ್ಟಾವಧಿವರೆಗೆ ಉಳಿಯಲು ಹಾಗೇ ಬಿಡುತ್ತಿತ್ತು. ಆದರೆ, ಇದೇ ಮೊದಲ ಬಾರಿಗೆ ಎಲ್ಲಾ ಯೋಜನೆ ಹಾಗೂ ನಿರ್ದಿಷ್ಟ ಕಾಯ್ದೆಗಳಿಗೆ 'ಅಂತಿಮ ದಿನಾಂಕ' ನಿಗದಿಪಡಿಸುವ ಹೊಸ ಪದ್ಧತಿಯನ್ನು ಬಜೆಟ್‌ನಲ್ಲಿ ಶ್ರೀ ಅರುಣ್ ಜೇಟ್ಲಿ ಪ್ರಕಟಿಸಿದ್ದಾರೆ.

ಇದನ್ನು 'ಸನ್‌ಸೆಟ್ ನಿಯಮ' (ಸೂರ್ಯಾಸ್ತ) ಎಂದು ಕರೆಯಲಾಗಿದೆ. 'ಸರ್ಕಾರದ ಖರ್ಚುವೆಚ್ಚಗಳ ಗುಣಮಟ್ಟವನ್ನು ಉತ್ತಮಗೊಳಿಸಲು ಇನ್ನು ಮುಂದೆ ಪ್ರತಿ ಯೋಜನೆಗೂ ಒಂದು ಅಂತಿಮ ದಿನಾಂಕ ನಿಗದಿಪಡಿಸಲಾಗುತ್ತದೆ.

ಹಾಗೆಯೇ ಎಲ್ಲಾ ಯೋಜನೆಗಳಿಗೂ ಅವುಗಳಿಂದ ಉಂಟಾದ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತದೆ.


ಆ ಮೂಲಕ ಯೋಜನೆಗಳಿಂದ ನಿಜಕ್ಕೂ ಯಾರಿಗೆ ಅನುಕೂಲವಾಗಿದೆ ಎಂಬುದನ್ನು ಕಂಡುಹಿಡಿಯಲಾಗುತ್ತದೆ' ಎಂದು ಶ್ರೀ ಅರುಣ ಜೇಟ್ಲಿ ಹೇಳಿದರು ❑

# FORM IV

**Statement about ownership and other particulars about Yojana (Kannada)**
***to be published in the first issue every year after the last day of February***

| | | | |
|---|---|---|---|
| 1. | Place of Publication | : | Bengaluru |
| 2. | Periodicity of Publication | : | Monthly |
| 3. | Printer's Name<br>Nationality<br>Address | :<br>:<br>: | Dr. Sadhana Rout<br>Indian<br>Publications Division, Soochna Bhavan, New Delhi - 110 003. |
| 4. | Publisher's Name<br>Nationality<br>Address | :<br>:<br>: | Dr. Sadhana Rout<br>Indian<br>Publications Division, Soochna Bhavan, New Delhi - 110 003. |
| 5. | Editor's Name<br>Nationality<br>Address | :<br>:<br>: | Ms. Punitha S<br>Indian<br>Publications Division, 1st Floor, 'F' Wing, Kendriya Sadan, Koramangala, Bengaluru - 560 034. |
| 6. | Name & Address of Individual who own the newspaper and Partner or shareholder holding more than one Percent of the total capital. | : | Wholly owned by Ministry of Information & Broadcasting, Government of India, New Delhi - 110 003. |

I, Sadhana Rout, hereby declare that the particular given above are true to the best of my knowledge and belief.



**(Dr. Sadhana Rout)**
Signature of Publisher

ನಿರಾಯಾಸ

# ರೈಲ್ವೆ ಬಜೆಟ್ 2016–17



ಬೇಡಿಕೆ ಮೇರೆಗೆ
ಕಾದಿರಿಸುವಿಕೆ ಸೌಲಭ್ಯ,
ವೇಳಾಪಟ್ಟಿಗೆ ಅನುಗುಣವಾಗಿ
ಸರಕು ಸಾಗಣೆ
ರೈಲು ಸಂಚಾರ,
ಸರಕು ಸಾಗಾಟಕ್ಕೂ
ವೇಗದ ರೈಲು,
ಸುರಕ್ಷತೆಗೆ ಅತ್ಯುನ್ನತ
ತಂತ್ರಜ್ಞಾನ ಬಳಕೆ,
ಕಾವಲು ರಹಿತ
ಲೆವೆಲ್ ಕ್ರಾಸಿಂಗ್ ವ್ಯವಸ್ಥೆಗೆ
ಪೂರ್ಣ ವಿರಾಮ ಮತ್ತು
ಸಂಪೂರ್ಣವಾಗಿ
ವೈಜ್ಞಾನಿಕ ರೀತಿಯಲ್ಲಿ
ಶೌಚ ತ್ಯಾಜ್ಯ ವಿಲೇವಾರಿ
ಇವು ರೈಲ್ವೆ ಸಚಿವರ
2020ರ ರೈಲ್ವೆ ಮುನ್ನೋಟ
ಯೋಜನೆಗಳು.

ಪ್ರತಿ ಪ್ರಯಾಣಿಕನೂ ರೈಲ್ವೆಯ ಪ್ರಚಾರ ರಾಯಭಾರಿ ಎಂದು ಬಣ್ಣಿಸಿರುವ ರೈಲ್ವೆ ಸಚಿವ ಶ್ರೀ ಸುರೇಶ್ ಪ್ರಭು, ಪ್ರಯಾಣವನ್ನು ಆಹ್ಲಾದಕರವಾಗಿಸಲು ಹಲವು ಸೌಲಭ್ಯಗಳನ್ನು ಪ್ರಕಟಿಸಿ 2016–17ನೇ ಸಾಲಿನ ಬಜೆಟ್ ಮಂಡಿಸಿದ್ದಾರೆ.

ರೈಲ್ವೆ ಬಜೆಟ್‌ನಲ್ಲಿ ಪ್ರಯಾಣ ಮತ್ತು ಸರಕು ಸಾಗಾಟ ದರವನ್ನು ಏರಿಸಿಲ್ಲ. ವರಮಾನ ಏರಿಕೆಗಾಗಿ ಟಿಕೆಟ್ ದರದಾಚೆಗೆ ನೋಟ ಹರಿಸಿರುವ ಅವರು ಪ್ರಯಾಣಿಕರ ಸೌಲಭ್ಯ ಹೆಚ್ಚಳ, ವೇಗ ಮತ್ತು ಹೆಚ್ಚು ಅನುಕೂಲಗಳನ್ನು ಹೊಂದಿರುವ ರೈಲುಗಳನ್ನು ಆರಂಭಿಸುವುದಾಗಿ ಹೇಳಿದ್ದಾರೆ. ವಿವಿಧ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಜೊತೆ ಕಾರ್ಯನಿರ್ವಹಣೆ ವೆಚ್ಚ ಇಳಿಸಿ ವರಮಾನ ಏರಿಕೆ ಮಾಡಲು ಯೋಚಿಸಿದ್ದಾರೆ. ನಾಲ್ಕು ಹೊಸ ಸೂಪರ್‌ಫಾಸ್ಟ್ ರೈಲು ಸೇವೆಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ ಹಮ್‌ಸಫರ್, ತೇಜಸ್, ಉದಯ್ ಮತ್ತು ಅಂತ್ಯೋದಯ. ಇವುಗಳಲ್ಲಿ ಮೊದಲ ಎರಡು ರೈಲುಗಳ ವೆಚ್ಚವನ್ನು ಟಿಕೆಟ್ ಮತ್ತು ಟಿಕೇಟೇತರ ವರಮಾನದ ಮೂಲಕ ಭರಿಸುವ ವ್ಯವಸ್ಥೆ ರೂಪಿಸುವ ಚಿಂತನೆ ವ್ಯಕ್ತಪಡಿಸಲಾಗಿದೆ.

### ನಿಲ್ದಾಣಗಳಿಗೆ ಮೆರುಗು

ದೇಶದ ಪ್ರಮುಖ ಪ್ರವಾಸಿ ತಾಣಗಳು ಮತ್ತು ತೀರ್ಥಕ್ಷೇತ್ರಗಳಲ್ಲಿರುವ ರೈಲು ನಿಲ್ದಾಣಗಳನ್ನು ಸುಂದರಗೊಳಿಸಲು ಒತ್ತು. ಪ್ರವಾಸಿಗರಿಗೆ ಮತ್ತು ಭಕ್ತರಿಗೆ ಸ್ವಚ್ಛ ಹಾಗೂ ಪ್ರಶಾಂತ ವಾತಾವರಣ ಒದಗಿಸುವುದು ಇದರ ಹಿಂದಿನ ಉದ್ದೇಶ. ಅಜ್ಮೀರ್, ಅಮೃತ್‌ಸರ, ಬಿಹಾರ್ ಷರೀಫ್, ಚೆಂಗನೂರ್, ದ್ವಾರಕಾ, ಗಯಾ, ಹರಿದ್ವಾರ, ಮಥುರಾ, ನಾಗಪಟ್ಟಣ, ನಾಂದೇಡ್, ನಾಸಿಕ್, ಪಾಲಿ, ಪುರಿ, ತಿರುಪತಿ, ವೆಲಾಂಗಣಿ, ವಾರಣಾಸಿ ಮತ್ತು ವಾಸ್ಕೊ ರೈಲು ನಿಲ್ದಾಣಗಳು ಈ ಯೋಜನೆಯ ಪ್ರಯೋಜನ ಪಡೆಯಲಿವೆ.

### ಇ–ಟಿಕೆಟಿಂಗ್

ಈಗ ಪ್ರತಿ ನಿಮಿಷಕ್ಕೆ 2,000 ಟಿಕೆಟ್‌ಗಳನ್ನು ಮಾತ್ರ ವಿತರಿಸಲು ಸಾಧ್ಯ. ಅದನ್ನು ಮುಂದೆ ಪ್ರತಿ ನಿಮಿಷಕ್ಕೆ 7,200 ಟಿಕೆಟ್‌ಗಳಿಗೆ ಏರಿಸಲಾಗುತ್ತದೆ. ಸ್ಮಾರ್ಟ್‌ಫೋನ್ ಅಪ್ಲಿಕೇಷನ್ ಮೂಲಕ ಪ್ಲಾಟ್‌ಫಾರಂ ಟಿಕೆಟ್ ಮತ್ತು ಪ್ರಯಾಣದ ಟಿಕೆಟ್ ಖರೀದಿಸುವ ವ್ಯವಸ್ಥೆ ಜಾರಿಗೆ ಬರಲಿದೆ. 1,780 ಸ್ವಯಂಚಾಲಿತ ಟಿಕೆಟ್ ವಿತರಣಾ ಯಂತ್ರಗಳ ಅಳವಡಿಕೆ. 225 ನಗದು, ಸ್ಮಾರ್ಟ್ ಕಾರ್ಡ್ ಚಾಲಿತ ಟಿಕೆಟ್ ವಿತರಣಾ ಯಂತ್ರಗಳ ಅಳವಡಿಕೆ.

### ಜಂಟಿ ಸಹಭಾಗಿತ್ವ

ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರಗಳ ಜತೆ ಜಂಟಿ ಸಹಯೋಗಕ್ಕೆ ಚಾಲನೆ. ವೆಚ್ಚ, ಮಾಲೀಕತ್ವ, ನಿರ್ವಹಣೆ ಮತ್ತು ಆದಾಯ ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೆಯಾಗಲಿದೆ. ಜಂಟಿ ಸಹಭಾಗಿತ್ವದಲ್ಲಿ ಒಟ್ಟು 44 ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತದೆ. ರೂ. 92 ಸಾವಿರ ಕೋಟಿ ಮೊತ್ತದ ಈ ಸಹಭಾಗಿತ್ವದಲ್ಲಿ 5,300 ಕಿ. ಮೀ. ಉದ್ದದ ಮಾರ್ಗಗಳು ಸಿದ್ಧವಾಗಲಿವೆ. 17 ರಾಜ್ಯ ಸರ್ಕಾರಗಳ ಜತೆ ಒಪ್ಪಂದ ಮಾಡಿಕೊಳ್ಳಲು ಈಗಾಗಲೇ ಪ್ರಸ್ತಾವಗಳು ಸಿದ್ಧವಾಗಿವೆ.

### ರೈಲು ಪರದೆ ಜಾಲ

ರೈಲುಗಳ ಆಗಮನ ಮತ್ತು ನಿರ್ಗಮನ ಸಮಯ ಮೊದಲಾದ


* ಯೋಜನಾ ಸಂಪಾದಕೀಯ ಮಂಡಳಿ, ಮೂಲ : ರೈಲ್ವೆ ಸಚಿವಾಲಯ, ಪಿಬಿಐ.

**ಬಜೆಟ್ ಒಳನೋಟ**


* ರೂ. 1.90 ಲಕ್ಷ ಕೋಟಿ 2016-17ನೇ ವರ್ಷದಲ್ಲಿ ರೈಲ್ವೆ ವರಮಾನ ನಿರೀಕ್ಷೆ.
* ರೂ 93 ಸಾವಿರ ಕೋಟಿ ವೆಚ್ಚದಲ್ಲಿ 44 ಹೊಸ ಯೋಜನೆಗಳು.
* ರೂ. 1.5 ಲಕ್ಷ ಕೋಟಿ ಮುಂದಿನ ಐದು ವರ್ಷಗಳಲ್ಲಿ ಭಾರತೀಯ ಜೀವ ವಿಮಾ ನಿಗಮ ಹೂಡಿಕೆ ಮಾಡಲಿರುವ ಮೊತ್ತ.
* ರೂ. 8.8 ಲಕ್ಷ ಕೋಟಿ ಮುಂದಿನ ಐದು ವರ್ಷಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆಯ ಅಂದಾಜು.
* ರೂ 40 ಸಾವಿರ ಕೋಟಿ ಎರಡು ಹೊಸ ರೈಲು ಎಂಜಿನ್ ಕಾರ್ಖಾನೆ ಸ್ಥಾಪಿಸಲು ನಿಗದಿ ಮಾಡಿದ ಮೊತ್ತ.

## ರೈಲ್ವೆ ಬಜೆಟ್ 2016-17 ರೂಪಾಯಿ ಲೆಕ್ಕಾಚಾರ

**ರೂಪಾಯಿ ಎಲ್ಲಿಂದ**
**ಒಟ್ಟಾರೆ ಸ್ವೀಕೃತಿ**




**ರೂಪಾಯಿ ಎಲ್ಲಿಗೆ**
**ಸ್ವೀಕೃತಿಯ ವಿತರಣೆ**




ವಿವರಗಳ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡುವ ಕೇಂದ್ರೀಕೃತ ಜಾಲ. ದೇಶದ ಆಯ್ದ 2 ಸಾವಿರ ನಿಲ್ದಾಣಗಳಲ್ಲಿ 20 ಸಾವಿರ ಪರದೆಗಳ ಅಳವಡಿಕೆ. ಪ್ರಯಾಣಿಕರಿಗೆ ನಿಖರ ಮಾಹಿತಿ ಲಭ್ಯ. ಇವುಗಳ ಜತೆಗೆ ಮುಂದಿನ ನಿಲ್ದಾಣದ ದೂರ, ರೈಲು ಅಲ್ಲಿಗೆ ತಲುಪಲಿರುವ ಸಮಯ, ರೈಲು ನಿಲುಗಡೆ ಅವಧಿ ಮೊದಲಾದ ವಿವರಗಳ ಬಗ್ಗೆ ನಿಖರ ಮಾಹಿತಿ ಒದಗಿಸಲು ಬೋಗಿಗಳಲ್ಲಿ ಜಿಪಿಎಸ್ ಆಧರಿತ ಪರದೆ ಅಳವಡಿಕೆ.

### ರೈಲು ಮಿತ್ರ ಸೇವಾ

ಹಿರಿಯ ನಾಗರಿಕರು ಮತ್ತು ಅಂಗವಿಕಲರನ್ನು ರೈಲಿಗೆ ಹತ್ತಿಸಲು ನೆರವಾಗಲು ಕೊಂಕಣ ರೈಲ್ವೆಯ ನಿಲ್ದಾಣಗಳಲ್ಲಿ ಈಗಾಗಲೇ ಇರುವ ಸಾರಥಿ ಸೇವೆಯನ್ನು ಇತರ ರೈಲುಗಳಿಗೂ ವಿಸ್ತರಿಸಲಾಗುವುದು. ಬ್ಯಾಟರಿ ಚಾಲಿತ ಕಾರ್ ಕಾದಿರಿಸುವಿಕೆ, ಸಹಾಯಕರ ಸೇವೆ ತ್ವರಿತವಾಗಿ ದೊರೆಯಲು ಕ್ರಮ. ಹಣ ಪಾವತಿಸಿ ಪಿಕ್‌ಅಪ್ ಮತ್ತು ಡ್ರಾಪ್ ಸೌಲಭ್ಯ, ಗಾಲಿ ಕುರ್ಚಿ ವ್ಯವಸ್ಥೆಗೆ ಕ್ರಮ.

### ಭದ್ರತೆ

ಮುಖ್ಯವಾಗಿ ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ಭದ್ರತೆ ಒದಗಿಸುವ ಸಲುವಾಗಿ 24 ಗಂಟೆಯೂ ಕಾರ್ಯ ನಿರ್ವಹಿಸುವ ಸಹಾಯವಾಣಿ ಅಸ್ತಿತ್ವಕ್ಕೆ ಬರಲಿದೆ. ಸಹಾಯವಾಣಿ ಸಂಖ್ಯೆ 182 ಪ್ರತಿದಿನ 1 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಸ್ವೀಕರಿಸುವ ಸಾಮರ್ಥ್ಯ ಹೊಂದಿರುತ್ತದೆ.

ಡಿಜಿಟಲ್ ಕಣ್ಗಾವಲು ಹೆಚ್ಚಿಸುವ ಸಲುವಾಗಿ ದೇಶದ 311 ರೈಲು ನಿಲ್ದಾಣಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಜಾಲವನ್ನು ಈಗಾಗಲೇ ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ದೇಶದ ಮತ್ತಷ್ಟು ಪ್ರಮುಖ ರೈಲು ನಿಲ್ದಾಣಗಳಿಗೆ ಈ ಜಾಲವನ್ನು ವಿಸ್ತರಿಸಲಾಗುತ್ತದೆ.

### ಏಳು ಹೊಸ ಯೋಜನೆಗಳು

ರೈಲ್ವೆ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ರೈಲ್ವೆ ಸಚಿವ ಶ್ರೀ ಸುರೇಶ್ ಪ್ರಭು ಅವರು ಏಳು ಹೊಸ ಯೋಜನೆಗಳನ್ನು ಪ್ರಕಟಿಸಿದ್ದಾರೆ.

ಪ್ರತಿಯೊಂದು ಯೋಜನೆಗೂ ಪ್ರತ್ಯೇಕ ನಿರ್ದೇಶಕರು ಇರುತ್ತಾರೆ. ಅವರು ಯೋಜನೆಯ ಪ್ರಗತಿಯನ್ನು ರೈಲ್ವೆ ಮಂಡಳಿ ಅಧ್ಯಕ್ಷರಿಗೆ ವರದಿ ಮಾಡಬೇಕು ಎಂದು ಅವರು ತಿಳಿಸಿದರು.

### ರೈಲ್ವೆ ಮುನ್ನೋಟ

ಪ್ರಯಾಣಿಕರು ದೀರ್ಘ ಕಾಲದಿಂದ ನಿರೀಕ್ಷಿಸುತ್ತಿರುವ ಉತ್ತಮ ರೈಲ್ವೆ ಸೇವೆಯು 2020ರ ವೇಳೆಗೆ ವಾಸ್ತವವಾಗಲಿದೆ ಎಂದು ಸಚಿವರು ರೈಲ್ವೆ ಮುನ್ನೋಟದ ವಿವರವನ್ನು ನೀಡಿದರು.

ಬೇಡಿಕೆ ಮೇರೆಗೆ ಕಾದಿರಿಸುವಿಕೆ ಸೌಲಭ್ಯ, ವೇಳಾಪಟ್ಟಿಗೆ ಅನುಗುಣವಾಗಿ ಸರಕು ಸಾಗಣೆ ರೈಲು ಸಂಚಾರ, ಸರಕು ಸಾಗಾಟಕ್ಕೂ ವೇಗದ ರೈಲು, ಸುರಕ್ಷತೆಗೆ ಅತ್ಯುನ್ನತ ತಂತ್ರಜ್ಞಾನ ಬಳಕೆ,ಕಾವಲು ರಹಿತ ಲೆವೆಲ್ ಕ್ರಾಸಿಂಗ್ ವ್ಯವಸ್ಥೆಗೆ ಪೂರ್ಣ ವಿರಾಮ ಮತ್ತು ಸಂಪೂರ್ಣವಾಗಿ ವೈಜ್ಞಾನಿಕ

ರೀತಿಯಲ್ಲಿ ಶೌಚ ತ್ಯಾಜ್ಯ ವಿಲೇವಾರಿ ಇವು ರೈಲ್ವೆ ಸಚಿವರ 2020ರ ರೈಲ್ವೆ ಮುನ್ನೋಟ ಯೋಜನೆಗಳು.

**ಅಂಗವಿಕಲರಿಗೆ ವಿಶೇಷ ಸೌಲಭ್ಯ :** ಅಂಗವಿಕಲರು ಆನ್‌ಲೈನ್ ಮೂಲಕ ಟಿಕೆಟ್ ಕಾದಿರಿಸುವಾಗ ನೀಡುವ ವಿವರಗಳನ್ನು ಮತ್ತೆ ನೀಡುವ ಅಗತ್ಯವಿಲ್ಲ.

* ಆನ್‌ಲೈನ್‌ನಲ್ಲಿ ಗಾಲಿಕುರ್ಚಿ ಅಗತ್ಯವನ್ನು ತಿಳಿಸುವ ವ್ಯವಸ್ಥೆ. * ಅಂಧ ಪ್ರಯಾಣಿಕರ ಅನುಕೂಲಕ್ಕೆ ಬ್ರೈಲ್ ಲಿಪಿ ವ್ಯವಸ್ಥೆಯ ಬೋಗಿಗಳು

**ಹಿರಿಯ ನಾಗರಿಕರಿಗೆ ಮೀಸಲಾತಿ ಹೆಚ್ಚಳ**

* ಶೇ. 50 ರಷ್ಟು ಕೆಳಗಿನ ಆಸನಗಳು ಹಿರಿಯ ಪ್ರಯಾಣಿಕರಿಗೆ ಮೀಸಲು
* ಸ್ವಯಂಚಾಲಿತ ಮೆಟ್ಟಿಲು ಮತ್ತು ಲಿಫ್ಟ್ ವ್ಯವಸ್ಥೆಯಲ್ಲಿ ಸುಧಾರಣೆ.
* ಸುರಕ್ಷತೆಯ ದೃಷ್ಟಿಯಿಂದ ಮಹಿಳೆಯರಿಗೆ ಮಧ್ಯದ ಭಾಗಗಳಲ್ಲಿ ಆಸನ
* ಪ್ರಸಕ್ತ ಸಾಲಿನಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಗೂಗಲ್ ಸಹಭಾಗಿತ್ವದಲ್ಲಿ ನೂರು ನಿಲ್ದಾಣಗಳಲ್ಲಿ ವೈಫೈ ಸೌಲಭ್ಯ. ಮುಂದಿನ ಎರಡು ವರ್ಷಗಳಲ್ಲಿ 400 ನಿಲ್ದಾಣಗಳಿಗೆ ಈ ಸೌಲಭ್ಯ ವಿಸ್ತರಣೆ.

**ಪ್ರಯಾಣಿಕರ ಪ್ರತಿಕ್ರಿಯೆಗೆ ಐವಿಆರ್ ವ್ಯವಸ್ಥೆ**

ಗ್ರಾಹಕ ಸೇವೆಯನ್ನು ಮತ್ತಷ್ಟು ಉತ್ತಮಗೊಳಿಸುವ ನಿಟ್ಟಿನಲ್ಲಿ ಸ್ವಯಂಚಾಲಿತ ಧ್ವನಿ ಪ್ರತಿಕ್ರಿಯೆ ವ್ಯವಸ್ಥೆ (ಐವಿಆರ್‌ಎಸ್) ಜಾರಿಗೆ ನಿರ್ಧಾರ. ಇದರಿಂದ ಪ್ರಯಾಣಿಕರಿಂದ ನೇರವಾಗಿ ಪ್ರತಿಕ್ರಿಯೆ ಪಡೆಯಲು ಅನುಕೂಲವಾಗಲಿದೆ. ರೈಲ್ವೆಯು ಗ್ರಾಹಕರ ಪ್ರತಿಕ್ರಿಯೆ ಬಯಸಿ ಪ್ರತಿದಿನ ಒಂದು ಲಕ್ಷಕ್ಕೂ ಅಧಿಕ ಕರೆಗಳನ್ನು ಮಾಡುತ್ತದೆ. ಈ ಪ್ರತ್ಯೇಕ ವ್ಯವಸ್ಥೆ ಜಾರಿಯಾದರೆ ಪ್ರಯಾಣಿಕರಿಂದ ತಕ್ಷಣ ಅಭಿಪ್ರಾಯ ಪಡೆಯಲು ಸಾಧ್ಯ.

**ಮೀಸಲಾತಿ ಹಾಗೂ ರಿಯಾಯಿತಿ**

**ಜನನಿ ಸೇವಾ ಮತ್ತು ವಿವಿಧ ಸೌಲಭ್ಯ :** ಮಕ್ಕಳೊಂದಿಗೆ ಪ್ರಯಾಣಿಸುವ ತಾಯಂದಿರ ನೆರವಿಗೆ ಕ್ರಮ. ರೈಲು ಮತ್ತು ನಿಲ್ದಾಣಗಳಲ್ಲಿ ಮಕ್ಕಳ ಆಹಾರ, ಬಿಸಿ ಹಾಲು ಮತ್ತು ಬಿಸಿ ನೀರಿನ ವ್ಯವಸ್ಥೆ ಮಾಡಲಾಗುವುದು. ರೈಲ್ವೆ ನಿಲ್ದಾಣಗಳಲ್ಲಿ ಈಗಿರುವ ಏಕ ಉದ್ದೇಶದ ಮಳಿಗೆಗಳ ಜಾಗದಲ್ಲಿ ಬಹುಪಯೋಗಿ ಮಳಿಗೆಗಳನ್ನು ತೆರೆಯುವ ಸಂಬಂಧ ಹೊಸ ನೀತಿಯನ್ನು ಪರಿಚಯಿಸಲಾಗುವುದು. ಇಲ್ಲಿ ಹಾಲು, ಔಷಧಿ ಸೇರಿ ಪ್ರಯಾಣಿಕರಿಗೆ ವಿವಿಧ ಸೇವೆಗಳು ಲಭ್ಯವಾಗಲಿವೆ.

**ಮೀಸಲಾತಿ :** ಕೇಟರಿಂಗ್ ಕೇಂದ್ರಗಳ ನೇಮಕಾತಿಯಲ್ಲಿ ಎಸ್.ಸಿ.ಎಸ್. ಟಿ. ಇತರೆ ಹಿಂದುಳಿದ ವರ್ಗ, ಮಹಿಳೆಯರು, ಅಂಗವಿಕಲರಿಗೆ ಮೀಸಲಾತಿ ಜಾರಿಗೊಳಿಸಲಾಗಿದೆ. ಇದರಲ್ಲಿ ಮಹಿಳೆಯರಿಗೆ ಶೇ. 33 ಒಳಮೀಸಲಾತಿಯೂ ಇದೆ.

**ಫೋನ್ ಮೂಲಕ ಟಿಕೆಟ್ ರದ್ದತಿ :** ಸಹಾಯವಾಣಿ ಸಂಖ್ಯೆ 139ಕ್ಕೆ ಕರೆ ಮಾಡುವ ಮೂಲಕ ಟಿಕೆಟ್ ರದ್ದು ಮಾಡುವ ಸೌಲಭ್ಯ ಜಾರಿಯಾಗಲಿದೆ. ರದ್ದತಿ ಖಚಿತಪಡಿಸಲು ನೊಂದಾಯಿತ ಮೊಬೈಲ್ ಸಂಖ್ಯೆಗೆ ಒನ್ ಟೈಮ್ ಪಾಸ್‌ವರ್ಡ್ ಬರಲಿದೆ.

**ಬಾರ್‌ಕೋಡ್ ಟಿಕೆಟ್ :** ಟಿಕೆಟ್ ರಹಿತ ಹಾಗೂ ಗೊಂದಲರಹಿತ ಪ್ರಯಾಣಕ್ಕಾಗಿ ಪ್ರಮುಖ ನಿಲ್ದಾಣಗಳಲ್ಲಿ ಬಾರ್‌ಕೋಡ್ ಇರುವ ಟಿಕೆಟ್ ನೀಡಿಕೆ ಹಾಗೂ ಸ್ಕ್ಯಾನರ್ ಅಳವಡಿಕೆ.

**ಸಿ.ಸಿ.ಟಿ.ವಿ. ಕ್ಯಾಮರಾ ಅಳವಡಿಕೆ:** ತತ್ಕಾಲ್ ಟಿಕೆಟ್ ಕಾದಿರಿಸುವಿಕೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ತತ್ಕಾಲ್ ಕೌಂಟರ್‌ಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ಅಳವಡಿಕೆ



**ಸ್ವಚ್ಛತೆ :** ಕ್ಲೀನ್ ಮೈ ಕೋಚ್ ಎಂಬ ಹೊಸ ಸೇವೆಯನ್ನು ಆರಂಭಿಸಲಾಗುತ್ತಿದ್ದು ಪ್ರಯಾಣಿಕರು ಎಸ್‌ಎಂಎಸ್ ಕಳುಹಿಸುವ ಮೂಲಕ ತಮ್ಮ ಬೋಗಿಯನ್ನು ಸ್ವಚ್ಛಗೊಳಿಸುವಂತೆ ಬೇಡಿಕೆ ಸಲ್ಲಿಸಬಹುದು.

**ಕಸ ವಿಂಗಡಣೆ :** ಎ – 1 ದರ್ಜೆಯ ನಿಲ್ದಾಣಗಳಲ್ಲಿ ಕಸ ವಿಂಗಡಣೆ ಹಾಗೂ ಕಸ ಸಂಸ್ಕರಣೆ ಕೇಂದ್ರಗಳನ್ನು ಹಂತಹಂತವಾಗಿ ಆರಂಭಿಸಲಾಗುವುದು. ಮುಂದಿನ ಆರ್ಥಿಕ ವರ್ಷದಲ್ಲಿ 5 ಕೇಂದ್ರಗಳು ಆರಂಭ.

**ಜೈವಿಕ ಶೌಚಾಲಯ :** ಮುಂದಿನ ಆರ್ಥಿಕ ವರ್ಷದಲ್ಲಿ 30 ಸಾವಿರ ಜೈವಿಕ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ. ಅಂಗವಿಕಲರು, ಹಿರಿಯ ನಾಗರಿಕರು ಹಾಗೂ ಮಹಿಳಾ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆಯ್ದ ನಿಲ್ದಾಣಗಳಲ್ಲಿ ಜೈವಿಕ ಟಾಯ್ಲೆಟ್ ಸೌಲಭ್ಯ. ಆಯ್ದ ನಿಲ್ದಾಣಗಳಲ್ಲಿ ಸ್ವಚ್ಛತೆ ಹೆಚ್ಚಿಸಲು ಜಾಗೃತಿ ಅಭಿಯಾನ ಆರಂಭಿಸಲಾಗುತ್ತಿದೆ.

**ಮೊಬೈಲ್ ಆ್ಯಪ್ :** ಟಿಕೆಟ್ ಸಮಸ್ಯೆ, ದೂರುಗಳ ನಿರ್ವಹಣೆ ಎರಡು ಮೊಬೈಲ್ ಆ್ಯಪ್‌ಗಳ ಅಭಿವೃದ್ಧಿ. ಒಂದು ಟಿಕೆಟ್ ಸಂಬಂಧ ಸಮಸ್ಯೆಗಳ ನಿವಾರಣೆಗೆ ಯತ್ನಿಸಿದರೆ, ಮತ್ತೊಂದು ಇತರೆ ದೂರುಗಳು ಹಾಗೂ ಸಲಹೆಗಳಿಗೆ ಮೀಸಲಾಗಿರಲಿದೆ. ❑

# ಯೋಜನಾ

## ಏಪ್ರಿಲ್ 2016 ಸಂಚಿಕೆಯ ವಿಷಯ

# ಈಶಾನ್ಯ ರಾಜ್ಯಗಳು

# ಕೇಂದ್ರ ಆಯವ್ಯಯ 2016-17 : ಕೃಷಿಯತ್ತಲೇ ಚಿತ್ತ



* ಸಿಎಸ್‌ಸಿ ಶೇಖರ್

ಸರ್ಕಾರಿ ಯೋಜನೆಗಳ ಸದ್ಬಳಕೆಯಾಗದಿರುವುದೂ ಸೇರಿದಂತೆ ಹಲವು ಸಮಸ್ಯೆಗಳಿಗೆ ರೈತರಲ್ಲಿ ಮಾಹಿತಿಯ ಕೊರತೆಯೇ ಕಾರಣ. ಇದಕ್ಕಾಗಿ ಕೃಷಿ ವಲಯದ ನಿಖರ ಪ್ರಗತಿಗೆ ಕೃಷಿ ವಿಸ್ತರಣಾ ಸೇವೆಗಳ ಗುಣಮಟ್ಟದ ಸುಧಾರಣೆಗೆ ಹೆಚ್ಚಿನ ಗಮನ ಕೊಡಲೇಬೇಕಾಗಿದೆ.

ಕೇಂದ್ರದ 2016-17 ನೇ ಸಾಲಿನ ಬಜೆಟ್‌ನ, ಚಿತ್ತ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯತ್ತ ನೆಟ್ಟಿರುವುದು ಸ್ಪಷ್ಟ. ನೀರಾವರಿಗೆ ಉತ್ತೇಜನವೂ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಕಂಡುಕೊಳ್ಳುವತ್ತ ಮನಸ್ಸು ಮಾಡುವ ಮೂಲಕ ಕೇಂದ್ರ ಸರ್ಕಾರವು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸಂಗತಿಗಳ ಕುರಿತು ಗಮನಹರಿಸಿರುವುದು ವಿಶೇಷ. ಹಿಂದಿನ ಎರಡು ವರ್ಷಗಳ ಸತತ ಬರಗಾಲದಿಂದ ಕಂಗೆಟ್ಟ ಕೃಷಿ ವಲಯದ ನಿಸ್ತೇಜ ಸಾಧನೆಯ ಹಿನ್ನೆಲೆಯಲ್ಲಿ ಈ ಉಪಕ್ರಮಗಳು ರೂಪುಗೊಂಡಿವೆಯೆಂಬುದೂ ಅಷ್ಟೇ ಸ್ಪಷ್ಟ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಉತ್ತಮ ಸಾಧನೆ ತೋರಿದ ಬಳಿಕ, ಕೃಷಿ ಕ್ಷೇತ್ರದ ಪ್ರಗತಿ ಎಡವುತ್ತಿದೆ. 2012-13 ರಲ್ಲಿ ಶೇ.1.5 ನಂತರದ ಎರಡು ವರ್ಷಗಳಲ್ಲಿ ತೋರಿದ ಶೇ. 4.2 ಹಾಗೂ ಶೇ.-0.2ರ ಅಂಕಿಅಂಶಗಳೇ ಮೇಲಿನ ಮಾತಿಗೆ ನಿದರ್ಶನ. ಕೇಂದ್ರೀಯ ಅಂಕಿಅಂಶ ಕಾರ್ಯಾಲಯದ ಇತ್ತೀಚಿನ ಅಂದಾಜಿನಂತೆ 2015-16 ನೇ ಸಾಲಿನ ಯೋಜಿತ ಶೇ. 1. 1 ರಷ್ಟಿನ ಪ್ರಗತಿಯಷ್ಟೇ ಕೊಂಚ ಸಮಾಧಾನ ಪಡುವಂತಿದೆ. ಕೇವಲ ಸತತ ಬರಗಾಲವಲ್ಲದೇ, ನೀರಾವರಿಯಿಂದ ಕೃಷಿ ಅವಲಂಬಿತ ಅಂಶಗಳು (ಒಳಸುರಿ), ಮಾರುಕಟ್ಟೆ ವ್ಯವಸ್ಥೆ ಎಲ್ಲವೂ ಈ ಮಂದಗತಿಗೆ ಕಾರಣ. ಪ್ರಸ್ತುತ ಬಜೆಟ್ ಈ ನೆಲೆಯ ಹಲವು ಸಮಸ್ಯೆಗಳಿಗೆ ಪರಿಹಾರ ಹುಡುಕುವತ್ತ ಹೆಜ್ಜೆ ಇಟ್ಟಿದೆ. ಈ ಧನಾತ್ಮಕ ದೃಷ್ಟಿಯಿಂದಲೇ ನೀರಾವರಿ, ಗ್ರಾಮೀಣ ಮೂಲಸೌಲಭ್ಯ ಹಾಗೂ ಮಾರುಕಟ್ಟೆ ಕುರಿತೇ ಹಲವು ಉಪಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆಹಾರ ಹಣದುಬ್ಬರ, ಆಹಾರ ಉತ್ಪಾದನೆ ಮತ್ತು ಕೃಷಿಯ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ ಆಯವ್ಯಯದಲ್ಲಿನ ಅನುದಾನ ಹಂಚಿಕೆಯ ಧನಾತ್ಮಕ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. 1990 ರ ಮಧ್ಯಭಾಗದಲ್ಲಿ ದೇಶದಲ್ಲಿ ಕೃಷಿ ಪ್ರಗತಿ ನಿಂತ ನೀರಾಗಿತ್ತಲ್ಲದೇ, ಆಹಾರ ಉತ್ಪಾದನೆಯೂ ಕುಸಿತಗೊಂಡಿತ್ತು. 1997-98 ರಿಂದ 2004-05 ರವರೆಗಿನ ಕೃಷಿ ವಲಯದ ಜಿಡಿಪಿ ವಾರ್ಷಿಕ ಸರಾಸರಿ ಶೇ. 2.2 ರಷ್ಟಿತ್ತು, ಇದು ಬಹುತೇಕ ಹಸಿರು ಕ್ರಾಂತಿಯ ಮುನ್ನಾ ವರ್ಷಗಳಲ್ಲಿನ ಸ್ಥಿತಿಯನ್ನೇ ಹೋಲುವಂಥದ್ದು. ಕ್ಷಿಪ್ರಗತಿಯಲ್ಲಿ ಆಹಾರ ಉತ್ಪಾದನೆಯೂ ಕುಸಿದಿತ್ತು. ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯಲ್ಲಿ ನಿರಂತರವಾಗಿ ಕುಸಿತ ಕಂಡದ್ದು ಈ ಸ್ಥಿತಿಗೆ ಪ್ರಬಲ ಕಾರಣ. ಜತೆಗೆ ಕೃಷಿಯಲ್ಲಿ ಲಾಭವಿಲ್ಲವೆಂಬ ಮನೋಭಾವನೆಯೂ ಈ ಒಳಸುರಿಯ ಬಳಕೆಯನ್ನು ಕಡಿತಗೊಳಿಸುವಂತೆ ಮಾಡಿ ಕ್ಷೇತ್ರವನ್ನು ಸಂಕಷ್ಟಕ್ಕೆ ಸಿಲುಕಿಸಿತು. ಅದರೆ, 2005-06 ರಲ್ಲಿ ಮೊದಲಬಾರಿಗೆ ಸರ್ಕಾರಗಳ ಉಪಕ್ರಮಗಳಿಂದ ಒಳಸುರಿಗಳ ಬಳಕೆಯಲ್ಲಿ ಸ್ವಲ್ಪ ಸುಧಾರಣೆ ಕಂಡಿತು. 2007-08 ರಲ್ಲಿ ಈ ಸಂಬಂಧ ಘೋಷಿತವಾದ ಕೆಲವು ಯೋಜನೆ-ಕಾರ್ಯಕ್ರಮಗಳಿಂದ ಆ ಸುಧಾರಣೆ ಮತ್ತಷ್ಟು ವೇಗ ಪಡೆಯಿತು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮೂಲಕ ಕೃಷಿ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡುವತ್ತ ರಾಜ್ಯಗಳನ್ನು ಸೆಳೆಯುವ ಮತ್ತು ರಾಷ್ಟ್ರೀಯ

* ಅಸೋಸಿಯೇಟ್ ಪ್ರೊಫೆಸರ್, ಇನ್‌ಸ್ಟಿಟ್ಯೂಟ್ ಆಫ್ ಎಕಾನಾಮಿಕ್ ಗ್ರೋತ್, ದೆಹಲಿ ವಿಶ್ವವಿದ್ಯಾಲಯ. Email : csekhar@iegindia.org

ಆಹಾರ ಭದ್ರತಾ ಮಿಷನ್ ಮುಖೇನ ಆಹಾರ ಉತ್ಪಾದನೆ ಹೆಚ್ಚಳಕ್ಕೆ ನಿಗದಿತ ಗುರಿ ನಿಗದಿಪಡಿಸಿದ್ದು ಒಟ್ಟೂ ಪ್ರಗತಿಯ ಪ್ರಕ್ರಿಯೆಯ ವೇಗಗತಿಗೆ ಸಹಾಯಕವಾಯಿತು. ಈ ಎಲ್ಲ ಕ್ರಮಗಳು ಇತ್ತೀಚಿನ ಕೆಲವು ವರ್ಷಗಳಲ್ಲಿ ಕೃಷಿ ಕ್ಷೇತ್ರದ ಸುಧಾರಣೆಗೆ ಮತ್ತು ಉತ್ತಮ ಸಾಧನೆಗೆ ಪೂರಕವಾದವು. ಆದರೂ, ಉತ್ಪಾದನೆಯಲ್ಲಿನ ಅನಿಶ್ಚಿತತೆ ಮತ್ತು ಮಾರುಕಟ್ಟೆಯಲ್ಲಿನ ಅಡಚಣೆಗಳು ಇನ್ನೂ ಕೃಷಿ ವಲಯವನ್ನ ಕಾಡುವುದನ್ನು ಬಿಟ್ಟಿಲ್ಲ. ಈ ಬಜೆಟ್ ಇಂಥ ದೀರ್ಘಕಾಲದ ಸಮಸ್ಯೆಗಳತ್ತ ಮುಖ ಮಾಡಿದೆ.

### ನೀರಾವರಿ

ಭಾರತದ ಕೃಷಿ ವಲಯ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಯೆಂದರೆ ಮಳೆಯನ್ನೇ ಹೆಚ್ಚು ಪಾಲು ನಂಬಿಕುಳಿತಿರುವುದು. ಸುಮಾರು ಶೇ. 45 ರಷ್ಟು ಕೃಷಿ ಪ್ರದೇಶವಷ್ಟೇ ನೀರಾವರಿ ಸೌಕರ್ಯ ಹೊಂದಿದೆ. ಈ ವ್ಯತ್ಯಾಸ ಆಹಾರ ಉತ್ಪಾದನೆಯ ಅನಿಶ್ಚಿತತೆಗೆ ಬಹುಮಟ್ಟಿಗೆ ಕಾರಣವಾಗಿದೆ. ಈ ಆಯವ್ಯಯದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವತ್ತ ಗಮನಹರಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ 17 ಸಾವಿರ ಕೋಟಿ ರೂ. ಗಳ ಅನುದಾನದಲ್ಲಿ 28 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲು ಯೋಜಿಸಲಾಗಿದೆ. ಇದಲ್ಲದೇ ತ್ವರಿತ ನೀರಾವರಿ ಸೌಲಭ್ಯದಡಿ ನಿಷ್ಕ್ರಿಯಗೊಂಡಿರುವ ಸುಮಾರು 89 ನೀರಾವರಿ ಯೋಜನೆಗಳ ಪುನಶ್ಚೇತನಕ್ಕೂ ಯೋಜಿಸಲಾಗಿದೆ. ಇದು ಸಾಧ್ಯವಾದರೆ ಸುಮಾರು 81 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಅನುಕೂಲವಾಗಲಿದೆ. ಸುಮಾರು 6 ಸಾವಿರ ಕೋಟಿ ಅನುದಾನದಲ್ಲಿ ಅಂತರ್ಜಲ ಮರುಪೂರಣಕ್ಕೂ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ, ಕೆರೆ ಅಭಿವೃದ್ಧಿ, ಹೂಳೆತ್ತುವುದು ಹಾಗೂ ಬಾವಿಗಳ ಪುನಶ್ಚೇತನದಂಥ ಉಪಕ್ರಮಗಳನ್ನು ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪೂರೈಸಲು ನಿರ್ಧರಿಸಲಾಗಿದೆ. ಇವೆಲ್ಲವನ್ನು ಸುಮಾರು 25 ಸಾವಿರ ಕೋಟಿ ರೂ. ದೀರ್ಘಾವಧಿ ನೀರಾವರಿ ಯೋಜನಾ ನಿಧಿಯಿಂದ ಕೈಗೊಳ್ಳಲಾಗುತ್ತಿದ್ದು, ಕೃಷಿ ವಲಯದ ಅಭಿವೃದ್ಧಿ ಹೆಚ್ಚಳದಲ್ಲಿ ಮಹತ್ವದ ಪಾತ್ರ ವಹಿಸಲಿದೆ.

### ಸಾಲ ಮತ್ತು ವಿಮೆ

ಕೃಷಿಯ ಪ್ರಗತಿಯಲ್ಲಿ ಸಾಲದ ಕೊರತೆ ಮತ್ತೊಂದು ದೊಡ್ಡ ಅಡಚಣೆ. ಈ ಮಧ್ಯೆಯೂ ಕೃಷಿ ಜಿಡಿಪಿ ಗೆ ಪೂರಕವಾಗಿ ಕೃಷಿ ಸಾಲದ ಅನುಪಾತವನ್ನು 1999–2000 ದಲ್ಲಿದ್ದ ಶೇ. 10 ರಿಂದ 2012–13 ನೇ ಸಾಲಿಗೆ ಶೇ. 38 ರಷ್ಟಕ್ಕೆ ಏರಿಸಲಾಗಿದೆ. ಜತೆಗೆ 2006–07 ರಲ್ಲಿದ್ದ ಶೇ. 55 ರಷ್ಟಿದ್ದ ದೀರ್ಘಾವಧಿಯ ಸಾಲದ ಪ್ರಮಾಣವು 2011–12 ರ ಅವಧಿಗೆ ಶೇ. 39 ಕ್ಕೆ ಇಳಿದಿದೆ. ವಲಯದ ಪ್ರಗತಿಯ ದೃಷ್ಟಿಯಿಂದ ಇದನ್ನು ತಟಸ್ಥಗೊಳಿಸುವುದು ಸೂಕ್ತ. ಈ ಹಿನ್ನೆಲೆಯಲ್ಲಿ ಕಳೆದ ಸಾಲಿನಲ್ಲಿದ್ದ 8.5 ಲಕ್ಷ ಕೋಟಿಯನ್ನು ಈ ವರ್ಷ 9 ಲಕ್ಷ ಕೋಟಿ ರೂ. ಗಳಿಗೆ ಏರಿಸಲಾಗಿದೆ. ಇದಕ್ಕೆ ಪೂರಕವಾಗಿ, ರೈತರಿಗೆ ಬಡ್ಡಿ ರೂಪದ ಸಬ್ಸಿಡಿ ನೀಡುವ ಸಲುವಾಗಿ 15 ಸಾವಿರ ಕೋಟಿ ರೂ. ಗಳನ್ನು ಮೀಸಲಿಡಲಾಗಿದೆ. ಇವೆಲ್ಲವೂ ನೈಜ ಕೃಷಿಕರಿಗೆ, ಭೂಮಿ ಹಕ್ಕು ಪತ್ರ ಹೊಂದಿ ಕೃಷಿ ಮಾಡುತ್ತಿರುವವರಿಗೆ ಸಿಗುವಂಥವು. ಹವಾಮಾನ ವೈಪರಿತ್ಯದಿಂದ ಆಗುತ್ತಿರುವ ಬೆಳೆ ನಾಶವೂ ಕೃಷಿಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಇದಕ್ಕೆ ಪರಿಹಾರ ರೂಪವಾಗಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಮತ್ತಷ್ಟು ನವೀಕರಿಸಿ ಜಾರಿಗೊಳಿಸಲಾಗಿದೆ. ಸುಮಾರು 5, 500 ಕೋಟಿ ರೂ. ಗಳನ್ನು ಈ ಹೊಸ ಬೆಳೆ ವಿಮಾ ಯೋಜನೆಗೆ ಮೀಸಲಿಡಲಾಗಿದೆ.

ಬೆಳೆನಷ್ಟದ ಸಂದರ್ಭದಲ್ಲಿ ರೈತರಿಗೆ ಅನುಕೂಲವಾಗುವಂತೆ, ಈ ಯೋಜನೆಯು ಆಹಾರ ಬೆಳೆ–ಎಣ್ಣೆಬೀಜಗಳಿಗೆ ಶೇ. 2, ತೋಟಗಾರಿಕೆ ಬೆಳೆ ಮತ್ತು ಹತ್ತಿಗೆ ಶೇ. 5 ರಷ್ಟು ಕಡಿಮೆ ಪ್ರೀಮಿಯಂನಡಿ ಬೆಂಬಲಕ್ಕೆ ನಿಲ್ಲಲಿದೆ. ಈ ಯೋಜನೆಯ ಬಹಳ ಮುಖ್ಯವಾದ ಪ್ರಯೋಜನವೆಂದರೆ ಪ್ರೀಮಿಯಂ ನ ಮೇಲೆ ನಿರ್ದಿಷ್ಟ ಮೊತ್ತದ ನಿರ್ಬಂಧವಿಲ್ಲದಿರುವುದು. ಹಾಗಾಗಿ ವಿಮೆ ಮಾಡಿಸಿದ ಮೊತ್ತದಲ್ಲಿ ಕಡಿತಗೊಳ್ಳುವ ಸಂಭವವಿಲ್ಲ. ರಸಗೊಬ್ಬರ ಸಬ್ಸಿಡಿಯನ್ನೂ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಆಲೋಚನೆಯನ್ನೂ ಪ್ರಸ್ತಾಪಿಸಲಾಗಿದೆ. ಇವೆಲ್ಲವೂ ಧನಾತ್ಮಕ ಕ್ರಮಗಳು.




### ಖರೀದಿ–ಸಂಗ್ರಹ, ವಿತರಣೆ ಮತ್ತು ಮಾರುಕಟ್ಟೆ

ಬಹಳ ಆಸಕ್ತಿಕರವಾದ ಪ್ರಸ್ತಾಪವೆಂದರೆ, ಆನ್ ಲೈನ್ ಖರೀದಿ–ಸಂಗ್ರಹದ ಮೂಲಕ ವಿಕೇಂದ್ರೀಕೃತ ದಾಸ್ತಾನಿನತ್ತ ರಾಜ್ಯಗಳನ್ನು ಪ್ರೋತ್ಸಾಹಿಸುವ ಒಂದು ಪಾರದರ್ಶಕ ಕ್ರಮ. ದೇಶದಲ್ಲಿರುವ ಸುಮಾರು 5.35 ಲಕ್ಷ ನ್ಯಾಯಬೆಲೆ ಅಂಗಡಿಗಳ ಪೈಕಿ 3 ಲಕ್ಷ ಅಂಗಡಿಗಳನ್ನು ಆಟೋಮೆಟಿಕ್ ಕ್ರಮಕ್ಕೆ ತರುವುದು. ಕೃಷಿ ತಂತ್ರಜ್ಞಾನ ಮೂಲಸೌಲಭ್ಯ ನಿಧಿ ಯಿಂದ ರಾಷ್ಟ್ರೀಯ ಕೃಷಿ ಮಾರುಕಟ್ಟೆಯ ಸ್ಥಾಪನೆಗೆ 2015 ರ ಜುಲೈನಲ್ಲಿ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಆಯವ್ಯಯದಲ್ಲಿ 200 ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಈ ಯೋಜನೆಯ ಮೂಲಕ 585 ನಿಯಂತ್ರಿತ ಮಾರುಕಟ್ಟೆಗಳನ್ನು ಪರಸ್ಪರ ಸಂಪರ್ಕಗೊಳಿಸಲು ಪ್ರಯತ್ನಿಸಲಾಗುವುದು. ಆದರೂ, ಇದಕ್ಕೆ ಕೆಲವೊಂದು ಅಡೆತಡೆಗಳಿವೆ. ಇದಕ್ಕಾಗಿ ಎಲ್ಲ ರಾಜ್ಯಗಳು ತಮ್ಮ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ (ಎಪಿಎಂಸಿ) ಗೆ ಸೂಕ್ತ ತಿದ್ದುಪಡಿ ತರಬೇಕು. ಈ ಮೂಲಕ ರಾಜ್ಯಾದ್ಯಂತ ಒಂದೇ ಪರವಾನಗಿ ವ್ಯವಸ್ಥೆ ಸ್ಥಾಪಿಸುವುದಲ್ಲದೇ, ಒಂದೇ ಕಡೆ ಮಾರುಕಟ್ಟೆ ಶುಲ್ಕ (ಲೆವಿ) ಹಾಗೂ ಬೆಳೆಯ ಬೆಲೆಯ ನೆಲೆಯಲ್ಲಿ ವಿದ್ಯುನ್ಮಾನ ಹರಾಜು ಕ್ರಮವನ್ನೂ ಜಾರಿಗೆ ತರಲಿದೆ. ಪ್ರಸ್ತುತ ಕೇವಲ 12 ರಾಜ್ಯಗಳು ತಮ್ಮ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದಿವೆ. ಹಾಗಾಗಿ ಈ ನೆಲೆಯಲ್ಲಿ ಒಟ್ಟೂ ಪ್ರಕ್ರಿಯೆಗೆ ಮತ್ತಷ್ಟು ವೇಗ ತುಂಬಬೇಕಿದೆ. ಭಾರತದಲ್ಲಿ ತೋಟಗಾರಿಕೆ ವಲಯ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಯೆಂದರೆ ಬೆಳೆ ಹಾಳಾಗುತ್ತಿರುವುದು (ವ್ಯರ್ಥ). ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಸುಮಾರು ಶೇ. 20–22 ರಷ್ಟು ಹಣ್ಣು–ಹಂಪಲುಗಳು ಕೊಯ್ಲಿನ ನಂತರದ ವಿವಿಧ ಹಂತಗಳಲ್ಲಿ ಹಾಳಾಗುತ್ತಿವೆ (APEDA, 2007). ಇತ್ತೀಚಿನ ಅಂದಾಜು ಹೇಳುವಂತೆ ಶೇ. 15 ರಷ್ಟು ಹಣ್ಣು ಮತ್ತು ತರಕಾರಿಗಳು (ಎಕಾನಾಮಿಕ್ ಸರ್ವೆ 2015–

16, ಸಂಪುಟ 2, ಪಿಪಿ 115) ಹಾಳಾಗುತ್ತಿವೆ. ಇದು ನಿಜವಾಗಲೂ ಆತಂಕದ ಸಂಗತಿ ಮತ್ತು ನಿವಾರಣೆಗೆ ಕ್ರಮ ಕೈಗೊಳ್ಳಬೇಕಾಗಿರುವುದು ಅನಿವಾರ್ಯ ಕೂಡ. ಭಾರತದಲ್ಲಿಯೇ ಉತ್ಪಾದಿಸಿದ ಮತ್ತು ಸಿದ್ಧಗೊಳಿಸಿದ ಆಹಾರ ಮಾರುಕಟ್ಟೆಯಲ್ಲಿ ಶೇ. 100 ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ತೀರ್ಮಾನ ಆಹಾರ ಸಂಸ್ಕರಣಾ ಕೈಗಾರಿಕೆ ಬೆಳವಣಿಗೆಗೆ ಪ್ರೋತ್ಸಾಹಿಸುವುದಲ್ಲದೇ, ಅಪಾರ ಪ್ರಮಾಣದ ಆಹಾರ ಬೆಳೆ ಹಾಳಾಗುತ್ತಿರುವುದನ್ನು ತಡೆಯಬಲ್ಲದು.

### ಗ್ರಾಮೀಣಾಭಿವೃದ್ಧಿ

ಗ್ರಾಮೀಣಾಭಿವೃದ್ಧಿ ವಲಯಕ್ಕೆ ಒಟ್ಟೂ ನೀಡಲಾಗುವ ಹಂಚಿಕೆಯ ಪ್ರಮಾಣವನ್ನು 87, 765 ಕೋಟಿ ರೂ. ಗಳಿಗೆ ಏರಿಸಲಾಗಿದೆ. ಈ ಪೈಕಿ 38, 500 ಕೋಟಿ ರೂ. ಗಳನ್ನು ಮಹಾತ್ಮಾ ಗಾಂಧಿ ಗ್ರಾಮೀಣ ರೋಜ್ ಗಾರ್ ಯೋಜನೆಗೆ ಮೀಸಲಿಡಲಾಗಿದೆ. ಅಲ್ಲದೇ ಬಹಳ ಒಳ್ಳೆಯ ಉಪ್ರಕಮವೆಂದರೆ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳಿಗೆ ನೀಡಲಾಗುವ ಅನುದಾನ ಪ್ರಮಾಣದಲ್ಲಿ ಏರಿಕೆ ಮಾಡಿರುವುದು. ಅಂದರೆ ರೂ. 2.87 ಲಕ್ಷ ಕೋಟಿಯಷ್ಟು ಹಣವನ್ನು ಒದಗಿಸಲು ಮುಂದಾಗಿರುವುದು. ಅಂದಾಜು ಸುಮಾರು 80 ಲಕ್ಷ ರೂ. ಪ್ರತಿ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ದೊರಕಲಿದೆ. ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒತ್ತು ಕೊಟ್ಟಿರುವುದೂ ಸರಿಯಾದ ಕ್ರಮ. ಇತ್ತೀಚಿನ ದಶಕಗಳಲ್ಲಿ ಕೃಷಿಯೇತರ ವಲಯ, ಕಟ್ಟಡ ನಿರ್ಮಾಣ, ಸಾರಿಗೆ ಮುಂತಾದ ಸೇವೆಗಳು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವನ್ನು ಸೃಷ್ಟಿಸುತ್ತಿರುವ ವಲಯಗಳಾಗಿ ಬೆಳೆಯುತ್ತಿರುವುದು ಸ್ಪಷ್ಟ. ಹಾಗಾಗಿ ಈ ಅನುದಾನ ಹಂಚಿಕೆಯಲ್ಲಿನ ಹೆಚ್ಚಳ ಇಂಥ ವಲಯಗಳ ಉತ್ತೇಜನಕ್ಕೆ ಕಾರಣವಾಗಬಲ್ಲದು ಮತ್ತು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಗೆ ಪೂರಕವಾಗಬಲ್ಲದು.

### ಆಯವ್ಯಯದಲ್ಲಿನ ಕೊರತೆಗಳು

ಈ ಮುಂದಿನ ಕೆಲವು ವಲಯಗಳಲ್ಲಿ ಆಯವ್ಯಯ ನಿರೀಕ್ಷೆಯನ್ನು ಪೂರೈಸುತ್ತಿಲ್ಲ ಎಂಬುದು ನನ್ನ ವಿಶ್ಲೇಷಣೆ. ಮೊದಲ ಅಂಶವೆಂದರೆ, ಕೃಷಿ ವಲಯದಲ್ಲಿ ಹೂಡಿಕೆಗೆ ಪ್ರೋತ್ಸಾಹಿಸಲು ರಾಜ್ಯಗಳಿಗೆ ಪ್ರೋತ್ಸಾಹ ಕ್ರಮಗಳ ಕುರಿತು ಸ್ಪಷ್ಟತೆಯಿಲ್ಲ. ಕೃಷಿ ರಾಜ್ಯ ಸಂಬಂಧಿ ವಿಷಯವಾಗಿದ್ದು, ಆ ವಲಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೂಡಿಕೆಯೂ ಸೇರಿದಂತೆ ನಿರ್ದಿಷ್ಟ ಉಪಕ್ರಮಗಳನ್ನು ಆಯಾ ರಾಜ್ಯಗಳೇ ಕೈಗೊಳ್ಳಬೇಕು. ಕಳೆದ ಹಲವಾರು ವರ್ಷಗಳಲ್ಲಿ ಬಂಡವಾಳ ಹೂಡಿಕೆ ಪ್ರಮಾಣದಲ್ಲಿ ನಿರಂತರ ಕುಸಿತ ಕಂಡುಬರುತ್ತಿದ್ದು,(ಕೃಷಿಯ ಒಟ್ಟೂ ಮೌಲ್ಯದ ಪ್ರಮಾಣದಲ್ಲಿ) 2011–12 ರಲ್ಲಿದ್ದ ಶೇ. 18.3 ಪ್ರಮಾಣ 2014–15 ರಲ್ಲಿ ಶೇ. 15.8 ಕ್ಕೆ ಇಳಿದಿದೆ. ಈ ಕುಸಿತ ಕೆಲವು ವರ್ಷಗಳಿಂದ ಆರಂಭವಾಗಿದ್ದರೂ, 2004–05 ರ ನಂತರ ವೇಗ ಪಡೆಯಿತು. ಹಾಗಾಗಿ ಕಳೆದ ಕೆಲವು ವರ್ಷಗಳ ಕೃಷಿ ವಲಯದ ಪ್ರಗತಿಗೆ ಈ ಹೂಡಿಕೆಯ ಹಿಂಜರಿತವೂ ಧಕ್ಕೆ ಮಾಡಿದೆ. ಈ ಹಿನ್ನೆಲೆಯಲ್ಲಿ ಬಂಡವಾಳ ಹೂಡಿಕೆಯತ್ತ ರಾಜ್ಯಗಳನ್ನು ಹುರಿದುಂಬಿಸುವ ಯಾವುದೇ ಪ್ರಸ್ತಾವ ಅಥವಾ ಪ್ರೋತ್ಸಾಹ ಕ್ರಮಗಳಾಗಲಿ ಆಯವ್ಯಯದಲ್ಲಿಲ್ಲ. ಎರಡನೆಯದಾಗಿ, ಮೇಲಿನಿಂದ ಕೆಳಗೆ ಹರಿವಿನ ವಿಧಾನದ ಬಗ್ಗೆ. ಭಾರತ ವೈವಿಧ್ಯತೆಯ ದೇಶ ಕೇವಲ ಸಂಸ್ಕೃತಿಯಲ್ಲಲ್ಲ; ಭೌಗೋಳಿಕ ಮತ್ತು ಹವಾಮಾನದ ನೆಲೆಯಲ್ಲೂ ಬಹಳಷ್ಟು ವೈವಿಧ್ಯಗಳಿವೆ. ಅದಕ್ಕೆ ತಕ್ಕಂತೆ ಕೃಷಿ ಪ್ರದೇಶ ಮತ್ತು ಪರಿಸ್ಥಿತಿಯಿದೆ. ಇದಕ್ಕೆ ಪೂರಕವಾಗಿ ನೀರಾವರಿ ಯೋಜನೆಗಳಿರಬಹುದು, ಬೆಳೆ ವಿಮೆ ಯೋಜನೆಗಳಿರಬಹುದು ಅಥವಾ ಯಾವುದೇ ಇಂಥ ಉಪಕ್ರಮಗಳಿರಬಹುದು, ಅವೆಲ್ಲವೂ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಮಾರ್ಪಾಡು ಮಾಡಿ ಅನ್ವಯಗೊಳಿಸಲು ಅವಕಾಶ ಕಲ್ಪಿಸಬೇಕು. ಈ ಹಿನ್ನೆಲೆಯಲ್ಲಿ ಪ್ರಧಾನವಾಗಿ ಈ ಮೇಲಿನಿಂದ ಕೆಳಮುಖವಾಗಿ ಹರಿಯುವ ವಿಧಾನ ಈ ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ದಾರಿಯಾಗಿ ತೋರದು ಮತ್ತು ಕೃಷಿ ವಲಯದ ಪ್ರಗತಿಗೆ ಬಹುಶಃ ಪೂರಕವಾಗದು. ಹಾಗಾಗಿ ಆರ್‌ಕೆವಿವೈ ನ ಪ್ರಕಾರ ವಿವಿಧ ರಾಜ್ಯಗಳಲ್ಲಿ ಅನುಸರಿಸುತ್ತಿರುವ ಪ್ರದೇಶವಾರು ಉತ್ಪಾದನೆಯ ಕ್ರಮ ಕುರಿತಾದ ಜಿಲ್ಲಾ ಕೃಷಿ ಕ್ರಿಯಾ ಯೋಜನೆ (ಡಿಎಪಿ) ಗಳನ್ನು ಇದಕ್ಕಾಗಿ ಬಳಸಿಕೊಳ್ಳುವುದು ಅತ್ಯಂತ ಸೂಕ್ತವಾದುದು. ಮತ್ತೊಂದು ಬಹಳ ಪ್ರಮುಖ ವಿಷಯವೆಂದರೆ, ಸಾಲ, ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಯಂಥ ಯಾವುದೇ ಉಪಕ್ರಮಗಳ ಸಂಪೂರ್ಣ ಪ್ರಯೋಜನ ಸಿಗುವಂತಾಗಲು ಗೇಣಿ ನಿಯಮಗಳ ಪರಿಷ್ಕರಣೆ ಮತ್ತು ಭೂ ದಾಖಲೆಗಳ ಆಧುನೀಕರಣ ತುರ್ತಾಗಿ ಆಗಬೇಕಾಗಿದೆ. ಏಕೆಂದರೆ, ಈ ಹಲವು



ಉಪಕ್ರಮಗಳ ಅನುಷ್ಠಾನಕ್ಕೆ ಅರ್ಹ ಫಲಾನುಭವಿಗಳನ್ನು ಹುಡುಕುವುದೇ ಬಹು ದೊಡ್ಡ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ಭೂ ದಾಖಲೆಗಳ ಆಧುನೀಕರಣ (ಗಣಕೀಕರಣ), ನಿಖರ ಆಸ್ತಿ ಹಕ್ಕುಗಳು ಹಾಗೂ ಗೇಣಿ ನಿಯಮಗಳ ಪರಿಷ್ಕರಣೆ ತೀರಾ ಅನಿವಾರ್ಯ. ಇದು ಅರ್ಹ ರೈತನಿಗೆ ಸಾಲ ಸಿಗುವಂತೆ ಮಾಡಬಲ್ಲದು. ಬೆಳೆ ವಿಮೆ ಯೋಜನೆ, ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಯಂಥ ಉಪಕ್ರಮಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಸಾಧ್ಯವಾದೀತು. ಪ್ರಸ್ತುತ ಕಾನೂನು ರೀತ್ಯಾ ಭೂ ಮಾಲಿಕನಿಗೆ ಸೌಲಭ್ಯ ಸಿಗುತ್ತಿದೆಯೇ ಹೊರತು ವಾಸ್ತವವಾಗಿ ಕೃಷಿ ಮಾಡುತ್ತಿರುವವನಿಗಲ್ಲ. ಭೂ ಹಕ್ಕಿಗೆ ಸಂಬಂಧಿಸಿದಂತೆ ಭೂ ದಾಖಲೆಗಳ ಆಧುನೀಕರಣ ಬಹಳ ಪ್ರಮುಖವಾದ ಸುಧಾರಣೆ. ರಾಜ್ಯದಲ್ಲಿ ಭೂ ಕಂದಾಯ ದಾಖಲೆ, ಭೂ ನೊಂದಣಿ ಹಾಗೂ ಭೂ ವ್ಯಾಜ್ಯ ಸಂಬಂಧಿ ದಾಖಲೆಗಳ ಒಂದೆಡೆ ಕ್ರೋಢೀಕರಣ (ಸಮನ್ವಯ) ಹಾಗೂ ವಿದ್ಯುನ್ಮಾನೀಕರಣ ಅತ್ಯಂತ ತುರ್ತಾಗಿ ಆಗಬೇಕಾದ ಸುಧಾರಣಾ ಕ್ರಮ (ನೀತಿ ಆಯೋಗ, 2015). ಕೊನೆಯದಾಗಿ ಹೇಳಬಹುದಾದರೆ, ಕೃಷಿ ವಿಸ್ತರಣಾ ಸೇವೆಗಳ ಆಧುನೀಕರಣ. ಈ ಕುರಿತು ಪ್ರಸ್ತುತ ಆಯವ್ಯಯದಲ್ಲಿ ಕೊಂಚ ಗಮನಹರಿಸಿದಂತೆ ತೋರುತ್ತದೆ. ಆದರೆ ಕೃಷಿ ವಲಯದ ಪ್ರಗತಿಯಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸುತ್ತದೆ. ತಂತ್ರಜ್ಞಾನ ಅಳವಡಿಸಿಕೊಳ್ಳುವುದರಲ್ಲಿ ಹಿಂದುಳಿದಿರುವುದು, ಸರ್ಕಾರಿ ಯೋಜನೆಗಳ ಸದ್ಬಳಕೆಯಾಗದಿರುವುದೂ ಸೇರಿದಂತೆ ಹಲವು ಸಮಸ್ಯೆಗಳಿಗೆ ರೈತರಲ್ಲಿ ಮಾಹಿತಿಯ ಕೊರತೆಯೇ ಕಾರಣ. ಇದಕ್ಕೆ ನಮ್ಮಲ್ಲಿರುವ ಉತ್ತಮ ಗುಣಮಟ್ಟವಲ್ಲದ ಕೃಷಿ ವಿಸ್ತರಣಾ ಸೇವೆಯ ಪಾತ್ರ ಬಹಳಷ್ಟಿದೆ. ಆದ ಕಾರಣ, ಕೃಷಿ ವಲಯದ ನಿಖರ ಪ್ರಗತಿಗೆ ಕೃಷಿ ವಿಸ್ತರಣಾ ಸೇವೆಗಳ ಗುಣಮಟ್ಟದ ಸುಧಾರಣೆಗೆ ಹೆಚ್ಚಿನ ಗಮನ ಕೊಡಲೇಬೇಕಾಗಿದೆ. ❑

# ಮೂಲಸೌಕರ್ಯ : ಕಾರ್ಯತಂತ್ರ ಮತ್ತು ಅನುಷ್ಠಾನದ ಸವಾಲು



* ಜಿ ರಘುರಾಮ್

**ಬಜೆಟ್‌ನಲ್ಲಿ ರಸ್ತೆ ಮತ್ತು ರೈಲಿಗೆ ಗರಿಷ್ಠ ಪ್ರಾಧಾನ್ಯತೆ ನೀಡಲಾಗಿದೆ. ವಸತಿ, ಸ್ವಚ್ಛ ಭಾರತ ಅಭಿಯಾನ, ಮೆಟ್ರೊ, ವಿದ್ಯುತ್ ಮತ್ತು ನಗರಾಭಿವೃದ್ಧಿ ಆದ್ಯತೆ ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿವೆ. ಈ ಪ್ರಮುಖ ಹಂಚಿಕೆಗಳ ಜೊತೆಗೆ ಮುಖ್ಯವಾಗಿ ವಿವಿಧ ಮಧ್ಯಸ್ಥಗಾರರ ವ್ಯಾಪ್ತಿ ಹಾಗೂ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಸವಾಲುಗಳನ್ನೂ ಎದುರಿಸಬೇಕಾಗಿದೆ.**

ದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಸಾಧನೆಗಾಗಿ 2016–17ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಇರಿಸಲಾದ ಹೆಜ್ಜೆ ನಡೆ ಸರಿಯಾದ ದಿಶೆಯಲ್ಲೇ ಇದೆ. ಕೇಂದ್ರ ಬಜೆಟ್ ಪಾಲಿನ ಅಡಿಯಲ್ಲಿ ಬರೋಬ್ಬರಿ 2.2 ಟ್ರಿಲಿಯನ್ (220,000 ಕೋಟಿ ರೂ.) ಅನುದಾನ ಹಂಚಿಕೆಯೊಂದಿಗೆ ಇದು ಶುಭಸೂಚಕವಾಗಿ ತೋರುತ್ತಿದೆ. ರಾಷ್ಟ್ರೀಯ ಹೆದ್ದಾರಿಗಳಿಗಾಗಿ ನಿಗದಿಪಡಿಸಲಾದ 70,000 ಕೋಟಿ ರೂ. ಮೊತ್ತವು ಗರಿಷ್ಠ ವೆಚ್ಚದ ಬಾಬ್ತು ಎನಿಸಿದ್ದು, ಈ ಪೈಕಿ 15,000 ಕೋಟಿ ರೂ.ಗಳನ್ನು ಬಾಂಡ್‌ಗಳ ಮೂಲಕ ಸಂಗ್ರಹಿಸಲಾಗುತ್ತದೆ.

ವಿವಿಧ ರಾಜ್ಯಗಳು, ಅದಕ್ಕೂ ಕೆಳಗಿನ ಹಂತದಲ್ಲಿ ಸ್ಥಳೀಯ ಸಂಸ್ಥೆಗಳ ವೆಚ್ಚವೂ ಸೇರ್ಪಡೆಯಾಗುವ ಹಿನ್ನೆಲೆಯಲ್ಲಿ ನೈಜ ಒಟ್ಟಾರೆ ಮೊತ್ತವು ದೊಡ್ಡ ಪ್ರಮಾಣದಲ್ಲಿರುತ್ತದೆ ಎಂದು ನಾನು ಭಾವಿಸುತ್ತೇನೆ. 45000 ಕೋಟಿ ರೂ. ಕೇಂದ್ರ ಬಜೆಟ್ ಹಂಚಿಕೆ ಪಡೆದ ರೈಲ್ವೆ ವಿಚಾರದಲ್ಲೂ ಹೀಗೆಯೇ. ರೈಲ್ವೆಯ ಇತರ ಆದಾಯದ ಮೂಲಗಳೆಂದರೆ – ಆಂತರಿಕ ಆದಾಯ ಸೃಜನೆ, ಬಾಂಡ್‌ಗಳು, ಇತರ ಸಾಲ ಎತ್ತುವಳಿಗಳು ಮತ್ತು ಸರ್ಕಾರ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳು.

ಕೆಲವೊಂದು ಹಂಚಿಕೆಗಳು, ಕೇಂದ್ರ–ರಾಜ್ಯ ಸಹಭಾಗಿತ್ವದ ಜಂಟಿ ವೆಚ್ಚಗಳ ವೇಗವರ್ಧನೆಗೆ ನೆರವಾಗಲಿವೆ. ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆ ಯೋಜನೆಯನ್ನೇ (ಪಿಎಂಜಿಎಸ್‌ವೈ) ಉದಾಹರಿಸುವುದಾದರೆ, ಕೇಂದ್ರದ 19,000 ಕೋಟಿ ರೂ. ಅನುದಾನಕ್ಕೆ ರಾಜ್ಯಗಳಿಂದ ಮತ್ತೂ 8000 ಕೋಟಿ ರೂ. ಹೆಚ್ಚುವರಿ ಮೊತ್ತ ಸೇರ್ಪಡೆಯಾಗಲಿದೆ. 10000 ಕೋಟಿ ರೂ. ಹಂಚಿಕೆ ಗಳಿಸಿರುವ ಮೆಟ್ರೊ ಯೋಜನೆಗಳ ವಿಷಯದಲ್ಲೂ ಹೀಗೆಯೇ ಆಗಲಿದೆ. ಬಜೆಟ್‌ನಲ್ಲಿ ರಸ್ತೆ ಮತ್ತು ರೈಲಿಗೆ ಗರಿಷ್ಠ ಪ್ರಾಧಾನ್ಯತೆ ನೀಡಲಾಗಿದೆ. ವಸತಿ, ಸ್ವಚ್ಛ ಭಾರತ ಅಭಿಯಾನ, ಮೆಟ್ರೊ, ವಿದ್ಯುತ್ ಮತ್ತು ನಗರಾಭಿವೃದ್ಧಿ ಆದ್ಯತೆ ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿವೆ. ಈ ಪ್ರಮುಖ ಹಂಚಿಕೆಗಳ ಜೊತೆಗೆ ಮುಖ್ಯವಾಗಿ ವಿವಿಧ ಮಧ್ಯಸ್ಥಗಾರರ ವ್ಯಾಪ್ತಿ ಹಾಗೂ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಸವಾಲುಗಳನ್ನೂ ಎದುರಿಸಬೇಕಾಗಿದೆ.

**ಸವಾಲುಗಳು**

ಮೇಲ್ವಿಚಾರಣೆ ಮತ್ತು ಅಗತ್ಯಕ್ಕೆ ತಕ್ಕಂತೆ ಅನುದಾನ ಬಿಡುಗಡೆಯ ಸಾಮರ್ಥ್ಯವನ್ನು ಸರ್ಕಾರ ಹೊಂದಿದೆಯೇ ಎಂಬುದು ಇಲ್ಲಿ ಮೊದಲನೆಯ ಸವಾಲು. ರಸ್ತೆ ವಲಯದಲ್ಲಾದರೋ 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ' (ಎನ್‌ಎಚ್‌ಎಐ) ಮತ್ತು 'ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ' (ಎನ್‌ಆರ್‌ಆರ್‌ಡಿಎ) ಮೂಲಕ ಗಳಿಸಲಾದ ಸಾಂಸ್ಥಿಕ ಅನುಭವ ಈ ನಿಟ್ಟಿನಲ್ಲಿ ನೆರವಿಗೆ ಬರಲಿದೆ. ಆದರೆ 'ಭಾರತೀಯ ಒಳನಾಡು ಜಲಸಾರಿಗೆ ಪ್ರಾಧಿಕಾರ' (ಐಡಬ್ಲ್ಯೂಎಐ) ಈ ಬಗೆಯಲ್ಲಿ ವೆಚ್ಚಕ್ಕೆ ಸಿದ್ಧವಾಗಿರುವಂತೆ ತೋರುವುದಿಲ್ಲ. 'ಒಳನಾಡು ಜಲಸಾರಿಗೆ ಪ್ರಾಧಿಕಾರ'ದ ಅನುದಾನ ಹಂಚಿಕೆ ಕಡಿತಗೊಂಡಿರುವುದು ಇದಕ್ಕೆ ಸೂಚ್ಯವಾಗಿದೆ. 'ಸಾಗರಮಾಲಾ' ಪರಿಕಲ್ಪನೆಯದ್ದೂ ಇದೇ ಕತೆ. ಭಾರಿ ಮಟ್ಟದ ಯೋಜನೆಗಳಿದ್ದರೂ ಸಾಂಸ್ಥಿಕ ಸಾಮರ್ಥ್ಯದ ಕೊರತೆ ಇನ್ನೂ ಎದ್ದು

* ಪ್ರೊಫೆಸರ್, ಪಬ್ಲಿಕ್ ಸಿಸ್ಟಂ ಗ್ರೂಪ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಅಹ್ಮದಾಬಾದ್.

ಕಾಣುತ್ತಿದೆ. 2016ರ ಮಾರ್ಚ್ 6ರಂದು ನಡೆದ 'ರಸ್ತೆ ಸಾರಿಗೆ ಉತ್ಕೃಷ್ಟತೆ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಹಾಗೂ ಜಲಸಾರಿಗೆ ಖಾತೆಗಳೆರಡನ್ನೂ ಹೊಂದಿರುವ ಕೇಂದ್ರ ಸಚಿವರು ಆಸಕ್ತಿಕರ ವಿಷಯವೊಂದನ್ನು ಹೇಳಿದರು. ಹವಾಮಾನ ಮತ್ತು ಪರಿಸರದ ಮೇಲೆ ಪರಿಣಾಮವಾಗದಂತೆ, ಕ್ರಮವಾಗಿ ಜಲ, ರೈಲು ಮತ್ತು ರಸ್ತೆ ಸಾರಿಗೆಗೆ ಪ್ರಾಧಾನ್ಯತೆ ಕೊಡುವುದನ್ನು ದೇಶ ಬಯಸುತ್ತಿದೆ ಎಂದರು. ರಸ್ತೆ ವಲಯದಲ್ಲಾದರೆ, ಪ್ರವರ್ತಕರನ್ನು ಆಕರ್ಷಿಸುವುದಕ್ಕಾಗಿ ಪೂರ್ವಾನುಭವ ಮತ್ತು ಭವಿಷ್ಯದ ರಸ್ತೆಗಳ ಸ್ವರೂಪ ಆಧರಿಸಿ 'ಹೈಬ್ರಿಡ್' ಮಾದರಿಯೊಂದನ್ನು ರಚಿಸಲಾಗಿದೆ. ಆದರೆ ಒಳನಾಡು ಜಲಸಾರಿಗೆ ಮತ್ತು ರೈಲ್ವೆ ವಲಯಗಳಲ್ಲಿ ಸೂಕ್ತ ಸರಕಾರ–ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳನ್ನು ರೂಪಿಸಲು ಸಾಕಷ್ಟು ಪೂರ್ವಸಿದ್ಧತೆ ನಡೆಯಬೇಕಿದೆ.

ಕಾಮಗಾರಿ ಪೂರೈಸಬಲ್ಲ ಸಾಮರ್ಥ್ಯ ಮತ್ತು ಇಚ್ಛೆ ಉಳ್ಳಂತಹ ಗುತ್ತಿಗೆದಾರರು ಮತ್ತು ಪಿಪಿಪಿ ಪ್ರವರ್ತಕರು ಇದ್ದಾರೆಯೇ ಎಂಬುದು ಎರಡನೆಯ ಸವಾಲು. ಏಕೆಂದರೆ, ಭೂ ಸ್ವಾಧೀನ ಸಮಸ್ಯೆ, ಪರಿಸರ ಇಲಾಖೆ ಆಕ್ಷೇಪಣೆ ಸೇರಿದಂತೆ ಒಪ್ಪಂದಗಳಲ್ಲಿನ ಹತ್ತಾರು ತೊಡಕುಗಳ ಹಿನ್ನೆಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ರಸ್ತೆ ಮತ್ತು ಮೆಟ್ರೋವಲಯದಲ್ಲಿ ಹಲವು ಪ್ರವರ್ತಕರು ಕಾಮಗಾರಿ ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದಾರೆ. ರಸ್ತೆ ವಲಯದ ಪರಿಷ್ಕೃತ 'ಹೈಬ್ರಿಡ್' ಮಾದರಿಯು ಸಾಕಷ್ಟು ಮಂದಿಯ ಗಮನ ಸೆಳೆಯುವ ನಿರೀಕ್ಷೆಯಿದೆ.

ವ್ಯಾಜ್ಯಗಳನ್ನು ತ್ವರಿತ ಮತ್ತು ಪರಿಣಾಮಕಾರಿಯಾಗಿ ಬಗೆಹರಿಸುವ ಕಾನೂನಾತ್ಮಕ ಮತ್ತು ನ್ಯಾಯಿಕ ಸಾಮರ್ಥ್ಯ ಮೂರನೆಯ ಸವಾಲು. ಕಾನೂನು ತೊಡಕುಗಳಿಂದ ಹಲವಾರು ಮೂಲಸೌಕರ್ಯ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಈ ಹಿನ್ನೆಲೆಯಲ್ಲಿ ಮೂಲಸೌಕರ್ಯ ವಲಯದ ವ್ಯಾಜ್ಯಗಳ ಪರಿಹಾರಕ್ಕಾಗಿ 'ಸಾರ್ವಜನಿಕ ಉಪಯುಕ್ತತೆ (ವ್ಯಾಜ್ಯಗಳ ಇತ್ಯರ್ಥ) ವಿಧೇಯಕ' ರಚಿಸುವುದಾಗಿ ಮಾನ್ಯ ವಿತ್ತ ಸಚಿವರು ಘೋಷಿಸಿದ್ದಾರೆ. ಅಲ್ಲದೆ, ಗುತ್ತಿಗೆ ಹಾಗೂ ಕರಾರುಗಳ ಮರು ಪರಾಮರ್ಶೆಗೆ ಅವಕಾಶ ನೀಡಲಾಗಿದೆ. ಬಹಳಷ್ಟು ಸಂಖ್ಯೆಯ ರಸ್ತೆ ಕಾಮಗಾರಿಗಳಿಗಿದ್ದ ಕಾನೂನು ತೊಡಕನ್ನು ನಿವಾರಿಸಿ, ಅವುಗಳ ಪುನರಾರಂಭಕ್ಕೆ ದಾರಿ ಮಾಡಿದ ಹಾಲಿ ಸರ್ಕಾರ ಪ್ರಶಂಸಾರ್ಹ.

**ಬಜೆಟ್‌ನಲ್ಲಿ ಅನುದಾನ ಪಡೆದ ಇತರ ಪ್ರಮುಖ ಮೂಲಸೌಕರ್ಯ ಯೋಜನೆಗಳೆಂದರೆ**

| ಕ್ರಮ ಸಂಖ್ಯೆ | ರಸ್ತೆ, ರೈಲು ಮತ್ತು ಮೆಟ್ರೊ ಹೊರತಾಗಿ | ಬಅ 2016–17 (ಕೋಟಿ ರೂ.ಗಳಲ್ಲಿ) |
|---|---|---|
| 1 | ಪ್ರಧಾನ ಮಂತ್ರಿ ಆವಾಜ್ ಯೋಜನೆ | 20075 |
| 2 | ಸ್ವಚ್ಛ ಭಾರತ ಅಭಿಯಾನ | 11300 |
| 3 | ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಮತ್ತು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ | 8500 |
| 4 | ನಗರ ಪುನಶ್ಚೇತನ ಯೋಜನೆ (ಅಮೃತ್ ಮತ್ತು 100 ಸ್ಮಾರ್ಟ್ ಸಿಟಿಗಳ ಅಭಿವೃದ್ಧಿ ಯೋಜನೆ) | 7296 |
| 5 | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ | 5000 |
| 6 | ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿ | 4000 |
| 7 | ಪರಮಾಣು ವಿದ್ಯುತ್ ಉತ್ಪಾದನೆ | 3000 |
| 8 | ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್‌ಗಳು | 1448 |
| 9 | ಒಳನಾಡು ಜಲಸಾರಿಗೆ | 800 |
| 10 | ಸಾಗರಮಾಲಾ | 450 |
| 11 | ಗರಿಷ್ಠ 160 ವಿಮಾನ ನಿಲ್ದಾಣಗಳ ನವೀಕರಣ (ತಲಾ ಹಂಚಿಕೆ) | 50 ರಿಂದ 100 |



ನಾಲ್ಕನೇ ಸವಾಲೆಂದರೆ – ಮೂಲಸೌಕರ್ಯ ಯೋಜನೆಗಳಿಗಾಗಿ ಬ್ಯಾಂಕ್‌ಗಳು, ಅದರಲ್ಲೂ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಸಾಲ ಎತ್ತುವಳಿ. ಮೂಲಸೌಕರ್ಯ ಆಸ್ತಿಗಳು ಸೇರಿದಂತೆ, ಈ ಬ್ಯಾಂಕ್‌ಗಳು ಅಪೇಕ್ಷಿತ ಮಟ್ಟವನ್ನೂ ಮೀರಿ ಅನುತ್ಪಾದಕ ಆಸ್ತಿಗಳನ್ನು ಸಂಗ್ರಹಿಸಿಕೊಂಡಿವೆ. ಸಾರ್ವಜನಿಕ ಬ್ಯಾಂಕ್‌ಗಳ ಬಂಡವಾಳ ಮರುಪೂರಣಕ್ಕಾಗಿ ವಿತ್ತ ಸಚಿವರು 25000 ಕೋಟಿ ರೂ. ನೆರವು ನೀಡಿದ್ದಾರಾದರೂ, ಈ ಮೊತ್ತವು ಅಗತ್ಯವನ್ನು ಪೂರೈಸುವಲ್ಲಿ ಏನೇನೂ ಸಾಕಾಗಲಾರದು. ಮೂಲಸೌಕರ್ಯಕ್ಕಾಗಿ ಸಾಲ ಒದಗಿಸುವ ನಿಟ್ಟಿನಲ್ಲಿ ಬ್ಯಾಂಕ್‌ಗಳಿಗೆ ಇದರಿಂದ ಯಾವುದೇ ಅನುಕೂಲವಾಗಲಾರದು ಎಂಬ ಅಭಿಪ್ರಾಯವಿದೆ.

ಇನ್ನು, ಐದನೇ ಸವಾಲೆಂದರೆ– ಸಾಂಸ್ಥಿಕ ಸಾಮರ್ಥ್ಯ. ಶಿಕ್ಷಣ, ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿ ಇಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತವೆ. 'ಮ್ಯಾನೇಜ್‌ಮೆಂಟ್' ಸಂಸ್ಥೆಗಳಲ್ಲಿನ ಸ್ಥಿತಿಗತಿ ಸೇರಿದಂತೆ, ಕಳೆದ ಹಲವು ವರ್ಷಗಳಲ್ಲಿ ಒಟ್ಟಾರೆ ತರಬೇತಿ ಸಾಮರ್ಥ್ಯ ಹೆಚ್ಚಳವಾಗಿದೆಯಾದರೂ ಈ ವಲಯದಲ್ಲಿ ಉತ್ತಮ 'ಶಿಕ್ಷಣ'ದ ಕೊರತೆ ಇನ್ನೂ ಎದ್ದು ಕಾಣುತ್ತಿದೆ. ನನಗಿರುವ ಮಾಹಿತಿ ಪ್ರಕಾರ, ಮುಂಬೈ ವಿಶ್ವವಿದ್ಯಾಲಯ, 'ಅದಾನಿ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫ್ರಾಸ್ಟ್ರಕ್ಚರ್ ಮ್ಯಾನೇಜ್‌ಮೆಂಟ್' ಹಾಗೂ ಇತರ ಕೆಲ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಮೂಲಸೌಕರ್ಯ ಕುರಿತಾದ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿವೆ. ಇದರ ಹೊರತಾಗಿ ಸಂಶೋಧನೆ ಮತ್ತು ಅಭಿವೃದ್ಧಿಯ ಕೊರತೆಯಿದೆ. ಸರ್ಕಾರಿ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳಿಗೆ ಭಾರತ ವಿಶ್ವದಲ್ಲೇ ಅತಿ ದೊಡ್ಡ ಮಾರುಕಟ್ಟೆ ಎನಿಸಿದ್ದರೂ, ವಿವಿಧ ಅಂಶಗಳಲ್ಲಿ

ಗಳಿಸಲಾದ ಅನುಭವಗಳಿಗೆ ಒಂದು ಪರಿಕಲ್ಪನಾತ್ಮಕ ರೂಪ ಕೊಡುವಲ್ಲಿ ನಿರೀಕ್ಷಿತ ಸಾಧನೆಯಾಗಿಲ್ಲ.

### ನೀತಿ–ನಿಯಮಗಳು

ಹಣದ ಮೌಲ್ಯಕ್ಕೆ ತಕ್ಕ ಸಾಧನೆಯೇ ಪ್ರಮುಖ ಗುರಿಯಾಗಿರುವುದರಿಂದ, ಆಯವ್ಯಯ ಹಾಗೂ ಸವಾಲುಗಳ ಇತ್ಯರ್ಥಕ್ಕೆ ನೆರವಾಗಬಲ್ಲ ಉತ್ತಮ ನೀತಿ–ನಿಯಮಗಳನ್ನೂ ಹೊಂದಿರುವುದು ಮುಖ್ಯವಾಗುತ್ತದೆ.

ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ವಿಚಾರದಲ್ಲಿ ಹೊಂದಲಾಗಿರುವ ಗುರಿಯನ್ನೇ ಉದಾಹರಣೆಯನ್ನಾಗಿ ತೆಗೆದುಕೊಳ್ಳುವುದಾದರೆ, ರಾಷ್ಟ್ರೀಯ ಹೆದ್ದಾರಿಗಳ ಉದ್ದವನ್ನು ಈಗಿನ 96,000 ಕಿ.ಮೀ.ಯಿಂದ 200,000 ಕಿ.ಮೀಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಒಟ್ಟಾರೆ ರಸ್ತೆ ಉದ್ದದ ಪ್ರಮಾಣವನ್ನು ಪ್ರಸ್ತುತ ಇರುವ ಶೇ2ರಿಂದ ಶೇ. 4ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಇದು ಸ್ವಾಗತಾರ್ಹ. ಆದರೆ, ಇದೇ ವೇಳೆ, ಒಳನಾಡು ಜಲಮಾರ್ಗಗಳು ಮತ್ತು ಕರಾವಳಿ ಹಡಗು ಸಾರಿಗೆ ಮೇಲೆ ಗಮನ ಕೇಂದ್ರೀಕರಿಸುವಂತಹ ಸಮಗ್ರ ನೀತಿಯೊಂದರ ರಚನೆಗೆ ಅತ್ಯಗತ್ಯವಾಗಿ ಬೇಕಾಗಿರುವ ಇಚ್ಛಾಶಕ್ತಿಯ ಕೊರತೆಯಿದೆ. ಇಂತಹ ಸಮಗ್ರ ನೀತಿಯು ಬಹು–ಮಾದರಿ, ನಿರ್ಬಂಧಗಳ ಸಡಿಲಿಕೆ, ಸುಂಕ ಕಡಿತ ಮತ್ತು ಸಕ್ರಿಯತೆಯ ಉತ್ತೇಜನಕ್ಕಾಗಿ ಕಾರ್ಯದಕ್ಷತೆ ಆಧರಿತ ಸಬ್ಸಿಡಿಗಳಂತಹ ಅಂಶಗಳತ್ತ ಗಮನ ಕೇಂದ್ರೀಕರಿಸಬೇಕು.

ನನ್ನ ಪ್ರಕಾರ, ಒಳನಾಡು ಜಲಸಾರಿಗೆಯ ದೃಷ್ಟಿಕೋನವು ವಾಸ್ತವ ಸ್ಥಿತಿಗಿಂತಲೂ ಬೃಹದಾಕಾರವಾಗಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಎಲ್ಲಾ ರೈಲ್ವೆ ಕ್ರಾಸಿಂಗ್‌ಗಳನ್ನೂ ತೆಗೆದು ಹಾಕುವ ಉದ್ದೇಶದ 'ಸೇತು ಭಾರತಂ' ಯೋಜನೆಯ ಮಾದರಿಯಲ್ಲೇ, ರಸ್ತೆ ಅಭಿವೃದ್ಧಿ ಅನುದಾನದ ವೆಚ್ಚದ ವಿಷಯದಲ್ಲಿ ಒಂದು ಕೇಂದ್ರೀಕೃತ ಪ್ರಯತ್ನದ ಅಗತ್ಯವಿದೆ.

ರೈಲ್ವೆಗೆ ಸಂಬಂಧಿಸಿದಂತೆ, 'ಪಿಪಿಪಿ' ಮಾದರಿಯಲ್ಲಿ ನಿಲ್ದಾಣಗಳ ಆಧುನೀಕರಣವು ಒಂದು ಉತ್ತಮ ಹೆಜ್ಜೆಯಾಗಿದೆ. ಆದರೆ, ಬಿಡ್ಡಿಂಗ್ ಪ್ರಕ್ರಿಯೆ ಮತ್ತು ಒಪ್ಪಂದಗಳ ವಿಚಾರದಲ್ಲಿ ಸಮಸ್ಯೆ ಇನ್ನೂ ಹಾಗೆಯೇ ಉಳಿದಿದೆ. ಪ್ರಸ್ತುತ ಭಾರತೀಯ ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಪ್ರಾಧಿಕಾರ'ದ ವೆಬ್‌ಸೈಟ್‌ನಲ್ಲಿ ಏಳು ನಿಲ್ದಾಣಗಳನ್ನು ಪಟ್ಟಿ ಮಾಡಲಾಗಿದೆ. ಆದರೆ ಈ ಪೈಕಿ ಮೂರಕ್ಕೆ ಮಾತ್ರ ದಾಖಲೆ ಸಂಗ್ರಹಣ ಕೆಲಸ ನಡೆದಿದೆ. 400ಕ್ಕೂ ಹೆಚ್ಚು ನಿಲ್ದಾಣಗಳ ಆಧುನೀಕರಣವನ್ನು 'ಸ್ವಿಸ್ ಛಾಲೆಂಜ್' ವಿಧಾನದಲ್ಲಿ ಪ್ರಯತ್ನಿಸಲಾಗುತ್ತಿದೆ. 'ಸ್ವಿಸ್ ಛಾಲೆಂಜ್' ವಿಧಾನದಲ್ಲಿ ಈಗಾಗಲೇ ಪ್ರತಿಸ್ಪರ್ಧಿಯೊಬ್ಬರು ಮುಂದಿಟ್ಟಿರುವ ಪ್ರಸ್ತಾವಿತ ಯೋಜನೆಗೆ ಮತ್ತಷ್ಟು ಸುಧಾರಣಾ ಅಂಶಗಳನ್ನು ಸೇರಿಸಿ ಬಿಡ್ ಮಾಡಲು ಮತ್ತೊಬ್ಬ ವ್ಯಕ್ತಿ ಅಥವಾ ಸಂಸ್ಥೆಗೆ ಅವಕಾಶ ನೀಡಲಾಗುತ್ತದೆ. ಆದರೆ ಈ ಮಾದರಿಯಲ್ಲಿ ಕೆಲವೊಂದು ಸಮಸ್ಯೆಗಳಿದ್ದು, ಕೇಳ್ಕರ್ ಸಮಿತಿಯೂ ತನ್ನ ವರದಿಯಲ್ಲಿ ಇವುಗಳನ್ನು ಉಲ್ಲೇಖಿಸಿದೆ. 'ಸ್ವಿಸ್ ಛಾಲೆಂಜ್'ವಿಧಾನ ಅನುಸರಿಸುವುದು ಸಮಂಜಸವಾಗಲಾರದು ಎಂದು ಸಮಿತಿ ಶಿಫಾರಸು ಮಾಡಿದೆ.

'ರೈಲ್ವೆ ಅಭಿವೃದ್ಧಿ ಪ್ರಾಧಿಕಾರ' ರಚನೆಗೆ ಸಾಕಷ್ಟು ಒತ್ತು ನೀಡಲಾಗುತ್ತಿದೆ. ನೀತಿ–ನಿರೂಪಣೆ ಮತ್ತು ನಿಯಂತ್ರಣ ಪ್ರಕ್ರಿಯೆಗಳನ್ನು ಪ್ರತ್ಯೇಕಿಸಲು ಇಂಥದ್ದೊಂದು ಸ್ವತಂತ್ರ ನಿಯಂತ್ರಣ ಸಂಸ್ಥೆ ಅತ್ಯಗತ್ಯವೆನಿಸಿದೆ. ಇದರ ವ್ಯಾಪ್ತಿ, ಅಧಿಕಾರ ಮತ್ತು ಸ್ವಾತಂತ್ರ್ಯದ ಬಗ್ಗೆ ತಿಳಿಯಲು ಇದಕ್ಕೆ ಸಂಬಂಧಿಸಿದ ವಿಧೇಯಕ ಯಾವಾಗ ಸಿದ್ಧವಾಗಿ, ಸಂಸತ್ತಿನಲ್ಲಿ ಅನುಮೋದನೆಗೊಳ್ಳುವುದೊ ಕಾದು ನೋಡಬೇಕಿದೆ. ನೀತಿ ನಿರೂಪಣೆ ಮತ್ತು ಕಾರ್ಯನಿರ್ವಹಣೆ ಪ್ರಕ್ರಿಯೆಗಳನ್ನು ಪ್ರತ್ಯೇಕಿಸುವತ್ತ ಗಮನ ಹರಿಸುವುದು ಅತ್ಯಗತ್ಯವಾಗಿದೆ.

ಶೇ. 100ರಷ್ಟು ಗ್ರಾಮೀಣ ವಿದ್ಯುದೀಕರಣ (2018ರ ಮೇ 1ರ ಒಳಗಾಗಿ ಉಳಿದ 13010 ಗ್ರಾಮಗಳು) ಮತ್ತು ರಸ್ತೆ ಸಂಪರ್ಕ (ಉಳಿದ 65,000 ಗ್ರಾಮಗಳಿಗೆ 2021ಕ್ಕೆ ಬದಲಾಗಿ 2019ರ ಒಳಗೆ) ಯೋಜನೆಗಳಿಗೆ ಈ ಬಜೆಟ್‌ನಲ್ಲಿ ಸೂಕ್ತ ರೀತಿಯಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ. ವಸತಿ ಕ್ಷೇತ್ರಕ್ಕೂ ಇದೇ ರೀತಿ ಸೂಕ್ತ ಅನುದಾನ ಒದಗಿಸಲಾಗಿದೆ.

ಆದರೆ, ಸ್ವಚ್ಛ ಭಾರತ ಅಭಿಯಾನ, ಸ್ಮಾರ್ಟ್ ಸಿಟಿ ಮತ್ತು ವಿಮಾನ ನಿಲ್ದಾಣಗಳ ನವೀಕರಣಕ್ಕಾಗಿ ನೀಡಲಾಗಿರುವ ಅನುದಾನದ ಸದ್ವಿನಿಯೋಗದ ಬಗ್ಗೆ ನನಗೆ ಇನ್ನೂ ವಿಶ್ವಾಸ ಮೂಡಿಲ್ಲ. ಏಕೆಂದರೆ, ಇವುಗಳ ಪರಿಣಾಮಕಾರಿ ಅನುಷ್ಠಾನ ಕುರಿತಾದ ನೀತಿ–ನಿಯಮಗಳಲ್ಲಿ ಇನ್ನೂ ಸ್ಪಷ್ಟತೆ ಕಾಣಸಿಗುತ್ತಿಲ್ಲ. ಸ್ವಚ್ಛ ಭಾರತ ಅಭಿಯಾನಕ್ಕೆ ಸಂಬಂಧಿಸಿದಂತೆ ಜನರ ವರ್ತನೆಯಲ್ಲೇ ಬದಲಾವಣೆ ತರುವುದು ಮುಖ್ಯವಾಗಿದೆ. ಸ್ಮಾರ್ಟ್ ಸಿಟಿ ಪರಿಕಲ್ಪನೆಗಳು ಮತ್ತು ಧ್ಯೇಯಗಳು ಇನ್ನೂ ಪರಿಪೂರ್ಣ, ಪಕ್ವ ರೂಪ ಪಡೆಯಬೇಕಿದೆ.

ಇನ್ನು, ವಿಮಾನ ನಿಲ್ದಾಣಗಳ ವಿಷಯಕ್ಕೆ ಬರುವುದಾದರೆ, ಈಗ ಇರುವ ವಿಮಾನ ನಿಲ್ದಾಣಗಳೇ ಪರಿಪೂರ್ಣ ಮಟ್ಟದಲ್ಲಿ ಬಳಕೆಯಾಗದೆ ನಷ್ಟದಲ್ಲಿ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಅಷ್ಟು ಪ್ರಮಾಣದ ವಿಮಾನ ನಿಲ್ದಾಣಗಳನ್ನು ನಾವು ನವೀಕರಿಸಬೇಕಾದ ಅಗತ್ಯವೇನು ಎಂಬುದು ನನಗೆ ಇನ್ನೂ ಸ್ಪಷ್ಟವಾಗಿ ತಿಳಿಯುತ್ತಿಲ್ಲ.

### ವಿಮರ್ಶೆ

ಒಟ್ಟಾರೆಯಾಗಿ, ಆರ್ಥಿಕ ಸಮೀಕ್ಷೆಯು ಅರ್ಥವ್ಯವಸ್ಥೆಯ ಸ್ಥಿತಿಗತಿಯ ಬಗ್ಗೆ ವಾರ್ಷಿಕ ಚಿತ್ರಣವನ್ನು ನೀಡುತ್ತದೆಯಾದರೂ, ಪೂರ್ವ ಬಜೆಟ್‌ಗಳ ವಿಮರ್ಶೆಯನ್ನು ವಿಶ್ಲೇಷಿಸುವ ಮತ್ತು ಮುಂದಿಡುವ ಪ್ರಯತ್ನಗಳು ಇಲ್ಲಿ ನಡೆದಿರುವುದು ಅತ್ಯಂತ ವಿರಳ. ಆಯವ್ಯಯ ಅಂದಾಜು, ಪರಿಷ್ಕೃತ ಅಂದಾಜು, ನೈಜ ವೆಚ್ಚದ ಬಗ್ಗೆ ಸಮಗ್ರ ಮಟ್ಟದಲ್ಲಿ ಗಮನ ಹರಿಸಿದ್ದಾದಲ್ಲಿ ಕೆಲವೊಂದು ನಿಖರ ಮಾಹಿತಿ ಪಡೆಯಲು ನೆರವಾಗುತ್ತದೆ. ನಿರ್ದಿಷ್ಟ ಯೋಜನೆ ಮತ್ತು ಅದಕ್ಕೆ ಬೆಂಬಲಿಸುವ ನೀತಿಗಾಗಿ ಎಷ್ಟು ಅನುದಾನ ನೀಡಲಾಗಿದೆ, ಇದಕ್ಕಾಗಿ ಮಾಡಲಾದ ನೈಜ ವೆಚ್ಚವೆಷ್ಟು ಇತ್ಯಾದಿ ಅಂಶಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಉದಾಹರಣೆಗೆ, ಹಿಂದಿನ ಬಜೆಟ್‌ನಲ್ಲಿ ಒಳನಾಡು ಜಲಸಾರಿಗೆಗೆ ಗಣನೀಯ ಪ್ರಮಾಣದಲ್ಲಿ ಅತ್ಯಧಿಕ ಅನುದಾನ ನೀಡಲಾಗಿತ್ತು. ಆದರೆ, ಈ ಸಂಬಂಧ ಮಾಡಲಾಗಿರುವ ನೈಜ ವೆಚ್ಚ ಎಷ್ಟೆಂಬ ಬಗ್ಗೆ ಸ್ಪಷ್ಟತೆಯಿಲ್ಲ.

ಈ ವಿಚಾರದಲ್ಲಿ ಮುಂದುವರಿದು ಹೇಳುವುದಾದರೆ, ಮೂಲಸೌಕರ್ಯ ವಲಯದ ವೆಚ್ಚಗಳು ನೇರ ಮತ್ತು ಅಪೇಕ್ಷಿತ ದಿಶೆಯಲ್ಲಿ ಸಾಗುವಂತಾಗಲು ಆಗಾಗ್ಗೆ ಸಾಧನೆ ಅಥವಾ ಫಲಿತಾಂಶಗಳನ್ನು ವಿಮರ್ಶೆಗೆ ಒಳಪಡಿಸಬೇಕು. ❑

# ಸಾಂಪ್ರದಾಯಿಕ ಅಭಿವೃದ್ಧಿ ಅಂದಾಜು ಏಕೆ?

* ಡಿಹೆಚ್ ಪೈ ಪನಂದಿಕರ್



**ಆರ್ಥಿಕತೆಯನ್ನು ಮತ್ತೊಮ್ಮೆ ತ್ವರಿತಗೊಳಿಸಲು, ಬೇಡಿಕೆ ಹುಟ್ಟಿಸುವಂಥ ಕ್ರಮಗಳನ್ನು ತೆಗೆದುಕೊಳ್ಳುವುದು ಮುಖ್ಯವಾಗಿದೆ. ಸಾರ್ವಜನಿಕ ರಂಗಕ್ಕಿರುವ ಒಂದು ಪರಿಣಾಮಕಾರಿ ಹಾದಿಯೆಂದರೆ ಅದು ಸೌಲಭ್ಯಗಳಿಗೆ ಹಣ ತೊಡಗಿಸುವುದು.**

ಬಜೆಟ್ ರೂಪುಗೊಂಡಿರುವ ಹಿನ್ನೆಲೆಯನ್ನು ಆರ್ಥಿಕ ಸಮೀಕ್ಷೆ ಸೂಚಿಸುತ್ತಿದೆ. ಈ ಸಮೀಕ್ಷೆಯು ಹೆಚ್ಚು ವಸ್ತುನಿಷ್ಠವಾಗಿದ್ದು, ಪ್ರಸ್ತುತ ಆರ್ಥಿಕ ಸನ್ನಿವೇಶವನ್ನು ಪರಿಶೀಲಿಸುವುದಾಗಿದೆ. ಹಾಗೆಯೇ ಆರ್ಥಿಕತೆಯನ್ನು ದೃಢತೆಗೊಳಪಡಿಸುವ ವಿಸ್ತೃತ ನೀತಿ–ನಿಯಮಗಳನ್ನು ಸಹ ಅದು ಸೂಚಿಸುತ್ತದೆ. ವಾರ್ಷಿಕ ಆಯವ್ಯಯ ಅಂದಾಜು ಪಟ್ಟಿಯು ಅರ್ಥಶಾಸ್ತ್ರದಿಂದ ಸ್ವಲ್ಪ ಮುಂದೆಹೋಗಿ ರಾಜಕೀಯ ನಿರ್ಧಾರಗಳಿಂದ ಪ್ರಭಾವಿತಗೊಂಡಂತೆ, ವೆಚ್ಚಗಳನ್ನು ಆದ್ಯತೆಯಾಗಿರಿಸಿಕೊಂಡು ಹಾಗೆಯೇ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರತ್ತ ಗಮನವಿತ್ತಿದೆ. ಸಮೀಕ್ಷೆ ಹಾಗೂ ಆಯವ್ಯಯಪಟ್ಟಿಗಳೆರಡೂ ವಿಭಿನ್ನ ವಿಭಾಗಗಳದ್ದಾಗಿದ್ದರೂ ಕೂಡ ಸಮಗ್ರವಾಗಿ ಅರ್ಥ ಸಚಿವಾಲಯದ ದೃಷ್ಟಿಕೋನಗಳಿಗೆ ಹೆಚ್ಚಿನ ಮಹತ್ವ ನೀಡಿವೆ.

ಪ್ರಸಕ್ತ ವರ್ಷದ ಗುರಿ ಮಹತ್ವಾಕಾಂಕ್ಷೆ ಗುರಿ ಎನಿಸಿದ ಕಾರಣ ಸಮೀಕ್ಷೆಯು 2016–17 ನೇ ಸಾಲಿಗೆ, 7 ರಿಂದ 7.5 ಶೇಕಡ ಅಭಿವೃದ್ಧಿ ಗುರಿಯಾಗಿರಿಸಿಕೊಂಡಿದೆ. ಬಹುಷಃ ಪ್ರಸ್ತುತ, ನಿರಾಶಾದಾಯಕವೆನ್ನುವ ಜಾಗತಿಕ ಆರ್ಥಿಕ ಸನ್ನಿವೇಶವು ನಿರೀಕ್ಷೆ ಮೀರಿದ್ದಾಗಿದ್ದು, ಅದು ಮುಂದಿನ ವರ್ಷ ಯಾವ ರೀತಿ ಬೇಕಿದ್ದರೂ ಹೊರಳಬಹುದಾಗಿದೆ. ಅನಿಶ್ಚಿತತೆಯ ನಡುವೆಯೇ, ಭಾರತವು ದೃಢವಾದ ಹಾಗೂ ಸಾಪೇಕ್ಷವಾಗಿ ಉನ್ನತ ಅಭಿವೃದ್ಧಿಯೊಂದಿಗೆ ಸ್ಥಗಿತವನ್ನು ತಿರಸ್ಕರಿಸುವಂತೆ ಪುಟಿದೆದ್ದಿದೆ. ದೀರ್ಘಕಾಲದ ಒಳಸಾಮರ್ಥ್ಯವು ಶೇಕಡ 8–10 ಎಂದು ಅಂದಾಜು ಮಾಡಲಾಗಿದೆ. ಬೇರೆಲ್ಲೆಡೆಯ ಚಿತ್ರಣವು ಮಂಕಾಗಿದೆ. ಜಪಾನ್ ಹಾಗೂ ಯೂರೋಪ್‌ಗಳು ಆರ್ಥಿಕ ಹಿನ್ನಡೆಯ ಅಂಚಿನಲ್ಲಿವೆ. 2015 ರ ಕೊನೆಯ ತ್ರೈಮಾಸಿಕ ಭಾಗದಲ್ಲಿ, ಅಮೆರಿಕದ ಅಭಿವೃದ್ಧಿ ಕುಸಿದಿದೆ. ಬ್ರಿಕ್ಸ್ ದೇಶಗಳು ಕೂಡ ಸಮಸ್ಯೆಯಲ್ಲಿವೆ. ಬ್ರೆಜಿಲ್ ಹಾಗೂ ರಷ್ಯಾ ದೇಶಗಳ ಅಭಿವೃದ್ಧಿಯು ಪ್ರತಿಶತ–4 ಕ್ಕಿಂತ ಕೆಳಕ್ಕಿಳಿದಿದೆ, ದಕ್ಷಿಣ ಆಫ್ರಿಕಾದಲ್ಲಿ ಅದಕ್ಕೆ ಸಮನಾದ ಕ್ಷೋಭೆಯಿದೆ. ಚೈನಾ ದೇಶವು ಈ ಮೊದಲು ಶೇಕಡಾ 10 ರಷ್ಟು ಅಭಿವೃದ್ಧಿ ಹೊಂದಿದ್ದು, ಈಗ ಅದು ಪ್ರತಿಶತ 6.5 ಆಗಿದೆ. ಪ್ರಪಂಚದ ಉಳಿದ ರಾಷ್ಟ್ರಗಳಿಂದ ಯಾವ ದೇಶವೂ ಪ್ರತ್ಯೇಕವಾಗಿ ಉಳಿಯುವುದು ಸಾಧ್ಯವಿಲ್ಲ. ವ್ಯಾಪಾರ ಹಾಗೂ ಬಂಡವಾಳಗಳ ಮೂಲಕ ದೇಶಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಯಾವ ದೇಶಗಳು ರಫ್ತು ಮಾಡುವ ಮೂಲಕ ಅಭಿವೃದ್ಧಿ ಚಾಲನೆ ಹೊಂದುವ ಆಶಯವಿಟ್ಟುಕೊಂಡಿದ್ದವೊ, ಅವುಗಳೇ ಈ ಓಟಸ್ಪರ್ಧೆಯಲ್ಲಿ ಬೀಳುವಂಥವಾಗಿರುತ್ತವೆ. ಭಾರತದ ಪ್ರಾರಂಭದ ಅಭಿವೃದ್ಧಿ ತಂತ್ರವ್ಯೂಹವು ಆಮದು ಪರ್ಯಾಯವನ್ನು ಆಧರಿಸಿದುದಾಗಿತ್ತು. 1999ರ ಸುಧಾರಣೆಗಳ ಅತ್ಯುತ್ತಮ ಶ್ರಮ ಹೊಂದಿದಾಗ್ಯೂ, ರಫ್ತು ಮೇಲ್ದರ್ಜೆಗೊಯ್ಯುವುದಕ್ಕೆಪ್ರಯತ್ನಿಸಿದಾಗ್ಯೂ ಅದು ಪರಿಣಾಮಕಾರಿಯಾಗಿ ಪರಿವರ್ತಿತವಾಗಲಿಲ್ಲ. ಈಗ ಅದು ಹೆಚ್ಚೆಚ್ಚು ಭಿನ್ನ ಸ್ವರೂಪ ಪಡೆದ "ಮೇಕ್ ಇನ್ ಇಂಡಿಯಾ" ಆಗಿರುತ್ತದೆ. ಪ್ರಾದೇಶಿಕವಾಗಿ ಚಾಲನಾಶಕ್ತಿ ನೀಡಬಲ್ಲ ಮೇಲಿನ ಅವಲಂಬನೆಯಿಂದಾಗಿ, ನಮ್ಮ ಸಂಬಂಧವು ಪ್ರಪಂಚದ ಉಳಿದ ರಾಷ್ಟ್ರಗಳೊಂದಿಗೆ ದುರ್ಬಲವಾಗಿದೆ. ಸಮೀಕ್ಷೆ ಗುರುತಿಸುವ ಹಾಗೆ, ಜಾಗತಿಕ ಆರ್ಥಿಕ ಅಭಿವೃದ್ಧಿಯು ಒಂದು ಪರ್ಸೆಂಟೇಜ್ ಪಾಯಿಂಟ್ ಇಳಿತಾಯಗೊಂಡ ಪಕ್ಷದಲ್ಲಿ ಅದು

* ನಿವೃತ್ತ ಪ್ರಧಾನ ಕಾರ್ಯದರ್ಶಿ, ಎಫ್‌ಐಸಿಸಿಐ.

ಭಾರತದ ಬೆಳವಣಿಗೆಯನ್ನು 0.2 ಒಂದು ಪರ್ಸೆಂಟೇಜ್ ಪಾಯಿಂಟ್‌ರಷ್ಟು ಹಿಂಡಿಬಿಡುತ್ತದೆ. ಆದರೆ ಇಂತಹ ಘಟನೆಗಳು 2008–09 ರಲ್ಲಿ ಕಂಡುಬಂದತಹ ಕುಸಿತಕ್ಕೆ ಕಾರಣವಾಗಬಲ್ಲವು. ಹೀಗೆ ಅಂತಾರಾಷ್ಟ್ರೀಯ ಪರಿಸರವೇ ಮಂಕಾಗಿರುವ ಹೊತ್ತಲ್ಲಿ, ಭಾರತದ ಅಭಿವೃದ್ಧಿಯನ್ನು ಸುಸ್ಥಿರಗೊಳಿಸಿರುವ ಅಂಶವಾದರೂ ಯಾವುದು? ಸಮೀಕ್ಷೆ ಇದಕ್ಕೆ ವಿವಿಧ ಕಾರಣಗಳನ್ನು ತೋರಿಸುತ್ತದೆ. ಕೇಂದ್ರದಲ್ಲಿ ಭ್ರಷ್ಟಾಚಾರವನ್ನು ಆದಷ್ಟು ನಿರ್ಮೂಲನೆಗೊಳಿಸುವುದಕ್ಕೆ ಸಂಬಂಧಿಸಿದ ಹಲವಾರು ಸಣ್ಣ ಬೆಳವಣಿಗೆಯ ಉತ್ತೇಜನಕಾರಿ ವಿಷಯಗಳು ಮತ್ತು ವಿದೇಶಿ ಬಂಡವಾಳ ನೇರ ಹೂಡಿಕೆ (ಎಫ್.ಡಿ.ಐ.) ಗೆ ಹೆಚ್ಚಿನ ಕ್ಷೇತ್ರ ಮುಕ್ತ, ವಾಣಿಜ್ಯವನ್ನು ನಡೆಸುವಲ್ಲಿ ವೆಚ್ಚ ಕಡಿತಗೊಳಿಸುವಿಕೆ, ಜನ್‌ಧನ್ ಯೋಜನೆ ಮತ್ತಿತರ ಸಾಮಾಜಿಕವಾಗಿ ಪ್ರಧಾನವೆನ್ನುವ ಯೋಜನೆಗಳು ಕಾರಣವೆಂಬುದನ್ನು ಈ ಸಮೀಕ್ಷೆಯು ಪರಿಶೀಲಿಸುತ್ತದೆ. ಆದರೆ ಈ ರೀತಿಯ ಯಾವುದೇ ಕ್ರಮಗಳಿಂದಾಗಿ ಬಂಡವಾಳ ಹೆಚ್ಚಳಗೊಳ್ಳುವ ಯಾವುದೇ ಗಣನೀಯ ಬೆಳವಣಿಗೆಯಲ್ಲಿ ಅದು ಪ್ರತಿಫಲನಗೊಂಡಿಲ್ಲ.

ಕೈಗಾರಿಕೆಯು ಅದರ ಜಿಡಿಪಿ ಪಾಲಾದ ಪ್ರತಿಶತ 15–16 ರೊಂದಿಗೆ ಸಾಪೇಕ್ಷವಾಗಿಯೇ ಸ್ಥಿರವಾಗಿದೆ. ಕಾರ್ಪೋರೇಟ್ ವಲಯವು ತನ್ನ ಸಾಮರ್ಥ್ಯವನ್ನು ಕೇವಲ ಕಾಪಾಡಿಕೊಳ್ಳುವುದಷ್ಟಕ್ಕೆ ಮಾತ್ರ ಸಾಧ್ಯವಾಗಿ, ಪ್ರಸ್ತುತ ವರ್ಷದಲ್ಲಿ ತನ್ನ ಲಾಭವನ್ನು ಕಳೆದುಕೊಂಡಿತು. ಬೇಡಿಕೆಯ ಕೊರತೆಯಿರುವಲ್ಲಿ ಅದು ಅತಿಯಾದ ಸಾಮರ್ಥ್ಯದೊಂದಿಗೆ ಸಜ್ಜುಗೊಂಡಿದೆ. ಕಾರ್ಪೋರೇಟ್ ವಲಯ ಹಾಗೆಯೇ ಅವು ಸಾಲ ಪಡೆದುಕೊಂಡಿರುವ ಬ್ಯಾಂಕುಗಳು ಈಗ ಒತ್ತಡದಲ್ಲಿರುವ ಆಸ್ತಿಯುಳ್ಳ ಪರಿಸ್ಥಿತಿಯನ್ನೆದುರಿಸುತ್ತಿವೆ. ಕೆಲವು ಘಟಕಗಳು ನಿಸ್ಸಂದೇಹವಾಗಿ ಅತಿ ಹೆಚ್ಚಿನ ಚೈತನ್ಯ ಶಕ್ತಿಯನ್ನು ತೋರುತ್ತಿವೆ. ಸೇವಾ ವಲಯಗಳು, ಆರ್ಥಿಕತೆ ಹಾಗೂ ಹಂಚಿಕೆಯಲ್ಲಿ ಅಸಾಧಾರಣ ಉತ್ಸಾಹ ತೋರುವ ಮೂಲಕ ಆರ್ಥಿಕ ವ್ಯವಸ್ಥೆಗೆ ಬಲ ನೀಡುತ್ತಿವೆ. ಸ್ಟಾರ್ಟ್‌ಅಪ್ಸ್‌ಗಳು ಭಾರತದಲ್ಲಿ ಹೊಸ ಅಡಿಪಾಯವನ್ನು ಕಂಡುಕೊಂಡಿವೆ. ಹೆಚ್ಚಳ ಬಹು ಗಣನೀಯವಲ್ಲವಾದರೂ ಎಫ್‌ಡಿಐ ತನ್ನ ಗತಿಯನ್ನು ಕಾಪಾಡಿಕೊಂಡಿದೆ. ಪ್ರಾರಂಭದ ವರ್ಷಗಳಲ್ಲಿನ ಹೆಚ್ಚಿನ ಬಂಡವಾಳವು ದುಪ್ಪಟ್ಟುಗೊಂಡಿದ್ದರ ಪರಿಣಾಮಗಳು ಬಹುಶಃ ಆರ್ಥಿಕ ಸ್ಥಿತಿಯನ್ನು ಕಾಪಾಡುತ್ತಿರಬಹುದಾಗಿದೆ.

ಆರ್ಥಿಕತೆಯನ್ನು ಮತ್ತೊಮ್ಮೆ ತ್ವರಿತಗೊಳಿಸಲು, ಬೇಡಿಕೆ ಹುಟ್ಟಿಸುವಂಥ ಕ್ರಮಗಳನ್ನು ತೆಗೆದುಕೊಳ್ಳುವುದು ಮುಖ್ಯವಾಗಿದೆ. ಸಾರ್ವಜನಿಕ ರಂಗಕ್ಕಿರುವ ಒಂದು ಪರಿಣಾಮಕಾರಿ ಹಾದಿಯೆಂದರೆ ಅದು ಸೌಲಭ್ಯಗಳಿಗೆ ಹಣ ತೊಡಗಿಸುವುದು. ಇದಕ್ಕಿರುವ ಕಾರಣ ಅದಕ್ಕೆ ವಿಶೇಷವಾದ ವ್ಯಾಪ್ತಿಯಿದ್ದು, ಅದು ಬಲಗೊಂಡು ದುಪ್ಪಟ್ಟುಗೊಳ್ಳುವ ಪರಿಣಾಮ ಒಳಗೊಂಡಿರುವುದೇ ಆಗಿದೆ.

ಭಾರತವು ರಫ್ತನ್ನೇ ತನ್ನ ಪ್ರಧಾನ ಚಾಲನಾಶಕ್ತಿಯಾಗಿ ಬಳಸಲಿಲ್ಲ ಅಥವಾ ಬಳಸಿಕೊಳ್ಳಲಿಲ್ಲವಾದರೂ, ರಫ್ತು ಈಗಲೂ ಬಹು ಮುಖ್ಯವಾದುದಾಗಿದೆ. ಏಕೆಂದರೆ ಕೈಗಾರಿಕೆಯಲ್ಲಿ, ಸರಾಸರಿಯಾಗಿ ವಹಿವಾಟಿನ ಶೇಕಡಾ 12 ರಷ್ಟನ್ನು ರಫ್ತು ಮಾಡುತ್ತಾರೆ. ಜಾಗತಿಕ ಆದಾಯದಲ್ಲಿನ ಇಳಿಕೆಯೇ ಕಾರಣವಾಗಿ, ಕಳೆದ 14 ತಿಂಗಳುಗಳಲ್ಲಿ ರಫ್ತು ಗಣನೀಯವಾಗಿ ಕುಸಿದಿದೆ. ಇದಿಷ್ಟೇ ಅಲ್ಲದೆ, ಅಮೆರಿಕ ಸಂಸ್ಥಾನವು ತನ್ನ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಹೆಚ್ಚಿಸಿದ್ದು ಮತ್ತು ಭವಿಷ್ಯದಲ್ಲೂ ಅದು ಹೆಚ್ಚಳವಾಗುತ್ತದೆಂಬ ಸೂಚನೆಯಿರುವುದರಿಂದಾಗಿ ಬಹುಮಟ್ಟಿಗೆ ಬೇರೆಲ್ಲ ಹಣವ್ಯವಸ್ಥೆಗಳು ಒಂದಕ್ಕಿಂತ ಮತ್ತೊಂದು ಹೆಚ್ಚು ಎನ್ನುವ ಹಾಗೆ ಅಪ–ಮೌಲ್ಯೀಕರಣಗೊಂಡಿದೆ. ರೂಪಾಯಿಯು ತನ್ನ ಮುಂಚಿನ ಕನಿಷ್ಠಕ್ಕಿಂತ ಬಹುಮಟ್ಟಿಗೆ ಕೆಳಬಿದ್ದಿದೆಯಾದರೂ ಇದರಿಂದ ರಫ್ತು ಹೆಚ್ಚಾಗುವುದಕ್ಕೆ ಮಾತ್ರ ಯಾವ ರೀತಿಯಲ್ಲೂ ಸಹಕಾರಿಯಾಗಿಲ್ಲ. ಇತರರ ಆರ್ಥಿಕ ವ್ಯವಸ್ಥೆಗಳು ಅಪಮೌಲ್ಯೀಕರಣಗೊಂಡಿದ್ದ ಪ್ರತಿಯಾಗಿ ನಾವು ಅನುಕೂಲ ಪಡೆದುಕೊಳ್ಳಲು ಸಾಧ್ಯವಾಗಿಲ್ಲವೆಂಬುದೂ ಇದಕ್ಕೆ ಕಾರಣ. ಈ ರೀತಿ ಹಣವ್ಯವಸ್ಥೆ ಪೈಪೋಟಿಯ ಮಧ್ಯೆ, ಆರ್.ಬಿ.ಐ. ತನ್ನ ರೂಪಾಯಿಯ ನಿರ್ವಹಣೆ ಮಾಡುತ್ತಾ, ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕಾಗಿದೆ. ಇಂತಹ ತುದಿಯಲ್ಲಿ ನಿಂತು ಕಷ್ಟಕ್ಕೊಳಪಡುವ ಸವಾಲಿನ ವಿರುದ್ಧವಾಗಿ ಸಮೀಕ್ಷೆಯು



ಆತಂಕವ್ಯಕ್ತಪಡಿಸುತ್ತದೆ. ವ್ಯಾಪಾರಿ ಸರಕುಗಳ ರಫ್ತು ಕುಸಿತವಾಗಿದ್ದಾಗ್ಯೂ ಕೂಡ, ಚಾಲ್ತಿಲೆಕ್ಕದ ಕೊರತೆಯು ಕೇವಲ ಪ್ರತಿಶತ 1.1 ಮಾತ್ರ ಆಗಿರುತ್ತದೆ. ಅದಕ್ಕೆ ಕಾರಣ, ಭಾಗಶಃ ಸೇವಾ ರಫ್ತು (ಮಾಹಿತಿ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಿಸಿದ ಸೇವೆಗಳು) ಹೆಚ್ಚಿನ ಬೆಂಬಲ ನೀಡಿದ್ದು, ಉಳಿದಂತೆ ಆಮದು ಕುಸಿತಕ್ಕೆ ಕಾರಣವಾಗಿರುವುದು ಅಂತಾರಾಷ್ಟ್ರೀಯ ಕಚ್ಚಾ ತೈಲ ಬೆಲೆಯಲ್ಲಿ ಕುಸಿತವಾಗಿರುವುದಾಗಿದೆ. 2016–17ರಲ್ಲಿ ಭಾರತಕ್ಕೆ ತೈಲ ಬೆಲೆ ಪ್ರಸ್ತುತ ವರ್ಷದಲ್ಲಿರುವ 45 ಡಾಲರ್/ ಬ್ಯಾರೆಲ್‌ಗೆ ಬದಲಾಗಿ 35 ಡಾಲರ್/ಬ್ಯಾರೆಲ್ ಆಗಬಹುದೆಂದು ಸಮೀಕ್ಷೆ ನಿರೀಕ್ಷಿಸಿದೆ. ಬೆಳವಣಿಗೆಯನ್ನು ನಿರ್ವಹಣೆ ಮಾಡುವ ಹಾಗೇ ತ್ವರಿತಗೊಳಿಸುವ ಯಾವ ರೀತಿ ನೀತಿಗಳ ಅವಶ್ಯಕತೆಯಿದೆಯೆಂಬುದೇ ಈಗ ಮೂಲಭೂತ ಪ್ರಶ್ನೆಯಾಗಿದೆ. ಅಭಿವೃದ್ಧಿಯು ಹೀಗೆ ಮುಂದುವರಿಯುತ್ತದೆ ಎಂದು ಭಾವಿಸಲಾಗುವುದಿಲ್ಲ. ಏಕೆಂದರೆ ಇತರ ಗುಣಕಗಳು ಅದನ್ನು ಕಬಳಿಸಿ ಹೂಡಿಕೆ ಕುಸಿತಗೊಳಿಸುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಅರ್ಥಸಚಿವರು ಆಯವ್ಯಯವನ್ನು ಸಂಚಿತಗೊಳಿಸುವುದರ ಕಡೆಗೇ ಸ್ಪಷ್ಟ ಒಲವು ತೋರಿ, ಜಿಡಿಪಿಯ ಪ್ರತಿಶತ 3.5 ಎಂದು ಯೋಜಿಸಿರುವಂತೆಯೇ, ಆಯವ್ಯಯ ಕೊರತೆಯನ್ನು ಕಡಿತಗೊಳಿಸಿದ್ದಾರೆ. ಆದರೆ ಈಗ ಅಗತ್ಯವಾಗಿ ಆಗಲೇಬೇಕಾಗಿರುವುದು, ಸಾರ್ವಜನಿಕ ವೆಚ್ಚದ ಮೂಲಕ ಬೇಡಿಕೆಯನ್ನು ಹುಟ್ಟುಹಾಕುವುದು ಮತ್ತು ಆಕ್ರಮಣಕಾರಿ ಪ್ರವೃತ್ತಿಯನ್ನೊಳಗೊಂಡ ಸುಧಾರಣೆಗಳ ಕಾರ್ಯಸೂಚಿಯಾಗಿದೆ.

2016–17 ರ ಆಯವ್ಯಯ ಪಟ್ಟಿಯು ಒಂದು ರ್‍ಯಾಂಕ್ ಒಂದು ಪೆನ್ಷನ್ ಎಂಬ ನೀತಿ ಆಧಾರದ ಮೇಲಿನ ವೆಚ್ಚವನ್ನು ತೂಗಿಸಬೇಕಾಗಿದೆ ಮತ್ತು ಏಳನೇ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಸಂಬಳ ಹೆಚ್ಚಳ ಮಾಡಬೇಕಾಗಿದೆ. ಆದಾಗ್ಯೂ, ವೆಚ್ಚದ ಗುಣಾತ್ಮಕತೆಯೇ ಅಭಿವೃದ್ಧಿಯ ನಿರ್ಣಾಯಕ ಅಂಶವಾಗಿರುತ್ತದೆ.

ಸಮೀಕ್ಷೆಯು ಕಂಡುಕೊಂಡಿರುವಂತೆ, ಮೂರು ಕ್ಷೇತ್ರಗಳಲ್ಲಿ ವೆಚ್ಚವನ್ನು ಹೆಚ್ಚಿಸಬೇಕಾಗಿದೆ. ಇದನ್ನು ವಾಸ್ತವವಾಗಿ ಆಯವ್ಯಯದಲ್ಲಿ ಒದಗಿಸಲಾಗಿದೆ ಕೂಡ. ಮೊಟ್ಟಮೊದಲನೆಯದು ಶಿಕ್ಷಣ. ಶಿಕ್ಷಣವಿಲ್ಲದ ಕೆಲಸಗಾರರಿಂದ ನಿರ್ವಹಣೆಗೊಳ್ಳುವ ಉದ್ಯೋಗಗಳು ಕಡಿಮೆ ಉತ್ಪಾದನಾಶೀಲವಾಗಿರುವಂಥವು ಹಾಗೆಯೇ ಅದರ ಪರಿಣಾಮವಾಗಿ ಕಡಿಮೆ ಸಂಬಳ. ಎರಡನೆಯದು ಆರೋಗ್ಯ, ಆರೋಗ್ಯವಂತ ಮನುಷ್ಯನು ಹೆಚ್ಚು ಉತ್ಪಾದನಾಶೀಲವಾಗಿರುತ್ತಾನೆ. ಆತ ವೈದ್ಯಕೀಯಕ್ಕೆ ಹೆಚ್ಚು ವೆಚ್ಚ ಮಾಡಬೇಕಿಲ್ಲ ಹಾಗೂ ಆತನಲ್ಲಿ ಹೆಚ್ಚು ಖರ್ಚು ಮಾಡುವ ಸಾಮರ್ಥ್ಯವಿರುತ್ತದೆ. ಶಿಕ್ಷಣ ಹಾಗೂ ಆರೋಗ್ಯ ಎರಡೂ ಸೇರಿಕೊಂಡು, ಅಭಿವೃದ್ಧಿಯ ತಂತ್ರಾಂಶವನ್ನು ರೂಪಿಸುತ್ತವೆ. ಸಮೀಕ್ಷೆ ಕಂಡುಕೊಂಡ ಹಾಗೆ, ಅದರಿಂದ ನಿಜಕ್ಕೂ ಅಭಿವೃದ್ಧಿಯಾಗಲೇಬೇಕು, ಇದು ಹೆಚ್ಚಿನ ರಾಷ್ಟ್ರಗಳ ಅನುಭವವಾಗಿರುತ್ತದೆ.

ಮೂರನೆಯದು ಕೃಷಿ, ವಂಶವಾಹಿನಿಗೆ ಸಂಬಂಧಿಸಿದಂತೆ ಸುಧಾರಿತ ಬೆಳೆಗಳು, ಸುಧಾರಣೆಗೊಂಡಿರುವ ನೀರಾವರಿ, ತೋಟಗಾರಿಕೆಯಲ್ಲಿ ಯಾಂತ್ರೀಕರಣ, ಮಾರುಕಟ್ಟೆ ಹಾಗೂ ಒಳಸುರಿವು, ಉತ್ಪಾದನೆ ಹಾಗೂ ಆಹಾರ ಭದ್ರತೆಯ ಕಡೆಗೆ ಸಮೀಕ್ಷೆಯು ಆದ್ಯತೆ ನೀಡುತ್ತದೆ.

ಉತ್ಪಾದನಾರಹಿತ ಇಲ್ಲವೆ ಕಡಿಮೆ ಉತ್ಪಾದಿತ ವೆಚ್ಚಗಳು ಅದರಲ್ಲೂ ವಿಶೇಷವಾಗಿ ರಿಯಾಯಿತಿಗಳನ್ನು ತಡೆಯುವ ಬಗ್ಗೆ ಆಯವ್ಯಯಪಟ್ಟಿಯಲ್ಲಿ ಯಾವ ಪ್ರಯತ್ನವನ್ನು ಮಾಡಲಾಗಿಲ್ಲ. ಸಮೀಕ್ಷೆಯು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದೆ ಹಾಗೂ ಗುರಿಯಾಗಿರಿಸಿಕೊಂಡ ದುರ್ಬಲ ವರ್ಗದವರಿಗೆ ಯಾವ ರೀತಿಯಲ್ಲೂ ಲಾಭವಾಗದ ರಿಯಾಯಿತಿಗಳನ್ನು ಕಿತ್ತು ಹಾಕುವಂತೆ ಸೂಚಿಸಿದೆ. ಸಮೀಕ್ಷೆಯಲ್ಲಿ ಎರಡು ಮುಖ್ಯವಾದ ಸೂಚನೆಗಳನ್ನು ನೀಡಲಾಗಿದೆ. ಮೊದಲನೆಯದು, ಅನುಕೂಲಸ್ಥರಿಗೆಂದು ನೀಡಲಾಗಿರುವ ಅನೇಕ ರಿಯಾಯಿತಿಗಳನ್ನು ಹಿಂಪಡೆಯಬೇಕು. ಸಣ್ಣ ಉಳಿತಾಯ ಯೋಜನೆಗೆ ಸಂಬಂಧಿಸಿದ ರಿಯಾಯಿತಿ, ಅಡಿಗೆ ಅನಿಲಕ್ಕಿರುವ ತೆರಿಗೆ ರಿಯಾಯಿತಿ, ರೈಲು, ಇಂಧನ, ವೈಮಾನಿಕ, ಇಂಧನ ಹಾಗೂ ಸೀಮೆ ಎಣ್ಣೆಗೆ ನೀಡಲಾಗಿರುವ ರಿಯಾಯಿತಿಗಳೇ 1 ಲಕ್ಷ ಕೋಟಿಯನ್ನು ತಲುಪುತ್ತವೆ. ಎರಡನೆಯದು, ಶ್ರೀಮಂತ ರೈತರೇ ಪ್ರಧಾನವಾಗಿರುವ ಕೃಷಿ ಆದಾಯಕ್ಕೆ ಸಂಬಂಧಿಸಿದ ತೆರಿಗೆ ಹಾಗೂ ರಸ ಗೊಬ್ಬರಗಳ ರಿಯಾಯಿತಿಗೆ ಸಂಬಂಧಿಸಿದಂತೆ ತರ್ಕಸಮ್ಮತ ಪುನರ್ ವ್ಯವಸ್ಥೆ ನಿರೂಪಣೆ ಪಾರ್ಲಿಮೆಂಟಿನಲ್ಲಿ ಖಚಿತ ನಿರ್ಧಾರಗೊಂಡಿರುವ ಪ್ರತಿಪಕ್ಷದವರನ್ನು ಎದುರಿಸಬೇಕಾದ ಹಾಗೆಯೇ ಬರಲಿರುವ ಅಸೆಂಬ್ಲಿ ಚುನಾವಣೆಯನ್ನು ಸ್ಪರ್ಧಿಸಲಿರುವ ಅವರ ಪಕ್ಷವನ್ನು ಗಮನಿಸಬೇಕಾಗಿರುವ ಅರ್ಥಸಚಿವರಿಗೆ ನಮ್ಮೀ ಸಲಹೆಗಳು ಸ್ಪಷ್ಟವಾಗಿಯೇ ಹಿತಕರವಾಗುವಂಥವಲ್ಲ. ರಾಷ್ಟ್ರೀಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಜಾರಿಗೊಳ್ಳಬೇಕಾಗಿರುವ ಕೆಲವು ಅತ್ಯಂತ ಮುಖ್ಯವಾದ ಹಾಗೂ ಪ್ರಗತಿದಾಯಕ ಸುಧಾರಣೆಗಳು ರಾಜ್ಯ ಸಭೆಯಲ್ಲಿ ಅಂಗೀಕೃತವಾಗಲೇ ಇಲ್ಲ. ವೆಚ್ಚಗಳನ್ನು ಆದಷ್ಟು ತೆರಿಗೆ ಆದಾಯದಿಂದ ತೂಗಿಸಬೇಕಾಗಿದೆ ಮತ್ತು ತೀರಾ ಅನಿವಾರ್ಯವಾದಾಗ ಮಾತ್ರ ಸಾಲ ಪಡೆದುಕೊಳ್ಳಬಹುದಾಗಿದೆ.

ಕೆಲ ಸುಧಾರಣೆಗಳು ವಿಶೇಷವಾಗಿ ಅಭಿವೃದ್ಧಿ ಪ್ರಕ್ರಿಯೆಗೆ ನಾಟಕೀಯ ಪರಿವರ್ತನೆಯನ್ನು ತರಬಲ್ಲವು. ಭೂ ವಿಧೇಯಕವು ಸಾರ್ವಜನಿಕ ವಲಯ ಹಾಗೇ ಖಾಸಗಿ ವಲಯಗಳೆರಡೂ ಬಂಡವಾಳ ಹೂಡುವುದಕ್ಕೆ ಸಂಬಂಧಿಸಿದಂತೆ ಅಡ್ಡಿಯಾಗಿ ಕುಳಿತಿದೆ. ಹತ್ತಿರ ಹತ್ತಿರ ಶೇಕಡಾ 25 ರಷ್ಟು ಯೋಜನೆಗಳು ಭೂಮಿ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ನಿಂತುಹೋಗಿವೆ. ಜಿ.ಎಸ್.ಟಿ. ಯು ಬಹು ದೀರ್ಘಕಾಲ ಚರ್ಚೆಗೊಳಪಟ್ಟಿದ್ದು, ಅದಕ್ಕೆ ಸಂಬಂಧಿಸಿದ ಮಸೂದೆಯು ಅನಿಶ್ಚಿತತೆಯಲ್ಲಿದ್ದು ಪ್ರಗತಿಗೆ ಅಡ್ಡಿಯಾಗಿದೆ. ಜಿಎಸ್‌ಟಿ ಒಂದರಿಂದಲೇ ಜಿಡಿಪಿಯು ಕನಿಷ್ಠ ಪ್ರತಿಶತ 1 ರಷ್ಟು ಜಿಗಿಯುತ್ತಿತ್ತು.

* ಪ್ರಾದೇಶಿಕ ಬೇಡಿಕೆಯನ್ನೇ ಹೆಚ್ಚಾಗಿ ಅವಲಂಬಿಸಿ ಅಭಿವೃದ್ಧಿಯಾಗಬೇಕು. ಈ ಕಾರಣಕ್ಕೋಸ್ಕರ ಹೆಚ್ಚೆಚ್ಚು ಸೌಲಭ್ಯ ನೀಡುವುದಕ್ಕೆ ಹಣ ವೆಚ್ಚ ಮಾಡುವ ಮೂಲಕ ಇದಕ್ಕೆ ಪ್ರೇರಣೆ ನೀಡಬೇಕು. * ಒಂದು ಲಕ್ಷ ಕೋಟಿಗಳಿಗೂ ಹೆಚ್ಚು ಮೊತ್ತದಷ್ಟಿದ್ದು, ಸಮಾಜದಲ್ಲಿ ಸುಸ್ಥಿತಿಯಲ್ಲಿರುವವರಿಗೂ ಪ್ರಯೋಜನಕಾರಿಯಾಗಿರುವ ಚಿನ್ನ, ಸಣ್ಣ ಉಳಿತಾಯ ಯೋಜನೆಯ




ನಿರ್ವಹಣಾದರಗಳು, ಪೆನ್ಷನ್ ಮುಂತಾದವುಗಳಿಗೆ ಸಂಬಂಧಿಸಿದ ಖಚಿತ ತೆರಿಗೆ ರಿಯಾಯಿತಿಗಳನ್ನು ಹಿಂದಕ್ಕೆ ಪಡೆಯುವುದು. * ವೈಯಕ್ತಿಕ ತೆರಿಗೆ ಹೆಚ್ಚಳವಾಗಬಾರದು ಎಂಬ ಕಾರಣಕ್ಕೆ ರಿಯಾಯಿತಿಯ ಪ್ರಾರಂಭವನ್ನು ಅಡಗಿಸಿಕೊಂಡಿರುವ ತೆರಿಗೆಯ ಆಧಾರವನ್ನು ವಿಸ್ತರಿಸಬೇಕು. * ಅತಿ ಹೆಚ್ಚಿನ ಆದ್ಯತೆಯಲ್ಲಿ ವೆಚ್ಚಕ್ಕೊಳಪಡುವ ಕ್ಷೇತ್ರಗಳಾಗಿ ಶಿಕ್ಷಣ, ಆರೋಗ್ಯ ಮತ್ತು ಕೃಷಿಗಳನ್ನು ಇಟ್ಟುಕೊಳ್ಳಬೇಕು. * ರಸ ಗೊಬ್ಬರದ ರಿಯಾಯಿತಿಗೆ ಸಂಬಂಧಪಟ್ಟ ವಿಷಯವು ಮುಖ್ಯವಾಗಿ ದೊಡ್ಡ ರೈತರಿಗೆ ಪ್ರಯೋಜನವಾಗಿರುವ ಕಾರಣದಿಂದ ಪರಿವರ್ತನೆಗೊಳ್ಳಬೇಕು. * ಆರ್‌ಬಿಐ ತನ್ನ ಈಕ್ವಿಟಿ ಬಂಡವಾಳವನ್ನು ಪ್ರತಿಶತ 16ಕ್ಕೆ ಇಳಿಸಬೇಕು ಮತ್ತು ಹಣವನ್ನು ಬ್ಯಾಂಕಿಂಗ್ ಘಟಕಗಳ ಪುನರ್ ಬಂಡವಾಳಕ್ಕೆ ಬಳಸಬೇಕು. * ಉತ್ತಮ ಗುಣಮಟ್ಟದ ಉದ್ಯೋಗ ಸೃಷ್ಟಿಸಲು ಶ್ರಮಕ್ಕೆ ಸಂಬಂಧಿಸಿದ ಕಾಯಿದೆಗಳು ಸುಧಾರಣೆಗೊಳ್ಳಬೇಕು.

ದೀರ್ಘಾವಧಿಯ ಅಭಿವೃದ್ಧಿ ಒಳಸಾಮರ್ಥ್ಯವನ್ನು ಗುರಿಯಾಗುಳ್ಳ ಅಂಶವನ್ನು ಆಧರಿಸಿದ, ಮೂಲಭೂತ ಆರ್ಥಿಕ ಹಾಗೂ ಈಕ್ವಿಟಿ ನಿರ್ಧಾರಗಳಿಗೆ ಸಂಬಂಧಿಸಿದ ಅಭಿವೃದ್ಧಿ ಸಮಸ್ಯೆಗಳನ್ನು ಈ ಸಮೀಕ್ಷೆ ಅವಲೋಕಿಸಿದೆ. ಅಷ್ಟಾಗಿಯೂ, ಉನ್ನತ ಹಾಗೂ ದೃಢವೆನ್ನುವ ಬೆಳವಣಿಗೆಯುಳ್ಳ ಸಮರ್ಥ ಪರಿಸರವನ್ನು ಸೃಷ್ಟಿಸಲು ಮೇಲೆ ತಿಳಿಸಿರುವ ಕ್ರಮಗಳು ತುಂಬಾ ದೀರ್ಘಕಾಲ ಕೆಲಸ ಮಾಡಬೇಕಾಗುತ್ತದೆ. 7–7.75 ಪ್ರತಿಶತ ಬೆಳವಣಿಗೆ ಎಂದು ಸಮೀಕ್ಷೆ ಅಂದಾಜು ಮಾಡಿರುವುದು, ಈ ಕ್ರಮಗಳು ಜಾರಿಗೊಳ್ಳುವುದಿಲ್ಲ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಒಳ ಸಾಮರ್ಥ್ಯವು ಪೂರ್ಣಗೊಳ್ಳುವುದಿಲ್ಲ ಎಂಬುದರ ಆಧಾರದ ಮೇಲೆ, ಆ ಕಾರಣಕ್ಕೆ ಸಮೀಕ್ಷೆಯು ಬಹು ಎಚ್ಚರದಲ್ಲಿರಲು ಬಯಸುತ್ತದೆ ಮತ್ತು ಮತ್ತೊಮ್ಮೆ ತಪ್ಪು ಮಾಡಲು ಇಷ್ಟಪಡುವುದಿಲ್ಲ. ❑

# ರೈಲ್ವೆ ಬಜೆಟ್ 2016–17 ; ವಿಶ್ಲೇಷಣೆ

* ಶಾಂತಿ ನಾರೈನ್



ಪ್ರಯಾಣಿಕರ ಸೇವಾ ಸೌಲಭ್ಯಗಳ ಸುಧಾರಣೆಗೆ ಬಜೆಟ್‌ನಲ್ಲಿ ಪ್ರಯತ್ನಿಸಲಾಗಿದ್ದು, ಪ್ರಯಾಣ ದರವನ್ನು ಸಾಧಾರಣ ಮಟ್ಟದಲ್ಲಿ ಏರಿಸಲು ಸಮಯ ಪಕ್ವವಾಗಿತ್ತು.

ಸೃಜನಾತ್ಮಕ ಬಂಡವಾಳ ಸಂಗ್ರಹ ಕಾರ್ಯತಂತ್ರದ ಮೂಲಕ ರೈಲ್ವೆ ಮೂಲ ಸೌಕರ್ಯ ಬಲಪಡಿಸುವ ಕ್ರಾಂತಿಕಾರಿ ಹಾಗೂ ವಿನೂತನ ಪ್ರಯತ್ನಕ್ಕೆ ಕೈ ಹಾಕಿರುವ ರೈಲ್ವೆ ಸಚಿವರು ಅಭಿನಂದನಾರ್ಹರು. 2014–15ರಲ್ಲಿ 60,000 ಕೋಟಿ ರೂಪಾಯಿಗಳಷ್ಟಿದ್ದ ಬಂಡವಾಳ ಸಂಚಯನವನ್ನು 2015–16ರಲ್ಲಿ 1 ಲಕ್ಷ ಕೋಟಿ ರೂ. ಹಾಗೂ 2016–17ರ ಸಾಲಿನಲ್ಲಿ 1,21,000 ಕೋಟಿ ರೂ.ಗೆ ಅವರು ಏರಿಸಿದ್ದಾರೆ. 2020–21ರಲ್ಲಿ ಅಂತ್ಯಗೊಳ್ಳಲಿರುವ ಐದು ವರ್ಷಗಳ ಅವಧಿಯಲ್ಲಿ ಒಟ್ಟು 8.54 ಲಕ್ಷ ಕೋಟಿ ರೂ. ಹೂಡಿಕೆ ಮಾಡುವ ಸಮಗ್ರ ಯೋಜನೆಯ ಭಾಗವೂ ಇದಾಗಿದೆ. ನಿಜಕ್ಕೂ ಈ ಗುರಿಯನ್ನು ಸಾಧಿಸಿದ್ದಾದರೆ, ಹಿಂದಿನ ಐದುವರ್ಷಗಳ ಅವಧಿಯ ಹೂಡಿಕೆಯಲ್ಲಿ ಮೂರು ಪಟ್ಟು ಹೆಚ್ಚಳವಾದಂತಾಗುತ್ತದೆ. ಬಜೆಟ್‌ನಲ್ಲಿ ಕೈಗೊಳ್ಳಲಾದ ಮತ್ತೊಂದು ಪ್ರಮುಖ ಉಪಕ್ರಮವೆಂದರೆ, ಹೂಡಿಕೆ ವಿಷಯದಲ್ಲಿ ರೈಲ್ವೆ ಮಾರ್ಗಗಳ ಸಾಮರ್ಥ್ಯ ಹೆಚ್ಚಳ ಕಾರ್ಯಗಳಿಗೆ ಪ್ರಧಾನ ಆದ್ಯತೆ ನೀಡಲಾಗಿದೆ. ಯಾವುದೇ ಸಂಬಂಧ ಪಟ್ಟ ರಾಜ್ಯ ಸರ್ಕಾರ, ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ) ಸ್ಥಾಪಿಸುವ ಮೂಲಕ ಜಂಟಿ ಯೋಜನೆಯಲ್ಲಿ ತೊಡಗಿಕೊಳ್ಳದ ಹೊರತಾಗಿ, ಲಾಭದಾಯಕವಲ್ಲದ ಎಲ್ಲಾ ಕಾರ್ಯಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ. ಡಬ್ಲಿಂಗ್, ವಿಶೇಷ ಸರಕು ಸಾಗಣೆ ಕಾರಿಡಾರ್, ಬಂದರುಗಳ ಸಂಪರ್ಕ ಮತ್ತು ಇತರ ಉದ್ದೇಶಿತ ಸಾಮರ್ಥ್ಯಾವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಬಜೆಟ್ ಗಾತ್ರವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಆರು ವರ್ಷಗಳ ಹಿಂದೆ ದಿನಂಪ್ರತಿ 4.3 ಕಿ.ಮೀ.ನಷ್ಟಿದ್ದ ಸರಾಸರಿ ಕಾಮಗಾರಿ ದರವನ್ನು, ಮುಂದಿನ ಮೂರು ವರ್ಷದಲ್ಲಿ ಸುಮಾರು 13 ಕಿ.ಮೀ.ಗೆ ಏರಿಸಲು ಉದ್ದೇಶಿಸಲಾಗಿದೆ.

### ಸಕಾರಾತ್ಮಕ ಅಂಶಗಳು

ಮಾಹಿತಿ ಮತ್ತು ತಂತ್ರಜ್ಞಾನ (ಐಸಿಟಿ) ಬಳಕೆಯ ಮೂಲಕ ಟಿಕೆಟ್ ಬುಕಿಂಗ್ ಮತ್ತು ಖರೀದಿ ವಿಷಯದಲ್ಲಿ ವ್ಯವಹಾರ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಎಸ್ಕಲೇಟರ್‌ಗಳು, ಪ್ರಯಾಣಿಕರ ವಿಶ್ರಾಂತಿ ಕೊಠಡಿ, ಸರಕು–ಸಾಗಣೆ ಬಂಡಿಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ರೈಲ್ವೆ ಆಹಾರ ಪೂರೈಕೆ ವ್ಯವಸ್ಥೆಯನ್ನು ವೃತ್ತಿಪರಗೊಳಿಸಲು ಮತ್ತು ಗುಣಮಟ್ಟ, ಶುಚಿತ್ವವನ್ನು ಸುಧಾರಿಸಲು ಕೇಟರಿಂಗ್ ಸೇವೆಯನ್ನು ಹಂತ ಹಂತವಾಗಿ ಐಆರ್‌ಸಿಟಿಸಿಗೆ ವರ್ಗಾವಣೆಗೊಳಿಸಲಾಗುವುದು.

ಐಆರ್‌ಸಿಟಿಸಿ ನಿರ್ವಹಿಸುವ ಮೂಲ ಪಾಕಶಾಲೆಗಳ ಸಂಖ್ಯೆಯನ್ನು ಕ್ರಮೇಣ ಹೆಚ್ಚಿಸಲಾಗುವುದು. ಇ–ಕೇಟರಿಂಗ್ ಸೌಲಭ್ಯವು ಈ ನಿಟ್ಟಿನಲ್ಲಿ ಮತ್ತೊಂದು ಆಸಕ್ತಿಕರ ಉಪಕ್ರಮ.

ರೈಲ್ವೆ ಮೇಲ್ಸೇತುವೆ/ರೈಲ್ವೆ ಕೆಳಸೇತುವೆಗಳ (ಆರ್‌ಓಬಿ/ಆರ್‌ಯುಬಿ) ನಿರ್ಮಾಣದ ಮೂಲಕ ಮಾನವ ಸಹಿತ ಮತ್ತು ಮಾನವ ರಹಿತ ರೈಲ್ವೆ ಕ್ರಾಸಿಂಗ್‌ಗಳೇ ಇಲ್ಲದಂತೆ ಮಾಡುವುದು ಹಾಗೂ ಸಾವು ನೋವು ಇಲ್ಲದಂತೆ ಮಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರಸ್ತುತ ಸಂಭವಿಸುತ್ತಿರುವ ರೈಲ್ವೆ ಅಪಘಾತಗಳ ಪೈಕಿ ಶೇ. 40ರಷ್ಟು ಸಾವು–ನೋವುಗಳು ಲೆವೆಲ್

* ಅಂತಾರಾಷ್ಟ್ರೀಯ ಸಲಹಾಗಾರರು, ಏಶಿಯನ್ ಅಭಿವೃದ್ಧಿ ಬ್ಯಾಂಕು.

ಕ್ರಾಸಿಂಗ್ ಬಳಿ ಅವಘಡಗಳಿಂದಾಗಿಯೇ ಆಗುತ್ತಿವೆ. ರೈಲ್ವೆ ಮಂಡಳಿಯಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗೆ ವೇಗ ನೀಡಲು ಆಡಳಿತಾತ್ಮಕ ವ್ಯವಸ್ಥೆಯೊಂದನ್ನು ರಚಿಸಲಾಗಿದೆ. ಇದರಿಂದ ಪ್ರಮುಖ ನೀತಿ–ನಿರ್ಣಯ ಸಂಬಂಧಿತ ವಿಷಯಗಳು ತ್ವರಿತವಾಗಿ ಇತ್ಯರ್ಥಗೊಳಿಸಲು ಸಾಧ್ಯವಾಗಲಿದೆ. ಅಲ್ಲದೆ, ನಿಗದಿತ ಗುರಿ ತಲುಪುವ ನಿಟ್ಟಿನಲ್ಲಿ ಯೋಜನೆಗಳ ಅನುಷ್ಠಾನದ ಮೇಲೆ ನಿಗಾ ಇಡಲು ಇದರಿಂದ ನೆರವಾಗಲಿದೆ. ಏಳು ದೀಕ್ಷಾದಳಗಳನ್ನು ರಚಿಸಲಾಗಿದ್ದು, 'ನಿರ್ದೇಶಕ'ರ ನೇತೃತ್ವದಲ್ಲಿ ರಚಿಸಲಾದ ವಿಶೇಷ ಅಧಿಕಾರವುಳ್ಳ ಸಮಿತಿಯು, ಆಯಾ ದೀಕ್ಷಾದಳಗಳ ಗುರಿ ಸಾಧನೆ ಹಾಗೂ ಸ್ಥಿತಿಗತಿ ಬಗ್ಗೆ ರೈಲ್ವೆ ಮಂಡಳಿ ಅಧ್ಯಕ್ಷರಿಗೆ ನೇರವಾಗಿ ವರದಿ ನೀಡಲಿದೆ. ವಾರ್ಷಿಕ ಕಾರ್ಯನಿರ್ವಹಣೆ ಗುರಿಗಳನ್ನು ನಿಗದಿಪಡಿಸಲಾಗಿದ್ದು, ಕಾಲ ಮಿತಿಯೊಳಗೆ ಅವುಗಳನ್ನು ಸಾಧಿಸಲು 'ನಿರ್ದೇಶಕ'ರೇ ಹೊಣೆಗಾರರಾಗಿರುತ್ತಾರೆ.

ಏಳರ ಪೈಕಿ ಒಂದೆನಿಸಿರುವ ಸಾಮರ್ಥ್ಯ ಸದ್ಬಳಕೆಗೆ ಸಂಬಂಧಿಸಿದ ಆಯೋಗವು, ವಿಶೇಷ ಸರಕು ಸಾಗಣೆ ಕಾರಿಡಾರ್‌ಗಳ ಆರಂಭದ ನಂತರ ಅವುಗಳ ಸಮರ್ಥ ಬಳಕೆ ಹೇಗೆಂಬುದರ ಬಗ್ಗೆ ಒಂದು ನೀಲ ನಕ್ಷೆಯನ್ನು ಸಿದ್ಧಪಡಿಸುವ ಅಗತ್ಯವಿದೆ. ಇದು ತುಂಬಾ ಅಗತ್ಯವೂ ಹೌದು. ಏಕೆಂದರೆ, ಈಗಿನ ಸರಕು ಸಾಗಣೆ ವ್ಯಾಪ್ತಿಯನ್ನು ಗೃಹ ಬಳಕೆ ವಸ್ತುಗಳು, ವಾಹನಗಳಂತಹ ವಿಶೇಷ ಸಾಮಗ್ರಿಗಳಿಗೂ ವಿಸ್ತರಿಸಬೇಕಿದೆ. ಇದರ ಜೊತೆಗೆ, ಸರಕು ಸಾಗಣೆಯಲ್ಲಿ ರೈಲ್ವೆ ಪಾಲು ಕುಸಿಯುತ್ತಿರುವ ಪ್ರಸಕ್ತ ವಿದ್ಯಮಾನವನ್ನು ಬದಲಾಯಿಸಬೇಕಲ್ಲದೆ, ಪ್ರಗತಿ ದರ ಹೆಚ್ಚಳಕ್ಕಾಗಿ ಆಂತರಿಕ ಸಂಪನ್ಮೂಲ ಸೃಷ್ಟಿ ಮೂಲಗಳನ್ನು ಗರಿಷ್ಠೀಕರಿಸಬೇಕಿದೆ. ಹೆಚ್ಚಳಗೊಂಡ ರೈಲ್ವೆಯ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಂಡು, ಸರಕು–ಸಾಗಣೆ ವ್ಯಾಪ್ತಿಯನ್ನು ಹೊಸ ವಿಭಾಗಗಳಿಗೆ ವಿಸ್ತರಿಸಲು ಮುಂದಿನ ಕಾರ್ಯತಂತ್ರಗಳನ್ನು ಅನುಸರಿಸಬಹುದು.

ಅ) ಪ್ರಸ್ತುತ ಆಮದು–ರಫ್ತು ಸರಕುಗಳಲ್ಲಿ ಶೇ. 20ರಷ್ಟು ಮಾತ್ರ ರೈಲ್ವೆ ಮೂಲಕ ಸಾಗಣೆಯಾಗುತ್ತಿದ್ದು, ಸ್ಪರ್ಧಾತ್ಮಕ ದರಗಳ ಮೂಲಕ ಈ ಪ್ರಮಾಣವನ್ನು ಸುಮಾರು ಶೇ. 40ರಿಂದ ಶೇ. 50ಕ್ಕೆ ಏರಿಸುವುದು. ಹಡಗು ಕಂಪನಿಗಳಿಂದ ದರ ಏರಿಕೆ ಹಿನ್ನೆಲೆಯಲ್ಲಿ, ರಸ್ತೆ ಮಾರ್ಗದ ಮೂಲಕ ಹೆಚ್ಚಿನ ಸರಕು ಸಾಗಣೆ ನಡೆಯುತ್ತಿದ್ದು, ರೈಲ್ವೆ ಇಲಾಖೆಯು ಈ ಬದಲಾವಣೆಯನ್ನು ತನ್ನತ್ತ ತಿರುಗಿಸಿಕೊಳ್ಳಬೇಕಿದೆ. ಆ) ಒಂದು ರೈಲು ಲೋಡಿಗಿಂತಲೂ ಕಡಿಮೆ ಪ್ರಮಾಣದಲ್ಲಿರುವ ಪಾರ್ಸೆಲ್‌ಗಳನ್ನು ದೂರ ಪ್ರದೇಶಗಳಿಗೆ ಸಾಗಿಸಲು ಪ್ರಸ್ತುತ ರಸ್ತೆ ಮಾರ್ಗವನ್ನು ಬಳಸಲಾಗುತ್ತಿದ್ದು, ಇದರಿಂದ ದೇಶದ ಆರ್ಥಿಕತೆಗೆ ಭಾರಿ ನಷ್ಟವಾಗುತ್ತಿದೆ. ಬಹು–ಮಾದರಿ ಸಾಗಣೆ ಮಾರ್ಗ ಬಳಸುವ ಮೂಲಕ ರೈಲ್ವೆ ಇಲಾಖೆಯು ಈ ನಷ್ಟವನ್ನು ತಪ್ಪಿಸಬಹುದು. ಇ) ಸರಕುಗಳನ್ನು ಲೋಡ್ ಮಾಡಲಾದ ಟ್ರಕ್‌ಗಳನ್ನೇ ರೈಲುಗಳಲ್ಲಿ ಸಾಗಿಸುವ 'ರೋಲ್ – ಆನ್ ರೋಲ್ – ಆಫ್' ಸೇವೆ ಆರಂಭಿಸುವ ಮೂಲಕ ಹೆದ್ದಾರಿ ಮತ್ತು ನಗರ ಸಾರಿಗೆ ವ್ಯವಸ್ಥೆಗಳಲ್ಲಿನ ದಟ್ಟಣೆಯನ್ನು ತಪ್ಪಿಸಬಹುದು. ಈ) ಸರಕು ಸಾಗಣೆ ಬಳಿಕ ಖಾಲಿ ವ್ಯಾಗನ್‌ಗಳ ಓಡಾಟ ಹಾಗೂ ಇತರ ಎಲ್ಲಾ ಬಗೆಯ ವೆಚ್ಚಗಳನ್ನೂ ಸರಿದೂಗಿಸುವ ಮಾದರಿಯಲ್ಲಿ ಸ್ಪರ್ಧಾತ್ಮಕ ದರ ನಿಗದಿ ಉ) ಭಾರಿ ಸರಕುಗಳ ವಿಚಾರದಲ್ಲಿ ಸರಕು ಸಾಗಣೆ ಮಾರ್ಗವನ್ನು ರಸ್ತೆಯಿಂದ ರೈಲುಗಳತ್ತ ಸೆಳೆಯಲು ಹಾಲಿ ಗ್ರಾಹಕರಿಗೆ ಪರಿಮಾಣ 'ರಿಯಾಯಿತಿ' ಕಲ್ಪಿಸುವುದು. ಬಜೆಟ್, ಈ ಎಲ್ಲ ಸಕಾರಾತ್ಮಕ ಅಂಶಗಳನ್ನು ಒಳಗೊಂಡಿದ್ದರೂ, ಅದರಲ್ಲಿ ಒಂದು ವಲಯವನ್ನು ನಿರ್ಲಕ್ಷಿಸಲಾಗಿದೆ. ಅದೆಂದರೆ ದರ ನಿಗದಿ ವಿಧಾನದ ಪುನರ್ವ್ಯವಸ್ಥೆ. ಪ್ರಯಾಣಿಕರ ವಿಭಾಗದಲ್ಲಿ ಉಂಟಾಗುತ್ತಿರುವ ಸುಮಾರು 30,000 ಕೋಟಿ ರೂ. ನಷ್ಟವನ್ನು ಸರಕು ಸಾಗಣೆ ವಿಭಾಗದಿಂದ ಬರುವ ಆದಾಯದಿಂದಲೇ ತುಂಬಿಸಲಾಗುತ್ತಿದೆ.

ಹಲವು ದಶಕಗಳಿಂದ ಹಣದುಬ್ಬರದ ಒತ್ತಡದ ನಡುವೆಯೂ ನಗರ ಮತ್ತು ನಗರೇತರ ಪ್ರದೇಶದಲ್ಲಿ ದ್ವಿತೀಯ ದರ್ಜೆ ಪ್ರಯಾಣ ದರವನ್ನು ಏರಿಕೆ ಮಾಡದೆ ನಿರ್ಲಕ್ಷ್ಯ ತಾಳಿರುವುದರಿಂದ ರೈಲ್ವೆ ಇಲಾಖೆಗೆ ಸರಕು ಸಾಗಣೆ ದರ ಏರಿಕೆ ಹೊರತಾಗಿ ಅನ್ಯ ಮಾರ್ಗವಿಲ್ಲದಾಗಿದೆ. ಇದರಿಂದಾಗಿ, ಭಾರತದಲ್ಲಿ ರೈಲ್ವೆ ಸರಕು ಸಾಗಣೆ ದರ ಅಂತಾರಾಷ್ಟ್ರೀಯ ಮಟ್ಟಕ್ಕಿಂತ ದುಪ್ಪಟ್ಟಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಉದ್ಯಮದ ಸ್ಪರ್ಧಾತ್ಮಕತೆ ಕ್ಷೀಣಿಸಿದೆ. ಪ್ರಯಾಣಿಕರ ಸೇವಾ ಸೌಲಭ್ಯಗಳ ಸುಧಾರಣೆಗೆ ಬಜೆಟ್‌ನಲ್ಲಿ



ಪ್ರಯತ್ನಿಸಲಾಗಿದ್ದು, ಪ್ರಯಾಣ ದರವನ್ನು ಸಾಧಾರಣ ಮಟ್ಟದಲ್ಲಿ ಏರಿಸಲು ಸಮಯ ಪಕ್ವವಾಗಿತ್ತು. ಕಳೆದ ವರ್ಷದ ಬಜೆಟ್‌ನ ಪ್ರಮುಖ ಘೋಷಣೆಗಳಲ್ಲಿ 'ರೈಲ್ವೆ ನಿಯಂತ್ರಣ ಪ್ರಾಧಿಕಾರ' ರಚನೆಯೂ ಒಂದಾಗಿತ್ತು. ಆದರೆ ಅದು ಇದುವರೆಗೂ ಕಾರ್ಯಗತಗೊಂಡಿಲ್ಲ. ಇದೂ ಸಹ ದರ ಪುನರ್ವ್ಯವಸ್ಥೆಗೆ ಮತ್ತೊಂದು ಪ್ರಮುಖ ಸಾಧನವಾಗಬಲ್ಲದು. ಹೀಗಾಗಿ ಯಾವುದೇ ವಿಳಂಬಕ್ಕೆ ಅವಕಾಶ ನೀಡದೆ, ಕೂಡಲೇ ಇಂಥದ್ದೊಂದು ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಬೇಕು. ಮತ್ತೊಂದು ದೃಷ್ಟಿಕೋನದಿಂದ ನೋಡುವುದಾದರೆ, ಸಮಾಜದಲ್ಲಿ ಪ್ರತಿಕೂಲ ಸ್ಥಿತಿಯಲ್ಲಿರುವ ವರ್ಗದ ಜನರಿಗೆ ನೀಡಲಾಗುತ್ತಿರುವ ರಿಯಾಯಿತಿಗಳನ್ನು ಹಾಲಿ ಸರ್ಕಾರ ಮರು ಪರಿಶೀಲನೆ ಮಾಡುತ್ತಿದೆ. ಅಲ್ಲದೆ, ಸಬ್ಸಿಡಿಯನ್ನು ನೈಜ ಫಲಾನುಭವಿಗಳಿಗೆ ಮಾತ್ರ ತಲುಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಇದು ಸ್ವಾಗತಾರ್ಹ ನಡೆ. ರಿಯಾಯಿತಿ ಪ್ರಯಾಣ ದರ ಅಗತ್ಯವಿರುವ ಏಕೈಕ ವರ್ಗವೆಂದರೆ, ನಗರಗಳಲ್ಲಿರುವ ಸ್ವಯಂ ಉದ್ಯೋಗಿಗಳು. ಏಕೆಂದರೆ, ಬೇರೆಲ್ಲಾ ನೌಕರರು ತಮ್ಮ ಸಂಸ್ಥೆಗಳಿಂದ ಒಂದಲ್ಲಾ ಒಂದು ರೀತಿಯಲ್ಲಿ ಪ್ರಯಾಣ ದರದ ವೆಚ್ಚವನ್ನು ತುಂಬಿಕೊಳ್ಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲೂ, ರೈಲು ಸೇವೆ ತಮ್ಮ ಸಮಯಕ್ಕೆ ಹೊಂದಿಕೆಯಾಗುವುದಿಲ್ಲ ಎಂಬ ಕಾರಣಕ್ಕೆ ಜನರು ರೈಲು ಟಿಕೆಟ್ ದರಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚು ಹಣ ವ್ಯಯಿಸಿ ರಸ್ತೆ ಮಾರ್ಗವಾಗಿ ಪ್ರಯಾಣಿಸಲು ಬಯಸುತ್ತಾರೆ. ಶೈಕ್ಷಣಿಕ ಉದ್ದೇಶಕ್ಕೆ ಪ್ರಯಾಣಿಸಲು ಬಯಸುವ ವಿದ್ಯಾರ್ಥಿಗಳಿಗೆ ಹೇಗಿದ್ದರೂ ರಿಯಾಯಿತಿ ಸೌಲಭ್ಯ ಇದ್ದೇ ಇರುತ್ತದೆ.

ಅಂತಿಮವಾಗಿ, ಸರ್ಕಾರಿ–ಖಾಸಗಿ ಸಹಭಾಗಿತ್ವ ಅಥವಾ ರೈಲ್ವೆ ಭೂಮಿ ಇತ್ಯಾದಿ ಸ್ವತ್ತುಗಳ ನಗದೀಕರಣದ ಮೂಲಕ ಹೆಚ್ಚುವರಿ ಸಂಪನ್ಮೂಲ ಗಳಿಕೆ ಸಾಧ್ಯವಾಗದಿರುವುದಕ್ಕೆ ಕಾರಣಗಳನ್ನು ಆಳವಾಗಿ ವಿಶ್ಲೇಷಿಸಬೇಕು. ❑

# ಬಜೆಟ್: ಬ್ಯಾಂಕಿಂಗ್ ಕ್ಷೇತ್ರವನ್ನು ಪುನಶ್ಚೇತನಗೊಳಿಸಬಲ್ಲದೆ?

* ಎನ್‌ಆರ್ ಭಾನುಮೂರ್ತಿ
** ಮನೀಶ್ ಪ್ರಸಾದ್




ಬ್ಯಾಂಕ್‌ಗಳಿಗೆ ಬಂಡವಾಳ ಅಗತ್ಯವಾಗಿರುವುದರಿಂದ ಕೇಂದ್ರದ ಬಜೆಟ್‌ನಲ್ಲಿ 25,000 ಕೋಟಿ ಬಂಡವಾಳ ಒದಗಿಸುವುದಾಗಿ ಹೇಳಿರುವುದು ಸರಿಯಾಗಿಯೇ ಇದೆ. ಅಗತ್ಯ ಬಿದ್ದರೆ ಇನ್ನೂ ಹೆಚ್ಚು ಬಂಡವಾಳವನ್ನು ಒದಗಿಸಲಾಗುವುದು ಎಂದು ಹೇಳಿರುವುದು ಉತ್ತಮ ಬೆಳವಣಿಗೆ.

ಭಾರತ ಪ್ರಸಕ್ತ ಎದುರಿಸುತ್ತಿರುವ ಎರಡು ಪ್ರಮುಖ ಅಪಾಯಗಳನ್ನು ಆರ್ಥಿಕ ಸಮೀಕ್ಷೆ ಎತ್ತಿ ತೋರಿಸಿದೆ. ಮೊದಲನೆಯದು, ಬ್ಯಾಂಕಿಂಗ್ ವಲಯದಲ್ಲಿ ಅದರಲ್ಲೂ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಮತ್ತು ಎರಡನೆಯದು ಕಾರ್ಪೊರೇಟ್ ವಲಯದಲ್ಲಿ ಹಣಕಾಸಿನ ಪರಿಸ್ಥಿತಿ ದುರ್ಬಲವಾಗಿರುವುದು. ಈ ಎರಡೂ ವಲಯಗಳು ಕೆಲ ಮಟ್ಟಿಗೆ ಒಂದಕ್ಕೊಂದು ಹೆಣೆದುಕೊಂಡಿದ್ದು, ಈ ಎರಡು ಅಪಾಯಗಳಿಗೆ ಸೂಕ್ತವಾದ ಪರಿಹಾರವನ್ನು ಕೇಂದ್ರದ 2016–17 ನೇ ಸಾಲಿನ ಬಜೆಟ್ ಕಂಡುಕೊಳ್ಳಲಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆಯಂತೆ ಬ್ಯಾಂಕಿಂಗ್ ವಲಯವನ್ನು ಪುನಶ್ಚೇತನಗೊಳಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದು, ಅವುಗಳಲ್ಲಿ ಕೆಲವು ನೇರವಾದ ಕ್ರಮಗಳು ಮತ್ತೆ ಕೆಲವು ಪರೋಕ್ಷವಾದ ಕ್ರಮಗಳಾಗಿವೆ.

### ಸಮಸ್ಯೆ

ಜಾಗತಿಕ ಹಣಕಾಸು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇತರೆ ದೇಶಗಳಂತೆ ಭಾರತವೂ ಹಣಕಾಸಿನ ಉತ್ತೇಜನ ಕ್ರಮಗಳನ್ನು ತೆಗೆದುಕೊಂಡಿತು. ಈ ಕ್ರಮಗಳು ದೇಶದ ಆರ್ಥಿಕ ಪರಿಸ್ಥಿತಿ ಮೊದಲಿನ ಸ್ಥಿತಿಗೆ ಮರಳಲು ಸಹಾಯವಾದರೂ, ಬುದ್ಧಿವಂತಿಕೆಯಿಂದ ಕೂಡಿರದ ಈ ಉತ್ತೇಜನದಿಂದ ದೇಶ ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನು ಎದುರಿಸುವಂತಾಯಿತು.

ಆರ್ಥಿಕ ಕ್ಷೇತ್ರದಲ್ಲಿ ಬ್ಯಾಂಕಿಂಗ್ ವಲಯ ಬಹು ಮುಖ್ಯವಾದ ಆಧಾರ ಸ್ತಂಭ ಮತ್ತು ಹಣಕಾಸಿನ ವಲಯ ಮತ್ತು ಆಸ್ತಿ ವಲಯಗಳ ನಡುವೆ ಸಂಪರ್ಕದ ಕೊಂಡಿ ಇದ್ದ ಹಾಗೆ. ಆಸ್ತಿ ವಲಯದ ಅಸ್ಥಿರತೆ ಬ್ಯಾಂಕಿಂಗ್ ವಲಯದ ಮೇಲೆ ಪರಿಣಾಮ ಬೀರಿದೆ. ಈ ಪರಿಣಾಮ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಸಾಲ ಎತ್ತಿದ್ದರಿಂದ ವಿತ್ತೀಯ ಕೊರತೆ ಹೆಚ್ಚಿತು ಮತ್ತು ಹೆಚ್ಚಿನ ಬಡ್ಡಿ ದರದಿಂದ ಕಾರ್ಪೊರೇಟ್ ವಲಯದ ಲಾಭಗಳಿಕೆಯ ಪ್ರಮಾಣ ಕಡಿಮೆಯಾಯಿತು. ಈ ಬೆಳವಣಿಗೆಯಿಂದ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಲಾಭ ಗಳಿಸುವ ಸಾಮರ್ಥ್ಯ ಗಣನೀಯವಾಗಿ ಕಡಿಮೆಯಾಯಿತು. ಬ್ಯಾಂಕ್‌ಗಳ ಲಾಭಗಳಿಸುವ ಸಾಮರ್ಥ್ಯವನ್ನು ರಿಜರ್ವ್ ಬ್ಯಾಂಕ್ ಶೇಕಡಾ 4.5 ಎಂದು ಗುರುತಿಸಿದ್ದರೂ ಬೇಸೆಲ್–3 ರ ಪ್ರಕಾರ ಲಾಭಗಳಿಸುವ ಸಾಮರ್ಥ್ಯ ಶೇಕಡಾ 3 ರಷ್ಟು ಕಡ್ಡಾಯವಾಗಿರಲೇ ಬೇಕಾದರೆ ಅನೇಕ ಬ್ಯಾಂಕ್‌ಗಳು ತಮ್ಮ ಲಾಭಗಳಿಸುವ ಸಾಮರ್ಥ್ಯವನ್ನು ರಿಜರ್ವ ಬ್ಯಾಂಕ್‌ನ ಗುರಿಗಿಂತ ಕಡಿಮೆ ಪ್ರಮಾಣದಲ್ಲಿ ಸಾಧಿಸಿದವು.

ನಿರೀಕ್ಷೆಯಂತೆ ಬ್ಯಾಂಕ್‌ಗಳ ಈ ಕಾರ್ಯಕ್ಷಮತೆಯು ಅವುಗಳ ದುಡಿಯದ ಆಸ್ತಿಯ (ಎನ್‌ಪಿಎ) ಪ್ರಮಾಣವು ಹೆಚ್ಚಾಗುವಂತೆ ಮಾಡಿತು.

ಗ್ರಾಫ್ 1ರಲ್ಲಿ ತೋರಿಸಿರುವಂತೆ ಖಾಸಗಿ ಮತ್ತು ಸರ್ಕಾರಿ ವಲಯದ ಬ್ಯಾಂಕ್‌ಗಳ ದುಡಿಯದ ಆಸ್ತಿಯ ಪ್ರಮಾಣ ಸಂಕಷ್ಟಕ್ಕಿಂತ ಮೊದಲು ಮತ್ತು ನಂತರ ಇಲ್ಲಿಯವರೆಗೆ ಹೇಗೆ ಬೆಳೆಯಿತು ಎಂಬುದನ್ನು ತೋರಿಸುತ್ತದೆ. 2016–17 ನೇ ಸಾಲಿನ ಮೂರನೇ ತ್ರೈಮಾಸಿಕದಲ್ಲಿ 11 ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ದೀರ್ಘ ಕಾಲದ ನಂತರ ನಷ್ಟವನ್ನು ತೋರಿಸುತ್ತಿವೆ. ಈ ಬೆಳವಣಿಗೆ ಅವುಗಳ ಬಂಡವಾಳ ಹೂಡುವಿಕೆಯನ್ನು

* ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿ ಸಂಸ್ಥೆ, ನವದೆಹಲಿ. E-mail : nrbmurthy@gmail.com / manishprasad2@yahoo.com

ಸೀಮಿತಗೊಳಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆಯ ಪುನಶ್ಚೇತನದ ಬಗ್ಗೆ ಬೆಳಕು ಚೆಲ್ಲುತ್ತದೆ. ಈ ರೀತಿಯ ಬೆಳವಣಿಗೆಯನ್ನು ಒಟ್ಟು ಎನ್‌ಪಿಎಗಳಲ್ಲಿ, ಪುನರ್‌ರೂಪಿಸಿದ ಆಸ್ತಿಗಳಲ್ಲಿ ಮತ್ತು ಸಾಲ ಮಾಫಿ ಮಾಡಿದ ಪ್ರಕರಣಗಳಲ್ಲಿ ನೋಡಬಹುದು. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಒಟ್ಟು ಎನ್‌ಪಿಎ ಮೊತ್ತ, ಈಗಾಗಲೇ ಪುನರ್‌ರೂಪಿಸಿದ ಆಸ್ತಿಗಳ ಮತ್ತು ಮಾಫಿ ಮಾಡಿದ ಸಾಲಗಳ ಒಟ್ಟು ಮೊತ್ತ, ಒಟ್ಟು ಸಾಲ ವಿತರಣೆಯ ಮೊತ್ತ ಖಾಸಗಿ ಬ್ಯಾಂಕ್‌ಗಳ ಮೊತ್ತ ಶೇಕಡಾ 6.7ಕ್ಕೆ ಹೋಲಿಸಿದಲ್ಲಿ ಶೇಕಡಾ 17 ಕ್ಕೆ ಏರಿದೆ. (ಟೇಬಲ್–1 ನ್ನು ನೋಡಬಹುದು).

ಯಾವ ವಲಯದಲ್ಲಿ ಎನ್‌ಪಿಎ ಹೆಚ್ಚಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಟೇಬಲ್ –2 ರಲ್ಲಿ ಕಂಡು ಬರುವಂತೆ, ಸಾಮಾನ್ಯ ಅಭಿಪ್ರಾಯಕ್ಕೆ ಹೊರತಾಗಿ ಬ್ಯಾಂಕ್‌ಗಳ ಎನ್‌ಪಿಎಗೆ ಕೃಷಿ ಕ್ಷೇತ್ರದ ಕೊಡುಗೆ ತೀರಾ ಕಡಿಮೆಯಾಗಿದ್ದು, ನಿಧಾನಗತಿಯ ಆರ್ಥಿಕಾಭಿವೃದ್ಧಿಯ ವೇಳೆಯಲ್ಲೂ ಆ ಕ್ಷೇತ್ರದ ಕೊಡುಗೆ ಕಡಿಮೆಯಾಗಿದೆ.


ಕಳೆದ ಎರಡು ವರ್ಷಗಳಲ್ಲಿ ದೇಶ ಅನುಭವಿಸಿದ ಬರಗಾಲದ ಪರಿಸ್ಥಿತಿಯ ನಂತರ 2015–16 ರ ನೇ ಸಾಲಿನಲ್ಲಿ ಕೃಷಿ ಕ್ಷೇತ್ರಕ್ಕೆ ನೀಡಿದ ಸಾಲದ ಪ್ರಮಾಣದಲ್ಲಿ ಹೆಚ್ಚಳವಾಗಿದ್ದರೂ ಈ ಕ್ಷೇತ್ರದ ಎನ್‌ಪಿಎ ಹೆಚ್ಚಳವಾಗಿಲ್ಲ. ಆದರೆ ಕೈಗಾರಿಕಾ ಕ್ಷೇತ್ರ ಅದರಲ್ಲೂ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ವಲಯದಲ್ಲಿ ಎನ್‌ಪಿಎ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ. ಕೈಗಾರಿಕಾ ವಲಯದಲ್ಲಿ ಬೆಳವಣಿಗೆ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಈ ಹೆಚ್ಚಳ ಆಗಿದೆ ಎಂದು ಹೇಳಬಹುದು.

### ಪರಿಣಾಮ

ಒಟ್ಟಾರೆ ಆರ್ಥಿಕತೆ ಬ್ಯಾಂಕ್‌ಗಳ ಎನ್‌ಪಿಎ ಪರಿಣಾಮವೇನು? ಈ ಪರಿಣಾಮವನ್ನು ಸಾಲ ವಿತರಣೆಯ ಮತ್ತು ಬಡ್ಡಿದರ ಹೀಗೆ ಎರಡು ಪ್ರತ್ಯೇಕ ಆಯಾಮಗಳಲ್ಲಿ ನೋಡಬೇಕಾಗುತ್ತದೆ. ಇತ್ತೀಚೆಗೆ, ಕಚ್ಚಾತೈಲದ ಬೆಲೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗಣನೀಯವಾಗಿ ಕುಸಿದಿರುವ ಹಿನ್ನೆಲೆಯಲ್ಲಿ ಹಣದುಬ್ಬರ ಕಡಿಮೆಯಾಗುತ್ತದೆ ಎಂಬ ಆಶಾಭಾವನೆಯ ಹಿನ್ನೆಲೆಯಲ್ಲಿ ಹಣದುಬ್ಬರ ಶೇಕಡಾ 5.6 ಕ್ಕೆ ಕುಸಿದಿದೆ. ಈ ಕುಸಿತ ಬಡ್ಡಿದರದಲ್ಲೂ ಕುಸಿತಕ್ಕೆ ಕಾರಣವಾಗುತ್ತದೆ ಎಂಬ ನಿರೀಕ್ಷೆಯನ್ನು ಹುಟ್ಟಿಸಿದೆ.

2014 ರ ಡಿಸೆಂಬರ್‌ನಿಂದ ಇಲ್ಲಿಯವರೆಗೆ ಭಾರತೀಯ ರಿಜರ್ವ್ ಬ್ಯಾಂಕ್ 125 ಬೇಸಿಸ್ ಪಾಯಿಂಟ್‌ಗಳಷ್ಟು ರೆಪೊ ದರವನ್ನು ಕಡಿಮೆ ಮಾಡಿದೆ. ಆದರೂ ಖಾಸಗಿ ಮತ್ತು ಸರ್ಕಾರಿ ಬ್ಯಾಂಕ್‌ಗಳು ಬಡ್ಡಿ ದರವನ್ನು ಕೇವಲ 40 ಬೇಸಿಸ್ ಪಾಯಿಂಟ್ ಇಳಿಸಿವೆ. ಠೇವಣಿ ಸಂಗ್ರಹಣೆ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಾಗಿರುವುದರಿಂದ ಠೇವಣಿ ಮೇಲಿನ ಬಡ್ಡಿದರವನ್ನು ಇಳಿಸಲು ಹೆಚ್ಚಿನ ಅವಕಾಶವಿಲ್ಲವೆಂದು ಬ್ಯಾಂಕ್‌ಗಳು ಹೇಳುತ್ತಿವೆ. ಅಂದರೆ ಬಂಡವಾಳ ಹೂಡಿಕೆಗೆ ಹೆಚ್ಚಿನ ಹಣ ದೊರೆಯುವುದು ಕಷ್ಟವಾಗುತ್ತಿದೆ ಎಂಬುದು ಮೇಲು ನೋಟಕ್ಕೆ ಅರಿವಾಗುತ್ತದೆ. ಆದ್ದರಿಂದ ರೆಪೊ ದರವನ್ನು ಕಡಿಮೆಮಾಡುವುದರಿಂದಲೇ ಬಂಡವಾಳ ಹೂಡುವಿಕೆಗೆ ಉತ್ತೇಜನ ದೊರೆಯುತ್ತದೆ ಎಂದು ಹೇಳಲಿಕ್ಕಾಗದು. ಪ್ರಸಕ್ತ ಬ್ಯಾಂಕ್‌ಗಳಿಗೆ ತಮ್ಮ ಬ್ಯಾಲೆನ್ಸ್ ಷೀಟ್‌ಗಳನ್ನು ಸರಿಹೊಂದಿಸುವುದಕ್ಕೆ ನಗದು ಹಣದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ರಿಜರ್ವ್ ಬ್ಯಾಂಕ್ ರೆಪೊ ದರವನ್ನು

ಗ್ರಾಫ್ – 1 : ಒಟ್ಟು ಎನ್‌ಎಪಿ – ಒಟ್ಟು ಮುಂಗಡ




ಇನ್ನಷ್ಟು ಕಡಿಮೆ ಮಾಡಲು ಹಿಂದುಮುಂದು ನೋಡುತ್ತದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ತನ್ನ ಇತ್ತೀಚಿನ ವರದಿಯಲ್ಲಿ, ಭಾರತದ ಬ್ಯಾಂಕ್‌ಗಳ ಎನ್‌ಪಿಎ ಗಣನೀಯವಾಗಿ ಹೆಚ್ಚಿರುವುದಕ್ಕೆ ಕಳವಳ ವ್ಯಕ್ತಪಡಿಸಿ, ಇದರಿಂದ ದೇಶದ ಹಣಕಾಸು ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಎಂದಿದೆ. ಅದು ತನ್ನ ವರದಿಯಲ್ಲಿ ಭಾರತಕ್ಕೆ ಬಾಹ್ಯ ಅಂದರೆ ಅಂತಾರಾಷ್ಟ್ರೀಯ ಏರುಪೇರುಗಳ ಹೊಡೆತ ಕಡಿಮೆಯಾಗಿ ದೇಶದೊಳಗೆ ಹಣದುಬ್ಬರ ನಿರೀಕ್ಷೆಗಿಂತ ಹೆಚ್ಚು ವೇಗದಲ್ಲಿ ಕಡಿಮೆಯಾಗಿದ್ದರೂ, ಹಣದುಬ್ಬರ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಮತ್ತು ದೊಡ್ಡ ಪ್ರಮಾಣದ ವಿತ್ತೀಯ ಕೊರತೆ ದೇಶದ ಆರ್ಥಿಕ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿದೆ ಎಂದು ಹೇಳಿದೆ. ಹಣದುಬ್ಬರವನ್ನು ಸಹನೀಯ ಮಟ್ಟಕ್ಕೆ ಇಳಿಸಲು ಹಣಕಾಸು ನೀತಿಯನ್ನು ಬಿಗಿಗೊಳಿಸಬೇಕಿದೆ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆ ಮಾಡಿ ಒಂದೇ ಮಟ್ಟದಲ್ಲಿರುವಂತೆ ನೋಡಿಕೊಳ್ಳುವುದನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ಸಬ್ಸಿಡಿಗಳನ್ನು ಕಡಿಮೆ ಮಾಡಿ ಸಮಗ್ರವಾದ ತೆರಿಗೆ ಸುಧಾರಣೆಯನ್ನು ಜಾರಿಗೆ ತರಬೇಕಾಗಿದೆ. ಬ್ಯಾಂಕ್‌ಗಳ ಆಸ್ತಿಗಳ ಗುಣಮಟ್ಟವನ್ನು ಸುಧಾರಿಸದಿದ್ದರೆ ಮತ್ತು ಕಾರ್ಪೊರೆಟ್ ವಲಯದ ಹಣಕಾಸಿನ ಸಮಸ್ಯೆಯನ್ನು ಬಗೆಹರಿಸದಿದ್ದರೆ ಆರ್ಥಿಕ ವ್ಯವಸ್ಥೆ ಹಳ್ಳಹಿಡಿಯುತ್ತದೆ ಎಂದು ಐಎಂಎಫ್ ವರದಿಯಲ್ಲಿ ಹೇಳಲಾಗಿದೆ.

### ಕೇಂದ್ರ ಬಜೆಟ್ ಏನು ಮಾಡಿದೆ?

ಬ್ಯಾಂಕ್‌ಗಳಿಗೆ ಬಂಡವಾಳ ಅಗತ್ಯವಾಗಿರುವುದರಿಂದ ಕೇಂದ್ರದ ಬಜೆಟ್‌ನಲ್ಲಿ 25,000 ಕೋಟಿ ಬಂಡವಾಳ ಒದಗಿಸುವುದಾಗಿ ಹೇಳಿರುವುದು ಸರಿಯಾಗಿಯೇ ಇದೆ. ಅಗತ್ಯ ಬಿದ್ದರೆ ಇನ್ನು ಹೆಚ್ಚು ಬಂಡವಾಳವನ್ನು ಒದಗಿಸಲಾಗುವುದು ಎಂದು ಹೇಳಿರುವುದು ಉತ್ತಮ ಬೆಳವಣಿಗೆ. ಈ ಘೋಷಣೆ ಬ್ಯಾಂಕ್‌ಗಳ ನೆರವಿನ ನೇರ

**ಟೇಬಲ್–1 : ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳ ಆಸ್ತಿಗಳ ಗುಣಮಟ್ಟದ ಮಾದರಿ**

| | ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು | | | | ಖಾಸಗಿ ಬ್ಯಾಂಕ್‌ಗಳು | | | |
|---|---|---|---|---|---|---|---|---|
| | ಮಾರ್ಚ್ 13 | ಮಾರ್ಚ್ 14 | ಮಾರ್ಚ್ 15 | ಸೆಪ್ಟೆಂಬರ್ 15 | ಮಾರ್ಚ್ 13 | ಮಾರ್ಚ್ 14 | ಮಾರ್ಚ್ 15 | ಸೆಪ್ಟೆಂಬರ್ 15 |
| ಒಟ್ಟು ಎನ್‌ಪಿಎ (%) | 2.0 | 2.7 | 3.2 | 3.6 | 0.5 | 0.7 | 0.9 | 0.9 |
| ಪುನರ್‌ರೂಪಿತ ಆಸ್ತಿ, (%) | 7.2 | 7.2 | 8.1 | 7.9 | 1.9 | 2.3 | 2.4 | 2.4 |
| ಒಟ್ಟು ಪುನರ್‌ರೂಪಿತ ಆಸ್ತಿಗಳು (%) | 11.0 | 11.9 | 13.5 | 14.0 | 3.8 | 4.2 | 4.6 | 4.6 |
| ಒಟ್ಟು ಪುನರ್‌ರೂಪಿತ + ಮಾಫಿ ಮಾಡಿದ ಆಸ್ತಿಗಳು(%) | 13.4 | 14.1 | 16.1 | 17.0 | 5.4 | 6.4 | 6.7 | 6.7 |

| ಟೇಬಲ್–2 : ಅನೃತ ಸಂಪತ್ತಿಗೆ ವಿವಿಧ ಕ್ಷೇತ್ರಗಳ ಕೊಡುಗೆ | | | | |
|---|---|---|---|---|
| | ಎಲ್ಲ ಬ್ಯಾಂಕ್‌ಗಳು (ಒಟ್ಟು+ಪುನರ್‌ರೂಪಿಸಿದ+ಮಾಫಿ ಮಾಡಿದ ಆಸ್ತಿಗಳು (%)) | | | |
| | ಮಾರ್ಚ್ 13 | ಮಾರ್ಚ್ 14 | ಮಾರ್ಚ್ 15 | ಸೆಪ್ಟೆಂಬರ್ 15 |
| ಕೃಷಿ | 8.2 | 7.4 | 7.5 | 7.9 |
| ಕೈಗಾರಿಕೆ (ಅತಿಸಣ್ಣ) | 10.2 | 10.0 | 10.5 | 12.3 |
| ಕೈಗಾರಿಕೆ (ಸಣ್ಣ) | 13.2 | 13.3 | 14.8 | 16.8 |
| ಕೈಗಾರಿಕೆ (ಮಧ್ಯಮ) | 20.2 | 23.6 | 27.0 | 31.5 |
| ಕೈಗಾರಿಕೆ (ದೊಡ್ಡ) | 16.3 | 19.0 | 23.0 | 23.7 |

ಕ್ರಮಗಳಾದರೆ, ಪರೋಕ್ಷವಾದ ಕ್ರಮಗಳು ಬ್ಯಾಂಕ್‌ಗಳ ಮೇಲೆ ಪರಿಣಾಮ ಬೀರುತ್ತವೆ. ಆ ಕ್ರಮಗಳು ಈ ರೀತಿ ಇವೆ.

* ಹಣಕಾಸು ಸಂಸ್ಥೆಗಳ ಸಮಸ್ಯೆಗಳನ್ನು ಬಗೆಹರಿಸಲು ಸಮಗ್ರವಾದ ಹಣಕಾಸು ನಿಯಮಗಳನ್ನು ಅಳವಡಿಸುವುದು. * ಏಆರ್‌ಸಿ ಪ್ರಾಯೋಜಕರು ಶೇಕಡಾ 100 ರಷ್ಟು ಪಾಲು ಹೊಂದಲು ಸಹಾಯಕವಾಗುವಂತೆ 2002 ರ ಎಆರ್‌ಎಫ್‌ಎಇಎಸ್‌ಐ ಕಾನೂನಿಗೆ ತಿದ್ದುಪಡಿ ತರುವುದು ಮತ್ತು ಸಾಂಘಿಕೇತರ ವ್ಯಕ್ತಿಗಳು ಎಆರ್‌ಸಿಯ ಅಡಮಾನ ಇಟ್ಟಿರುವ ರಸೀತಿಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು. * ಸಾಲ ವಸೂಲಿ ಟ್ರೈಬುನಲ್ ಕಾನೂನುಗಳಿಗೆ ತಿದ್ದುಪಡಿ ತಂದು ಅವು ಆನ್‌ಲೈನ್‌ನಲ್ಲಿ ವ್ಯವಹಾರ ನಡೆಸುವಂತೆ ಮಾಡುವುದು. * ಅಕ್ರಮವಾಗಿ ಠೇವಣಿ ಸಂಗ್ರಹಿಸುವ ಹಾವಳಿಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಸಮಗ್ರವಾದ ಕಾನೂನು ಜಾರಿಗೊಳಿಸುವುದು. * ಸೆಕ್ಯುರಿಟಿ ಮೇಲ್ಮನವಿ ಪ್ರಾಧಿಕಾರದ ಸದಸ್ಯರು ಮತ್ತು ಪೀಠಗಳ ಸಂಖ್ಯೆಯನ್ನು ಹೆಚ್ಚಿಸುವುದು. * ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿ ಅನುಮೋದಿತ ಮೊತ್ತವನ್ನು ರೂ. 1,80,000 ಕೋಟಿಗೆ ಹೆಚ್ಚಿಸುವುದು.

ಈ ಕ್ರಮಗಳಿಂದ ಅಗತ್ಯವಾಗಿ ಬಂಡವಾಳ ಬೇಕಾಗಿರುವ ವಲಯಗಳಿಗೆ ಸಾಲ ಸೌಲಭ್ಯದ ಹರಿವು ಹೆಚ್ಚಾಗಿ ಅವು ಎದುರಿಸುತ್ತಿರುವ ತೊಡಕುಗಳು ನಿವಾರಣೆಯಾಗುತ್ತದೆ. ಈ ಕ್ರಮದಿಂದ ಸರ್ಕಾರಿ ವಲಯದ ಉದ್ಯಮಗಳ ತೊಂದರೆ ತಾಪತ್ರಯಗಳು ನಿವಾರಣೆಯಾಗುತ್ತವೆಯೇ?

ನಮ್ಮ ಅಭಿಪ್ರಾಯದ ಪ್ರಕಾರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಆರೋಗ್ಯ ಸುಧಾರಿಸಿ ಸರಿದಾರಿಯಲ್ಲಿ ಸಾಗಬೇಕಾದರೆ ಈ ಕ್ರಮಗಳ ಜೊತೆಗೆ ಇನ್ನೂ ಅನೇಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಅವುಗಳ ಆಡಳಿತದ ಸುಧಾರಣೆಗೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಈ ನಿಟ್ಟಿನಲ್ಲಿ ಜೆ.ಪಿ.ನಾಯಕ್ ಸಮಿತಿಯ ಶಿಫಾರಸ್ಸುಗಳಿದ್ದು ಅವುಗಳನ್ನು ತೀವ್ರವಾಗಿ ಪರಿಗಣಿಸಿ ಜಾರಿಗೆ ತರಬೇಕು.

ಈ ಕ್ರಮಗಳ ಜೊತೆಗೆ ಆಸ್ತಿಗಳ ಪುನರ್ ನಿರ್ಮಾಣ ಕಂಪನಿಗಳು ಮತ್ತು ಅವುಗಳ ನಿಯಂತ್ರಣಗಳು ಅಗತ್ಯವೇ ಎಂಬುದರ ಬಗ್ಗೆ ಸರ್ಕಾರ ಪುನರಾಲೋಚಿಸಬೇಕು. ಸಾಲದ ಸುಳಿಯಲ್ಲಿ ಸಿಕ್ಕಿರುವ ಆಸ್ತಿಗಳನ್ನು ಸರಿಯಾದ ಸಮಯದಲ್ಲಿ ಸರಿಯಾದ ಬೆಲೆಗೆ ಮಾರಾಟ ಮಾಡಲು ಅನುಕೂಲವಾಗುವಂತೆ ರಾಷ್ಟ್ರೀಯ ಆಸ್ತಿ ನಿರ್ವಹಣಾ ಕಂಪನಿ (ಎನ್‌ಎಎಂಸಿಐ) ರಚಿಸಲು ಈಗ ಸಕಾಲವಾಗಿದೆ. ಇದರ ಜೊತೆಗೆ ಬ್ಯಾಂಕ್‌ಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅರ್ಥ ಮಾಡಿಕೊಂಡು ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳಲು ಸರ್ಕಾರ ಮತ್ತು ಆರ್‌ಬಿಐ ಗಳು ಬ್ಯಾಂಕ್‌ಗಳ ಜ್ಞಾನ ಸಂಘಂ ಜೊತೆ ಚರ್ಚೆ ನಡೆಸುತ್ತಿದೆ. 2016–17 ನೇ ಸಾಲಿನ ಬಜೆಟ್ ಮಂಡನೆಯಾದ ತಕ್ಷಣ ಜ್ಞಾನ ಸಂಘಂನ ಸಭೆ ನಡೆದು ಅದರಲ್ಲಿ ಬ್ಯಾಂಕ್‌ಗಳನ್ನು ಸದೃಢಗೊಳಿಸುವುದು ಮತ್ತು ಸಾಲಗಳನ್ನು ಹೇಗೆ ವಸೂಲಿ ಮಾಡಬೇಕು ಎಂಬುದರ ಬಗ್ಗೆ ನೀಡಿರುವ ಸಲಹೆಗಳನ್ನು ಚರ್ಚಿಸಲಾಯಿತು. ಬ್ಯಾಂಕ್‌ಗಳು ಎದುರಿಸುತ್ತಿರವ ಸಮಸ್ಯೆಗಳನ್ನು ಬಗೆಹರಿಸಲು ಕೆಲವು ನೇರವಾದ ಕ್ರಮಗಳನ್ನು ಬಜೆಟ್‌ನಲ್ಲಿ ನಮೂದಿಸಿರುವುದರ ಜೊತೆಗೆ, ಈಗಾಗಲೇ ಈ ನಿಟ್ಟಿನಲ್ಲಿ ಬಂದಿರುವ ಅನೇಕ ಸಲಹೆಗಳನ್ನು ಜಾರಿಗೆ ತರುವುದರ ಬಗ್ಗೆ ಸ್ಪಷ್ಟೀಕರಣಗಳನ್ನು ನೀಡುವುದರಿಂದ ಆದಷ್ಟು ಬೇಗ ಎನ್‌ಪಿಎ ಸಮಸ್ಯೆಯಿಂದ ಹೊರಬರಲು ಸಹಾಯವಾಗುತ್ತದೆ. ಬಂಡವಾಳ ಹೂಡುವಿಕೆಯ ಪ್ರಕ್ರಿಯೆ ಪುನರಾಂಭವಾಗಬೇಕಾದರೆ ಬ್ಯಾಂಕ್‌ಗಳ ಬ್ಯಾಲೆನ್ಸ್ ಶೀಟ್ ಬಲಿಷ್ಟವಾಗಿರಬೇಕಾಗಿದೆ. ❑

**ಬ್ಯಾಂಕ್‌ಗಳ ಆಡಳಿತ ಮಂಡಳಿಗಳ ಕಾರ್ಯ ವೈಖರಿಯನ್ನು ಪುನರೂಪಿಸಲು ನಾಯಕ್ ಸಮಿತಿ ನೀಡಿರುವ ಕೆಲವು ಶಿಫಾರಸ್ಸುಗಳು.**

* ಬ್ಯಾಂಕ್‌ಗಳ ರಾಷ್ಟ್ರೀಕರಣ ಕಾನೂನು 1970 ಮತ್ತು 1980, ಎಸ್‌ಬಿಐ ಕಾನೂನು ಮತ್ತು ಎಸ್‌ಬಿಐ (ಅಧೀನ ಬ್ಯಾಂಕ್‌ಗಳು) ಕಾನೂನುಗಳನ್ನು ರದ್ದು ಮಾಡಬೇಕು.
* ಎಲ್ಲ ಬ್ಯಾಂಕ್‌ಗಳನ್ನು ಕಂಪನಿ ಕಾನೂನಿನಡಿಯಲ್ಲಿ ಸೇರಿಸಬೇಕು ಮತ್ತು ಸರ್ಕಾರ ಬ್ಯಾಂಕ್‌ಗಳಲ್ಲಿರುವ ತನ್ನ ಬಂಡವಾಳವನ್ನು ವರ್ಗಾಯಿಸಲು ಬ್ಯಾಂಕ್ ಬಂಡವಾಳ ಹೂಡಿಕೆ ಕಂಪನಿ (ಬಿಐಸಿ) ಸ್ಥಾಪಿಸಬೇಕು.
* ಬ್ಯಾಂಕ್ ಆಡಳಿತ ಮಂಡಳಿಗಳ ಬ್ಯೂರೊ (ಬಿಬಿಬಿ)ಗೆ ಮೂರು ಹಂತದಲ್ಲಿ ಪೂರ್ಣಾವಧಿಯ ನಿರ್ದೇಶಕರನ್ನು ನೇಮಿಸಬೇಕು.
* ಬ್ಯಾಂಕ್‌ನಲ್ಲಿ ಸರ್ಕಾರ ತನ್ನ ಹೂಡಿಕೆಯ ಪಾಲನ್ನು ಶೇಕಡಾ 50ಕ್ಕಿಂತ ಕಡಿಮೆ ಮಾಡಿಕೊಳ್ಳಬೇಕು.
* ಬ್ಯಾಂಕ್‌ಗಳ ಮೇಲ್ಮಟ್ಟದ ಆಡಳಿತದಲ್ಲಿ ಯುವಕರನ್ನು ತರಲು ಅನುವಾಗುವಂತೆ ಮಾನವಸಂಪನ್ಮೂಲ ನೀತಿಯನ್ನು ತರಬೇಕು.
* ಕಾರ್ಯತಂತ್ರಗಳಿಗೆ ಹೆಚ್ಚಿನ ಗಮನಕೊಡಲು ಅನುವಾಗುವಂತೆ ಆಡಳಿತ ಮಂಡಳಿಯ ಸಭೆಗಳ ನಡಾವಳಿಗಳನ್ನು ಉನ್ನತಮಟ್ಟಕ್ಕೆ ಏರಿಸಬೇಕು.
* ಅಭಿವೃದ್ಧಿ ಗುರಿಗೆ ಸಂಬಂಧಿಸಿದಂತೆ ಸರ್ಕಾರಿ ಬ್ಯಾಂಕ್‌ಗಳಿಗೆ ಸೂಚನೆಗಳನ್ನು ನೀಡುವುದನ್ನು ನಿಲ್ಲಿಸಬೇಕು.
* ಸರ್ಕಾರಿ ಬ್ಯಾಂಕ್‌ಗಳಿಗೆ ಮಾತ್ರ ಅನ್ವಯವಾಗುವಂತೆ ಸರ್ಕಾರ ನಿಯಂತ್ರಣ ಸೂಚನೆ ನೀಡುವುದನ್ನು ನಿಲ್ಲಿಸಬೇಕು.

# ಮೂಲಸೌಕರ್ಯ ಮತ್ತು ವಿದ್ಯುದೀಕರಣ

* ಹಿರಣ್ಮಯ್ ರಾಯ್
** ಅನಿಲ್ ಕುಮಾರ್
*** ಪ್ರಸೂಮ್ ದ್ವಿವೇದಿ



**ಬಜೆಟ್ ಅನ್ನು ವಿಶ್ಲೇಷಿಸಿ ಹೇಳುವುದಾದರೆ ಸರ್ಕಾರ, ಸಾರ್ವಜನಿಕರ ಹಣವನ್ನು ದೀರ್ಘಾವಧಿಗಾಗಿ ವೆಚ್ಚ ಮಾಡುತ್ತಿರುವುದು ಕಂಡು ಬಂದಿದೆ. ಅಲ್ಲದೆ ಮೂಲಸೌಕರ್ಯಗಳ ಮೇಲೆ ಹೂಡಿಕೆ ಮಾಡುವ ಮೂಲಕ ಆರ್ಥಿಕ ಪ್ರಗತಿ ಸಾಧಿಸುವ ನಿಟ್ಟಿನಲ್ಲೂ ಮುಂದೆ ಸಾಗುತ್ತಿದೆ. ಬಜೆಟ್‌ನಲ್ಲಿ ಇದು ನಿಖರವಾಗಿ ಕಾಣುತ್ತಿದೆ.**

ಭಾರತದ ಆರ್ಥಿಕತೆ ಶೇ.7 ಆಸುಪಾಸಿನಲ್ಲಿ ಸ್ಥಿರ ಬೆಳವಣಿಗೆ ಕಾಣುತ್ತಿದ್ದು, ಇದಕ್ಕಾಗಿ ಅಂತಾರಾಷ್ಟ್ರೀಯ ಹಣಕಾಸು ನಿಧಿ ಕೂಡ ಶ್ಲಾಘಿಸಿದೆ. ಇದಕ್ಕೆ ಕಾರಣ ಜಾಗತಿಕ ಆರ್ಥಿಕತೆ ಕುಸಿಯುತ್ತಿರುವ ಮಾರ್ಗ ಅನುಸರಿಸುತ್ತಿದ್ದು, ಅದು 2014ರಲ್ಲಿ ಶೇ.3.4ರಲ್ಲಿ ಇದ್ದರೆ 2015ರಲ್ಲಿ ಶೇ.3.1ರಷ್ಟಿದೆ. ಹೀಗಾಗಿ ಅದು, ಭಾರತವನ್ನು ಉಜ್ವಲ ಸ್ಥಾನದಲ್ಲಿದೆ ಎಂದೇ ವ್ಯಾಖ್ಯಾನಿಸಿದೆ. ದೇಶದ ಆಂತರಿಕ ಸ್ಥಿತಿಗತಿಯ ಸಹಕಾರದಿಂದ ಭಾರತದ ಪ್ರಗತಿ ಕಥೆ ಧನಾತ್ಮಕವಾಗಿಯೇ ಇದ್ದು, ದೇಶವು ಪುಟಿದೇಳುವ ಮತ್ತು ಸ್ಥಿರ ಸ್ಥಾನದತ್ತ ಹೋಗುತ್ತಿದೆ ಎಂಬುದನ್ನು 2014–15ನೇ ಸಾಲಿನಿಂದ 2015–16ನೇ ಸಾಲಿನ ಆರ್ಥಿಕ ಬೆಳವಣಿಗೆ ತೋರುತ್ತಿದೆ.

ತುಂಬಾ ಜನ ನಿರೀಕ್ಷಿಸಿದಂತೆ ಇತ್ತೀಚೆಗಷ್ಟೇ ಘೋಷಿತವಾದ ಬಜೆಟ್ ಬಿಗ್ ಬ್ಯಾಂಗ್ ರೀತಿಯದ್ದಾಗಿದೆ. ಇದು ಆದ್ಯತಾ ವಲಯಗಳಾದ ಕೃಷಿ, ಗ್ರಾಮೀಣ, ಸಾಮಾಜಿಕ ವಲಯ, ಮೂಲಸೌಕರ್ಯ ವಲಯ, ಉದ್ಯೋಗ ಸೃಷ್ಟಿ ಮತ್ತು ಬ್ಯಾಂಕುಗಳಿಗೆ ಪುನರ್ ಬಂಡವಾಳೀಕರಣಗಳನ್ನು ಪ್ರಮುಖವಾಗಿಟ್ಟುಕೊಂಡು ಇದಕ್ಕೆ ಹೆಚ್ಚು ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಈ ಎಲ್ಲಾ ಘೋಷಣೆಗಳ ಮೂಲದ ಸರ್ಕಾರವು ಹಳೇ ಯೋಜನೆಗಳನ್ನು ಪೂರ್ತಿಗೊಳಿಸುವ ಬದ್ಧತೆ ಮತ್ತು ಮೂಲಸೌಕರ್ಯ ಮಾರ್ಗದಲ್ಲಿ ದೊಡ್ಡ ಬದಲಾವಣೆ ಮಾಡುವ ಇಚ್ಛಾಶಕ್ತಿಯನ್ನು ಪ್ರದರ್ಶಿಸುವತ್ತ ನಿಖರ ಹೆಜ್ಜೆ ಇಟ್ಟಿದೆ ಎಂದೇ ಹೇಳಬಹುದಾಗಿದೆ.

### ದೃಷ್ಟಿಕೋನ

ಮುಂದಿನ ಹಣಕಾಸು ವರ್ಷದಲ್ಲಿ ಯಾವ ವಲಯಗಳಿಗೆ ಹೇಗೆ ಮತ್ತು ಎಷ್ಟು ವೆಚ್ಚ ಮಾಡಬೇಕು ಎಂಬುದನ್ನು ಬಜೆಟ್ ಸಂಪೂರ್ಣವಾಗಿ ತೆರೆದಿಟ್ಟಿದೆ. ಸಾಮಾನ್ಯ–ವಾಗಿ ಬಜೆಟ್ ಅಂದರೆ, ಸರ್ಕಾರ ಮುಂದಿನ ಹಣಕಾಸು ವರ್ಷಕ್ಕಾಗಿ ಆರ್ಥಿಕತೆಯ ಮೇಲೆ ಯಾವ ರೀತಿ ವೆಚ್ಚ ಮಾಡಲಿದೆ ಎಂಬುದನ್ನು ಹೂಡಿಕೆದಾರರು ಮತ್ತು ಇತರೆ ಫಲಾನುಭವಿಗಳಿಗೆ ತೋರಿಸುವ ಕ್ರಿಯೆಯನ್ನು ಮಾಡಲಿದೆ. ಈ ಮೂಲಕ ಹೂಡಿಕೆದಾರರಿಗೆ ಹೇಗೆ ಹೂಡಿಕೆ ಮಾಡಬಹುದು ಎಂಬ ಬಗ್ಗೆ ಒಂದು ಪರಿಕಲ್ಪನೆ ಅದರ ಕುರಿತ ದೃಷ್ಟಿಕೋನ ಕೊಡುವುದರ ಚರ್ಚೆಯಾಗಿದೆ. 2016–17ನೇ ಸಾಲಿನ ಬಜೆಟ್‌ನಲ್ಲಿ ಮೂಲಭೂತವಾಗಿ ಅಭಿವೃದ್ಧಿಯ ಮತ್ತು ಪ್ರಗತಿ ಅಜೆಂಡಾದ 9 ಸ್ತಂಭಗಳನ್ನು ಗುರುತಿಸಲಾಗಿದೆ.

### ಮೂಲಸೌಕರ್ಯ ವಲಯದ ಪಾತ್ರ

ಯಾವುದೇ ಆರ್ಥಿಕತೆಗಾಗಲಿ ಅಥವಾ ಅಭಿವೃದ್ಧಿಗಾಗಿ ಮೂಲಸೌಕರ್ಯವನ್ನು ಬೆನ್ನೆಲುಬು ಎಂದೇ ಪರಿಗಣಿಸಲಾಗುತ್ತದೆ. ಇಂದು ಮೂಲಸೌಕರ್ಯ ಕೇವಲ ಪ್ರಮುಖವಾದ ವಲಯವಷ್ಟೇ ಆಗಿರದೇ, ಭವಿಷ್ಯದ ಭದ್ರತೆ, ಅದರಲ್ಲೂ ಗ್ರಾಮೀಣ ಭಾಗಕ್ಕೆ ಮಹತ್ವದ್ದಾಗಿದೆ. ಹೀಗಾಗಿ ಇದರ ಬಗ್ಗೆ ಬಜೆಟ್‌ನಲ್ಲಿ ಸಮರ್ಥ ದೃಷ್ಟಿಕೋನ ಹೊಂದಲಾಗಿದೆ. ಈ ಬಾರಿಯ ಬಜೆಟ್ ನಲ್ಲಿ ಮೂಲಸೌಕರ್ಯ ವಲಯವನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಏಕೆಂದರೆ,

* ಸಹಾಯಕ ಪ್ರಾಧ್ಯಾಪಕ, (ಎಸ್ಜಿ) ಯುಪಿಇಎಸ್‌ನ ಅರ್ಥಶಾಸ್ತ್ರ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ವಿಭಾಗ.
** ಮುಖ್ಯಸ್ಥ ಮತ್ತು ಪ್ರಾಧ್ಯಾಪಕ, ಇಂಧನ ಮತ್ತು ಮೂಲಸೌಕರ್ಯ ವಿಭಾಗ
*** ಹಿರಿಯ ಸಹಾಯಕ ಪ್ರಾಧ್ಯಾಪಕ ಮತ್ತು ಆರ್ಥಿಕ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ವಿಭಾಗದ ಮುಖ್ಯಸ್ಥ.

ಮುಂದಿನ ಆರ್ಥಿಕ ವರ್ಷದಲ್ಲಿ 2.21ಲಕ್ಷ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದ್ದು, ಇದನ್ನು ರೈಲ್ವೆ, ರಸ್ತೆ ಮತ್ತು ಇತರೆ ಮೂಲಸೌಕರ್ಯ ವಲಯಗಳಿಗೆ ಒಟ್ಟಾಗಿ ಬಳಕೆ ಮಾಡಲಾಗುತ್ತದೆ. ಹೀಗಾಗಿ ಮೂಲಸೌಕರ್ಯದ ಪಾತ್ರ ಎಲ್ಲಾ ವಲಯಗಳ ಸುಧಾರಣೆಗೆ ಅನಿವಾರ್ಯವಾಗಿದೆಯಲ್ಲದೇ, ಅಭಿವೃದ್ಧಿಗೆ ಬೇಕಾಗಿದೆ ಕೂಡ.

### ಮೂಲಸೌಕರ್ಯ

ಮೂಲಸೌಕರ್ಯ ವಲಯದ ರಚನೆಗಾಗಿ ಜಿಡಿಪಿಯ ಅಂದಾಜು ಶೇ.10 ರಷ್ಟು ಬಂದಿದ್ದು, ಇದಕ್ಕೆ 5 ವರ್ಷಗಳಲ್ಲಿ 1 ಟ್ರಿಲಿಯನ್ ಡಾಲರ್ ಹೂಡಿಕೆ ಬೇಕು. ಅಲ್ಲದೆ ಇದರಲ್ಲಿ ಶೇ.50 ರಷ್ಟು ಖಾಸಗಿ ವಲಯದಿಂದಲೇ ಬರುತ್ತದೆ. ಹೀಗಾಗಿ ಬಜೆಟ್ ಬೆಂಬಲ ಈ ವಲಯಕ್ಕೆ ಬೇಕೇಬೇಕು. ಇದು ವಸತಿ ವಲಯವನ್ನು ಹೆಚ್ಚುವರಿ ತೆರಿಗೆ ಮತ್ತು ತೆರಿಗೆಯ ಲಾಭದಿಂದ ಪುನರುಜ್ಜೀವನಗೊಳಿಸಲಿದೆ.

### ರಸ್ತೆ ವಲಯ

ರಸ್ತೆ ವಲಯಕ್ಕೆ ಒಟ್ಟು 97,000 ಕೋಟಿ ಅನುದಾನ ಸಿಕ್ಕಿದೆ. ಇದರಲ್ಲಿ 55,000 ಕೋಟಿಯನ್ನು ಸರ್ಕಾರದಿಂದ ಕೊಡಲಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತೆರಿಗೆ ರಹಿತ ಬಾಂಡ್ ಗಳ ಮೂಲಕ 15,000 ಕೋಟಿಯನ್ನು ನೀಡುತ್ತದೆ. ಇದರ ಜತೆಯಲ್ಲೇ ಗ್ರಾಮೀಣ ರಸ್ತೆಗಳಿಗಾಗಿ 27,000 ಕೋಟಿಯನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಮೂಲಕ ನೀಡಲಾಗುತ್ತದೆ. ಮೂಲಸೌಕರ್ಯ ಯೋಜನೆಗಳಿಗೆ ರೇಟಿಂಗ್ ಕೊಡುವ ಹಣದ ಲಭ್ಯತೆ ಸುಗಮಗೊಳಿಸಲು ಹೊಸ ಕ್ರೆಡಿಟ್ ರೇಟಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲಾಗುವುದು. ಅಲ್ಲದೆ ಸರ್ಕಾರ ಕೂಡ 2016–17ನೇ ಸಾಲಿನಲ್ಲಿ 10,000 ಕಿ.ಮೀ. ಉದ್ದದ ರಸ್ತೆಯನ್ನು ನಿರ್ಮಿಸುವ ಮತ್ತು 10,000 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಒಪ್ಪಿಗೆ ನೀಡುವ ಗುರಿ ಇಟ್ಟುಕೊಂಡಿದೆ. ಇದನ್ನು ರಸ್ತೆಗಳಲ್ಲಿ ಪ್ರಯಾಣಿಕ ಸಂಚಾರಿಯ ಹೊಸ ಸುಧಾರಣಾ ದಾರಿ ಕಂಡು ಹಿಡಿದಿದ್ದು, ಇಧನ್ನು ಮೋಟಾರ್ ವೆಹಿಕಲ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಜಾರಿಗೊಳಿಸಲಾಗಿದೆ. ಈ ತಿದ್ದುಪಡಿಯು ಸುರಕ್ಷತೆ ಮತ್ತು ಸಾಮರ್ಥ್ಯಕ್ಕನುಗುಣವಾಗಿ ಸೇವೆಗಳನ್ನು ಒದಗಿಸುವ ಮಟ್ಟಿಗೆ ಉದ್ಯಮಗಳಿಗೆ ಪ್ರೋತ್ಸಾಹ ನೀಡುತ್ತದೆ.

ಇದರ ಜತೆಯಲ್ಲೇ ಎಲ್ಲಾ ಚಿಕ್ಕ ಪೆಟ್ರೋಲ್ ಕಾರುಗಳು, ಎಲ್‌ಪಿಜಿ ಕಾರುಗಳು, ಸಿಎನ್‌ಜಿ ಕಾರುಗಳ ಮೇಲೆ ಶೇ.1 ರಷ್ಟು ಮೂಲಸೌಕರ್ಯ ಸೆಸ್ ಹಾಕಿದ್ದರೆ, ವಿವಿಧ ಸಾಮರ್ಥ್ಯ ಹೊಂದಿರುವ ಮತ್ತು ಎಸ್‌ಯುವಿ ಡೀಸೆಲ್ ಕಾರುಗಳ ಮೇಲೆ ಶೇ.2.5 ರಷ್ಟು ಸೆಸ್ ಹಾಕಲಾಗಿದೆ. ಇದಕ್ಕೆ ಸಾಲವೂ ಲಭ್ಯವಾಗುತ್ತದೆ ಮತ್ತು ಇತರೆ ಯಾವುದೇ ರೀತಿಯ ತೆರಿಗೆಯನ್ನು ಬಳಸಿಕೊಂಡು ಇದಕ್ಕೆ ಸೆಸ್ ಹಾಕಬಹುದಾಗಿದೆ. ಈ ಮೂಲಕ ಪೆಟ್ರೋಲ್, ಎಲ್‌ಪಿಜಿ, ಸಿಎನ್‌ಜಿ ಮತ್ತು ಎಲೆಕ್ಟ್ರಿಕ್ ಕಾರುಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶವಿದೆ.

### ವಿದ್ಯುದೀಕರಣ

2015ರ ಏಪ್ರಿಲ್ 1ರ ದಿನಾಂಕದಂತೆ ದೇಶದ 18542 ಹಳ್ಳಿಗಳಲ್ಲಿ ಇನ್ನೂ ವಿದ್ಯುತ್ ಇಲ್ಲ. ಪ್ರಧಾನಮಂತ್ರಿಗಳು ದೇಶವನ್ನು ಉದ್ದೇಶಿಸಿ ಭಾಷಣ ಮಾಡುವಾಗ ಇನ್ನು 1000 ದಿನಗಳಲ್ಲಿ ದೇಶದ ಎಲ್ಲ ಗ್ರಾಮಗಳಿಗೂ ವಿದ್ಯುತ್ ಸೌಲಭ್ಯ ಕಲ್ಪಿಸುವುದಾಗಿ ಹೇಳಿದ್ದರು.ಹೀಗಾಗಿ, 2018ರ ಮೇ ಒಳಗೆ ದೇಶದಲ್ಲಿ ಶೇ.100 ರಷ್ಟು ವಿದ್ಯುತ್ ಸೌಲಭ್ಯ ಕೊಡುವ ಬಗ್ಗೆ ಸರ್ಕಾರ ಗುರಿ ಇಟ್ಟುಕೊಂಡಿದೆ. ಇದಕ್ಕಾಗಿ ದೀನ್ ದಯಾಳ್ ಗ್ರಾಮೀಣ್ ವಿದ್ಯುದೀಕರಣ್ ಯೋಜನಾ ಮತ್ತು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. ಇದು ವಿದ್ಯುತ್‌ಗಿರುವ ಬೇಡಿಕೆಯನ್ನು ಉತ್ತಮಗೊಳಿಸುವುದಷ್ಟೇ ಅಲ್ಲದೆ, ವಿದ್ಯುತ್ ಉತ್ಪಾದಿಸುವ ಕಂಪನಿಗಳ ಪ್ಲಾಂಟ್‌ಗಳ ಲೋಡ್ ವಿಷಯವನ್ನು ಹೆಚ್ಚಳ ಮಾಡುತ್ತದೆ. ಶೇ.100 ರಷ್ಟು ಗುರಿ ಸಾಧಿಸುವ ನಿಟ್ಟಿನಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಮತ್ತು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಗಳಿಗಾಗಿ ಸರ್ಕಾರ 8,500 ಕೋಟಿ ಹಣವನ್ನು ತೆಗೆದಿರಿಸಿದೆ. ಅಲ್ಲದೆ ಬಜೆಟ್ ನಲ್ಲಿ ನವೀಕರಣ ಇಂಧನಕ್ಕಾಗಿಯೂ ಹಣ ತೆಗೆದಿರಿಸಲಾಗಿದ್ದು, 2017ರ ಮಾರ್ಚ್ ನಂತರ ವಿಂಡ್ ಪವರ್ ಯೋಜನೆಗಳು ಶುರುವಾಗಲಿವೆ. ಏಕೆಂದರೆ, ಸದ್ಯ ಇವುಗಳ ಯೋಜನೆ ಕಡಿಮೆ ಇದ್ದು ಇದರ ದರ ಮೌಲ್ಯ ಹೆಚ್ಚಿದೆ.



### ಅಣು ಶಕ್ತಿ

ಮುಂದಿನ 15–20 ವರ್ಷಗಳಲ್ಲಿ ಈ ವಲಯದಲ್ಲಿ ಯಾವ ರೀತಿ ಭಾರತ ಸಾಮರ್ಥ್ಯ ಹೊಂದಬೇಕು ಎಂಬ ಗುರಿಯನ್ನು ಈ ಬಜೆಟ್ ನಲ್ಲಿ ಹೊಂದಲಾಗಿದೆ. ಹೇರಳವಾಗಿರುವ ಥೋರಿಯಂ ಸಂಪನ್ಮೂಲಗಳನ್ನು ಬಳಸಿಕೊಂಡು ಹಸಿರು ಶಕ್ತಿಯನ್ನು ಇನ್ನಷ್ಟು ಹೆಚ್ಚಿಸುವ ನಿರ್ಧಾರ ಹೊಂದಲಾಗಿದೆ. ಭಾರತದಲ್ಲಿ ಅಣು ಶಕ್ತಿ ಅಭಿವೃದ್ಧಿಗಾಗಿ ಬಜೆಟ್ ನಲ್ಲಿ 3000 ಕೋಟಿ ತೆಗೆದಿರಿಸಲಾಗಿದೆ.

### ಸ್ವಚ್ಛ ಇಂಧನ ಸೆಸ್

ಇದರ ಜತೆಯಲ್ಲೇ ಕಲ್ಲಿದ್ದಲು, ಲಿಗ್ನೈಟ್ ಮತ್ತು ಇದ್ದಿಲಿನ ಮೇಲೆ ಸ್ವಚ್ಛ ಇಂಧನ ಸೆಸ್ ಹಾಕಲಿದ್ದು, ಇದಕ್ಕೆ ಸ್ವಚ್ಛ ಪರಿಸರ ಸೆಸ್ ಎಂದು ಮರುನಾಮಕರಣ ಮಾಡಲಾಗಿದೆ. ಅಲ್ಲದೆ ದರವನ್ನು ಪ್ರತಿ ಟನ್ ಗೆ 200 ರೂಪಾಯಿಯಿಂದ 400 ರೂಪಾಯಿಗೆ ಹೆಚ್ಚಿಸಲಾಗಿದೆ. ಈ ಮೂಲಕ ಕಲ್ಲಿದ್ದಲು ಆಧರಿತ ಇಂಧನವನ್ನು ಬಳಸಿಕೊಳ್ಳುವುದು ಕಡಿಮೆಯಾಗಿದೆ. ಇತರೆ ಪರ್ಯಾಯ ಇಂಧನ ಮೂಲಗಳತ್ತ ಗಮನ ನೀಡಬಹುದಾಗಿದೆ.

### ತೈಲ ಮತ್ತು ಅನಿಲ ವಲಯ

ಆಳ ಸಮುದ್ರ ಮತ್ತು ಆಳ ಜಲಾಶಯಗಳಲ್ಲಿ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಹುಡುಕಿ ಅದನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹುಡುಕಾಟ ನಡೆದಿದೆ. ಇದರಿಂದ ತೈಲ ಮತ್ತು ಅನಿಲ ಉತ್ಪಾದನೆಯಲ್ಲಿ ಇನ್ನಷ್ಟು ಕಂಪನಿಗಳನ್ನು ಸೆಳೆಯಲು ಸಾಧ್ಯವಾಗುತ್ತಿದೆ. ಇದರಿಂದ ಆರ್ಥಿಕತೆ ಮೇಲಿನ ಆಮದು ಹೊರೆಯನ್ನು ಇಳಿಸುವ ಮತ್ತು ದೇಶದೊಳಗೇ ತೈಲ ಮತ್ತು ಅನಿಲ ಸಂಪನ್ಮೂಲಗಳನ್ನು ನಿಕ್ಷೇಪಿಸಿ ಇದರ ದರವನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ.

### ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ)

ಪ್ರಸ್ತುತ ಬಜೆಟ್ ನಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಕೂಡ ಪ್ರಮುಖ ಪಾತ್ರ ವಹಿಸಿದೆ.

### ಪಿಪಿಪಿ ಬಲಪಡಿಸಲು ಇರುವ ಮಾರ್ಗಗಳು

* ಸಾರ್ವಜನಿಕ ಬಳಕೆ(ವಿವಾದಗಳ ನಿರ್ಣಯ)ಮಸೂದೆಯನ್ನು 2016–17ರಲ್ಲಿ ಮಂಡಿಸುವುದು. * ಪಿಪಿಪಿಯ ಮರುಸಂಧಾನಕ್ಕೆ ಮಾರ್ಗದರ್ಶಿಗಳ ರಚನೆ ಮತ್ತು ಒಪ್ಪಿಗೆಯ ಒಪ್ಪಂದಗಳನ್ನು ಪ್ರಕಟ ಮಾಡುವುದು. * ಮೂಲಸೌಕರ್ಯ ಯೋಜನೆಗಳಿಗಾಗಿ ಹೊಸ ಕ್ರೆಡಿಟ್ ರೇಟಿಂಗ್ ವ್ಯವಸ್ಥೆಯನ್ನು ತರುವುದು. ಮೂಲಸೌಕರ್ಯವನ್ನು ವೃದ್ಧಿಸಲು ಮತ್ತು ಇಂಧನ ಕ್ಷೇತ್ರದಲ್ಲಿ ಇನ್ನಷ್ಟು ಹೂಡಿಕೆ ಮಾಡುವ ಸಲುವಾಗಿ ಸರ್ಕಾರವು ಎನ್ಎಚ್ಎಐ, ಪಿಎಫ್ಸಿ, ಆರ್ಇಸಿ, ಐಆರ್ಇಡಿಎ, ನಬಾರ್ಡ್ ಮತ್ತು ಇನ್ ಲೆಂಡ್ ವಾಟರ್ ಅಥಾರಿಟಿ ಸಂಸ್ಥೆಗಳ ಮೂಲಕ 31,300 ಕೋಟಿಯನ್ನು ಹೆಚ್ಚುವರಿ ಹಣಕಾಸು ನಿಧಿಯಾಗಿ ಕೊಡಲು ಅನುಮತಿ ನೀಡಿದೆ. ಈ ಹಣವನ್ನು ಬಾಂಡ್ ಗಳ ಮೂಲಕ 2016–17ನೇ ಸಾಲಿನಲ್ಲಿ ಸಂಗ್ರಹಿಸಲಾಗುತ್ತದೆ.

### ವಿವಾದ ಇತ್ಯರ್ಥ

ಪ್ರಸ್ತುತ ಬಜೆಟ್ ನಲ್ಲಿ ಪ್ರತ್ಯೇಕ ವಿವಾದ ಇತ್ಯರ್ಥ ಕಾನೂನಿನ ಚೌಕಟ್ಟುಗಳ ರಚನೆಗೆ ಸಲಹೆ ನೀಡಲಾಗಿದೆ. ಇದು ಹೊಂದಿಕೊಳ್ಳುವ, ಪಾದರ್ಶಕ ಮತ್ತು ವೇಗವರ್ಧಿತ ವ್ಯವಸ್ಥೆಯನ್ನು ಒಳಗೊಂಡಿದ್ದು, ಕುಂದುಕೊರತೆ ವ್ಯವಸ್ಥೆ ರೀತಿಯಲ್ಲಿ ಇರುತ್ತದೆ. ಇದು ಪಿಪಿಪಿ ಮಾದರಿಯ ಯೋಜನೆಗಳಿಗೆ ಸಹಾಯ ಮಾಡುತ್ತವೆ.

### ಎಫ್ಡಿಐ ನೀತಿಗಳು

ವಿದೇಶಿ ನೇರ ಬಂಡವಾಳ (ಎಎಫ್ಡಿಐ) ನೀತಿಗಳನ್ನು ಈ ಬಜೆಟ್ ನಲ್ಲಿ ಬದಲಾವಣೆ ಮಾಡಲು ಉದ್ದೇಶಿಸಲಾಗಿದೆ. ಆಹಾರ ಸಂಸ್ಕರಣೆ ಮತ್ತು ಗೋದಾಮು ಉದ್ಯಮದಲ್ಲಿ ಶೇ.100 ರಷ್ಟು ಎಫ್ಡಿಐಗೆ ಅನುಮತಿ ನೀಡಲಾಗಿದೆ. ಇದರಿಂದ ಅತ್ಯಂತ ಕಡಿಮೆ ವೆಚ್ಚದಲ್ಲಿ ಆಹಾರ ಸಂಸ್ಕರಣೆ ಮತ್ತು ಗೋದಾಮುಗಳನ್ನು ನಿರ್ಮಿಸಬಹುದಾಗಿದ್ದು, ಸರ್ಕಾರಕ್ಕೆ ಕಡಿಮೆ ಕಷ್ಟ ಕೊಡುವ ಮಾರ್ಗವಾಗಿದೆ. ಅಲ್ಲದೆ ಭಾರತದ ಆರ್ಥಿಕತೆಯಲ್ಲಿ ಹೂಡಿಕೆ ಮಾಡ ಬಯಸುವ ವಿದೇಶಿ ಹೂಡಿಕೆದಾರರನ್ನು ಸೆಳೆಯುತ್ತದೆ.

### ಕೃಷಿಯಲ್ಲಿ ಮೂಲಸೌಕರ್ಯ

ಭಾರತದಲ್ಲಿ ಹತ್ತಿರವೆಂದರೂ ಶೇ.50 ರಷ್ಟು ಮನುಷ್ಯ ಶ್ರಮ ಕೃಷಿ ವಲಯ (ಕೃಷಿ, ತೋಟಗಾರಿಕೆ, ಇತ್ಯಾದಿ)ದಲ್ಲಿ ಆಗುತ್ತಿದೆ. ಕೃಷಿ ವಲಯದ ಅಭಿವೃದ್ಧಿಗಾಗಿ ಈ ಮುಂದಿನ ಮೂಲಸೌಕರ್ಯಗಳನ್ನು ಸುಧಾರಿಸಬೇಕಿದೆ.

* ಆಹಾರ ಭದ್ರತೆಗಾಗಿ ಗೋದಾಮು ಮತ್ತು ಶೀತಲೀಕರಣ ಮೂಲಸೌಕರ್ಯಗಳ ಸುಧಾರಣೆ. * ಕೃಷಿಯಲ್ಲಿ ಉತ್ಪಾದನೆ ಸಾಧಿಸಲು ಸಾವಯವ ಮತ್ತು ರಸಗೊಬ್ಬರಗಳ ಖರೀದಿಗೆ ಪ್ರೋತ್ಸಾಹ. * ಅಂತರ್ಜಲ ಸೌಲಭ್ಯವನ್ನು ಕಡಿಮೆ ಮಾಡುವ ಸಲುವಾಗಿ ಪೋಷಕಾಭಿವೃದ್ಧಿ ಮೂಲ–ಸೌಕರ್ಯಗಳನ್ನು ಸುಧಾರಿಸುವುದು. * ನೀರಾವರಿಯಿಲ್ಲದ ಜಮೀನುಗಳಲ್ಲಿ ನೀರಾವರಿ ಮೂಲಸೌಕರ್ಯಗಳನ್ನು ಒದಗಿಸಲು ಯತ್ನಿಸುವುದು. * ರೈತರಿಗೆ ನೇರವಾಗಿ ಆದಾಯ ಬರುವ ಸಲುವಾಗಿ ಆನ್ ಲೈನ್ ನಲ್ಲಿ ಮಾರಾಟ ಮತ್ತು ಖರೀದಿಗೆ ಅವಕಾಶ ಕೊಡುವುದು. * ರಸಗೊಬ್ಬರ ಸಬ್ಸಿಡಿಯನ್ನು ನೇರವಾಗಿ ರೈತರ ಅಕೌಂಟ್ ಗೇ ಹಾಕುವ ಪ್ರಸ್ತಾಪವನ್ನು ಬಜೆಟ್ ನಲ್ಲಿ ಮಾಡಲಾಗಿದೆ.

### ಗ್ರಾಮೀಣ ವಲಯದಲ್ಲಿ ಮೂಲಸೌಕರ್ಯ

* 300 ರರ್ಬನ್ (ಗ್ರಾಮೀಣ ಮತ್ತು ನಗರ) ಕ್ಲಸ್ಟರ್ ಗಳನ್ನು ಶ್ಯಾಮ ಪ್ರಸಾದ ಮುಖರ್ಜಿ ರರ್ಬನ್ ಮಿಷನ್ ನಡಿಯಲ್ಲಿ ಅಭಿವೃದ್ಧಿಗೊಳಿಸುವುದು. * 2018ರ ಮೇ 1 ರ ಒಳಗೆ ಹಳ್ಳಿಗಳಿಗೆ ಶೇ.100ರಷ್ಟು ವಿದ್ಯುತ್ ನೀಡುವುದು. * ಮುಂದಿನ 3 ವರ್ಷಗಳಲ್ಲಿ 6 ಕೋಟಿ ಕುಟುಂಬಗಳಿಗಾಗಿ ಹೊಸ ಡಿಜಿಟಲ್ ಸಾಕ್ಷರ ಮಿಷನ್(ದಿಶಾ) ರಚನೆ. * ಕೇಂದ್ರ ಸರ್ಕಾರದಿಂದ ಹಣ ನೀಡುವ ಯೋಜನೆಗಳಿಂದ ಆದ್ಯತೆ ಮೇರೆಗೆ ಅನುದಾನ ಕೊಟ್ಟು ಬಯಲು ಮುಕ್ತ ಶೌಚ ಮಾಡುವ ಹಳ್ಳಿಗಳಿಗೆ ಪ್ರೋತ್ಸಾಹ ಧನ ಗೌರವ ನೀಡುವುದು. * ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಹಿಂದೆ ಈ ಯೋಜನೆ ಅನುದಾನವನ್ನು ನೀಡದೇ ಸೊರಗಿತ್ತು. 2012–13 ಮತ್ತು 2013–14ನೇ



ಸಾಲಿನಲ್ಲಿ ಕೇವಲ ಕ್ರಮವಾಗಿ 8,885 ಮತ್ತಿ 9,805 ರೂಪಾಯಿಗಳನ್ನು ನೀಡಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಬಹಳಷ್ಟು ಹಣ ನೀಡಿದೆ. ಅಂದರೆ 2016–17ರಲ್ಲಿ ಇದಕ್ಕೆ 19,000 ಕೋಟಿ ನೀಡಿದೆ. ರಾಜ್ಯದ ಭಾಗವನ್ನು ಹಾಕಿದರೆ ಮುಂದಿನ ಹಣಕಾಸು ವರ್ಷ 27,000 ಕೋಟಿ ವೆಚ್ಚ ಮಾಡಿದ ರೀತಿ ಆಗುತ್ತದೆ. ಮೊದಲು 2021ರಲ್ಲಿ ಯೋಜನೆಯನ್ನು ಮುಗಿಸಬೇಕು ಎಂಬ ಗುರಿ ಹೊಂದಲಾಗಿದ್ದು, ಇದನ್ನು ಇನ್ನೂ 2 ವರ್ಷ ಮೊದಲೇ ಅಂದರೆ 2019ರಲ್ಲೇ ಮುಗಿಸುವ ಗುರಿ ಹೊಂದಲಾಗಿದೆ. 65,000 ವಾಸಸ್ಥಳಗಳಿಗೆ ಸಂಪರ್ಕ ನೀಡುವ, ಅಂದರೆ 2.23 ಲಕ್ಷ ಕಿ.ಮೀ ರಸ್ತೆ ಮಾಡುವ ಗುರಿ ಹೊಂದಲಾಗಿದೆ. ಇದರ ಪ್ರಕಾರವಾಗಿ ರಸ್ತೆಗಳ ನಿರ್ಮಾಣದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದು, ಈಗ ದಿನಕ್ಕೆ 100 ಕಿ.ಮೀ ರಸ್ತೆ ನಿರ್ಮಿಸಲಾಗುತ್ತಿದೆ. 2011–14ರ ವರೆಗೆ ದಿನಕ್ಕೆ 73.5 ಕಿ.ಮೀ. ಉದ್ದದ ರಸ್ತೆಯನ್ನಷ್ಟೇ ನಿರ್ಮಿಸಲಾಗುತ್ತಿತ್ತು. ಇದೀಗ ನಾವು ಈ ವಿಚಾರದಲ್ಲಿ ಮುಂದೆ ಸಾಗಿದ್ದೇವೆ.

### ಸಾರಾಂಶ

ಒಟ್ಟಾರೆಯಾಗಿ ಹೇಳುವುದಾದರೆ ಈ ವರ್ಷದ ಬಜೆಟ್, ಮೂಲಸೌಕರ್ಯ ಮತ್ತು ಗ್ರಾಮೀಣ ವಲಯಕ್ಕೆ ಅನ್ವಯಿಸಿ ಹೇಳುವುದಾದರೆ ಒಂದು ರೀತಿಯಲ್ಲಿ ಬಿಗ್ ಬ್ಯಾಂಗ್ ಅನ್ನು ನೀಡುತ್ತದೆ. ಅಲ್ಲದೆ ಗ್ರಾಮೀಣ ಭಾಗಗಳ ಅಭಿವೃದ್ಧಿಗಾಗಿ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಹೂಡಿಕೆ ಬರುವುದಕ್ಕಾಗಿ ಸರ್ಕಾರ ಕೂಡ ಶ್ರಮಿಸುತ್ತಿರುವುದು ಕಾಣುತ್ತಿದೆ. ಹೀಗಾಗಿ ಸಾರ್ವಜನಿಕ ವೆಚ್ಚ, ಹೊಸ ಮೂಲಸೌಕರ್ಯ ನಿಧಿ ರಚನೆ, ಭವಿಷ್ಯದ ಗಟ್ಟಿತನಕ್ಕಾಗಿ ಅಡಿಪಾಯಗಳನ್ನು ಸಮರ್ಥವಾಗಿ ಹಾಕುವುದು ಮತ್ತು ಪಿಪಿಪಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ತೋರುವ ಮೂಲಕ ಸರ್ಕಾರ ಬದ್ಧತೆ ತೋರುತ್ತಿದೆ.

❑

# ಬೃಹತ್ ಉದ್ಯೋಗ ಸೃಷ್ಟಿ, ಬೆಳವಣಿಗೆಗೆ ಚಾಲನೆ

* ನೀರಜ್ ಬಾಜಪೇಯಿ




**ರಾಷ್ಟ್ರೀಯ ಕೌಶಲ ಅಭಿವೃದ್ಧಿ ಯೋಜನೆಯು ತನ್ನ ಪ್ರಾರಂಭದ ಬಳಿಕ ವಿಸ್ತೃತವಾದ ಕೌಶಲಾಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಿಸಿದ್ದಲ್ಲದೆ 76 ಲಕ್ಷ ಯುವಕರಿಗೆ ತರಬೇತಿಯನ್ನು ನೀಡಿದೆ.**

ರೋಮ್ ಒಂದೇ ದಿನದಲ್ಲಿ ನಿರ್ಮಾಣವಾಗಲಿಲ್ಲ ಎಂಬುದೊಂದು ಸುಪ್ರಸಿದ್ಧ ನಾಣ್ಣುಡಿ. ಅದೇ ರೀತಿ ಇದು ಆರಂಭದ ಹಂತದಲ್ಲಿರುವ ಕೈಗಾರಿಕಾ ಘಟಕಗಳಿಗೆ ಸದೃಢವಾದ ಪರಿಸರ ವ್ಯವಸ್ಥೆ, ಮತ್ತು ದೊಡ್ಡ ಮಟ್ಟದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಕ್ಷಮತೆಯುಳ್ಳ ಇತರ ವಾಣಿಜ್ಯ ಪ್ರಯತ್ನಗಳ ಉಗಮವನ್ನು ಸಾಂಕೇತಿಸುತ್ತದೆ. ಇದಾವುದೂ ಸಣ್ಣ ಅವಧಿಯಲ್ಲಿ ಸಾಧಿಸಲಾಗುವಂಥದ್ದಲ್ಲ.

ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿಯವರ ಇತ್ತೀಚಿನ ಬಜೆಟ್ ಮಂಡನೆಯು ಪ್ರಸಕ್ತ ಸರ್ಕಾರವು ಅಪ್ಪಟ ವಾಸ್ತವದ, ಮತ್ತು ಭಾರತದ ಹೆಚ್ಚುತ್ತಿರುವ ನಿರೀಕ್ಷೆಗಳು ಮತ್ತು ಮೂಲಭೂತ ಅಗತ್ಯಗಳನ್ನು ಪೂರೈಸಲು ಎದುರಿಸಬೇಕಾದ ಸವಾಲುಗಳ ಸಂಪೂರ್ಣ ಅರಿವು ಹೊಂದಿದೆ ಎಂಬುದನ್ನು ಸೂಚಿಸುತ್ತದೆ.

ಜಾಗತಿಕ ಅರ್ಥವ್ಯವಸ್ಥೆಯು ಗಂಭೀರವಾದ ಬಿಕ್ಕಟ್ಟಿನಲ್ಲಿದ್ದು ಇದು ಆರ್ಥಿಕ ಮಾರುಕಟ್ಟೆಗಳನ್ನು ಜರ್ಜರಿತಗೊಳಿಸಿದೆ ಮತ್ತು ಒಪ್ಪಂದಕ್ಕೊಳಪಟ್ಟ ಜಾಗತಿಕ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದೆ. ಈ ಸನ್ನಿವೇಶದಲ್ಲಿ ಭಾರತ ಕೈಗೊಳ್ಳಬೇಕಾದ ಕಾರ್ಯಭಾರವು ಮತ್ತಷ್ಟು ಕಠಿಣವಾದುದಾಗಿದೆ. ಈ ಎಲ್ಲಾ ಜಾಗತಿಕ ಪ್ರತಿಮಾರುತಗಳ ನಡುವೆಯೂ ದೇಶದ ಅರ್ಥವ್ಯವಸ್ಥೆಯು ತನ್ನ ನೆಲೆಯನ್ನು ಹಿಡಿದುಕೊಂಡಿದೆ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿಯು ಭಾರತವನ್ನು ಏಕೈಕ 'ಉಜ್ವಲ ತಾಣ' ಎಂದು ಗುರುತಿಸಿದೆ. 2016–17 ನೇ ಸಾಲಿನ ಮುಂಗಡಪತ್ರವನ್ನು ಅನಾವರಣಗೊಳಿಸುತ್ತ ಹಣಕಾಸು ಸಚಿವರು ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಅಂತಾರಾಷ್ಟ್ರೀಯ ಆರ್ಥಿಕ ಸ್ಥಿತಿಗತಿಗಳಿಗೆ ಹೋಲಿಸುತ್ತ ಹೀಗೆ ಸಾರಾಂಶ ನೀಡಿದರು. ಶ್ರೀ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ (ಎನ್ ಡಿ ಎ) ಸರ್ಕಾರದ ಪ್ರಮುಖ ಕಾರ್ಯಕ್ರಮಗಳಾದ ಸ್ಟಾರ್ಟ್ ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಕೌಶಲ್ಯ ಅಭಿವೃದ್ಧಿ, ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಇತರ ಹಲವಾರು ಯೋಜನೆಗಳ ಸಾಮಯಿಕ ಅನುಷ್ಠಾನ ಮೊದಲಾದುವುಗಳನ್ನು ಜಾಗತಿಕ ಕುಸಿತ ಮತ್ತು ಪ್ರಕ್ಷುಬ್ಧತೆಯ ಬೆದರಿಕೆಯ ನಡುವೆಯೂ ಸಂಪೂರ್ಣವಾಗಿ ಯಶಸ್ವಿಗೊಳಿಸುವಲ್ಲಿನ ಬದ್ಧತೆಯ ಕುರಿತು ವಿಶ್ವಾಸ ವ್ಯಕ್ತ ಪಡಿಸಿದರು.

ಸ್ಟಾರ್ಟ್ ಅಪ್ ಇಂಡಿಯಾ ಸ್ಟಾಂಡ್ ಅಪ್ ಇಂಡಿಯಾ ಎಂಬುದು ತಮ್ಮ ಮಂತ್ರವೆಂಬುದನ್ನು ಪ್ರಧಾನ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. "ಉದ್ಯಮಗಳಿಗೆ ಒಂದು ಅನುಕೂಲಕರ ಪರಿಸರ ಸೃಷ್ಟಿಸಲು ಮುಂಗಡಪತ್ರವು ತೆರಿಗೆಗಳಲ್ಲಿ ಯೋಜನೆಗಳನ್ನು ಒದಗಿಸಿದೆ.

ನಮ್ಮ ದಲಿತ ಮತ್ತು ಬುಡಕಟ್ಟು ಯುವಜನಾಂಗವು ಈಗ ಉದ್ಯಮಿಗಳಾಗಲು ಬಯಸುತ್ತಿದ್ದಾರೆ. ಅವರು ಈಗ ಉದ್ಯೋಗಾಕಾಂಕ್ಷಿಗಳಾಗುವ ಬದಲು ಉದ್ಯೋಗ ಸೃಷ್ಟಿಕರ್ತರಾಗಲು ಬಯಸುತ್ತಿದ್ದಾರೆ. ಅವರ ಕನಸುಗಳನ್ನು ನನಸಾಗಿಸಲು ಒಂದು ಉದ್ಯಮಶೀಲತಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿದೆ," ಎಂದು ಭವಿಷ್ಯದ ಆರ್ಥಿಕ ಕಾರ್ಯಸೂಚಿಯನ್ನು ಸ್ವಾಗತಿಸುತ್ತ ಅಭಿಪ್ರಾಯ ಪಟ್ಟಿದ್ದಾರೆ.

* ಹಿರಿಯ ಪತ್ರಕರ್ತರು, ನವದೆಹಲಿ.

ಭಾರತದಲ್ಲಿ ಮೇಕ್ ಇನ್ ಇಂಡಿಯಾ ಯೋಜನೆಗೆ ದೊಡ್ಡ ಒತ್ತು ಕೊಡುತ್ತಾ ಸರ್ಕಾರವು ಈಗ ಉದ್ಯೋಗಾವಕಾಶ ಸೃಷ್ಟಿಯ ಮುಖ್ಯ ಕೇಂದ್ರವಾಗಿ ಉದಯಿಸುತ್ತಾ ದೇಶೀಯ ಉತ್ಪಾದನೆ ಹೆಚ್ಚಿಸಲು ತೆರಿಗೆ ವಿನಾಯಿತಿಗಳನ್ನು ಘೋಷಿಸಿದೆ.

ಇತರ ಯೋಜನೆಗಳು ಸುಲಭ ವ್ಯವಹಾರಗಳಿಗೆ ತೆರಿಗೆ ವಿನಾಯಿತಿ ಮತ್ತು ನಿಯಮಾವಳಿಗಳನ್ನು ಒಳಗೊಂಡಿವೆ. ಸಣ್ಣ ಕೈಗಾರಿಕೆಗಳು ಈ ಯೋಜನೆಗಳ ದೊಡ್ಡ ಪ್ರಯೋಜನ ಪಡೆಯಲಿವೆ. ಮೊಕದ್ದಮೆಗಳನ್ನು ಕಡಿಮೆ ಮಾಡಲು ಮತ್ತು ಒಂದು ವೇಳೆ ಸೋತಲ್ಲಿ ನಿಷ್ಕ್ರಮಣದ ದಾರಿಯನ್ನು ಸುಲಭವಾಗಿಸಲು ಈ ಯೋಜನೆಗಳು ನೆರವಾಗಲಿವೆ.

ಪರಿಷ್ಕೃತ ಅಬಕಾರಿ ಮತ್ತು ಕಸ್ಟಮ್ಸ್ ತೆರಿಗೆಗಳು ಭಾರತದಲ್ಲಿ ಉತ್ಪಾದಿಸು ಯೋಜನೆಯ– ಐಟಿ ಹಾರ್ಡ್‌ವೇರ್, ಬಂಡವಾಳ ಸರಕುಗಳು, ವಸ್ತ್ರೋದ್ಯಮ, ರಕ್ಷಣಾ ಉತ್ಪನ್ನಗಳು ಮತ್ತು ಹಲವಾರು ಇತರ ಉತ್ಪನ್ನಗಳ ಉತ್ಪಾದನಾ ವೆಚ್ಚ ಪ್ರಯೋಜನಗಳನ್ನು ಒದಗಿಸಲು ನೆರವಾಗಲಿವೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಉದಾಹರಣೆಗೆ, ಟೆಲಿಕಾಂ ಕ್ಷೇತ್ರದಲ್ಲಿ, ಕಸ್ಟಮ್ಸ್ ಮತ್ತು ತೆರಿಗೆ ವಿನಾಯಿತಿಯನ್ನು ಹಿಂಪಡೆಯುವ ಮೂಲಕ ಮೊಬೈಲ್ ಹ್ಯಾಂಡ್ ಸೆಟ್ಟುಗಳ ಬಿಡಿಭಾಗಗಳ ಆಮದನ್ನು ಕಡಿಮೆಗೊಳಿಸಲು ಸರ್ಕಾರ ಪ್ರಯತ್ನಿಸಿದೆ. ಈ ಹೆಜ್ಜೆಯು ಮೊಬೈಲು ಫೋನುಗಳ ಮತ್ತು ಬಿಡಿಭಾಗಗಳ ಸ್ಥಳೀಯ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಪ್ರೋತ್ಸಾಹದಾಯಕ ಪರಿಣಾಮ ಬೀರಲಿದೆ.

ಈಗ ಕೇಂದ್ರ ಮತ್ತು ಅನೇಕ ರಾಜ್ಯ ಸರ್ಕಾರಗಳು ಸ್ಥಳೀಯ ಕೈಗಾರಿಕೆಗಳು, ಭಾರತದಲ್ಲಿ ಸ್ಟಾರ್ಟ್‌ಅಪ್ ಮತ್ತು ಭಾರತದಲ್ಲಿ ಮೇಕ್ ಇನ್ ಇಂಡಿಯಾ ಯೋಜನೆಗಳಿಗೆ ಹೂಡಿಕೆಯನ್ನು ಆಹ್ವಾನಿಸಲು ಪೂರಕ ವಾತಾವರಣವನ್ನು ಸೃಷ್ಟಿಸುತ್ತಿವೆ. ಇದು ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸಲಿದೆ. ಮುಂಗಡಪತ್ರದಲ್ಲಿ ಆಶ್ವಾಸನೆ ನೀಡಲಾಗಿರುವ ವಿನಾಯಿತಿಗಳು ಒಟ್ಟೂ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಧನಾತ್ಮಕವಾದ ಪ್ರಭಾವ ಬೀರಲಿವೆ.

ದೇಶದ ಒಳಗೂ ಹೊರಗೂ ಹೂಡಿಕೆದಾರರ ಸಮಾವೇಶಗಳು ನಡೆಯುತ್ತಿವೆ. ಇತ್ತೀಚೆಗೆ ಹರಿಯಾಣದಲ್ಲಿ ನಡೆದ ಅಂತಹ ಒಂದು ಸಮಾವೇಶದಲ್ಲಿ, ಹೂಡಿಕೆಯನ್ನು ಆಕರ್ಷಿಸುವಂತಹ ಸುಧಾರಣೆಗಳನ್ನು ಕೈಗೊಳ್ಳುವಂತೆ ವಿತ್ತ ಸಚಿವರು ರಾಜ್ಯಗಳಿಗೆ ಕರೆ ನೀಡಿದ್ದಾರೆ. ಏಕೆಂದರೆ ಹೂಡಿಕೆದಾರರು ನೀತಿ ನಿಷ್ಕ್ರಿಯತೆಯನ್ನು ಇಷ್ಟಪಡುವುದಿಲ್ಲ. ಅನುಕೂಲಕರ ವ್ಯವಹಾರ ಮತ್ತು ರಾಜಕೀಯ ಪರಿಸರವಿರುವ ಸ್ಥಳಗಳಿಗೆ ಆದ್ಯತೆ ನೀಡುತ್ತಾರೆ.

ಸಹಕಾರಿ ಸಂಯುಕ್ತ ಒಕ್ಕೂಟವಾಗಿರುವುದರೊಂದಿಗೆ ಭಾರತವು ಸ್ಪರ್ಧಾತ್ಮಕ ಸಂಯುಕ್ತ ಒಕ್ಕೂಟವಾಗಿಯೂ ಬೆಳೆದಿದೆ. ಭವಿಷ್ಯದಲ್ಲಿ ಇದು ಸ್ಪರ್ಧಾತ್ಮಕ ಸಂಯುಕ್ತ ಒಕ್ಕೂಟವಾಗಿ ಇರಲಿದೆ. ಏಕೆಂದರೆ ಇದು ಕೇಂದ್ರ–ರಾಜ್ಯ ಸಂಬಂಧವಲ್ಲ, ಬದಲಿಗೆ ಹೂಡಿಕೆಯನ್ನು ಆಕರ್ಷಿಸಲು ರಾಜ್ಯ ರಾಜ್ಯಗಳು ಪರಸ್ಪರ ಸ್ಪರ್ಧಿಸುವ ಸಂದರ್ಭ ಸೃಷ್ಟಿಯಾಗುತ್ತದೆ ಎಂದು ಅವರು ಹೇಳಿದರು. "ಯಾವ ರಾಜ್ಯಗಳು ಸುಧಾರಣೆಯಾಗುವುದಿಲ್ಲವೊ ಆ ರಾಜ್ಯಗಳಲ್ಲಿನ ಜನರು ಅನಾನುಕೂಲದಲ್ಲಿರುತ್ತಾರೆ. ಬದಲಿಗೆ ಯಾವ ರಾಜ್ಯಗಳು ಹೂಡಿಕೆದಾರರಿಗೆ ಅನುಕೂಲಕರವಾದ ಆರ್ಥಿಕ, ವ್ಯಾವಹಾರಿಕ ಮತ್ತು ರಾಜಕೀಯ ಪರಿಸರವನ್ನು ಒದಗಿಸುತ್ತವೋ ಅಲ್ಲಿನ ಜನರು ಪ್ರಯೋಜನ ಪಡೆಯುತ್ತಾರೆ. ಸುಧಾರಣೆ ಅಥವಾ ನಾಶ ಇಂದಿಗಿಂತ ಹೆಚ್ಚು ಸತ್ಯವಾಗಿರಲು ಇನ್ನೆಂದೂ ಸಾಧ್ಯವಿಲ್ಲ ಎಂದೂ ಅವರು ಹೇಳಿದರು.

ಇತ್ತೀಚೆಗೆ ಲೋಕ ಸಭೆಯಲ್ಲಿ ಸಾಮಾನ್ಯ ಮುಂಗಡ ಪತ್ರವನ್ನು ಮಂಡಿಸುತ್ತ ಶ್ರೀ ಜೇಟ್ಲಿಯವರು ಭಾರತದಲ್ಲಿ ಸ್ಟಾರ್ಟ್ ಅಪ್ ಕಾರ್ಯಕ್ರಮಕ್ಕೆ ಒತ್ತು ಕೊಡುತ್ತ ಅವು ಉದ್ಯೋಗಾವಕಾಶವನ್ನು ಸೃಷ್ಟಿಸುತ್ತವೆ, ನಾವೀನ್ಯತೆಯನ್ನು ತರುತ್ತವೆ ಮತ್ತು ಭಾರತದಲ್ಲಿ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಲ್ಲಿ ಪ್ರಮುಖ ಪಾಲುದಾರರಾಗಲಿವೆ ಎಂದರು.

ಏಪ್ರಿಲ್ 2016 ರಲ್ಲಿ ಆರಂಭವಾಗುವ ನವ ಉದ್ಯಮಗಳಿಗೆ ಐದು ವರ್ಷಗಳಲ್ಲಿ ಮೊದಲ ಮೂರು ವರ್ಷಗಳು ಅಂದರೆ ಮಾರ್ಚ್ 2019ರವರೆಗೆ ಲಾಭದಲ್ಲಿ ಶೇಕಡಾ ನೂರರಷ್ಟು ಕಡಿತ ಪ್ರಕಟಿಸಿದ್ದಾರೆ. ಇಂತಹ ಕೇಸುಗಳಲ್ಲಿ ಮ್ಯಾಟ್ ಅನ್ವಯವಾಗುತ್ತದೆ. ಆದಾಗ್ಯೂ, ನಿಯಂತ್ರಿತ ಅಥವಾ ಸೂಚಿತ ಬಂಡವಾಳ ಅಥವಾ ಬಂಡವಾಳಗಳು ಮತ್ತು ಸೂಚಿತ ಉದ್ದಿಮೆಗಳಲ್ಲಿ ಬಹುತೇಕ ಷೇರುಗಳನ್ನು ಹೊಂದಿರುವಂತೆ ವ್ಯಕ್ತಿಗಳು ಹೂಡಿಕೆ ಮಾಡಿದ್ದರೆ ಬಂಡವಾಳ ಗಳಿಕೆಗಳ ಮೇಲೆ ತೆರಿಗೆ ಹಾಕಲಾಗುವುದಿಲ್ಲ.




ಭಾರತದಲ್ಲಿ ಅಭಿವೃದ್ಧಿಯಾದ ಮತ್ತು ನೊಂದಣಿಯಾದ ಪೇಟೆಂಟುಗಳ ವಿಶ್ವದಾದ್ಯಂತ ಪ್ರಸರಣದಿಂದ ಆದಾಯ ತೆರಿಗೆಯ ಶೇಕಡಾ ಹತ್ತು ದರದಲ್ಲಿ ಒಂದು ವಿಶೇಷ ಪೇಟೆಂಟ್ ಆಳ್ವಿಕೆಯನ್ನು ಅವರು ಪ್ರಸ್ತಾವಿಸಿದ್ದಾರೆ. ಅಬಕಾರಿ ಮತ್ತು ಕಸ್ಟಮ್ಸ್ ತೆರಿಗೆಯ ರಚನೆಯು ಭಾರತದಲ್ಲಿ ಮೇಕ್ ಇನ್ ಇಂಡಿಯಾ ಅಭಿಯಾನಕ್ಕೆ ಸ್ಥಳೀಯ ಮೌಲ್ಯ ಒದಗಿಸಿ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವು ನಿಗದಿತ ಒಳಹರಿವು, ಕಚ್ಚಾ ವಸ್ತುಗಳು, ನಡುವಣ ವಸ್ತುಗಳು ಮತ್ತು ಭಾಗಗಳು ಹಾಗೂ ಇತರ ಕೆಲವು ಸರಕುಗಳ ಮೇಲಿನ ಅಬಕಾರಿ ಮತ್ತು ಕಸ್ಟಮ್ಸ್ ತೆರಿಗೆ ದರದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಸರ್ಕಾರವು ಪ್ರಸ್ತಾವಿಸಿದೆ. ಮಾಹಿತಿ ತಂತ್ರಜ್ಞಾನ ಹಾರ್ಡ್‌ವೇರ್‌ಗಳು, ಬಂಡವಾಳ ಸರಕುಗಳು, ರಕ್ಷಣಾ ಉತ್ಪನ್ನಗಳು, ವಸ್ತ್ರೋದ್ಯಮ ಮಿನರಲ್ ಇಂಧನ ಮತ್ತು ಮಿನರಲ್ ಎಣ್ಣೆ, ರಾಸಾಯನಿಕಗಳು ಮತ್ತು ಪೆಟ್ರೋ ರಾಸಾಯನಿಕಗಳು, ಪತ್ರಿಕೆ, ಪೇಪರ್ ಬೋರ್ಡ್ ಮತ್ತು ನ್ಯೂಸ್ ಪ್ರಿಂಟ್, ವಿಮಾನ ಮತ್ತು ಹಡಗುಗಳ ಪರಿಶೀಲನೆ ನಿರ್ವಹಣೆ ಮತ್ತು ರಿಪೇರಿ ಮೊದಲಾದ ಕ್ಷೇತ್ರಗಳಲ್ಲಿ ಸ್ಥಳೀಯ ಉದ್ದಿಮೆಗಳ ಸ್ಪರ್ಧಾಶೀಲತೆಯನ್ನು ಹೆಚ್ಚಿಸಲು ಮತ್ತು ಖರ್ಚು ಕಡಿಮೆ ಮಾಡಲು ಕಾರ್ಯವಿಧಾನಗಳನ್ನು ಸರಳಗೊಳಿಸಲು ಯೋಜಿಸಿದೆ.

ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಕೌಶಲಯುತ ಕಾರ್ಮಿಕರನ್ನು ಒದಗಿಸುವ

ಹಾಗೂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಸರ್ಕಾರವು ದೇಶದಾದ್ಯಂತ 1,500 ಬಹು ಕೌಶಲ ತರಬೇತಿ ಸಂಸ್ಥೆಗಳನ್ನು ಆರಂಭಿಸಲು ನಿರ್ಧರಿಸಿದೆ. ಇದಕ್ಕಾಗಿ ಮುಂಗಡಪತ್ರದಲ್ಲಿ ರೂ. 1,700 ಕೋಟಿಗಳನ್ನು ಮೀಸಲಿಡಲಾಗಿದೆ. ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನಾ (ಪಿಎಂಕೆವಿವೈ) ಮೂಲಕ ಉದ್ಯಮಶೀಲತೆಯನ್ನು ಯುವಕರ ಮನೆ ಬಾಗಿಲಿಗೆ ಒಯ್ಯುವುದೇ ಸರ್ಕಾರದ ಉದ್ದೇಶ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಅವರ ಪ್ರಕಾರ, ಕೌಶಲ ಭಾರತ ಯೋಜನೆಯು ದೇಶದ ಜನಸಂಖ್ಯಾ ಅನುಕೂಲತೆಯನ್ನು ಬಂಡವಾಳವನ್ನಾಗಿ ಪರಿವರ್ತಿಸುವ ಉದ್ದೇಶ ಹೊಂದಿದೆ. ರಾಷ್ಟ್ರೀಯ ಕೌಶಲ ಅಭಿವೃದ್ಧಿ ಯೋಜನೆಯು ತನ್ನ ಪ್ರಾರಂಭದ ಬಳಿಕ ವಿಸ್ತೃತವಾದ ಕೌಶಲಾಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಿಸಿದ್ದಲ್ಲದೆ 76 ಲಕ್ಷ ಯುವಕರಿಗೆ ತರಬೇತಿಯನ್ನು ನೀಡಿದೆ. ಸರ್ಕಾರವು ಉದ್ದಿಮೆ ಹಾಗೂ ಶೈಕ್ಷಣಿಕ ವಲಯದ ಸಹಯೋಗದೊಂದಿಗೆ ರಾಷ್ಟ್ರೀಯ ಕೌಶಲಾಭಿವೃದ್ಧಿ ಪ್ರಮಾಣೀಕರಣ ಮಂಡಳಿಯನ್ನು ಸ್ಥಾಪಿಸಲು ಚಿಂತಿಸಿದೆ. "ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಒಂದು ಕೋಟಿ ಯುವಕರ ಕೌಶಲಾಭಿವೃದ್ಧಿ ಮಾಡುವಂತೆ ಬಲಪಡಿಸಬೇಕೆಂದು ನಾವು ಚಿಂತಿಸಿದ್ದೇವೆ."

**ಹೊಸಶಕೆ**


ಮುಂದಿನ ಮೂರು ವರ್ಷಗಳಲ್ಲಿ ಒಂದು ಕೋಟಿ ಯುವಕರು ಕೌಶಲಪೂರ್ಣರಾದರೆ ಇದು ಉದ್ಯೋಗಾವಕಾಶಗಳ ನೂತನ ಶಕೆಯನ್ನೇ ಆರಂಭಿಸಬಲ್ಲುದು ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ಉತ್ಪಾದನೆಯು ಗಣನೀಯವಾಗಿ ಏರಿಕೆಯಾಗಬಲ್ಲುದು ಎಂದು ತಜ್ಞರು ಹೇಳುತ್ತಾರೆ.

ಯೋಜನೆಯಗಳ ಪ್ರಕಾರ, ಸಾಮೂಹಿಕ ಮುಕ್ತ ಆನ್‌ಲೈನ್ ಕೋರ್ಸುಗಳ ಮೂಲಕ 2200 ಕಾಲೇಜುಗಳಲ್ಲಿ, 300 ಶಾಲೆಗಳಲ್ಲಿ, 500 ಸರ್ಕಾರಿ ಐಟಿಐಗಳಲ್ಲಿ ಹಾಗೂ 50 ಔದ್ಯೋಗಿಕ ತರಬೇತಿ ಕೇಂದ್ರಗಳಲ್ಲಿ ಉದ್ಯಮಶೀಲತೆ, ಶಿಕ್ಷಣ ಹಾಗೂ ತರಬೇತಿಯನ್ನು ಒದಗಿಸಲಾಗುವುದು. ದೇಶದ ಗ್ರಾಮೀಣ ಭಾಗಗಳಿಗೆ ಸೇರಿದ ಭವಿಷ್ಯದ ಉದ್ಯಮಶೀಲರನ್ನು ಅವರ ತರಬೇತುದಾರರು ಹಾಗೂ ಸಾಲ ಮಾರುಕಟ್ಟೆಯೊಂದಿಗೆ ಜೋಡಿಸಲಾಗುವುದು.

ಔಪಚಾರಿಕ ವಲಯದಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದನ್ನು ಪ್ರೋತ್ಸಾಹಿಸಲು ತಮ್ಮ ಉದ್ಯೋಗದ ಮೊದಲ ಮೂರು ವರ್ಷಗಳಲ್ಲಿ ಇಪಿಎಫ್‌ಓದೊಂದಿಗೆ ಹೆಸರು ನೊಂದಾಯಿಸಿಕೊಳ್ಳುವ ಎಲ್ಲ ಹೊಸ ಉದ್ಯೋಗಿಗಳಿಗೆ ಉದ್ಯೋಗಿ ಪಿಂಚಣಿ ಯೋಜನೆಯ ಶೇ. 8.33ರಷ್ಟು ಪಾಲನ್ನು ಸರ್ಕಾರ ನೀಡಲಿದೆ. ಮಾಸಿಕ ರೂ. 15,000 ವೇತನ ಹೊಂದಿರುವ ಎಲ್ಲರಿಗೂ ಈ ಯೋಜನೆ ಅನ್ವಯವಾಗುತ್ತದೆ. ಇದಕ್ಕಾಗಿ ರೂ. 1,000 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ. ಅಲ್ಲದೆ, ಹಣಕಾಸು ಮಸೂದೆ 2016 ಆದಾಯ ತೆರಿಗೆ ಕಾನೂನಿನ 80ಜೆಜೆಎಎ ವಿಭಾಗದಡಿಯಲ್ಲಿ ಉದ್ಯೋಗ ಸೃಷ್ಟಿಯ ಅವಕಾಶಗಳನ್ನು ವಿಸ್ತರಿಸುವ ಹಾಗೂ ಉದಾರಗೊಳಿಸುವ ಯೋಜನೆಯನ್ನು ಹೊಂದಿದೆ.

ಉದ್ಯೋಗ ಸೃಷ್ಟಿಯ ಸರ್ಕಾರದ ಯೋಜನೆಯನ್ನು ವಿವರಿಸುತ್ತಾ, ಹಣಕಾಸು ಸಚಿವರು ಜುಲೈ 2015ರಲ್ಲಿ ಒಂದು ರಾಷ್ಟ್ರೀಯ ವೃತ್ತಿ ಸೇವೆಯನ್ನು ಆರಂಭಿಸಲಾಗಿದೆ ಎಂದಿದ್ದಾರೆ. ಈ ವೇದಿಕೆಯಲ್ಲಿ ಈಗಾಗಲೇ 35 ಮಿಲಿಯನ್ ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಹೊಸ ಬಜೆಟ್‌ನಲ್ಲಿ 2016–17ರ ಅಂತ್ಯದ ವೇಳೆಗೆ ಸರ್ಕಾರವು 100 ಮಾದರಿ ವೃತ್ತಿ ಕೇಂದ್ರಗಳನ್ನು ಕಾರ್ಯಶೀಲಗೊಳಿಸುವ ಗುರಿಯನ್ನು ಹೊಂದಿದೆ. ರಾಜ್ಯ ಉದ್ಯೋಗ ವಿನಿಮಯ ಕೇಂದ್ರಗಳನ್ನು ರಾಷ್ಟ್ರೀಯ ವೃತ್ತಿ ಸೇವೆಗಳ ವೇದಿಕೆಯೊಂದಿಗೆ ಸಂಪರ್ಕಿಸುವ ಉದ್ದೇಶವನ್ನು ಕೂಡ ಬಜೆಟ್ ಹೊಂದಿದೆ. 2013ರ ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶದಿಂದ ಸಂಸತ್ತಿನ ಇದೇ ಬಜೆಟ್ ಅಧಿವೇಶನದಲ್ಲಿ ಒಂದು ಮಸೂದೆಯನ್ನು ಮಂಡಿಸಲಾಗುವುದು. ಉದ್ದಿಮೆಗಳನ್ನು ನಡೆಸುವಲ್ಲಿ ಇರುವ ಕಷ್ಟ ಹಾಗೂ ಅಡೆತಡೆಗಳನ್ನು ನಿವಾರಿಸಲು ಇದು ಸಹಕಾರಿಯಾಗಲಿದೆ ಎಂದು ಅವರು ಹೇಳಿದ್ದಾರೆ.

ಮಸೂದೆಯು ಆರಂಭಿಕ ಉದ್ದಿಮೆಗಳಿಗೆ ಅಗತ್ಯವಾದ ಪರಿಸರವನ್ನು



ಸಹ ಅಭಿವೃದ್ಧಿಪಡಿಸುತ್ತದೆ. ಕಂಪೆನಿಗಳ ನೊಂದಣಿಯು ಒಂದೇ ದಿನದಲ್ಲಿ ಆಗಲಿದೆ. ಆರ್ಥಿಕ ಬೆಳವಣಿಗೆಯ ಮೂಲಕ ಉದ್ಯೋಗ ಸೃಷ್ಟಿಯನ್ನು ಪ್ರೋತ್ಸಾಹಿಸುವುದೇ ಈ ಯೋಜನೆಗಳ ಹಿಂದಿನ ಪ್ರಮುಖ ಉದ್ದೇಶ ಎಂದು ಹಣಕಾಸು ಸಚಿವರು ಹೇಳಿದ್ದಾರೆ.

ಪಿಂಚಣಿಯುಕ್ತ ಸಮಾಜದೆಡೆಗೆ ಚಲಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುವ ಹಾಗೂ ಕೈಗೆಟುಕುವ ಗೃಹಸೌಲಭ್ಯಗಳನ್ನು ಒದಗಿಸುವ ಉದ್ದೇಶ ಹೊಂದಿರುವ 'ಮೇಕ್ ಇನ್ ಇಂಡಿಯಾ' ಯೋಜನೆಗೆ ಇನ್ನಷ್ಟು ಪ್ರೋತ್ಸಾಹ ನೀಡುವುದು ಕೂಡ ಇದರ ಗುರಿಯಾಗಿದೆ ಎಂದು ಅವರು ಹೇಳಿದ್ದಾರೆ. ಆರ್ಥಿಕಾಭಿವೃದ್ಧಿ ಮತ್ತು ಉದ್ಯೋಗಗಳಿಗೆ ಒತ್ತಾಸೆ ನೀಡುವ ಕ್ರಮಗಳು ಆರಂಭದ ಮೂರು ವರ್ಷಗಳಲ್ಲಿ ಮಾತ್ರ ಅಂದರೆ 2016ರ ಏಪ್ರಿಲ್‌ನಿಂದ 2019ರ ಮಾರ್ಚ್‌ವರೆಗೆ ಶೇ. 100 ಲಾಭಾಂಶ ಕಡಿತಗೊಳಿಸುವ ಕ್ರಮಗಳನ್ನು ಒಳಗೊಂಡಿವೆ. ಸಂಶೋಧನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತದಲ್ಲಿ ಅಭಿವೃದ್ಧಿಗೊಂಡು ಮತ್ತು ನೊಂದಣಿಯಾಗಿ ವಿಶ್ವದೆಲ್ಲೆಡೆ ಬಳಸಲ್ಪಡುತ್ತಿರುವ ಪೇಟೆಂಟ್‌ಗಳ ಬಳಕೆಯಿಂದ ಬರುವ ಆದಾಯದ ಮೇಲೆ ಶೇ. 10ರ ದರದಲ್ಲಿ ತೆರಿಗೆ ವಿಧಿಸುವ ಉದ್ದೇಶ ಹೊಂದಲಾಗಿದೆ.

ಉತ್ತಮವಲ್ಲದ ಹಾಗೂ ಅನುಮಾನದ ಸಾಲಗಳ ಮೇಲೆ ಶೇ. 5ರ ಕಡಿತ ಹೊಂದಲು ಬ್ಯಾಂಕಿಂಗ್‌ರಹಿತ ಹಣಕಾಸು ಸಂಸ್ಥೆಗಳು ಅರ್ಹತೆ ಪಡೆಯಲಿವೆ. ರೂ. 5ಕೋಟಿ ಆದಾಯ ಮೀರದ ಸಣ್ಣ ಕಂಪೆನಿಗಳ ಕಾರ್ಪೋರೇಟ್ ಆದಾಯ ತೆರಿಗೆಯನ್ನು ಶೇ. 29 (ಸರ್ಚಾರ್ಜ್ ಮತ್ತು ಸೆಸ್ ಪ್ರತ್ಯೇಕ) ಕ್ಕೆ ಇಳಿಸಲು ಚಿಂತಿಸಲಾಗಿದೆ.

**(71ನೇ ಪುಟಕ್ಕೆ)**

# ಬಜೆಟ್; ತೆರಿಗೆ ಲೆಕ್ಕಾಚಾರ

* ಜಯಂತ್ ರಾಯ್ ಚೌಧರಿ




**ತೆರಿಗೆ ಒಕ್ಕೂಟ ತತ್ವವನ್ನು ಪುರಸ್ಕರಿಸಲು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲ್ಪಡುವ ಸಂಪನ್ಮೂಲಗಳನ್ನು 2016–17 ರ ಬಜೆಟ್‌ನಲ್ಲಿ ಶೇ. 12ಕ್ಕೆ ಏರಿಸಲಾಗಿದೆ. ಆದರೆ, ರಾಜ್ಯ ಸರ್ಕಾರಗಳ ಮಧ್ಯೆ ಹಂಚಲಾರದ ವರಮಾನಕ್ಕೆ ಹಾಕುವಂತಹ ಸೆಸ್‌ಗಳನ್ನು ಹೆಚ್ಚು ಮಾಡುವುದು ಮತ್ತು ರಾಜ್ಯ ಸರ್ಕಾರಗಳಿಗೆ ಹೋಗಬೇಕಾಗಿರುವ ಒಟ್ಟು ಆದಾಯದ ದರಗಳನ್ನು ಬದಲಾಯಿಸುವಂತದ್ದನ್ನು ಅಲ್ಲಿನ ಸರ್ಕಾರಗಳು ಹೇಗೆ ಸ್ವೀಕರಿಸುತ್ತವೆ ಎಂಬುದನ್ನು ಕಾದು ನೋಡಬೇಕಾಗಿದೆ.**

ಕೇಂದ್ರದ 2016–17ನೇ ಬಜೆಟ್ ತರ್ಕ ಸಮ್ಮತ ತೆರಿಗೆ ವ್ಯವಸ್ಥೆಯತ್ತ ಸಾಗುವ ಸಕಾರಾತ್ಮಕ ಹೆಜ್ಜೆ ಎನಿಸಿದೆ. ಆದರೆ, ಆಯವ್ಯಯವನ್ನು ಸಾರ್ವಕಾಲಿಕ ಕಚ್ಚಾತೈಲದ ಅತಿ ಕಡಿಮೆ ದರದ ಅವಕಾಶವನ್ನು ಉಪಯೋಗಿಸಿಕೊಂಡು ರೂಪಿಸಬಹುದಾಗಿತ್ತು. ಕಳೆದ ಕೆಲವು ವರ್ಷಗಳಿಂದ ಭಾರತವು ಅನುಭವಿಸಿದ ಶೀಘ್ರಗತಿಯ ಹಣದುಬ್ಬರದ ಹಿನ್ನೆಲೆಯಲ್ಲಿ ಈ ಆಯವ್ಯಯ ಕಾರ್ಪೊರೇಟ್ ವಲಯ ಮತ್ತು ವೈಯಕ್ತಿಕ ಆದಾಯ ತೆರಿಗೆಗಳನ್ನು ಕಡಿಮೆ ಮಾಡುವುದು, ತೆರಿಗೆ ಹಂತಗಳನ್ನು ಜಾಸ್ತಿ ಮಾಡುವ ಮೂಲಕ ಹೆಚ್ಚಿನ ತೆರಿಗೆಯನ್ನು ಸಂಗ್ರಹ ಮಾಡುವ ಅವಕಾಶವನ್ನು ಕೈ ಬಿಟ್ಟಿದ್ದರಿಂದ ಈ ವಿಧಾನವನ್ನು ಮಾರುಕಟ್ಟೆ ಪಂಡಿತರುಗಳೂ ಶ್ಲಾಘಿಸಬಹುದಾದ, ನೇರ ತೆರಿಗೆ ಆದಾಯವನ್ನು ಹೆಚ್ಚಿಸಬಹುದಾದಂತಹ ಅವಕಾಶದಿಂದ ವಂಚಿತವಾಗಿದೆ. 2016–17 ರ ಆಯವ್ಯಯವೂ ಒಳ್ಳೆಯ ಅನುಕೂಲವನ್ನು ಹೊಂದಿರುವ ಪ್ರಯತ್ನವಾಗಿದೆ. ಬಹಳ ಕಾಲದಿಂದಲೂ ಕಾಯುತ್ತಿದ್ದ ತೆರಿಗೆಯ ವಿಚಾರದಲ್ಲಿ ವೈಚಾರಿಕತೆಯನ್ನು ಉಂಟು ಮಾಡುವ ಮತ್ತು ನಾವು ಒಪ್ಪಿಕೊಂಡಿದ್ದಂತಹ ಹಲವು ತೆರಿಗೆ ವಿನಾಯಿತಿಗಳನ್ನು ಕೈ ಬಿಡುವುದರ ಮೂಲಕ ತೆರಿಗೆದರಗಳನ್ನು ಕಡಿಮೆ ಮಾಡುವ ವಾಗ್ದಾನವನ್ನು ಈಡೇರಿಸುವ ಧ್ವನಿಯನ್ನು ಈ ಬಜೆಟ್ ನೀಡಿದೆ.

### ವೈಯಕ್ತಿಕ ತೆರಿಗೆ ಪಾವತಿ ಪರಿಹಾರ

ಸಣ್ಣ ಮತ್ತು ಅತಿ ಸಣ್ಣ ತೆರಿಗೆದಾರರಿಗೆ ಬಜೆಟ್‌ನಲ್ಲಿ ಕೊಂಚ ಪರಿಹಾರ ನೀಡಲಾಗಿದೆ. ವಾರ್ಷಿಕ ಆದಾಯ 5 ಲಕ್ಷ ರೂ. ದಾಟದ ತೆರಿಗೆದಾರರಿಗೆ ಐಟಿ ಕಾಯಿದೆಯ ಸೆಕ್ಷನ್ 87(ಎ) ಅಡಿ, ತೆರಿಗೆ ರಿಯಾಯಿತಿಯ ಮಿತಿಯನ್ನು 2 ಸಾವಿರ ರೂ.ನಿಂದ 5 ಸಾವಿರ ರೂ.ಗೆ ಏರಿಕೆ ಮಾಡುವ ಪ್ರಸ್ತಾಪ ಮಾಡಲಾಗಿದೆ. ಇದರಿಂದ ಸುಮಾರು 2 ಕೋಟಿ ಸಣ್ಣ ಆದಾಯದಾರರು ತಮ್ಮ ತೆರಿಗೆ ಬಾಧ್ಯತೆಯಲ್ಲಿ 3 ಸಾವಿರ ರೂ. ತೆರಿಗೆ ಪರಿಹಾರ ಪಡೆಯಲಿದ್ದಾರೆ. ಸ್ವಂತ ಮನೆ ಇಲ್ಲದವರು ಮತ್ತು ಉದ್ಯೋಗದಾತರಿಂದ ಬಾಡಿಗೆ ಮನೆ ಭತ್ಯೆ ಪಡೆಯುವ ಉದ್ಯೋಗಿಗಳು ಇನ್ನು ಮುಂದೆ ವಾರ್ಷಿಕ 60 ಸಾವಿರ ರೂ. ತೆರಿಗೆ ವಿನಾಯಿತಿ ಸೌಲಭ್ಯ ಪಡೆಯಲಿದ್ದಾರೆ. ಈವರೆಗೆ ಅದು ವಾರ್ಷಿಕ 24 ಸಾವಿರ ರೂ. ಮಾತ್ರ ಇತ್ತು. ಮೊದಲ ಬಾರಿಗೆ ಮನೆ ಖರೀದಿಸುವವರಿಗೆ 35 ಲಕ್ಷದವರೆಗಿನ ಸಾಲದ ಮೇಲಿನ ಬಡ್ಡಿಯಲ್ಲಿ ವಾರ್ಷಿಕ 50 ಸಾವಿರದವರೆಗೆ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಿಂದ ಇದು ಅನ್ವಯವಾಗಲಿದ್ದು, ಮನೆಯ ಒಟ್ಟು ಮೌಲ್ಯ 50 ಲಕ್ಷ ಮೀರಿರಬಾರದು ಎಂದೂ ಹೇಳಲಾಗಿದೆ.

### ಅತ್ಯುಚ್ಚ ವರ್ಗದ ತೆರಿಗೆ

ಆಯವ್ಯಯದಲ್ಲಿ ಒಂದು ಕೋಟಿಗೂ ಅಧಿಕ ವರಮಾನವನ್ನು ಗಳಿಸುವ ವ್ಯಕ್ತಿಗಳ ತೆರಿಗೆದರವನ್ನು ಶೇ.12ರಿಂದ 15ವರೆಗೆ ಹೆಚ್ಚಿಸಿರುವುದರಿಂದ ತೆರಿಗೆ ವಿಧಾನದಲ್ಲಿ ಹೆಚ್ಚಿನ ಸಾಮಾಜಿಕ ನ್ಯಾಯ ಒದಗಿಸಲಾಗಿದೆ. ಅತ್ಯುಚ್ಚ ವರ್ಗದ ತೆರಿಗೆ ಎಂದು ಕರೆಯಲ್ಪಡುವ ಮತ್ತು ಜಾಗತಿಕ ರೀತಿ ನೀತಿಗಳಂತೆ ಇರುವಂತಹ ಈ ತೆರಿಗೆಯಿಂದ

* ಹಿರಿಯ ಸಂಪಾದಕರು (ಬಿಸಿನೆಸ್) ಟೆಲಿಗ್ರಾಫ್.

ಜಾಸ್ತಿ ವರಮಾನ ಹೊಂದಿರುವ ವ್ಯಕ್ತಿಗಳಿಂದ ಅಧಿಕ ಆದಾಯವನ್ನು ತೆಗೆದು ಪಡೆಯುವ ಮೂಲಕ ತೆರಿಗೆಯಿಂದ ತಪ್ಪಿಸಿಕೊಳ್ಳುವವರನ್ನು ತೆರಿಗೆಯ ಆವರಣದೊಳಗೆ ತರುವುದು. ಹಾಗೂ ಮಧ್ಯಮ ವರ್ಗದ ತೆರಿಗೆದಾರರಿಗೆ ಹೊಸ ತೆರಿಗೆ ಅವಕಾಶಗಳನ್ನು ತೆರೆಯುವ ಮೂಲಕ ಆರ್ಥಿಕ ಇಳಿಮುಖತೆಯನ್ನು ತಡೆಯುವ ಒಂದು ದಿಟ್ಟ ಕ್ರಮವಾಗಿದೆ. ಇದರಲ್ಲಿ ದಿಟ್ಟ ಹೆಜ್ಜೆ ಎಂದರೆ ಶ್ರೀಮಂತರಿಗೆ ವಿರುದ್ಧವಾಗಿ ಕಾಣುವ ಆದರೆ, ಬಡವರಿಗೆ ಪೂರ್ತಿ ಪಕ್ಷಪಾತಿಯಾಗಿಲ್ಲದ ಲಾಭಾಂಶ ತೆರಿಗೆ.

ಇದರ ಪ್ರಕಾರ ವ್ಯಕ್ತಿಗತ, ಅವಿಭಕ್ತ ಕುಟುಂಬಗಳಿಗೆ ಮತ್ತು ವ್ಯವಹಾರ ಸಂಘಟನೆಗಳಿಗೆ ಅವರು ಗಳಿಸುವ ವಾರ್ಷಿಕ 10 ಲಕ್ಷಗಳಿಗಿಂತ ಅಧಿಕ ಲಾಭಾಂಶದ ಮೇಲೆ ಶೇ.10ರಷ್ಟು ತೆರಿಗೆ ವಿಧಿಸುವಂತದ್ದು, ಸಾಮಾಜಿಕ ನ್ಯಾಯವನ್ನು ಒಪ್ಪುವಂತದ್ದೇ ಆಗಿದೆ. ಮೋಟಾರು ಕಾರುಗಳ ಬಗ್ಗೆ ಭಾರತೀಯರಿಗೆ ಇರುವಂತಹ ವ್ಯಾಮೋಹವನ್ನು ನಗದೀಕರಿಸಿಕೊಳ್ಳಲು ವ್ಯಾಪಾರಿ ಮೂಲದಲ್ಲಿ ಐಷಾರಾಮಿ ಕಾರುಗಳ ಅಂದರೆ 10 ಲಕ್ಷಕ್ಕಿಂತಲೂ ಮಿಗಿಲಾದ ಬೆಲೆವುಳ್ಳ ಕಾರುಗಳ ಖರೀದಿಯ ಮೂಲದಲ್ಲೇ ಶೇ.1 ಅನ್ನು ಕಟಾಯಿಸುವುದು ಹಾಗೂ 2 ಲಕ್ಷಕ್ಕೂ ಅಧಿಕ ಸರಕು ಸೇವೆಗಳನ್ನು ನಗದಿನಲ್ಲಿ ಖರೀದಿಸುವ ನಗದು ಖರೀದಿ ಮೇಲೆ ಮೂಲದಲ್ಲೇ ಶೇ. 1 ಅನ್ನು ಕಟಾಯಿಸುವುದು ಇನ್ನೊಂದು ಉತ್ತಮ ನಿರ್ಧಾರವಾಗಿದೆ. ಇದನ್ನು ಒಪ್ಪದ ಕೆಲ ಆರ್ಥಿಕ ತಜ್ಞರು 10 ರಿಂದ 15 ಲಕ್ಷ ಮೌಲ್ಯದ ಕಾರುಗಳನ್ನು ಐಷಾರಾಮಿ ಎಂದು ತೀರ್ಮಾನಿಸುವುದು ಸಮರ್ಪಕವಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ, ದಿನವೊಂದಕ್ಕೆ ಪೂರ್ಣ ಪ್ರಮಾಣದಲ್ಲಿ ಎರಡು ಹೊತ್ತು ಊಟವನ್ನು ಹೊಂದಲಾರದಂತಹ ವ್ಯಕ್ತಿಗಳನ್ನು ಹೊಂದಿರುವ ಭಾರತದಲ್ಲಿ ರೂ. 10 ಲಕ್ಷಕ್ಕೂ ಮಿಗಿಲಾಗಿ ಕಾರುಗಳಿಗೆ ಖರ್ಚು ಮಾಡುವುದನ್ನು, ಸರಕು ಸರಂಜಾಮುಗಳಿಗೆ 2 ಲಕ್ಷ ರೂ. ನಗದು ಖರ್ಚು ಮಾಡುವುದನ್ನು ಪರಿಗಣಿಸದೆ ಇರುವುದು ತಪ್ಪಾಗುತ್ತದೆ.

### ಕಪ್ಪು ಹಣದ ತೆರಿಗೆ

ಕಪ್ಪು ಹಣ ಹೊಂದಿರುವ ದೇಶದ ತೆರಿಗೆ ವಂಚಕರಿಗೆ ಒಂದು ಬಾರಿಯ ಸೀಮಿತ ಅವಧಿಯ ಅನುಸರಣಾ ಗವಾಕ್ಷಿ ಯೋಜನೆಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಲೆಕ್ಕ ನೀಡದ ಆದಾಯ ಮತ್ತು ಸ್ವತ್ತಿನ ವಿವರ ನೀಡದವರು ತೆರಿಗೆ ವಿವರ ಘೋಷಿಸಬೇಕು. ಹಳೆಯ ವ್ಯವಹಾರಗಳಿಗೆ ಶೇ.30 ರಷ್ಟು ತೆರಿಗೆ, ಶೇ.7.5 ರಷ್ಟು ದಂಡ ಮತ್ತು ಶೇ. 7.5 ಬಡ್ಡಿ ಪಾವತಿಸಲು ಈ ಗವಾಕ್ಷಿ ಯೋಜನೆಯ ಪ್ರಯೋಜನ ಪಡೆಯಬಹುದು.

### ರಿಯಾಯಿತಿ ದರ

ಸರ್ಕಾರವೂ ಪ್ರಸ್ತುತ ಪಡಿಸಿರುವಂತೆ ಈಗಿರುವ ರಿಯಾಯಿತಿಯನ್ನು ಹಂತಹಂತವಾಗಿ ತೊಡೆದು ಹಾಕುವುದು. ತಮ್ಮ ಕಕ್ಷಿದಾರರ ಆದಾಯ ತೆರಿಗೆ ಲೆಕ್ಕಾಚಾರದಲ್ಲಿ ವಿನಾಯಿತಿಗಳನ್ನು ಉಪಯೋಗಿಸಿ ತಮ್ಮ ಲೆಕ್ಕಾಚಾರದಲ್ಲಿನ ತಾಂತ್ರಿಕತೆ ತೋರಿಸುತ್ತಿದ್ದ ಲೆಕ್ಕಾಧಿಕಾರಿಗಳಿಗೆ ಇದು ಆಘಾತಕಾರಿಯಾಗಿ ಪರಿಣಮಿಸುವ ಸಾಧ್ಯತೆ ಇದೆ. ವಿಸ್ತೃತವಾದಂತಹ ನೀಲಿ ನಕಾಶೆಯನ್ನು ತಯಾರಿಸಲಾಗಿದೆ. ಭಾರತೀಯ ಸರ್ಕಾರವೂ ಹೂಡಿಕೆ ಮತ್ತು ಪ್ರಾದೇಶಿಕ ತೆರಿಗೆ ವಿನಾಯಿತಿ ಅವಧಿಯನ್ನು ವಿದ್ಯುತ್ ಶಕ್ತಿಯ ಉತ್ಪಾದನೆ, ವಿತರಣೆ, ವಿನಿಮಯಕ್ಕೆ ಸಂಬಂಧಪಟ್ಟಂತಹ ಕ್ಷೇತ್ರಗಳಿಗೆ ವಿಶೇಷ ಆರ್ಥಿಕ ವಲಯಗಳಿಗೆ, ದೂರ ಸಂವಹನಗಳಿಗೆ ಮತ್ತು ಭಾರತದ ವಾಯುವ್ಯ ದಿಕ್ಕಿನಲ್ಲಿರುವ ಜಮ್ಮು ಕಾಶ್ಮೀರ ಹಿಮಾಚಲ ಪ್ರದೇಶಗಳಲ್ಲಿ ಸ್ಥಾಪಿಸಲಾಗುವ ಕಾರ್ಖಾನೆಗಳಿಗೆ ವಿಶೇಷ ರಿಯಾಯಿತಿಯನ್ನು ಪ್ರಸ್ತಾಪಿಸಿದೆ.

ಇದರ ಹಿಂದಿನ ಯೋಚನೆ ಎಂದರೆ ಇದಕ್ಕೆ ಸಂಬಂಧಪಟ್ಟ ತಕರಾರುಗಳನ್ನು ಕಡಿಮೆ ಮಾಡಿವುದು ಮತ್ತು ತೆರಿಗೆ ವಿಧಾನವನ್ನು ವೈಚಾರಿಕ ಮಾಡುವುದೇ ಆಗಿದೆ. ಪ್ರಸ್ತುತ ಈ ಎಲ್ಲಾ ವಿನಾಯಿತಿಗಳಿಂದ ಕೈ ಬಿಟ್ಟು ಹೋಗುವ ಆದಾಯ 62,000 ಕೋಟಿಗಿಂತಲೂ ಅಧಿಕವಾಗಿದೆ.

### ಗೂಗಲ್ ತೆರಿಗೆ

2016–17ರ ಬಜೆಟ್‌ನಲ್ಲಿ ಒಂದು ಅಚ್ಚರಿಯ ಸೇರ್ಪಡೆ ಎಂದರೆ ಗೂಗಲ್ ತೆರಿಗೆ. ಈಗಾಗಲೇ ಯುಕೆ ಇದನ್ನು ಪರಿಚಯಿಸಿದೆ. ಇ–ಕಾಮರ್ಸ್ ವೇದಿಕೆಗಳಲ್ಲಿ ಇದರ ಪ್ರಯೋಜನ ಹೆಚ್ಚು. ಆನ್‌ಲೈನ್ ಜಾಹಿರಾತು ಸೇರಿದಂತೆ ವಿದೇಶಿ ಸಂಸ್ಥೆಗಳಿಗೆ ಆನ್‌ಲೈನ್ ಪಾವತಿ ಮಾಡುವ ಸಂದರ್ಭದಲ್ಲಿ ಭಾರತೀಯ ನಿವಾಸಿಗಳಿಗೆ ಶೇ. 6 ತೆರಿಗೆ ವಿಧಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.




### ಪೆನಾಲ್ಟಿ ಕಾನೂನು

2016ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ತೆರಿಗೆ ಕಟ್ಟುವುದರಿಂದ ವಿಮುಖರಾಗಲು ಆದಾಯ ತೆರಿಗೆ ಕಚೇರಿಗೆ ಸುಳ್ಳು ಮಾಹಿತಿ, ಘೋಷಣೆ ಮಾಡುವ ವ್ಯಕ್ತಿಗಳಿಗೆ ಶಿಕ್ಷೆ ವಿಧಿಸುವಂತಹ ಕಾನೂನು ಜಾರಿಗೆ ಬಜೆಟ್‌ನಲ್ಲಿ ಅವಕಾಶ ಮಾಡಿಕೊಡಲಾಗಿದೆ.

### ರಾಜ್ಯಗಳ ಆದಾಯ

ತೆರಿಗೆ ಒಕ್ಕೂಟ ತತ್ವವನ್ನು ಪುರಸ್ಕರಿಸಲು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲ್ಪಡುವ ಸಂಪನ್ಮೂಲಗಳನ್ನು 2016–17 ರ ಬಜೆಟ್‌ನಲ್ಲಿ ಶೇ. 12ಕ್ಕೆ ಏರಿಸಲಾಗಿದೆ. ಆದರೆ, ರಾಜ್ಯ ಸರ್ಕಾರಗಳ ಮಧ್ಯೆ ಹಂಚಲಾರದ ವರಮಾನಕ್ಕೆ ಹಾಕುವಂತಹ ಸೆಸ್‌ಗಳನ್ನು ಹೆಚ್ಚು ಮಾಡುವುದು ಮತ್ತು ರಾಜ್ಯ ಸರ್ಕಾರಗಳಿಗೆ ಹೋಗಬೇಕಾಗಿರುವ ಒಟ್ಟು ಆದಾಯದ ದರಗಳನ್ನು ಬದಲಾಯಿಸುವಂತದ್ದನ್ನು ಅಲ್ಲಿನ ಸರ್ಕಾರಗಳು ಹೇಗೆ ಸ್ವೀಕರಿಸುತ್ತವೆ ಎಂಬುದನ್ನು ಕಾದು ನೋಡಬೇಕಾಗಿದೆ.

ಹೊಸದಾಗಿ ಪ್ರಾರಂಭಿಸಲಾಗಿರುವ ಕೃಷಿ ಕಲ್ಯಾಣ ಸೆಸ್ 5 ಸಾವಿರ ಕೋಟಿಯಾಗಿದ್ದು, ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲುತ್ತದೆ. ಹಾಗೆಯೇ ಮೋಟಾರು ಕಾರುಗಳ ಮೇಲೆ ಹಾಕಲಾಗುವ ಸೆಸ್ ಕೂಡ 3 ಸಾವಿರ ಕೋಟಿ ಆಗುತ್ತದೆ. 2016–17ರಲ್ಲಿ ಈ ಸೆಸ್‌ಗಳಿಂದ ರೂ. 1.9 ಲಕ್ಷ ಕೋಟಿ ಆಗುತ್ತದೆ ಎಂದು ಅಂದಾಜಿಸಲಾಗಿದೆ. ಎಲ್ಲಾ ಕೇಂದ್ರ ತೆರಿಗೆಗಳಿಂದ ಸಂಗ್ರಹಿಸುವ ಒಟ್ಟು ಮೊಬಲಗು ಶೇ.12 ರಷ್ಟು ಆಗುತ್ತದೆ ಮತ್ತು ಈ ತೆರಿಗೆಯಲ್ಲಿ ಕೇಂದ್ರದ ಪಾಲು ಇದರಿಂದಲೇ 5.1 ರಷ್ಟು ಆಗುತ್ತದೆ ಎಂದು ಪರಿಗಣಿಸಬೇಕು. ❑

# ಮುಂಗಡ ಪತ್ರ ಮತ್ತು ಲಿಂಗ ಸಂವೇದನೆ

* ಪ್ರೊ. ಹೆಚ್.ಆರ್. ಉಮ



ಭಾರತದಂತಹ ಲಿಂಗ ತಾರತಮ್ಯ ಹೆಚ್ಚಾಗಿರುವ ದೇಶದಲ್ಲಿ ಮುಂಗಡ ಪತ್ರ ಲಿಂಗ ಸಂವೇದಿಯಾಗುವ ಅನಿವಾರ್ಯತೆ ಇದೆ. ಜಗತ್ತಿನಾದ್ಯಂತ ಸರ್ಕಾರಗಳು ಈ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದು ಇಂದು ಮುಂಗಡ ಪತ್ರಗಳು ಲಿಂಗ ಸಂವೇದಿತವಾಗಿವೆ.

ಕೇಂದ್ರದ 2016-17ರ ಮುಂಗಡ ಪತ್ರ ಈಗಾಗಲೇ ನಮ್ಮ ಮುಂದಿದೆ. ವಿತ್ತಮಂತ್ರಿಗಳಾದ ಶ್ರೀ ಅರುಣ್ ಜೇಟ್ಲಿಯವರು ಕಷ್ಟದ ಕಾಲದಲ್ಲಿ ಬಹು ಪ್ರಯಾಸದಿಂದ ಈ ಮುಂಗಡ ಪತ್ರವನ್ನು ನೀಡಿದ್ದಾರೆ ಎನ್ನಬಹುದು. ವಿರೋಧ ಪಕ್ಷಗಳು ಇದರಲ್ಲೇನೂ ವಿಶೇಷತೆಯಿಲ್ಲ ಎಂದು ಉಪೇಕ್ಷಿಸಿದರೂ ಸಾರ್ವಜನಿಕವಾಗಿ ಈ ಮುಂಗಡ ಪತ್ರ ಹೆಚ್ಚಿನ ಸಮಾಧಾನ ತಂದಿದ್ದು, ಸೆನ್‌ಸೆಕ್ಸ್ ಸೂಚ್ಯಾಂಕ ಏರಿಕೆಗೆ ಕಾರಣವಾಗಿದೆ. ಈ ಮುಂಗಡ ಪತ್ರ ಮುಖ್ಯವಾಗಿ ಬಡವರ ಅದರಲ್ಲೂ ರೈತರ ಸಮಸ್ಯೆಗಳಿಗೆ ಸಮಾಧಾನ ತರುವ ಪ್ರಯತ್ನವಾಗಿದೆ.

ಕೇಂದ್ರ ಬಜೆಟ್‌ಗಿಂತ ಮುಂಚೆ ಬಂದ ರೈಲ್ವೆ ಬಜೆಟ್ ಮಹಿಳಾ ಮಣಿಗಳ ಮುಖದಲ್ಲಿ ಮಂದಹಾಸ ತಂದಿರುವುದಂತು ನಿಜ. ಶ್ರೀ ಸುರೇಶ್ ಪ್ರಭು ರವರ ರೈಲ್ವೆ ಮುಂಗಡ ಪತ್ರ ಸಾಕಷ್ಟು ಲಿಂಗ ಸಂವೇದಿಯಾಗಿದ್ದು, ಮಹಿಳೆಯರು ಇನ್ನೂ ಹೆಚ್ಚನ್ನು ಕೇಂದ್ರ ಮುಂಗಡ ಪತ್ರದಿಂದ ನಿರೀಕ್ಷಿಸಿದ್ದಂತೂ ನಿಜ. ಮಹಿಳೆಯರಿಗೆ 33% ಸಬ್‌ಕೋಟಾವನ್ನು ಎಲ್ಲಾ ವಿಭಾಗಗಳಲ್ಲಿ ನೀಡಿರುವುದು, ಮಹಿಳೆಯರಿಗಾಗಿ 24x7 ವಿಶೇಷ ಸಹಾಯವಾಣಿ ವ್ಯವಸ್ಥೆ, ಹಸುಗೂಸುಗಳಿರುವ ಮಹಿಳೆಯರಿಗೆ ರೈಲ್ವೆ ನಿಲ್ದಾಣಗಳಲ್ಲಿ ಬಿಸಿಹಾಲು ಹಾಗೂ ಮಕ್ಕಳ ಆಹಾರದ ವ್ಯವಸ್ಥೆ, ಮಕ್ಕಳ ಡೈಪರ್ ಬದಲಿಸಲು ಬೇಬಿ ಬೋರ್ಡ್, ಇವೆಲ್ಲಾ ತಾಂತ್ರಿಕವಾಗಿ ಮುಂದುವರೆಯುತ್ತಿರುವ ಅದರಲ್ಲೂ ವೃತ್ತಿಪರ ಮಹಿಳೆಯರ ಅವಶ್ಯಕತೆಗಳನ್ನು ಅರಿತು ರೈಲ್ವೆ ಸಚಿವರು ತೆಗೆದುಕೊಂಡ ಮಹತ್ತರ ನಿರ್ಧಾರಗಳೆನ್ನಬಹುದು. ಇದಲ್ಲದೆ ಮಹಿಳೆ, ಮಕ್ಕಳು ಹಾಗೂ ವಯಸ್ಸಾದವರಿಗೆ ಸ್ವಯಂ ಚಾಲಿತ ಬಾಗಿಲು ವ್ಯವಸ್ಥೆ, ಶೌಚಾಲಯದ ಸ್ವಚ್ಛತೆಗಾಗಿ ಕುಳಿತಲ್ಲೇ ಎಸ್.ಎಂ.ಎಸ್ ಸೇವೆ, ಇವೆಲ್ಲಾ ರೈಲ್ವೆ ಬಜೆಟ್‌ನ ಲಿಂಗ ಸಂವೇದನೆಗೆ ಉದಾಹರಣೆಗಳು. ರೈಲ್ವೆ ಸಚಿವರ ದೂರದೃಷ್ಟಿ ಹಾಗೂ ಲಿಂಗಸಂವೇದನೆ ಬಹಳಷ್ಟು ಜನರ ಪ್ರಶಂಸೆಗೆ ಕಾರಣವಾಗಿದೆ.

ಲಿಂಗ ತಾರತಮ್ಯ ಹೆಚ್ಚಾಗಿರುವ ಭಾರತದಂತಹ ದೇಶದಲ್ಲಿ ಮುಂಗಡ ಪತ್ರ ಲಿಂಗ ಸಂವೇದಿಯಾಗುವ ಅನಿವಾರ್ಯತೆ ಇದೆ. ಜಗತ್ತಿನಾದ್ಯಂತ ಸರ್ಕಾರಗಳು ಈ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದು ಇಂದು ಮುಂಗಡ ಪತ್ರಗಳು ಲಿಂಗ ಸಂವೇದಿತವಾಗಿವೆ. ಲಿಂಗ ಭೇದ, ಲಿಂಗ ಅಸಮಾನತೆ, ಲಿಂಗ ತಾರತಮ್ಯ, ಇವೆಲ್ಲ ಹೆಚ್ಚುತ್ತಿರುವ ಈ ಕಾಲದಲ್ಲಿ ಮುಂಗಡ ಪತ್ರ ಈ ತಾರತಮ್ಯ ಹೋಗಲಾಡಿಸುವ ಬಗ್ಗೆ, ಸಮಾನತೆಯನ್ನು ಸಾಧಿಸುವ ಬಗ್ಗೆ ಹೆಚ್ಚು ಚಿಂತಿಸಬೇಕು ಹಾಗೂ ಇದಕ್ಕಾಗಿ ಮುಂಗಡ ಪತ್ರಗಳು ಲಿಂಗ ಸಂವೇದನೆಯನ್ನು ಹೊಂದಿರಬೇಕಾಗುತ್ತದೆ.

2005-06ರಲ್ಲಿ ಭಾರತವು ತನ್ನ ಮುಂಗಡ ಪತ್ರವನ್ನು ಲಿಂಗ ಸಂವೇದಿಯಾಗಿಸಿತು. ಅಂದಿನಿಂದ ಇಂದಿನ ತನಕವೂ ನಮ್ಮ ಬಜೆಟ್ ಸರಾಸರಿ 5.5% ರಷ್ಟು ಒಟ್ಟು ಹಂಚಿಕೆಯನ್ನು ಮಹಿಳಾ ಕ್ಷೇತ್ರಕ್ಕೆ ಮೀಸಲಿಡುತ್ತ ಬಂದಿರುವುದು ಗಮನಾರ್ಹ. ಇದನ್ನು ಹೆಚ್ಚು ಮಾಡಬೇಕಾಗಿರುವುದು ಪ್ರತಿ ಸರ್ಕಾರದ ಮುಂದಿನ ಗುರಿ.

ಕೇಂದ್ರ ಸರ್ಕಾರ ಈ ವರ್ಷದ ಮುಂಗಡ ಪತ್ರದಲ್ಲಿ ಗ್ರಾಮೀಣ ಜನರ

* ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ.

ಅದರಲ್ಲೂ ರೈತಾಪಿಗಳ ಕಷ್ಟಸುಖಕ್ಕೆ ಸ್ಪಂದಿಸುವ ಪ್ರಯತ್ನ ಮಾಡಿರುವುದು ಶ್ಲಾಘನೀಯವೆ ಸರಿ. ಸರ್ಕಾರ ಬಂದಾಗಿನಿಂದ ಲಿಂಗ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ಹೆಣ್ಣು ಮಕ್ಕಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವಲ್ಲೂ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಅಷ್ಟೆ ಅಲ್ಲ ಕೇಂದ್ರ ಸರ್ಕಾರದ ಹಲವು ಪ್ರಮುಖ ಹುದ್ದೆಗಳು ಮಹಿಳೆಯರ ಪಾಲಾಗಿದೆ. ಆರ್ಥಿಕ ನಿರ್ವಹಣೆಯ ವಿಷಯದಲ್ಲಿ ಮಹಿಳೆಯ ಸಹಜ ಸಾಮರ್ಥ್ಯವನ್ನು ಗಮನಿಸಿಯೋ ಏನು ಈ ವರ್ಷದ ಮುಂಗಡ ಪತ್ರದ ತಯಾರಿಕಾ ಗುಂಪಿನಲ್ಲಿರುವ ಮಹಿಳೆಯರ ಸಂಖ್ಯೆ ಈ ಬಾರಿ ದಾಖಲೆ ಮಾಡಿದೆ ಎನ್ನಬಹುದು. ಶ್ರೀಮತಿಯರಾದ ಅಂಜಲಿ ಚಿಬ್ ದಗ್ಗಲ್, ಸ್ನೇಹಲತಾ ಶ್ರೀವಾತ್ಸವ್, ಆನ್ನಿ ಜಿ ಮ್ಯಾಥ್ಯುಲ್ ಇದರಲ್ಲಿನ ಕೆಲಮುಖ್ಯರು. ಮಹಿಳೆಯರೇ ಹೆಚ್ಚಾಗಿರುವುದರಿಂದ ಸಹಜವಾಗಿ ಮುಂಗಡ ಪತ್ರ ಲಿಂಗ ಸಂವೇದಿಯಾಗುತ್ತದೆ ಎಂದೆನ್ನಬಹುದು. ಆದರೆ ಸಾಮಾನ್ಯ ಮಹಿಳೆಯ ಪಾಲಿಗೆ ಇದು ಅಷ್ಟು ಸುಲಭವಾಗಿ ಕಾಣಸಿಗುತ್ತಿಲ್ಲ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ 2016–17ರ ಬಜೆಟ್‌ನಲ್ಲಿ ರೂ 17,408 ಕೋಟಿ ಹಂಚಿಕೆ ಮಾಡಿದ್ದು, ಪ್ರಸ್ತುತ 2016–17ರ ಆರ್ಥಿಕ ಸಮೀಕ್ಷೆಯ ಪ್ರಕಾರ ತಾಯಿ ಮತ್ತು ಮಕ್ಕಳ ಆರೋಗ್ಯವನ್ನು 'ಜನಸಂಖ್ಯಾಲಾಭಾಂಶ' ಎಂದು ಗುರುತಿಸಲಾಗಿದೆ. ಮುಖ್ಯವಾಗಿ ಆಹಾರ ಭದ್ರತೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಸರ್ಕಾರದ 'ಬೇಟಿ ಬಚಾವೊ, ಬೇಟಿ ಪಡಾವೊ' ಕಾರ್ಯಕ್ರಮ ಹೆಚ್ಚು ಪ್ರಶಂಸೆ ಪಡೆದಿದ್ದು, ಮುಂಗಡ ಪತ್ರದಲ್ಲಿ ಇದಕ್ಕೆ 75 ಕೋಟಿ(ಆರ್.ಇ) ಯಿಂದ 100 ಕೋಟಿಗೆ ಹಂಚಿಕೆ ಹೆಚ್ಚಾಗಿದೆ. ಹಾಗೇ ಅನಾಥ ಬಡ ಮಹಿಳೆಯರಿಗಾಗಿ ನಿರ್ಮಿಸ ಬೇಕಾದ ಆಶ್ರಯ ಮನೆಗಳಿಗೂ ಹಂಚಿಕೆ 52 ಕೋಟಿ ರೂಗಳಿಂದ 100 ಕೋಟಿ ರೂಗಳಿಗೆ ಹೆಚ್ಚಾಗಿದೆ. ಮಹಿಳಾ ರಕ್ಷಣಾ ನಿಧಿ ಎಂದೆನಿಸಿರುವ 'ನಿರ್ಭಯ ನಿಧಿ' ಕೂಡ ರೂ 500 ಕೋಟಿ ರೂಗಳಷ್ಟು ಹಂಚಿಕೆ ಪಡೆದಿರುವುದು ಗಮನಾರ್ಹ. ಆದರೆ ಈ ಹಂಚಿಕೆಯನ್ನು ಮಹಿಳೆ ಪರವಾಗಿ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದೇ ಇಲ್ಲಿ ಪ್ರಶ್ನೆಯಾಗಿದೆ. ನಿರ್ಭಯ ನಿಧಿ ಸ್ಥಾಪನೆಯಾದಗಿನಿಂದ ಅದರ ಹಣದ ಬಳಕೆಯಾಗುತ್ತಿಲ್ಲ. ನಿಧಿ ಇನ್ನೂ ನಿಧಿ ರೂಪದಲ್ಲೇ ಸರ್ಕಾರದ ವಶದಲ್ಲಿದೆ ಎಂದು ಹಲವು ಆಸಕ್ತರು ಪ್ರಶ್ನಿಸುತ್ತಿರುವುದು ಇದಕ್ಕೆ ಪುಷ್ಟಿ ಕೊಡುತ್ತದೆ.

ಮುಂಗಡ ಪತ್ರದಲ್ಲಿ 2000 ಕೋಟಿ ರೂಗಳನ್ನು ಎಲ್.ಪಿ.ಜಿ ಸಂಪರ್ಕ ಸಾಧಿಸಲು ಬಳಸುವುದು ಹಾಗೂ ಎಲ್.ಪಿ.ಜಿ ಗ್ಯಾಸ್‌ಗೆ ಮಹಿಳೆಯನ್ನು ಒಡತಿಯನ್ನಾಗಿ ಮಾಡಿರುವುದರ ಕಾರಣ ತಿಳಿದುಬಂದಿಲ್ಲ. ಗ್ರಾಮೀಣ ಮಹಿಳೆಗೆ ಎಲ್.ಪಿ.ಜಿ ಸೇವೆ ನೀಡುವುದು ಅವಳಿಗೆ ಮಾಡಿದ ಒಂದು ದೊಡ್ಡ ಸಹಾಯವೇ ಸರಿ. ಆದರೆ ಇದು ಮಹಿಳೆಯನ್ನು ಅಡುಗೆ ಮನೆಗೆ ಸೀಮಿತಗೊಳಿಸುವಂತೆ ಕಾಣುತ್ತಿದೆ. ಎಲ್.ಪಿ.ಜಿ ಒಡೆತನ ಅವಳ ಬಾಳಿಗೆ ಹೇಗೆ ಬೆಳಕಾಗುವುದೋ ಸ್ಪಷ್ಟವಾಗಿಲ್ಲ. (ಒಡೆತನ ಯಾರದಿದ್ದರೂ ಅಡುಗೆ ಮಾಡುವುದು ಮಹಿಳೇ ಆದ್ದರಿಂದ) ಆದರೆ ಎಲ್.ಪಿ.ಜಿ ಸಂಪರ್ಕ ದಿನಪೂರ್ತಿ ಒಲೆಮುಂದೆ ಬೇಯುತ್ತಿದ್ದ, ಹೊಗೆಯಿಂದ ಹಲವಾರು ರೋಗಗಳನ್ನು ಅನುಭವಿಸುತ್ತಿದ್ದ ಗ್ರಾಮೀಣ ಮಹಿಳೆಗೆ ಇದರಿಂದ ಸ್ವಲ್ಪ ಜೀವ ಬಂದಿರುವುದಂತೂ ನಿಜ. ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ ಸುಮಾರು 1.3 ಮಿಲಿಯನ್ ಸಾವು ಭಾರತದಲ್ಲಿ ಮನೆಯೊಳಗಿನ ವಾಯುಮಾಲಿನ್ಯದಿಂದ ಸಂಭವಿಸುತ್ತಿದೆ. ಇದಕ್ಕೆ ಸರ್ಕಾರ ತನ್ನ ಮುಂಗಡ ಪತ್ರದಲ್ಲಿ ಸ್ಪಂದಿಸಿದಂತೆ ಕಾಣುತ್ತದೆ. ಗ್ರಾಮೀಣ ಮಹಿಳೆಯರ ಪಾಲಿಗೆ ಇದಾದರೆ ದುಡಿಯುತ್ತಿರುವ ಮದ್ಯಮ ವರ್ಗದ ಮಹಿಳೆಯರು ಬಯಸಿದ್ದ ಹತ್ತು ಹಲವು ಅಂಶಗಳು ಮುಂಗಡ ಪತ್ರದಲ್ಲಿ ಕಾಣುತ್ತಿಲ್ಲ. ವೈಯಕ್ತಿಕ ತೆರಿಗೆಯಲ್ಲಿ ಯಾವುದೇ ಬದಲಾವಣೆ ತರದಿರುವುದು, ವೃತ್ತಿಪರ ಮಹಿಳೆಯರ ಹಲವಾರು ಸಮಸ್ಯೆಗಳಿಗೆ ಸ್ಪಂದಿಸದಿರುವುದು ಲಿಂಗ ಸಂವೇದನೆಗೆ ಮಿತಿ ಎನಿಸಿದೆ.

ಆದರೆ ಸ್ವಚ್ಚ ಭಾರತ ಅಭಿಯಾನದ ಕಡೆಗೆ ಮಾಡಿರುವ 9,500 ಕೋಟಿ ಹಂಚಿಕೆ, ಎಂ.ಜಿ.ಎನ್.ಆರ್.ಇ.ಜಿ.ಎ ಕಡೆಗೆ ಮಾಡಿದ ರೂ 38,500 ಕೋಟಿ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸಹಾಯಕ್ಕೆ ಮೀಸಲಿಟ್ಟಿರುವ ಹಣ ಎಲ್ಲವೂ ಪರೋಕ್ಷವಾಗಿ ಮಹಿಳೆಗೆ ಸಲ್ಲುತ್ತದೆ, ಆಕೆಯು ಅದರಲ್ಲಿ ಪಾಲುದಾರಳಾಗುತ್ತಾಳೆ ಎಂಬ ಆಶಾಕಿರಣದ ಜೊತೆ ಈ ಬಜೆಟ್‌ನ್ನು



ಮಹಿಳಾ ಪರ ಸರ್ಕಾರದ ಮುಂಗಡ ಪತ್ರ ಎನ್ನಬಹುದೇ?

### ಕರ್ನಾಟಕ ಬಜೆಟ್

2016–17 ರ ಕರ್ನಾಟಕ ರಾಜ್ಯ ಮುಂಗಡ ಪತ್ರವನ್ನು ಮಾರ್ಚ್ 18ರಂದು ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಮಂಡಿಸಿದ್ದು, ರೈತರು, ಬಡವರು, ವಿದ್ಯಾರ್ಥಿರ್ಗಳು ಹೀಗೆ ಎಲ್ಲಾ ವರ್ಗದವರಿಗೆ ನೀಡಿದಂತೆ ಮಹಿಳಾ ಪರವಾಗಿ ಸಾಕಷ್ಟು ಸವಲತ್ತುಗಳನ್ನು ನೀಡಿದ್ದಾರೆ. ಈ ಬಜೆಟ್‌ನಲ್ಲಿ ಮಹಿಳಾ ಸಬಲೀಕರಣದ ನೀತಿ ರೂಪಿಸಿರುವುದಾಗಿ ಘೋಷಿಸಿರುವುದು ಇವುಗಳಲ್ಲಿ ಮುಖ್ಯವಾದುದು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳ ಮಾದರಿಯಲ್ಲಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಗಳ ಸ್ಥಾಪನೆ ಶ್ಲಾಘನೀಯವೆನಿಸುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 5032 ಕೋಟಿ ರೂ. ಒದಗಿಸಿರುವುದು ಮಹಿಳಾ ಮತ್ತು ಮಕ್ಕಳ ಆರೋಗ್ಯ ಪರ ಅವರ ನಿಲುವನ್ನು ಸೂಚಿಸುತ್ತದೆ. ಸಮಗ್ರ ಮಾತೃ ಆರೋಗ್ಯ ಪಾಲನಾ ಯೋಜನೆಯಡಿಯಲ್ಲಿ ಗರ್ಭಿಣಿಯರಿಗೆ ಸೊಳ್ಳೆ ಪರದೆ ವಿತರಣೆ, ಬೆಂಗಳೂರಿನ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ 8 ಕೋಟಿ ರೂ. ವೆಚ್ಚದ ಮಹಿಳಾ ವಿದ್ಯಾರ್ಥಿ ನಿಲಯದ ನಿರ್ಮಾಣ ಅಂಗನವಾಡಿಗಳ ಅಭಿವೃದ್ಧಿಗೆ ಒತ್ತು. ಬೆಳಗಾವಿ ಹಾಗೂ ಬೆಂಗಳೂರು ಕೆಎಸ್‌ಆರ್‌ಪಿಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ವಸತಿ ಸೌಲಭ್ಯ, ಮಹಿಳಾ ಉದ್ಯಮ ಶೀಲತೆಯನ್ನು ಪ್ರೋತ್ಸಾಹಿಸಲು ಧಾರವಾಡದಲ್ಲಿ ಹಾಗೂ ಬಳ್ಳಾರಿಯಲ್ಲಿ ಮಹಿಳಾ ಪಾರ್ಕ್ ಸ್ಥಾಪನೆ ಇವು ಮಹಿಳಾ ಪರ ಅಂಶಗಲಾಗಿ ಈ ಮುಂಗಡ ಪತ್ರದಲ್ಲಿ ಕಾಣಸಿಗುತ್ತದೆ. ಒಟ್ಟಾರೆ ಆರೋಗ್ಯ ಶಿಕ್ಷಣ ಹಾಗೂ ರೈತಾಪಿ ವರ್ಗಕ್ಕೆ ಒತ್ತು ನೀಡುವಾಗಲೂ ಬಜೆಟ್ ಮಹಿಳಾ ಪರ ನಿಲುವು ಹೊಂದಿದೆ. ❑

# ಕರ್ನಾಟಕ ಬಜೆಟ್ 2016-17



ಹಣಕಾಸಿನ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಮಾರ್ಚ್ 18 ರಂದು ಮಂಡಿಸಿದ 2016-17ನೇ ಸಾಲಿನ ಕರ್ನಾಟಕ ರಾಜ್ಯ ಮುಂಗಡ ಪತ್ರದ ಆಯ್ದ ಅವತರಣಿಕೆ.

ಸನ್ಮಾನ್ಯ ಸಭಾಧ್ಯಕ್ಷರೇ,

ನಾನು 2016-17ನೇ ಸಾಲಿನ ಆಯವ್ಯಯವನ್ನು ಮಂಡಿಸುತ್ತಿದ್ದೇನೆ

ಕರ್ನಾಟಕದ ಪ್ರಜ್ಞಾವಂತ ಜನತೆಯ ಬೆಂಬಲ ಮತ್ತು ವಿಶ್ವಾಸದೊಂದಿಗೆ ನಮ್ಮ ಸರ್ಕಾರವು ಜನಪರ ಆಡಳಿತದ ಮೂರನೇ ವರ್ಷಾಚರಣೆಯ ಹೊಸ್ತಿಲಿನಲ್ಲಿದೆ. ಈ ಹೊತ್ತಿನಲ್ಲಿ ನಮ್ಮ ಸರ್ಕಾರದ ನಡೆಯನ್ನು ಒಮ್ಮೆ ಹಿಂತಿರುಗಿ ನೋಡಿದರೆ ನನ್ನಲ್ಲಿ ಧನ್ಯತೆಯ ಭಾವ ಮೂಡುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ಜನತೆಗೆ ನೀಡಿದ್ದ ಬಹುತೇಕ ಭರವಸೆಗಳನ್ನು ಈಡೇರಿಸಿರುವ ಸಂತಸ ಗರಿಗೆದರುತ್ತಿದೆ. ನುಡಿದಂತೆ ನಡೆದಿರುವ ಈ ಸಂತೃಪ್ತಿ ಮತ್ತು ಹೆಮ್ಮೆಯ ನಡುವೆ ನಾನು ನಮ್ಮ ಸರ್ಕಾರದ ನಾಲ್ಕನೆ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.

ಕಳೆದ ಮೂರು ಆಯವ್ಯಯ ಪತ್ರಗಳಲ್ಲಿ ಬಿಂಬಿತವಾಗಿರುವ ನಮ್ಮ ಸರ್ಕಾರದ ಆದ್ಯತೆಗಳು ಈ ಆಯವ್ಯಯ ಪತ್ರದಲ್ಲೂ ಮುಂದುವರಿದಿವೆ. ದುರ್ಬಲವರ್ಗದವರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರಿಗಾಗಿ ನಾವು ರೂಪಿಸಿರುವ "ಅನ್ನಭಾಗ್ಯ", "ಕ್ಷೀರಭಾಗ್ಯ", "ಮೈತ್ರಿ", "ಮನಸ್ವಿನಿ", "ವಿದ್ಯಾಸಿರಿ", "ವಸತಿ" ಇತ್ಯಾದಿ ಸಾಮಾಜಿಕ ವಲಯದ ಯೋಜನೆಗಳಿಗೆ ಫಲಶೃತಿಯನ್ನು ಆಧರಿಸಿ ಅಗತ್ಯ ಅನುದಾನವನ್ನು ಒದಗಿಸಲಾಗಿದೆ. ರೈತ ಕೇಂದ್ರೀಕೃತವಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ನೀರಾವರಿ ವಲಯಗಳಿಗೂ ಪ್ರಾಧಾನ್ಯತೆ ನೀಡಲಾಗಿದೆ.

ಶಿಕ್ಷಣ, ಆರೋಗ್ಯ ವಲಯಗಳ ಸುಧಾರಣೆಗೆ ಹೊಸ ಕಾರ್ಯನೀತಿ ರೂಪಿಸಲಾಗಿದೆ. ನಗರಾಭಿವೃದ್ಧಿ, ಕೈಗಾರಿಕಾಭಿವೃದ್ಧಿ, ಮೂಲಸೌಕರ್ಯ ಮತ್ತು ಪ್ರವಾಸೋದ್ಯಮಕ್ಕೆ ವಿಶೇಷ ಗಮನ ಕೇಂದ್ರೀಕರಿಸಿ ಉದ್ಯೋಗ ಸೃಜನೆಗೆ ಮತ್ತು ಮೂಲಭೂತಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ಯುವಜನರಿಗೆ ಉದ್ಯೋಗ ಪಡೆಯಲು ಅಗತ್ಯವಾದ ಕುಶಲತೆ ಮತ್ತು ಪರಿಣಿತಿ ಒದಗಿಸಲು ಪ್ರತ್ಯೇಕ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸ್ಥಾಪಿಸಲಾಗುವುದು. ಉತ್ತಮ ಆಡಳಿತದ ವಿಷಯದಲ್ಲಿ ಕರ್ನಾಟಕವು ಭಾರತದ ಮೂರನೇ ಮುಂಚೂಣಿ ರಾಜ್ಯವಾಗಿದೆ.

### ರಾಜ್ಯದ ಅರ್ಥವ್ಯವಸ್ಥೆ

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು 2014-15 ರಲ್ಲಿದ್ದ ಶೇ. 7.8ಕ್ಕೆ ಪ್ರತಿಯಾಗಿ 2015-16ರಲ್ಲಿ ಶೇ. 6.2 ರಷ್ಟು ಬೆಳವಣಿಗೆಯಾಗಿದೆ. ಕೃಷಿ ಕ್ಷೇತ್ರದ ಬೆಳವಣಿಗೆ ಕುಂಠಿತಗೊಂಡಿರುವುದು ಬೆಳವಣಿಗೆಯ ದರ ಕಡಿಮೆಯಾಗುವುದಕ್ಕೆ ಕಾರಣ. ಈ ವರ್ಷ ಕೃಷಿ ಕ್ಷೇತ್ರದ ಬೆಳವಣಿಗೆಯಲ್ಲಿ ಶೇ. 4.7 ರಷ್ಟು ಕುಂಠಿತವಾಗುವುದೆಂದು ಅಂದಾಜಿಸಲಾಗಿದೆ. 2015-16 ರಲ್ಲಿ ಮುಂಗಾರು ಹಂಗಾಮಿನಲ್ಲಿ 137 ತಾಲ್ಲೂಕುಗಳಲ್ಲಿ ಹಾಗೂ ಹಿಂಗಾರು ಹಂಗಾಮಿನಲ್ಲಿ 62 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ತಲೆದೋರಿದ್ದರಿಂದ ಆಹಾರ ಧಾನ್ಯಗಳ ಉತ್ಪಾದನೆಯು 2014-15 ರಲ್ಲಿದ್ದ 126 ಲಕ್ಷ ಟನ್‌ಗಳಿಂದ 110 ಲಕ್ಷ ಟನ್‌ಗಳಿಗೆ ಕುಸಿದಿದೆ. ಸೇವಾ ವಲಯವು ಶೇ. 9.1 ರಷ್ಟು ಬೆಳವಣಿಗೆ ಸಾಧಿಸಿದ್ದರೆ, ಕೈಗಾರಿಕಾ ವಲಯವು ಶೇ. 4.5ರಷ್ಟು ಬೆಳವಣಿಗೆಯನ್ನು ದಾಖಲಿಸುವ ನಿರೀಕ್ಷೆ ಇದೆ.


ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವನ್ನು ನಿರ್ಣಯಿಸುವ ವಿಧಾನವನ್ನು ತಿದ್ದುಪಡಿ ಮಾಡಿ, ರಾಜ್ಯದ ಆರ್ಥಿಕತೆಗೆ ಐಟಿ ವಲಯದ ವಾಸ್ತವಿಕ ಕೊಡುಗೆಯನ್ನು

* ಕೃಪೆ – ಮುಖ್ಯಮಂತ್ರಿಗಳ ಪತ್ರಿಕಾ ಕಚೇರಿ

ಪರಿಗಣಿಸಬೇಕೆಂಬುದು ನಮ್ಮ ಬಹುದಿನಗಳ ಬೇಡಿಕೆಯಾಗಿತ್ತು. 2004–05 ರಿಂದ 2011–12ರ ವರೆಗಿನ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವನ್ನು ನಿರ್ಣಯ ಮಾಡುವ ಸಂದರ್ಭದಲ್ಲಿ ಈ ಮನವಿಯನ್ನು ಪುರಸ್ಕರಿಸಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ದೇಶದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ರಾಜ್ಯದ ಕೊಡುಗೆಯು ಶೇ.5.5 ರಿಂದ ಶೇ.7ಕ್ಕೆ ಹೆಚ್ಚಿದ್ದು ಇದು ರಾಷ್ಟ್ರೀಯ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ನಮ್ಮ ರಾಜ್ಯದ ವಾಸ್ತವಿಕ ಕೊಡುಗೆಯನ್ನು ಪ್ರತಿಬಿಂಬಿಸುತ್ತಿದೆ. ಐಟಿ ವಲಯದ ಕೊಡುಗೆಯು ಶೇ.9 ರಿಂದ ಶೇ.18ಕ್ಕೆ ಏರಿಕೆಯಾಗಿದೆ. ಸೇವಾ ವಲಯದ ಒಟ್ಟಾರೆ ಕೊಡುಗೆಯು ಹಿಂದಿದ್ದ ಶೇ.59 ರಿಂದ ಶೇ.64ಕ್ಕೆ ಹೆಚ್ಚಳವಾಗಿದೆ. ಉತ್ಪಾದನಾ ವಲಯದ ಕೊಡುಗೆಯು ಶೇ.12ರಿಂದ ಶೇ.15ಕ್ಕೆ ಏರಿದೆ. ಆದರೆ ಕೃಷಿ ವಲಯದ ಕೊಡುಗೆಯು ಶೇ.14 ರಿಂದ ಶೇ.8ಕ್ಕೆ ಇಳಿಕೆಯಾಗಿರುವುದು ಕಳವಳಕಾರಿ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಕೈಗೊಂಡಿರುವ ಕೆಲವು ಪರಿಹಾರಾತ್ಮಕ ಉಪಕ್ರಮಗಳ ಕುರಿತು ನಾನು ಭಾಷಣದ ಮುಂದಿನ ಭಾಗಗಳಲ್ಲಿ ವಿವರಿಸುತ್ತೇನೆ.

**ಜಮೆ – ರೂಪಾಯಿ ಎಷ್ಟು ಭಾಗ ಯಾವುದರಿಂದ (2016–17 ಆಯವ್ಯಯ ಅಂದಾಜು)**




### ರಾಜ್ಯದ ಹಣಕಾಸು ಪರಿಸ್ಥಿತಿ

ರಾಜ್ಯದ ಯೋಜನಾ ಗಾತ್ರವು 2015–16ರಲ್ಲಿ 72,597 ಕೋಟಿ ರೂ.ಗಳಿಗೆ ನಿಗದಿಯಾಗಿತ್ತು. 63,952 ಕೋಟಿ ರೂ.ಗಳ ರಾಜ್ಯದ ಸಂಪನ್ಮೂಲ ಮತ್ತು 8,645 ಕೋಟಿ ರೂ.ಗಳ ರಾಜ್ಯ ಸಾರ್ವಜನಿಕ ಉದ್ಯಮಗಳ ಸಂಪನ್ಮೂಲಗಳ ಬೆಂಬಲವನ್ನು ಇದು ಒಳಗೊಂಡಿರುತ್ತದೆ. ಇದಕ್ಕೆ ಎದುರಾಗಿ 2015–16ರ ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನಾ ಗಾತ್ರವು 71,054 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ.

### ಯೋಜನಾ ಗಾತ್ರ

2016–17ನೇ ಸಾಲಿಗೆ ಯೋಜನಾ ಗಾತ್ರವನ್ನು 85,375 ಕೋಟಿ ರೂ.ಗಳಿಗೆ ನಿಗದಿಪಡಿಸಿರುವುದನ್ನು ಘೋಷಿಸಲು ನನಗೆ ಸಂತೋಷವಾಗುತ್ತದೆ. ಈ ಯೋಜನಾ ಗಾತ್ರ ರಾಜ್ಯ ಸರ್ಕಾರದ ಸಂಪನ್ಮೂಲಗಳು 75,665 ಕೋಟಿ ರೂ.ಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಂಪನ್ಮೂಲಗಳು 9,710 ಕೋಟಿ ರೂ.ಗಳನ್ನು ಒಳಗೊಂಡಿರುತ್ತದೆ. 2015–16ನೇ ಸಾಲಿಗೆ ನಿಗದಿಪಡಿಸಿದ್ದ 72,597 ಕೋಟಿ ರೂ.ಗಳ ಯೋಜನಾ ಗಾತ್ರಕ್ಕೆ ಹೋಲಿಸಿದಲ್ಲಿ ಈ ಯೋಜನಾ ಗಾತ್ರವು ಶೇ.17.60 ರಷ್ಟು ಹೆಚ್ಚಾಗಿದೆ.

### ಸಮನ್ವಯತೆ

ರಾಜ್ಯದ ರೈತರ ಸಂಕಷ್ಟವನ್ನು ನಿವಾರಣೆ ಮಾಡಲು ಹಾಗೂ ಕೃಷಿ ಮತ್ತು ಇತರೆ ಇಲಾಖೆಗಳ ಕಾರ್ಯಕ್ರಮಗಳನ್ನು ಒಗ್ಗೂಡಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ "ಕರ್ನಾಟಕ ರಾಜ್ಯ ಕೃಷಿ ಮತ್ತು ರೈತರ ಕಲ್ಯಾಣ ಸಮಿತಿ"ಯನ್ನು ರಚಿಸಿ, ಸದರಿ ಸಮಿತಿಯಲ್ಲಿ ಕೃಷಿ ಮತ್ತು ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಇತರೆ ಇಲಾಖೆಗಳನ್ನು ಒಂದೆಡೆ ತರಲಾಗುವುದು. ಇಂತಹ ಸಮಿತಿಗಳ ಮೂಲಕ ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಇನ್ನೂ ಹೆಚ್ಚಿನ ಸಮನ್ವಯತೆಯನ್ನು ಸಾಧಿಸಲಾಗುವುದು. ವಿವಿಧ ಕೈಗಾರಿಕೆಗಳಿಗಾಗಿ ರಚಿಸಿರುವ ವಿಶೇಷ ಆರ್ಥಿಕ ವಲಯಗಳ ಮಾದರಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ವಿಶೇಷ ಕೃಷಿ ವಲಯಗಳನ್ನು ಗುರುತಿಸಿ ರೈತರು ಹಾಗೂ ಅವರು ಅಳವಡಿಸಬಹುದಾದ ಪರಿಣಾಮಕಾರಿ ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುವುದು. ರಾಜ್ಯದ ಪ್ರತಿ ಕಂದಾಯ ವಿಭಾಗಕ್ಕೊಂದರಂತೆ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು ನೂರು ಗ್ರಾಮಗಳನ್ನು ಮಾದರಿ ಕೃಷಿ ಗ್ರಾಮಗಳನ್ನಾಗಿ ಮಾಡಲು "ಸುವರ್ಣ ಕೃಷಿ ಗ್ರಾಮ" ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಗ್ರಾಮಗಳನ್ನು ಕೃಷಿ ಹಾಗೂ ಸಂಬಂಧಿತ ಇಲಾಖೆಗಳ ಎಲ್ಲಾ ಯೋಜನೆಗಳನ್ನು ಒಗ್ಗೂಡಿಸಿಕೊಂಡು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.

ಕರ್ನಾಟಕ ರಾಜ್ಯವು ದ್ವಿದಳಧಾನ್ಯ ಉತ್ಪಾದನೆಯಲ್ಲಿ ದೇಶದಲ್ಲಿ ಆರನೇ ಸ್ಥಾನದಲ್ಲಿದೆ. 2016ನೇ ವರ್ಷವನ್ನು ಅಂತಾರಾಷ್ಟ್ರೀಯ ದ್ವಿದಳಧಾನ್ಯ ವರ್ಷವಾಗಿ ಆಚರಿಸುತ್ತಿರುವುದರಿಂದ ದ್ವಿದಳಧಾನ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ದ್ವಿದಳಧಾನ್ಯ ಅಭಿಯಾನವನ್ನು ಪ್ರಾರಂಭಿಸಲಾಗುವುದು. ಈ ಮೂಲಕ ನೂತನ ತಂತ್ರಜ್ಞಾನ ಹಾಗೂ ತಳಿ ಅಭಿವೃದ್ಧಿಪಡಿಸಲು ಮತ್ತು ಉತ್ಪಾದನೆ ಹೆಚ್ಚಿಸಲು ರೈತರಿಗೆ ಅನುಕೂಲವಾಗುವುದು.

ಆರ್.ಕೆ.ವಿ.ವೈ., ಕೃಷಿ ಭಾಗ್ಯ ಹಾಗೂ 'ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ' ಯಡಿಯಲ್ಲಿ 1 ಲಕ್ಷ ರೈತರಿಗೆ ಶೇ.90ರಷ್ಟು ಸಹಾಯಧನದಲ್ಲಿ ತುಂತುರು ಹಾಗೂ ಹನಿ ನೀರಾವರಿ ಘಟಕಗಳನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 2016–17ನೇ ಸಾಲಿನಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಡಾ. ಎಮ್. ಎಸ್. ಸ್ವಾಮಿನಾಥನ್ ರವರ ಅಧ್ಯಕ್ಷತೆಯ

ವಿಷನ್ ಗ್ರೂಪ್‌ನ ಶಿಫಾರಸ್ಸಿನಂತೆ ರಾಜ್ಯದಲ್ಲಿ ಪ್ರಗತಿಪರ ರೈತರ ಆವಿಷ್ಕಾರಗಳನ್ನು ಇತರೆ ರೈತರಿಗೆ ಪ್ರಗತಿಪರ ರೈತರ ಮೂಲಕವೇ ತಲುಪಿಸಲಾಗುವುದು. ಅಂತೆಯೇ ಕೃಷಿ ವಿಶ್ವ ವಿದ್ಯಾಲಯಗಳ ಮೂಲಕ ರೈತರ ಬೇಡಿಕೆಗೆ ಅನುಗುಣವಾಗಿ ಸೂಕ್ತ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಈ ಉದ್ದೇಶಕ್ಕಾಗಿ 2016–17ನೇ ಸಾಲಿನಲ್ಲಿ 15 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.


ಡಿಜಿಟಲ್ ಕೃಷಿಯಡಿಯಲ್ಲಿ ವಿವಿಧ ಮಾಧ್ಯಮಗಳನ್ನು ಬಳಸಿ ಕೃಷಿ ವಿಸ್ತರಣಾ ಸೇವೆಯನ್ನು ಬಲಗೊಳಿಸಲಾಗುವುದು. ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು, ಇವರ ಸಹಯೋಗದೊಂದಿಗೆ ವಿನೂತನ ಮಾದರಿಯ ವಿಸ್ತರಣಾ ವ್ಯವಸ್ಥೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿ, ಕೃಷಿ ವಿಶ್ವವಿದ್ಯಾಲಯ ಹಾಗೂ ಅಗ್ರಿ ಕ್ಲಿನಿಕ್‌ಗಳಿಗೆ ಒದಗಿಸಲಾಗುವುದು.

ರಾಜ್ಯದ 740 ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯ ಸುಮಾರು 12 ಲಕ್ಷ ರೈತರಿಗೆ ಹವಾಮಾನ ಮುನ್ಸೂಚನೆ ಹಾಗೂ ಕೃಷಿ ಸಂಬಂಧಿತ ಸಲಹೆಗಳನ್ನು ನೀಡಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2016–17ನೇ ಸಾಲಿನಲ್ಲಿ 3 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಇ–ತಂತ್ರಾಂಶವನ್ನು ಬಳಸಿ ರಾಜ್ಯದಲ್ಲಿ ಕೀಟ–ರೋಗಗಳ ಸಮರ್ಪಕ ನಿರ್ವಹಣೆ ಹಾಗೂ ರೈತರಿಗೆ ಸಲಹೆಗಳನ್ನು ನೀಡಲು ಉದ್ದೇಶಿಸಲಾಗಿದ್ದು, 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಸಾವಯವ ಭಾಗ್ಯ ಯೋಜನೆಯನ್ನು ಬಲಪಡಿಸಲು ಸ್ಥಾಪಿಸಲಾಗಿರುವ 14 ಪ್ರಾಂತೀಯ ಒಕ್ಕೂಟಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅವಶ್ಯವಿರುವ ಸಂಗ್ರಹಣಾ ವ್ಯವಸ್ಥೆ (ಗೋದಾಮು), ಸಾಗಾಣಿಕೆ, ಕ್ಲೀನಿಂಗ್/ ವರ್ಗೀಕರಣ ಪ್ಯಾಕಿಂಗ್, ಗುಣ ನಿಯಂತ್ರಣಕ್ಕಾಗಿ ಪ್ರಯೋಗಾಲಯ ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು ಹಾಗೂ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

**ವೆಚ್ಚ (ಯೋಜನೆ ಮತ್ತು ಯೋಜನೇತರ) 2016–17 ಆಯವ್ಯಯ ಅಂದಾಜು ರೂಪಾಯಿ ಯಾವ ಭಾಗ ಎಷ್ಟೆಷ್ಟು?**




ಅತಿವೃಷ್ಟಿ, ಅನಾವೃಷ್ಟಿ, ಅಕಾಲಿಕ ಮಳೆ, ಮುಂತಾದ ಪ್ರಕೃತಿ ವಿಕೋಪಗಳು ಸೇರಿದಂತೆ ಹಲವಾರು ಕಾರಣಗಳಿಂದ ಬೆಳೆ ನಷ್ಟವುಂಟಾದಾಗ ರೈತನ ನೆರವಿಗೆ ಬರಲು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು 2016–17ನೇ ಸಾಲಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರದಿಂದ 675.38 ಕೋಟಿ ರೂ.ಗಳ ವಂತಿಗೆಯನ್ನು ನೀಡಲಾಗುವುದು.

ರಾಜ್ಯ ಸರ್ಕಾರವು ಕೃಷಿವಾಣಿಜ್ಯ ಹಾಗೂ ಆಹಾರ ಸಂಸ್ಕರಣಾ ನೀತಿ, ರೂಪಿಸಿದೆ. ಇದರ ಅಂಗವಾಗಿ ಕೃಷಿ ಹಾಗೂ ಇತರೆ ವಲಯಗಳ ಉತ್ಪನ್ನಗಳ ಸಂಸ್ಕರಣೆಗೆ ಘಟಕಗಳನ್ನು ಸ್ಥಾಪಿಸಲು ಒತ್ತು ನೀಡುವ ಉದ್ದೇಶದಿಂದ ಪ್ರೋತ್ಸಾಹಧನ ನೀಡಲಾಗುವುದು. ಈ ಉದ್ದೇಶಕ್ಕಾಗಿ 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು. ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ನೆರವಾಗುವ ಹೊಸ ಆವಿಷ್ಕಾರ / ತಂತ್ರಜ್ಞಾನಗಳನ್ನು ಬಳಸಿ ಉದ್ದಿಮೆ ಸ್ಥಾಪಿಸಲು ರಾಜ್ಯ ಸರ್ಕಾರವು ಪ್ರಾರಂಭಿಕ ಹಣಕಾಸು ನೆರವು ನೀಡಲು 'ಕೃಷಿ ನವೋದ್ಯಮ' ಅನುಷ್ಠಾನಗೊಳಿಸಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

2016–17ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಒಟ್ಟಾರೆಯಾಗಿ 4344 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ತೋಟಗಾರಿಕೆ**

ತೋಟಗಾರಿಕೆ ಪ್ರದೇಶವನ್ನು ಪ್ರತಿ ವರ್ಷ ಶೇ.5 ರಂತೆ ಮತ್ತು ಉತ್ಪಾದನೆಯನ್ನು ಪ್ರತಿ ವರ್ಷ ಶೇ.8.7 ದರದಲ್ಲಿ ಹೆಚ್ಚಿಸಲು ಪ್ರಸ್ತಾಪಿಸುತ್ತಿದ್ದೇನೆ.

ಸರ್ಕಾರವು ಪಿಪಿಪಿ–ಐಹೆಚ್‌ಡಿ ಉಪಕ್ರಮಕ್ಕೆ ಅನುದಾನ ನೀಡುವ ಮೂಲಕ ರೈತ ಉತ್ಪಾದಕ ಸಂಸ್ಥೆಗಳ (ಎಫ್.ಪಿ.ಓ.) ಅಭಿಯಾನಕ್ಕೆ ಉತ್ತೇಜನ ನೀಡುವುದು. ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಗತ್ಯವಿರುವ ತಾಂತ್ರಿಕ ಮತ್ತು ನಿರ್ವಹಣಾ ನೆರವನ್ನು ಒದಗಿಸಲಾಗುವುದು, ಈ ಎಫ್.ಪಿ.ಓ.ಗಳನ್ನು ದುಡಿಯುವ ಬಂಡವಾಳ ಹಾಗೂ ಆಪತ್ತು ನಿರ್ವಹಣಾ ಬೆಂಬಲವನ್ನು ನೀಡುವ ಮೂಲಕ ಬಲಪಡಿಸಲಾಗುವುದು. ಇದರಿಂದ ಅವರು ತೋಟಗಾರಿಕಾ ಮೌಲ್ಯ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸಲು ಸಾಧ್ಯವಾಗುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ರೈತರು ತೋಟಗಾರಿಕೆಯ ಲಾಭವನ್ನು ಪಡೆಯಲು ಪ್ರೋತ್ಸಾಹಿಸುವ

# ಬಜೆಟ್ ವಿಹಂಗಮ ನೋಟ

| | ಬಜೆಟ್ ಅಂದಾಜು 2015–16 | ಪರಿಷ್ಕೃತ ಅಂದಾಜು 2015–16 | ಬಜೆಟ್ ಅಂದಾಜು 2016–17 |
|---|---|---|---|
| **ಪ್ರಾರಂಭ ಶಿಲ್ಕು** | **256.51** | **4.85** | **–139.36** |
| **ಎ. ರಾಜಸ್ವ ಲೆಕ್ಕ** | | | |
| **I. ಜಮೆ:** | | | |
| ರಾಜ್ಯ ತೆರಿಗೆ | 76445.40 | 75568.27 | 83864.45 |
| ಕೇಂದ್ರ ತೆರಿಗೆಯಲ್ಲಿ ಪಾಲು | 24789.78 | 23983.34 | 26978.84 |
| ಕೇಂದ್ರ ಸರ್ಕಾರದ ಅನುದಾನಗಳು | 9918.97 | 12767.89 | 13694.34 |
| ತೆರಿಗೆಯೇತರ ರಾಜಸ್ವ | 5206.17 | 5411.37 | 6220.45 |
| **ಒಟ್ಟು – ಎ (I)** | **116360.32** | **117730.87** | **130758.08** |
| **II. ವೆಚ್ಚ:** | | | |
| ಸಾಮಾಜಿಕ ಸೇವೆ | 45728.41 | 46837.00 | 50960.26 |
| ಆರ್ಥಿಕ ಸೇವೆ | 32175.31 | 33087.19 | 38277.08 |
| ಸಾಮಾನ್ಯ ಸೇವೆ | 30997.04 | 30495.72 | 35018.42 |
| ಸಹಾಯಾನುದಾನ ಮತ್ತು ಅಂಶದಾನ | 6548.92 | 6312.27 | 5980.31 |
| **ಒಟ್ಟು – ಎ (II)** | **115449.68** | **116732.18** | **130236.07** |
| **ಎ. ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ** | **910.64** | **998.69** | **522.01** |

| | ಬಜೆಟ್ ಅಂದಾಜು 2015–16 | ಪರಿಷ್ಕೃತ ಅಂದಾಜು 2015–16 | ಬಜೆಟ್ ಅಂದಾಜು 2016–17 |
|---|---|---|---|
| **ಬಿ. ಬಂಡವಾಳ ಲೆಕ್ಕ** | | | |
| **I. ಜಮೆ:** | | | |
| ಭಾರತ ಸರ್ಕಾರದಿಂದ ಸಾಲ | 1724.93 | 1724.93 | 1798.00 |
| ಬಹಿರಂಗ ಮಾರುಕಟ್ಟೆ ಸಾಲ | 18375.00 | 16187.50 | 25537.00 |
| ಎಲ್ಐಸಿ, ಆರ್‌ಬಿಐ, ಎನ್.ಎಸ್.ಎಸ್.ಎಫ್. ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ | 850.00 | 3320.20 | 3701.00 |
| ವಿವಿಧ ಬಂಡವಾಳ ಜಮೆಗಳು | 75.00 | 331.00 | 75.00 |
| ಸಾಲಗಳು ಮತ್ತು ಮುಂಗಡಗಳ ವಸೂಲಿ | 91.21 | 92.64 | 86.99 |
| ಸಾರ್ವಜನಿಕ ಲೆಕ್ಕ | 286190.0 | 291790.87 | 343321.25 |
| **ಒಟ್ಟು – ಬಿ (I)** | **307306.17** | **313447.14** | **374519.24** |
| **II. ಬಟವಾಡೆ :** | | | |
| ಬಂಡವಾಳ ವೆಚ್ಚ | 20563.62 | 21133.91 | 25715.90 |
| ಕೇಂದ್ರ ಸಾಲಗಳ ಮರುಸಂದಾಯ | 776.12 | 776.12 | 964.92 |
| ಮಾರುಕಟ್ಟೆ ಸಾಲಗಳ ಮರುಪಾವತಿ | 1273.46 | 1273.46 | 3981.21 |
| ಎಲ್ಐಸಿ, ಆರ್‌ಬಿಐ, ಜಿಐಸಿ, ಎನ್ಎಸ್ಎಸ್ಎಫ್ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ | 1738.32 | 1738.32 | 1895.28 |
| ಸಾಲಗಳ ಮತ್ತು ಮುಂಗಡಗಳ ಬಟವಾಡೆ | 733.23 | 848.94 | 625.19 |
| ಸಾರ್ವಜನಿಕ ಲೆಕ್ಕ | 283522.83 | 288819.29 | 342035.92 |
| **ಒಟ್ಟು – ಬಿ (II)** | **308607.58** | **314590.04** | **375218.42** |
| ಬಿ. ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ (–) | –1301.41 | –1142.90 | –699.18 |
| ಸಿ. ವರ್ಷದ ಒಟ್ಟು ಹೆಚ್ಚಳ / ಕೊರತೆ | –390.77 | –144.21 | –177.17 |
| ಡಿ. ಮುಕ್ತಾಯ ಶಿಲ್ಕು | –134.26 | –139.36 | –316.53 |

ಸಲುವಾಗಿ ಹೊಸ ಯೋಜನೆಯನ್ನು ಜಾರಿಗೊಳಿಸಲಾಗುವುದು.

ನಿಖರ ಬೇಸಾಯವನ್ನು ಪ್ರೋತ್ಸಾಹಿಸಲು ಸಕಾಲದಲ್ಲಿ ಅಗತ್ಯವಿರುವ ನೀರು ಮತ್ತು ಪೌಷ್ಠಿಕಾಂಶಗಳನ್ನು ಒದಗಿಸಲು ಹನಿ ನೀರಾವರಿ ಮತ್ತು ಫರ್ಟಿಗೇಷನ್‌ಗಾಗಿ ಸ್ವಯಂ ಚಾಲಿತ ವ್ಯವಸ್ಥೆ ಕಲ್ಪಿಸಲು ಶೇ.50ರಷ್ಟು ಸಹಾಯಧನ ನೀಡಲಾಗುವುದು.

ರಾಜ್ಯದಲ್ಲಿ ಪ್ರಮಾಣೀಕೃತ ಆಲೂಗೆಡ್ಡೆ ಬಿತ್ತನೆಯನ್ನು ಬಳಸಲು ರೈತರಿಗೆ ರಾಷ್ಟ್ರೀಯ ಬೀಜ ನಿಗಮದ ಅಥವಾ ರೈತ ಉತ್ಪಾದಕ ಸಂಸ್ಥೆಗಳ ಮುಖಾಂತರ ಕೆಜಿಗೆ 10 ರೂ.ಗಳ ವರೆಗೆ ಶೇ.50 ರಷ್ಟು ಸಹಾಯಧನವನ್ನು ಒದಗಿಸಲಾಗುವುದು.

2016–17ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 753 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ಪಶುಸಂಗೋಪನೆ**

ಪಶುಗಳ ದೇಶಿಯ ತಳಿಗಳ ವೀರ್ಯ ಬ್ಯಾಂಕ್‌ಗಳ ಸ್ಥಾಪನೆಗಾಗಿ ಮತ್ತು ಸ್ಥಳೀಯ ತಳಿಗಳ ಹಾಲು ಸಂಗ್ರಹಣೆಗಾಗಿ ಮತ್ತು ಮಾರಾಟ ಜಾಲ ವ್ಯವಸ್ಥೆಗಾಗಿ 5 ಕೋಟಿ ರೂ. ಒದಗಿಸಲಾಗುವುದು.

ಕುರಿ ಮತ್ತು ಮೇಕೆಗಳ ಕೃತಕ ಗರ್ಭದಾರಣೆಗಾಗಿ ವೀರ್ಯ ಬ್ಯಾಂಕನ್ನು



ಸ್ಥಾಪಿಸಲು ಹಾಗೂ ಮೇಕೆಯ ಹಾಲಿಗೆ ಪ್ರತ್ಯೇಕ ಮಾರಾಟ ಜಾಲವನ್ನು ಸೃಜಿಸುವ ಉದ್ದೇಶಕ್ಕಾಗಿ ಒಟ್ಟು 5 ಕೋಟಿ ರೂ.ಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.

ರಾಜ್ಯದಲ್ಲಿ ವಿಧವೆಯರ ಮತ್ತು ನಿರಾಶ್ರಿತ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಶೇಕಡಾ 75 ರಷ್ಟು ಸಹಾಯಧನದೊಂದಿಗೆ ಮೂರು ಕುರಿಗಳ ಅಥವಾ 3 ಮೇಕೆಗಳ ಘಟಕಗಳನ್ನು ನೀಡಲಾಗುವುದು. ಇದಕ್ಕಾಗಿ 10,000 ಘಟಕಗಳಿಗೆ 7.5 ಕೋಟಿ ರೂ. ಒದಗಿಸಲಾಗುವುದು.

ಹೆಬ್ಬಾಳದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ಅತ್ಯಾಧುನಿಕ ಲಸಿಕೆ ತಯಾರಿಕಾ ಘಟಕವನ್ನು ಜಾನುವಾರು ಆರೋಗ್ಯ ಸುರಕ್ಷಾ ಕವಚ ಯೋಜನೆಯಡಿ ಸ್ಥಾಪಿಸಲಾಗುವುದು. ಅಲ್ಲಿ ಕುರಿ ಮತ್ತು ಮೇಕೆಗಳ ನೀಲಿ ನಾಲಿಗೆ ರೋಗ, ಪ್ರಾಣಿಗಳಿಂದ ಮಾನವನಿಗೆ ಹರಡುವ ಬ್ರುಸಿಲೋಸಿಸ್, ಅಂಥ್ರಾಕ್ಸ್ ಮತ್ತು ಮೈಕೋಪ್ಲಾಸ್ಮಾ ಮೊದಲಾದ ರೋಗಗಳಿಗೆ ಲಸಿಕೆಗಳನ್ನು ಉತ್ಪಾದಿಸಲು 5 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು.

ಉತ್ತರ ಕರ್ನಾಟಕ ಪ್ರದೇಶದಲ್ಲಿ ಜಾನುವಾರು ಸಾಕಾಣಿಕೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು 5 ಕೋಟಿ ರೂ. ವೆಚ್ಚದಲ್ಲಿ ಬಳ್ಳಾರಿಯಲ್ಲಿ ಜಾನುವಾರುಗಳ ರೋಗ ಪತ್ತೆಗೆ ರೆಫರಲ್ ಪ್ರಯೋಗಾಲಯ ಸ್ಥಾಪಿಸಲಾಗುವುದು.

ರಾಷ್ಟ್ರ ಮಟ್ಟದಲ್ಲಿ ಪಶು ಸಂಗೋಪನಾ ನೀತಿಯು ಈಗಾಗಲೇ ಜಾರಿಯಲ್ಲಿದೆ. ಪಶು ಸಂಗೋಪನಾ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ರಾಜ್ಯದಲ್ಲಿಯೂ ಸಹ ಪಶು ಸಾಕಣೆದಾರರ ಅನಿಯಂತ್ರಿತ ತಳಿ ಸಂವರ್ಧನಾ ಚಟುವಟಿಕೆಗಳನ್ನು ನಿಯಂತ್ರಿಸಲು "ಕರ್ನಾಟಕ ಪಶು ತಳಿ ವಿಧೇಯಕವನ್ನು" ಜಾರಿಗೊಳಿಸಲಾಗುವುದು.

ಕೆ.ಎಂ.ಎಫ್‌ನ ಸಂಪೂರ್ಣ ಹೂಡಿಕೆಯೊಡನೆ ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಪಶು ಆಹಾರ ಘಟಕವನ್ನು ಸ್ಥಾಪಿಸಲಾಗುವುದು.

ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಶಿವಮೊಗ್ಗದಲ್ಲಿ ನಿಗೂಢ ರೋಗಗಳ ಸಂಶೋಧನಾ ಘಟಕವನ್ನು ಹಾಗೂ ಮುಳಬಾಗಿಲಿನಲ್ಲಿ ಜಾನುವಾರು ಆರೋಗ್ಯ ಸಂಶೋಧನೆ ಮತ್ತು ಐ.ಇ.ಸಿ ಕೇಂದ್ರವನ್ನು ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುವುದು.

ಕರ್ನಾಟಕ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಮಹಾ ಮಂಡಳಿಯನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು

2016–17ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಗೆ ಒಟ್ಟಾರೆಯಾಗಿ 1886 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

### ರೇಷ್ಮೆ

ಮಾರುಕಟ್ಟೆ ದರಗಳು ಉತ್ಪಾದನಾ ವೆಚ್ಚ ಭರಿಸಬೇಕೆಂಬುದು ರೇಷ್ಮೆ ಬೆಳೆಗಾರರು ಮತ್ತು ರೀಲರುಗಳ ನಿರೀಕ್ಷೆಯಾಗಿತ್ತು.

ಈ ಹಿನ್ನೆಲೆಯಲ್ಲಿ ರೇಷ್ಮೆ ಗೂಡು, ಕಚ್ಚಾ ರೇಷ್ಮೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ತಂತ್ರಗಾರಿಕೆ ಕುರಿತ ಕೃಷಿ ಅರ್ಥಶಾಸ್ತ್ರ ಪ್ರೊಫೆಸರ್ ಡಾ. ಎಚ್. ಬಸವರಾಜ್ ಅವರ ನೇತೃತ್ವದ ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು. ಈ ತಾಂತ್ರಿಕ ಸಮಿತಿ ವರದಿ ಆಧರಿಸಿ, ಈ ಮುಂದಿನ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು:

ಗುಣಮಟ್ಟದ ಆಧಾರದಲ್ಲಿ ಉತ್ಪಾದನಾ ವೆಚ್ಚವನ್ನು ಭರಿಸಲು ರೇಷ್ಮೆಗೂಡು ಉತ್ಪಾದನೆ ಮತ್ತು ಉತ್ಪಾದಕತೆಯ ಪ್ರೋತ್ಸಾಹಧನದ ಸೂಕ್ತ ರೀತಿಯ ಮಾರ್ಪಾಡು. ಆರಂಭದಲ್ಲಿ ಇದಕ್ಕೆ 20 ಕೋಟಿ ರೂ. ಅನುದಾನ.

ರೇಷ್ಮೆ ಗೂಡು ಬ್ಯಾಂಕ್‌ಗಳ ಸ್ಥಾಪನೆ. ಕ್ರಮೇಣ ರೈತ ಉತ್ಪಾದಕ ಸಂಘ (ಎಫ್‌ಪಿಓ) ಗಳ/ ಸಮುದಾಯ ಕೇಂದ್ರಗಳ ಮೂಲಕ ಒದಗಿಸಲಾಗುವುದು. ಇದಕ್ಕಾಗಿ 2 ಕೋಟಿ ರೂ. ಗಳ ಅನುದಾನ.

ರೈತರು ಮತ್ತು ರೀಲರುಗಳ ಅನುಕೂಲಕ್ಕಾಗಿ ಬೆಲೆ ಸ್ಥಿರೀಕರಣ ನಿಧಿಯ ಪುನರ್ ಸ್ಥಾಪನೆ.

ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ರೇಷ್ಮೆ ಪರೀಕ್ಷಾ ಕೇಂದ್ರದ ಸ್ಥಾಪನೆ. ಇದಕ್ಕೆ 1 ಕೋಟಿ ರೂ.ಗಳ ಅನುದಾನ.

ಸರ್ಕಾರವು ವರ್ಷವಿಡಿ ರೇಷ್ಮೆ ನೂಲಿನ ಬೆಲೆಯನ್ನು ಸ್ಥಿರವಾಗಿರಿಸುವುದಕ್ಕೆ ಹಾಗೂ ನೇರ ಮಾರುಕಟ್ಟೆಯನ್ನು ಪ್ರವೇಶಿಸಲು ಸಾಧ್ಯವಾಗದಿರುವ ಸಣ್ಣ ರೀಲರುಗಳಿಗೆ ಉತ್ತಮ ಮಾರುಕಟ್ಟೆಯನ್ನು ಕಲ್ಪಿಸಲು ಬದ್ಧವಾಗಿದೆ. ಕೆಎಸ್‌ಎಮ್‌ಬಿ ಯ ಈ ಧ್ಯೇಯೋದ್ದೇಶವನ್ನು ಸಾಧಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದಕ್ಕೆ 5 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದೆ. ಮಾರುಕಟ್ಟೆ ಪ್ರವೇಶಿಸುವುದಕ್ಕೆ ಅಗತ್ಯವಾದ ನೆರವನ್ನು ಬೆಲೆ ಸ್ಥಿರೀಕರಣ ನಿಧಿಯಿಂದ ಒದಗಿಸಲಾಗುವುದು.

ಸರ್ಕಾರವು ಸಮಗ್ರ ಅಧ್ಯಯನ ಆಧರಿಸಿ ರೇಷ್ಮೆ ಉದ್ಯಮದ ದೀರ್ಘಾವಧಿಯ ಅಭಿವೃದ್ಧಿಗಾಗಿ ಭವಿಷ್ಯದ ಯೋಜನೆಯನ್ನು ರೂಪಿಸುವ ಇಚ್ಛೆಯನ್ನು ಹೊಂದಿದೆ. ಅದಕ್ಕಾಗಿ ರೇಷ್ಮೆ ಉದ್ಯಮದ ಸಮಗ್ರ ಅಧ್ಯಯನವನ್ನು ಕೈಗೊಳ್ಳಲು ಉದ್ದೇಶಿಸಿದೆ.

2016–17ನೇ ಸಾಲಿನಲ್ಲಿ ರೇಷ್ಮೆ ಇಲಾಖೆಗೆ ಒಟ್ಟಾರೆಯಾಗಿ 367 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

### ಮೀನುಗಾರಿಕೆ

ಕರ್ನಾಟಕದಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು, ಅಗತ್ಯ ಯೋಜನಾ ವರದಿಯ ತಯಾರಿಕೆ ಮತ್ತು ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿ ಕೈಗೊಳ್ಳುವ ಉದ್ದೇಶದೊಂದಿಗೆ 2 ಕೋಟಿ ರೂ.ಗಳ ಆಯವ್ಯಯ ಹಂಚಿಕೆಯೊಡನೆ "ಒಳನಾಡು ಮೀನುಗಾರಿಕೆ

ಅಭಿವೃದ್ಧಿ ಕೇಂದ್ರ"ವನ್ನು ಸ್ಥಾಪಿಸಲು ಉದ್ದೇಶಿಸಿದೆ.

ಮತ್ಸ್ಯಾಶ್ರಯ ಯೋಜನೆಯಡಿ ವಸತಿ ರಹಿತ ಮೀನುಗಾರರಿಗೆ 3000 ಮನೆಗಳನ್ನು ನಿರ್ಮಿಸಲಾಗುವುದು.

ಉಡುಪಿ ಜಿಲ್ಲೆಯ ಹಂಗಾರಕಟ್ಟೆ–ಕೋಡಿ ಬೆಂಗ್ರೆಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ ಮತ್ತು ಉತ್ತರ ಕನ್ನಡ ಜಿಲ್ಲೆಯ ತದಡಿಯಲ್ಲಿ ಮೀನುಗಾರಿಕೆ ಬಂದರನ್ನು ವಿಸ್ತರಿಸುವುದಕ್ಕಾಗಿ ಅಗತ್ಯ ಪೂರ್ವಭಾವಿ ಅಧ್ಯಯನಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ನಿಸರ್ಗ ಧಾಮದಲ್ಲಿ ಶೇ.75 ಸರ್ಕಾರಿ ಪಾಲು ಮತ್ತು ಉಳಿದ ಮೊತ್ತವನ್ನು ಸೊಸೈಟಿಯು ಭರಿಸುವುದರೊಡನೆ 15 ಕೋಟಿ ರೂ. ಗಳ ವೆಚ್ಚದಲ್ಲಿ ಓಷನೇರಿಯಂ ನಿರ್ಮಾಣ ಮಾಡಲಾಗುವುದು.

10,000 ಮಹಿಳಾ ಮೀನು ಮಾರಾಟಗಾರರಿಗೆ ತಲಾ ರೂ.1000 ವೆಚ್ಚದಲ್ಲಿ ಏಪ್ರಾನ್, ಗ್ಲೌವ್ಸ್, ಫೈಬರ್ ಬುಟ್ಟಿ ಇತ್ಯಾದಿ ಸುರಕ್ಷತಾ ಸಲಕರಣೆಗಳನ್ನು ವಿತರಿಸಲು ಉದ್ದೇಶಿಸಲಾಗಿದೆ.

2016–17ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 302 ಕೋಟಿ ರೂ. ಒದಗಿಸಲಾಗಿದೆ.

**ಸಹಕಾರ**

ದಿನಾಂಕ 30.09.2015ಕ್ಕೆ ಸುಸ್ತಿಯಾಗಿರುವ ಎಲ್ಲಾ ಬಗೆಯ ಕೃಷಿ ಸಾಲಗಳ ಅಸಲನ್ನು ದಿನಾಂಕ 31.03.2016ರೊಳಗೆ ರೈತರು ಸಹಕಾರ ಸಂಸ್ಥೆಗಳಲ್ಲಿ ಪಾವತಿಸಿದಲ್ಲಿ, ಈ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಿದೆ. ಇದರ ಅಂದಾಜು 250.77 ಕೋಟಿ ರೂ.ಗಳ ಹೊರೆಯನ್ನು ಸರ್ಕಾರ ಭರಿಸುತ್ತದೆ. ಮುಂದುವರೆಯುತ್ತಿರುವ ಬರ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ರೈತರಿಗೆ ಈ ಸಾಲವನ್ನು ಮರುಪಾವತಿಸುವ ಕಾಲಾವಕಾಶವನ್ನು 30.09.2016ರವರೆಗೆ ವಿಸ್ತರಿಸಲಾಗುವುದು.

ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ. ಗಳವರೆಗೆ ಅಲ್ಪಾವಧಿ ಕೃಷಿ ಸಾಲಗಳನ್ನು ಹಾಗೂ ಶೇ.3 ರ ಬಡ್ಡಿ ದರದಲ್ಲಿ 10



ಲಕ್ಷ ರೂ.ಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳನ್ನು ವಿತರಿಸುವ ಯೋಜನೆಯನ್ನು ಮುಂದುವರೆಸಲಾಗುವುದು. 2016–17ನೇ ಸಾಲಿನಲ್ಲಿ 23 ಲಕ್ಷ ರೈತರಿಗೆ 11,000 ಕೋಟಿ ರೂ.ಗಳ ಕೃಷಿ ಸಾಲ ವಿತರಿಸುವ ಗುರಿ ನಿಗದಿಪಡಿಸಲಾಗಿದೆ.

ಯಶಸ್ವಿನಿ ಆರೋಗ್ಯ ಸೇವೆಯ ಯೋಜನೆಯ ಲಾಭವನ್ನು ಇನ್ನಷ್ಟು ವಿಸ್ತರಿಸುವ ಸಲುವಾಗಿ 169.11 ಕೋಟಿ ರೂ. ಗಳ ಅನುದಾನ ಒದಗಿಸಲಾಗುವುದು.

ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಮುಂದಿನ 3 ವರ್ಷಗಳಲ್ಲಿ ಹಂತಹಂತವಾಗಿ ಗಣಕೀಕರಣಗೊಳಿಸಲಾಗುವುದು. 2016–17ನೇ ವರ್ಷದಲ್ಲಿ ಇದಕ್ಕಾಗಿ 5 ಕೋಟಿ ರೂ. ಗಳ ಅನುದಾನವನ್ನು ಒದಗಿಸಿದೆ.

ಭಾರತದ ಮೊಟ್ಟ ಮೊದಲ ಕೃಷಿ ಸಹಕಾರ ಸಂಘ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಗದಗ ಜಿಲ್ಲೆಯ ಕಣಗಿನಹಾಳ ಕೃಷಿ ಸಹಕಾರಿ ಸಂಘದ ಪುನಶ್ಚೇತನ ಹಾಗೂ ಸಬಲೀಕರಣಕ್ಕೆ 1 ಕೋಟಿ ರೂ.ಗಳ ವಿಶೇಷ ಅನುದಾನ ನೀಡಲಾಗುವುದು.

ಕೇಂದ್ರ ಸರ್ಕಾರದಿಂದ ಬಂಡವಾಳ ಸಹಾಯಧನವು ಲಭ್ಯವಿರುವ ಪಾಲಿ ಹೌಸ್‌ಗಳಲ್ಲಿ ಬೆಳೆ ಬೆಳೆಯುವ ಹಾಗೂ ಸೌರಶಕ್ತಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಗಳಿಗೆ 10 ಲಕ್ಷ ರೂ. ವರೆಗಿನ ಸಾಲವನ್ನು ಶೇ.3ರ ಬಡ್ಡಿದರದಲ್ಲಿ ಒದಗಿಸಲಾಗುವುದು. ಈ ಯೋಜನೆಗೆ 25 ಲಕ್ಷ ರೂ.ಗಳವರೆಗಿನ ಮಿತಿಯನ್ನು ವಿಧಿಸಲಾಗುವುದು.

ಎನ್‌ಸಿಡಿಸಿ ಒಂದು ಮತ್ತು ಎರಡನೇ ಹಂತದ ಯೋಜನೆಯಡಿಯಲ್ಲಿ ಒಳನಾಡು ಮೀನುಗಾರಿಕೆಗಾಗಿ ಮೀನುಗಾರಿಕೆ ಸಹಕಾರ ಸಂಘಗಳು ಸಾಲ ಪಡೆದು, ಸುಸ್ತಿಯಾಗಿರುವ ಸಾಲದ ಅಸಲು ಮತ್ತು ಬಡ್ಡಿ ಮೊತ್ತ 473.05 ಲಕ್ಷ ರೂ.ಗಳನ್ನು ಮನ್ನಾ ಮಾಡಲಾಗುವುದು. ಇದರಿಂದ 5,340 ಸದಸ್ಯ ಮೀನುಗಾರರಿಗೆ ಅನುಕೂಲವಾಗಲಿದ್ದು, ಹೊಸ ಸಾಲ ಸೌಲಭ್ಯ ಪಡೆಯಲು ಅನುವಾಗುತ್ತದೆ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ರಾಜ್ಯಾದ್ಯಂತ ತನ್ನ ಗೋದಾಮುಗಳಲ್ಲಿ ಇರುವ ಸಾಮರ್ಥ್ಯದ ಶೇ.20ರಷ್ಟನ್ನು ಶೀತಲ ಗೃಹಗಳನ್ನಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ಪರಿವರ್ತಿಸಿ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿ ನಿರಂತರ ವಿದ್ಯುತ್ ಒದಗಿಸಿ ರೈತರಿಗೆ ಲಾಭದಾಯಕ ಬೆಲೆ ಒದಗಿಸಲು ಇ–ಮಾರಾಟ ವ್ಯವಸ್ಥೆ ಕಲ್ಪಿಸಿ ಅನುಷ್ಠಾನಗೊಳಿಸಲಾಗುವುದು.

ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಗೋದಾಮುಗಳ ಮೇಲ್ಛಾವಣಿಗಳ ಮೇಲೆ ಸುಮಾರು 1.8 ಕೋಟಿ ಚದರ ಅಡಿ ವಿಸ್ತೀರ್ಣದ ಸೌರಶಕ್ತಿ ಪ್ಯಾನಲ್‌ಗಳನ್ನು ಅಳವಡಿಸಿ 150 ಮೆ.ವಾ. ಸೌರಶಕ್ತಿ ವಿದ್ಯುತ್ ಉತ್ಪಾದಿಸಲು ಖಾಸಗಿ ಸಹಭಾಗಿತ್ವದಲ್ಲಿ ಖಾಸಗಿ ಬಂಡವಾಳದೊಂದಿಗೆ ಯೋಜನೆಯನ್ನು ರೂಪಿಸಲಾಗುವುದು.

ದೇಶದಲ್ಲಿಯೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ 103 ಪ್ರಾಥಮಿಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ವಿದ್ಯುನ್ಮಾನ ವೇದಿಕೆಯಡಿ ಏಕೀಕೃತ ಮಾರುಕಟ್ಟೆ ವ್ಯವಸ್ಥೆಗೆ ಜೋಡಣೆ ಮಾಡಲಾಗಿದೆ. ಈ ವ್ಯವಸ್ಥೆಯಲ್ಲಿ ಫೆಬ್ರವರಿ 2014ರಿಂದ ಇಲ್ಲಿಯವರೆಗೆ 17,500 ಕೋಟಿ ರೂ.ಗಳ ಮೌಲ್ಯದ ಕೃಷಿ ಉತ್ಪನ್ನಗಳ ವಹಿವಾಟು ನಡೆದಿದೆ. ಈ ವ್ಯವಸ್ಥೆಯನ್ನು ಹಂತ ಹಂತವಾಗಿ ಉಳಿದ ಮಾರುಕಟ್ಟೆಗಳಿಗೂ ವಿಸ್ತರಿಸಲಾಗುವುದು.

ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಲು ಈ ಮುಂದಿನ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

25 ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಕುರಿ ಮತ್ತು ಮೇಕೆ ಮಾರುಕಟ್ಟೆಗಳನ್ನು 5 ಕೋಟಿ ರೂ.ಗಳ ವೆಚ್ಚದಲ್ಲಿ ಆಧುನೀಕರಿಸುವ ಮೂಲಕ ನೇರ ತೂಕ ಆಧರಿತ ಮಾರಾಟವನ್ನು ಜಾರಿಗೆ ತರಲಾಗುವುದು.

4 ಮಾರುಕಟ್ಟೆ ಆವರಣಗಳಲ್ಲಿ ಕೃಷಿ ಉತ್ಪನ್ನಗಳ ದಾಸ್ತಾನಿಗಾಗಿ ಸೈಲೊಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಅಲ್ಲದೇ, 5 ಮಾರುಕಟ್ಟೆಗಳಲ್ಲಿ ವಯಾಬಿಲಿಟಿ ಗ್ಯಾಪ್ ಫಂಡ್‌ನೊಂದಿಗೆ ಸೈಲೋಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಈ ಕಾರ್ಯಕ್ರಮಗಳಿಗೆ ಒಟ್ಟಾರೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ತರಕಾರಿ ಮಾರುಕಟ್ಟೆಗಳಿಗೆ 2 ಕೋಟಿ ರೂ.ಗಳ ವೆಚ್ಚದಲ್ಲಿ ಆಧುನಿಕ ಉಪಕರಣಗಳನ್ನು ನೀಡಲಾಗುವುದು.

ರಾಜ್ಯದ 25 ಪ್ರಮುಖ ಗ್ರಾಮೀಣ ಉಪ ಮಾರುಕಟ್ಟೆಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಲು 2.5 ಕೋಟಿ ರೂ.ಗಳ ವೆಚ್ಚದಲ್ಲಿ ಗ್ರಾಮೀಣ ಗಂಗಾ ಯೋಜನೆ ಹಾಗೂ 1 ಕೋಟಿ ರೂ. ವೆಚ್ಚದಲ್ಲಿ ರೈತರಿಗೆ ಅಗತ್ಯ ಮಾಹಿತಿ ಒದಗಿಸಲು ಕಿಯಾಸ್ಕ್‌ಗಳನ್ನು ಒದಗಿಸುವ ಯೋಜನೆಗಳನ್ನು ಮಾರುಕಟ್ಟೆ ನಿಧಿಯಿಂದ ತೆಗೆದುಕೊಳ್ಳಲಾಗುವುದು.

5 ಕೋಟಿ ರೂ.ಗಳ ವೆಚ್ಚದಲ್ಲಿ ತ್ಯಾಜ್ಯ ಮುಕ್ತ ಮಾರುಕಟ್ಟೆ ಯೋಜನೆ, 2.5 ಕೋಟಿ ರೂ.ಗಳ ವೆಚ್ಚದಲ್ಲಿ ಭಾನುವಾರದ ಮಾರುಕಟ್ಟೆ ಯೋಜನೆ ಹಾಗೂ 16 ಕೋಟಿ ರೂ.ಗಳ ವೆಚ್ಚದಲ್ಲಿ ಶೀತಲಗೃಹ ಮತ್ತು ಇರೇಡಿಯೇಷನ್ ಘಟಕ ಸ್ಥಾಪನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಮಹಿಳಾ ಸಬಲೀಕರಣ ಪ್ರಕ್ರಿಯೆಯ ಪ್ರಮುಖ ಹಂತವಾಗಿ ಎಪಿಎಂಸಿ ಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು 1 ರಿಂದ 3 ಕ್ಕೆ ಹೆಚ್ಚಿಸಲು ಉದ್ದೇಶಿಸಿದೆ.

2016–17ನೇ ಸಾಲಿನಲ್ಲಿ ಸಹಕಾರ ಇಲಾಖೆಗೆ ಒಟ್ಟಾರೆಯಾಗಿ 1463 ಕೋಟಿ ರೂ. ಗಳನ್ನು ಒದಗಿಸಲಾಗಿದೆ

### ಜಲಸಂಪನ್ಮೂಲ

**ಭಾರಿ ಮತ್ತು ಮಧ್ಯಮ ನೀರಾವರಿ :** 2ನೇ ಹಂತದ ರಾಮ್‌ಥಾಲ್ ನೀರಾವರಿ ಯೋಜನೆಯ ಸುಮಾರು 60,000 ಎಕರೆ ಹನಿ ನೀರಾವರಿ ಅಳವಡಿಕೆಯ ಪ್ರಕ್ರಿಯೆ 2016–17ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

2016–17ನೇ ಸಾಲಿನಲ್ಲಿ ಸುಮಾರು 3000 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

* ಕೊಳಚಿ ಬಲದಂಡೆ ಕಾಲುವೆಗಳ ಆಧುನೀಕರಣ. * ಮಾರೇಹಳ್ಳಿ ಕೆರೆ ಕಾಲುವೆಗಳ ಆಧುನೀಕರಣ * ಹಾರಂಗಿ ಬಲದಂಡೆ ನಾಲೆಯ ಅಭಿವೃದ್ಧಿ * ತಾರಕ ಬಲದಂಡೆ ನಾಲೆಯ ಅಭಿವೃದ್ಧಿ * ಹೆಬ್ಬಾಳ್ಳ ಚೆನ್ನಯ್ಯ ಮುಖ್ಯ ಕಾಲುವೆಯ ಆಧುನೀಕರಣ * ಹೇಮಾವತಿ ಬಲದಂಡೆ ನಾಲೆಯ ವಿತರಣಾ ನಾಲೆ 35 ರ ಆಧುನೀಕರಣ * ಕಬಿನಿ ಬಲದಂಡೆ ನಾಲೆ ವಿತರಣಾ ನಾಲೆಗಳ ಅಭಿವೃದ್ಧಿ * ಶಿಂಷಾ ಬಲದಂಡೆ ನಾಲೆಯ ಆಧುನೀಕರಣ * ನುಗು ಯೋಜನೆಯ ಮೇಲ್ಮಟ್ಟದ ನಾಲೆಯ ಆಧುನೀಕರಣ * ತಾರಕ ಎಡದಂಡೆ ನಾಲೆಯ ಆಧುನೀಕರಣ * ಪೂರಿಗಾಲಿ ಸಮಗ್ರ ಹನಿ/ತುಂತುರು ನೀರಾವರಿ ಯೋಜನೆ. * ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನಡಿ 16 ಕೆರೆಗಳನ್ನು ತುಂಬಿಸುವ ಸಂಕ ಮತ್ತು ಬುಯ್ಯಾರ್ ಯೋಜನೆಗಳು. * ಕೂಡಲಸಂಗಮ–ಅಡವಿಹಾಳ ಸೇತುವೆ ನಿರ್ಮಾಣ. * ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನಡಿ ಜಟ್ಟೂರು ಗ್ರಾಮದ ಬಳಿ ಕಾಗಿನ ನದಿಗೆ ಅಡ್ಡಲಾಗಿ ಜಟ್ಟೂರು ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಯ ಪ್ರಾರಂಭ. * ನಂದವಾಡಗಿ ಏತ ನೀರಾವರಿ ಯೋಜನೆ. * ವೆಂಕಟೇಶ್ವರ ಏತ ನೀರಾವರಿ ಯೋಜನೆಯ ಅನುಷ್ಠಾನ. * ವೀರಭದ್ರೇಶ್ವರ ಏತ ನೀರಾವರಿ ಯೋಜನೆಯ ಅನುಷ್ಠಾನ. * ಬೆಣ್ಣೆತೊರ ಯೋಜನೆಯ ಆಧುನೀಕರಣ. * ಪಿರಿಯಾಪಟ್ಟಣದ ಮುತ್ತಿನ ಮುಳಿಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ ನೀರು ಎತ್ತಿ 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆ. * ಕಾರಂಜ ಯೋಜನೆ ಮತ್ತು ಚುಲ್ಕಿ ಯೋಜನೆಗಳನ್ನು 2016–17ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಇದಲ್ಲದೇ 962 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಮಲಪ್ರಭಾ ನಾಲಾ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಶೀಘ್ರ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಮನ್ವಯ ಸಮಿತಿ ರಚನೆ ಮಾಡಲಾಗುವುದು.

ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳಿಗಾಗಿಯೇ ಪ್ರತ್ಯೇಕ ನಿಗಮವನ್ನು ರಚಿಸಲಾಗುವುದು. ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆಗಳ ಬಗ್ಗೆ ಅಧ್ಯಯನ ನಡೆಸಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಬರ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸುವ ಬಗ್ಗೆ ವರದಿ ಸಲ್ಲಿಸಲು ತಜ್ಞರ ಸಮಿತಿ ರಚಿಸಲಾಗುವುದು.

**ಸಣ್ಣ ನೀರಾವರಿ :** 2015–16ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯು 53,668 ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ಹೊಸದಾಗಿ ನೀರಾವರಿ ಸೌಲಭ್ಯ ಕಲ್ಪಿಸಿದೆ ಹಾಗೂ 16,183 ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಮರುಕಲ್ಪಿಸಿದೆ.

ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಮೇಲ್ಮೈ ಜಲಮೂಲಗಳಿಂದ ಸಾಮೂಹಿಕ ಏತನೀರಾವರಿ ಯೋಜನೆಗಳನ್ನು ನಿರ್ಮಿಸುವುದು ಹಾಗೂ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ಮುಂದುವರಿಸಲಾಗುವುದು.

2016–17ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಗೆ ಒಟ್ಟಾರೆಯಾಗಿ 14,477 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಜಲಸಂಪನ್ಮೂಲ ವಲಯಕ್ಕೆ ನಾವು 5 ವರ್ಷದಲ್ಲಿ 50,000 ಕೋಟಿ ರೂ.ಗಳನ್ನು ಒದಗಿಸಲು ಬದ್ಧತೆಯನ್ನು ವ್ಯಕ್ತಪಡಿಸಿದ್ದೆವು. ಈ ವರ್ಷದ ಹಂಚಿಕೆಯೊಡನೆ ನಮ್ಮ ಸರ್ಕಾರದಿಂದ 2013–14ರಿಂದ ಈ ವಲಯಕ್ಕೆ ನೀಡಲ್ಪಟ್ಟ ಅನುದಾನದ ಮೊತ್ತ 46,931 ಕೋಟಿ ರೂ. ಎಂಬುದಾಗಿ ತಿಳಿಸಲು ಹರ್ಷಿಸುತ್ತೇನೆ.

**ಅರಣ್ಯ ಪರಿಸರ**

ಡೆಹರಾಡೂನ್‌ನಲ್ಲಿರುವ ಭಾರತೀಯ ಅರಣ್ಯ ಸಮೀಕ್ಷಾ ಸಂಸ್ಥೆಯು (ಎಫ್‌ಎಸ್‌ಐ) 2013–15ರ ಅವಧಿಯ ಸಮೀಕ್ಷಾ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ 28,900 ಹೆಕ್ಟೇರ್ ಪ್ರದೇಶದಲ್ಲಿ ಹಸಿರು ಕವಚ ಹೆಚ್ಚಾಗಿದೆಯೆಂದು ಪ್ರಕಟಿಸಿದೆ. ಮರಗಳ ಸಾಂದ್ರತೆಯೂ ಹೆಚ್ಚಾಗಿರುವ ಅಂಶವು ಹೆಮ್ಮೆಯ ವಿಚಾರವಾಗಿದೆ.

ಅರಣ್ಯ ಇಲಾಖೆಯಿಂದ 71401 ಹೆಕ್ಟೇರ್ ಪ್ರದೇಶದಲ್ಲಿ ನೆಡು ತೋಪುಗಳನ್ನು ಬೆಳೆಸಲಾಗಿದೆ. 4.33 ಕೋಟಿ ಸಸಿಗಳನ್ನು ನೆಡಲಾಗಿದೆ ಹಾಗೂ ಕೃಷಿ ಮತ್ತು ಇತರೆ ಖಾಸಗಿ ಭೂಮಿಯಲ್ಲಿ ನೆಡುವುದಕ್ಕೆ 2.17 ಕೋಟಿ ಸಸಿಗಳನ್ನು ವಿತರಿಸಲಾಗಿದೆ. 2016–17ನೇ ಸಾಲಿನ ಹೊಸ ಯೋಜನೆಗಳು

2016–17ನೇ ಸಾಲಿನಲ್ಲಿ ಇಲಾಖೆಯಿಂದ 5.5 ಕೋಟಿ ಸಸಿಗಳನ್ನು ನೆಡಲಾಗುವುದು ಹಾಗೂ ಕೃಷಿ ಮತ್ತು ಇತರೆ ಖಾಸಗಿ ಜಮೀನಿನಲ್ಲಿ ಹಾಗೂ ಶಾಲಾ ಆವರಣಗಳಲ್ಲಿ ನೆಡುವುದಕ್ಕೆ 2.5 ಕೋಟಿ ಸಸಿಗಳನ್ನು ವಿತರಿಸಲಾಗುವುದು.

ಆನೆ ಕಾರಿಡಾರ್‌ಗಳನ್ನು ಪುನರ್ ಸ್ಥಾಪಿಸುವ ದೃಷ್ಟಿಯಿಂದ ಸರ್ಕಾರದ ವತಿಯಿಂದ ಅರಣ್ಯದಲ್ಲಿರುವ ಖಾಸಗಿ ಜಮೀನುಗಳನ್ನು ಖರೀದಿಸಲಾಗುವುದು. ಇದಕ್ಕಾಗಿ 20 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

ಅಲ್ಲದೆ ಸ್ವಯಂ ಸೇವಾ ಸಂಸ್ಥೆ/ ಖಾಸಗಿ ಟ್ರಸ್ಟ್‌ಗಳು ಮತ್ತು ಅರಣ್ಯ ಜಮೀನಿನ ಬಳಕೆದಾರರೂ ಸಹ ಅರಣ್ಯದಂಚಿನ ಮತ್ತು ಅರಣ್ಯದೊಳಗಿನ ಖಾಸಗಿ ಜಮೀನನ್ನು ಖರೀದಿಸಿ, ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಪ್ರೋತ್ಸಾಹಿಸಲಾಗುವುದು.

ಪಶ್ಚಿಮ ಘಟ್ಟದ ಸೂಕ್ಷ್ಮ ಅರಣ್ಯ ಪ್ರದೇಶಗಳು, ವನ್ಯಜೀವಿ ಅಭಯಾರಣ್ಯಗಳ ಸೂಕ್ಷ್ಮ ಪ್ರದೇಶಗಳಲ್ಲಿ, ಪ್ರಾರಂಭಿಕವಾಗಿ ಚಾಮರಾಜನಗರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಸಾಮಾನ್ಯ ವರ್ಗದ ಕುಟುಂಬಗಳಿಗೆ ಎಲ್.ಪಿ.ಜಿ ಸಂಪರ್ಕ ಒದಗಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಶ್ರೀ ಡಿ. ದೇವರಾಜ ಅರಸು ಇವರ ಜನ್ಮ ಶತಮಾನೋತ್ಸವದ ಅಂಗವಾಗಿ ಹುಣಸೂರಿನ ಬಳಿ 150 ಎಕರೆ ಅರಣ್ಯ ಪ್ರದೇಶದಲ್ಲಿ "ಶ್ರೀ ಡಿ. ದೇವರಾಜು ಅರಸು ಬಿದಿರು ವನ"ವನ್ನು ಟ್ರೀ ಪಾರ್ಕ್ ಯೋಜನೆಯಡಿ ಸ್ಥಾಪಿಸಿ ಅಭಿವೃದ್ಧಿಪಡಿಸಲಾಗುವುದು.

ಮನೆಗಳಲ್ಲಿ ನಿರ್ವಹಿಸಬಹುದಾದ ಹಾಗೂ ನಗರದ ಹಂತದಲ್ಲಿ ನಿರ್ವಹಿಸಬಹುದಾದ ಮಿತವ್ಯಯದ ಘನತ್ಯಾಜ್ಯ ನಿರ್ವಹಣಾ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಯೋಜನೆಗಳನ್ನು 2ನೇ ಹಂತದ ನಗರಗಳಲ್ಲಿ ಪ್ರಾಯೋಗಿಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಾರಿಗೊಳಿಸಲಾಗುವುದು.

2016–17ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ವನ್ಯಜೀವಿ ಇಲಾಖೆಗೆ ಒಟ್ಟಾರೆಯಾಗಿ 1609 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು, ಪ್ರಸ್ತುತ ಇರುವ ಯೋಜನೆಗಳನ್ನು ತಾರ್ಕಿಕವಾಗಿ ಸಮನ್ವಯಗೊಳಿಸಿ ಮುಂದಿನ 5 ಹೊಸ ಕಾರ್ಯಕ್ರಮಗಳಡಿ ತರಲಾಗುವುದು:

ಶಿಕ್ಷಣ ಗುಣಮಟ್ಟ ಸುಧಾರಣಾ ಕಾರ್ಯಕ್ರಮ. ಸರ್ಕಾರಿ ಶಾಲೆಗಳಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಡಿಜಿಟಲ್ ಸಾಕ್ಷರತೆಯನ್ನು ಒದಗಿಸಲು ಪ್ರೌಢ ಶಾಲಾ ಶಿಕ್ಷಕರ ಮೂಲಕ ಸಮಗ್ರವಾದ ಇ–ವಿಷಯಾಧಾರಿತ 'ಐಟಿ@ಸ್ಕೂಲ್ಸ್ ಇನ್ ಕರ್ನಾಟಕ' (IT at Schools in Karnataka ) ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು.

ಪ್ರೌಢಶಾಲೆ ಮತ್ತು ಪದವಿಪೂರ್ವ ಶಿಕ್ಷಣವನ್ನು ಒಂದೇ ಆಡಳಿತ ಮತ್ತು ಕಾರ್ಯವ್ಯವಸ್ಥೆಯಡಿ ತರಲು ಮೂರು ವರ್ಷದ ಕ್ರಿಯಾ ಯೋಜನೆ ರೂಪಿಸಲಾಗುವುದು. ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿಯಲ್ಲಿ ಅಡಿಗೆಯವರ ಗೌರವಧನವನ್ನು ಮಾಸಿಕ ರೂ.300 ರಷ್ಟು ಹೆಚ್ಚಿಸಲಾಗುವುದು.

2016–17ನೇ ಸಾಲಿನಲ್ಲಿ ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 17,373 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಉನ್ನತ ಶಿಕ್ಷಣ**

ರಾಜ್ಯದಲ್ಲಿ ಜ್ಞಾನ ಮತ್ತು ಆರ್ಥಿಕ ಅಗತ್ಯಗಳಿಗೆ ಒತ್ತು ನೀಡುವ ಮಾನವ ಸಂಪನ್ಮೂಲ ಕೇಂದ್ರಿತ ಪ್ರಗತಿದಾಯಕ ಕರ್ನಾಟಕ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗುವುದು.

ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸಂಸ್ಥೆಗಳಲ್ಲಿ ಜ್ಞಾನಸಂಗಮ ಯೋಜನೆಯನ್ನು ವಿಸ್ತರಿಸಲಾಗುವುದು.

ಸಾಂಪ್ರದಾಯಿಕ ಪದವಿ ಕೋರ್ಸ್‌ಗಳ ಜೊತೆಗೆ ಉತ್ತಮ ಉದ್ಯೋಗಾವಕಾಶಗಳಿರುವ ಕ್ಷೇತ್ರಗಳಾದ ಮಾಹಿತಿ ತಂತ್ರಜ್ಞಾನ, ದೂರ ಸಂಪರ್ಕ, ರೀಟೇಲ್, ಪ್ರವಾಸೋದ್ಯಮ, ಮಾಧ್ಯಮ ಮತ್ತು ಮನೋರಂಜನೆ, ಎಲೆಕ್ಟ್ರಾನಿಕ್ಸ್ ಮತ್ತು ಆರೋಗ್ಯ ಪಾಲನೆ, ಮೆಕ್ಯಾನಿಕಲ್, ಸೈಬರ್ ಭದ್ರತೆ ಇತ್ಯಾದಿ ಕೋರ್ಸ್‌ಗಳನ್ನು 5 ಕೋಟಿ ರೂ.ಗಳ ವೆಚ್ಚದೊಂದಿಗೆ ಇಂಡೋ ಜರ್ಮನ್ ಸಹಭಾಗಿತ್ವದಲ್ಲಿ 5 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾರಂಭಿಸಲಾಗುವುದು.

ಶ್ರೇಷ್ಠತಾ ಕೇಂದ್ರಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಲಾಗುವುದು.

ಈ ಕೇಂದ್ರಗಳನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ತುಮಕೂರು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು 10 ಕೋಟಿ ರೂ.ಗಳ ವೆಚ್ಚದಲ್ಲಿ ತೆರೆಯಲಾಗುವುದು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕಾರ್ಯವ್ಯಾಪ್ತಿ ಅಡಿಯಲ್ಲಿ

ರಾಜ್ಯದ ಶ್ರೀಮಂತ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಂಪರೆಯನ್ನು ಬಿಂಬಿಸಲು ಕರ್ನಾಟಕ ಪಾರಂಪರಿಕ ಕೇಂದ್ರವನ್ನು 2 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಸ್ಥಾಪಿಸಲಾಗುವುದು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 2 ಕೋಟಿ ರೂ.ಗಳ ವೆಚ್ಚದಲ್ಲಿ ಎಂ.ಎಂ.ಕಲಬುರ್ಗಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು ಹಾಗೂ ಎಂ.ಎಂ.ಕಲಬುರ್ಗಿಯವರ ಹೆಸರಿನಲ್ಲಿ ಅತ್ಯುತ್ತಮ ಸಂಶೋಧನಾ ಸಾಹಿತ್ಯಕ್ಕಾಗಿ ಪ್ರತಿ ವರ್ಷ ಪ್ರಶಸ್ತಿ ನೀಡಲಾಗುವುದು.

2016-17ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 4651 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಆತ್ಮಹತ್ಯೆಗೆ ಒಳಗಾದ ರೈತರ ಕುಟುಂಬಗಳಿಗೆ ಸಮಗ್ರ ಆರೋಗ್ಯ ಸೇವೆಯನ್ನು ಒದಗಿಸಲು "ಇಂದಿರಾ ಸುರಕ್ಷಾ" ಯೋಜನೆ ಜಾರಿಗೊಳಿಸಲಾಗುವುದು.

"ಆರೈಕೆ" ಯೋಜನೆ ಅಡಿಯಲ್ಲಿ ಜಿಲ್ಲಾ ಆಸ್ಪತ್ರೆ ಮತ್ತು ತಾಯಿ ಮಕ್ಕಳ ಆಸ್ಪತ್ರೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಸ್ವಚ್ಛ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯವನ್ನು ಹಾಗೂ ರೋಗಿಗಳ ಕುಟುಂಬದವರಿಗೆ ತಂಗುದಾಣ ನಿರ್ಮಿಸಲಾಗುವುದು.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನೆರವಿನೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

* "ಆಪದ್ಬಾಂಧವ" ಯೋಜನೆಯಡಿ ರಾಷ್ಟ್ರೀಯ ಮತ್ತು ರಾಜ್ಯದ ಹೆದ್ದಾರಿಗಳಲ್ಲಿ ಅಪಘಾತಕ್ಕೊಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ರಾಜ್ಯದ 5 ಸ್ಥಳಗಳಲ್ಲಿ ಅಪಘಾತ ಚಿಕಿತ್ಸಾ ಕೇಂದ್ರಗಳನ್ನು 52.96 ಕೋಟಿ ರೂ. ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

* 1.66 ಕೋಟಿ ರೂ.ವೆಚ್ಚದಲ್ಲಿ Oral Cancer ಪತ್ತೆಹಚ್ಚಲು ತಪಾಸಣಾ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

* 'ಡಯಾಲಿಸಿಸ್ ಯೋಜನೆ' ಅಡಿಯಲ್ಲಿ ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 25 ಹಾಸಿಗೆಗಳ ವಿಶೇಷ ಡಯಾಲಿಸಿಸ್ ಘಟಕವನ್ನು 4.49 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

* "ಸಮಗ್ರ ಮಾತೃ ಆರೋಗ್ಯ ಪಾಲನಾ ಯೋಜನೆ" ಯಡಿಯಲ್ಲಿ ಎಲ್ಲಾ ಗರ್ಭಿಣಿ ಸ್ತ್ರೀಯರಿಗೆ ಸೊಳ್ಳೆಗಳಿಂದ ಹರಡುವ ಮಲೇರಿಯಾ, ಡೆಂಗಿ, ಚಿಕೂನ್‌ಗುನ್ಯಾ ಹಾಗೂ ಜಿಕಾ ರೋಗ ತಡೆಗಟ್ಟಲು ಸೊಳ್ಳೆ ಪರದೆ ಸರಬರಾಜು ಮಾಡಲಾಗುವುದು.

* 'ಸಂಚಾರಿ ಆರೋಗ್ಯ ಹಾಗೂ ಮೊಬೈಕ್ ಕ್ಲಿನಿಕ್ ಸೇವೆ" ಅಡಿಯಲ್ಲಿ ಆಸ್ಪತ್ರೆ ಸೌಲಭ್ಯ ಹಾಗೂ ಸಂಚಾರ ವ್ಯವಸ್ಥೆ ಇಲ್ಲದ ಹಳ್ಳಿಗಳಿಗೆ ಆರೋಗ್ಯ ಸೌಲಭ್ಯ ಸಂಚಾರಿ ಆರೋಗ್ಯ ಘಟಕ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು. ಆಂಬ್ಯುಲೆನ್ಸ್ ವಾಹನ ಹೋಗಲಾರದಂತಹ ಹಳ್ಳಿಗಳಿಗೆ (ದ್ವಿಚಕ್ರ ವಾಹನದ ಚಿಕಿತ್ಸಾ ಘಟಕ) ಕಳುಹಿಸಲು ಕಾರ್ಯಕ್ರಮ ರೂಪಿಸಲಾಗುವುದು.

* "ಅಭಯ" ಯೋಜನೆಯಡಿ ಶಿಶುಬಾಲವಾಡಿ, ಅಂಗನವಾಡಿ, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಉಚಿತ ತಪಾಸಣೆ ಹಾಗೂ ಚಿಕಿತ್ಸೆ.

ಮೈಸೂರು ನಗರದಲ್ಲಿ 60 ಕೋಟಿ ರೂ.ಗಳ ವೆಚ್ಚದಲ್ಲಿ ಜಿಲ್ಲಾ ಆಸ್ಪತ್ರೆ ಸ್ಥಾಪಿಸಲಾಗುವುದು.

ಜೀವಸಾರ್ಥಕತೆ ಯೋಜನೆ-ಯಡಿಯಲ್ಲಿ ಅಂಗದಾನವನ್ನು ಮಾಡಲು ಇಚ್ಛಿಸುವವರಿಗೆ ಮತ್ತು ಬಳಸುವವರಿಗೆ ಅನುವು ಮಾಡಿಕೊಡಲು ಅಂಗದಾನ ಕೋಶವನ್ನು ಸ್ಥಾಪಿಸಲಾಗುವುದು. 2016-17ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 5032 ಕೋಟಿ ರೂ. ಗಳನ್ನು ಒದಗಿಸಲಾಗಿದೆ

### ವೈದ್ಯಕೀಯ ಶಿಕ್ಷಣ

ಕಾರವಾರ, ಚಾಮರಾಜನಗರ ಮತ್ತು ಮಡಿಕೇರಿಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳು 2016-17ನೇ ಶೈಕ್ಷಣಿಕ ವರ್ಷದಲ್ಲಿ ಆರಂಭವಾಗಲಿವೆ.

ರಾಯಚೂರು ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 35



ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಿ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಿದೆ.

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ 150 ಎಂಬಿಬಿಎಸ್ ಸೀಟುಗಳ ಮಿತಿಯ ಒಂದು ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಮಂಡ್ಯ, ಹಾಸನ, ಶಿವಮೊಗ್ಗ, ಬೆಳಗಾವಿ, ರಾಯಚೂರು ಮತ್ತು ಬೀದರ್ ಕಾಲೇಜುಗಳಲ್ಲಿನ ಎಂಬಿಬಿಎಸ್ ಪ್ರವೇಶ ಮಿತಿಯನ್ನು 100 ರಿಂದ 150 ಸೀಟುಗಳಿಗೆ ಹೆಚ್ಚಿಸಲು ಕ್ರಮವಹಿಸಲಾಗುವುದು.

ಬೆಂಗಳೂರಿನ ಎಸ್‌ಡಿಎಸ್‌ಟಿಬಿ ಕ್ಷಯರೋಗ ಕೇಂದ್ರದ ಆವರಣದಲ್ಲಿನ ಗ್ಯಾಸ್ಟ್ರೋ ಎಂಟರೋಲಜಿ ಸಂಸ್ಥೆಯನ್ನು ಪ್ರತ್ಯೇಕವಾಗಿ 10 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಕ್ರಮವಹಿಸಲಾಗುವುದು.

ಕಲಬುರಗಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಿಂದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಲಾಗುವುದು. 2016-17ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 1614 ಕೋಟಿ ರೂ. ಗಳನ್ನು ಒದಗಿಸಲಾಗಿದೆ

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಬಾಲ ಪೋಷಕ ಯೋಜನೆಯ ಅಡಿಯಲ್ಲಿ 3.6 ಕೋಟಿ ರೂ.ಗಳ ವೆಚ್ಚದಲ್ಲಿ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ 25,000 ಮಕ್ಕಳಿಗೆ 180 ದಿನಗಳ ಅವಧಿಗೆ ಪ್ರತಿದಿನ 2 ಗ್ರಾಂಗಳ ಸ್ಪಿರುಲಿನಾವನ್ನು ಒದಗಿಸಲು ಉದ್ದೇಶಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಹಿಂದುಳಿದ ತಾಲ್ಲೂಕುಗಳಲ್ಲಿನ ಗರ್ಭಿಣಿ ಮತ್ತು ಬಾಣಂತಿಯರಿಗೆ ಮೈಕ್ರೋನ್ಯೂಟ್ರಿಯಂಟ್ಸ್-ಗಳನ್ನು ಒದಗಿಸಲು 42 ಕೋಟಿ ರೂ.ವೆಚ್ಚದಲ್ಲಿ ಮಾತೃಪುಷ್ಟಿವರ್ಧಿನಿ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಬಾಲ ಸ್ನೇಹಿ ಕೇಂದ್ರಗಳ ಯೋಜನೆ ಅಡಿ 10,000 ಅಂಗನವಾಡಿ ಕೇಂದ್ರಗಳನ್ನು ಶಿಶು ಸ್ನೇಹಿ ಕೇಂದ್ರಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಿದ್ದು, ಒಂದು ಕೇಂದ್ರಕ್ಕೆ 10,000/- ರೂಗಳನ್ನು ನೀಡಲಾಗುವುದು.

ಬಹು ಪೌಷ್ಠಿಕ ಆಹಾರದ ಕೊರತೆಯಿರುವ ಮಕ್ಕಳ ಪೌಷ್ಠಿಕಾಂಶದ ಮಟ್ಟವನ್ನು ಸುಧಾರಣೆ ಮಾಡಲು ಹಾಗೂ ಅವರನ್ನು ಸಾಮಾನ್ಯ ಮಗುವಿನ ಮಟ್ಟಕ್ಕೆ ತರುವಂತೆ ಮಾಡಲು ಪ್ರಸ್ತುತ ನೀಡುತ್ತಿರುವ 750/- ರೂ.ಗಳಿಗೆ ಬದಲಾಗಿ 2,000/- ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕೆ ಹೆಚ್ಚುವರಿಯಾಗಿ 3.12 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಸ್ತ್ರೀ ಶಕ್ತಿ ಸಮೃದ್ಧಿ ಯೋಜನೆ ಅಡಿಯಲ್ಲಿ ಕರ್ನಾಟಕ ಸಹಕಾರ ಸಂಘ ಅಧಿನಿಯಮ, 1960 ರ ಅಡಿ ಜಿಲ್ಲಾ ಸ್ತ್ರೀ ಶಕ್ತಿ ಗುಂಪುಗಳನ್ನು ನೋಂದಾಯಿಸಲು ಉದ್ದೇಶಿಸಿದ್ದು, ಇದಕ್ಕೆ 30 ಲಕ್ಷ ರೂಗಳನ್ನು ಒದಗಿಸಲಾಗುವುದು.

ನಿರಾಶ್ರಿತ ಮಕ್ಕಳ ಕುಟೀರದಲ್ಲಿನ ಮಕ್ಕಳಿಗಾಗಿ ಪ್ರಸ್ತುತ ನೀಡುತ್ತಿರುವ ಹಣವನ್ನು 400/-ರೂ.ಗಳಿಗೆ ಬದಲಾಗಿ 1,000/- ರೂ. ಗಳಿಗೆ ಹೆಚ್ಚಿಸಲಾಗುವುದು.

ಮಹಿಳಾ ಸಬಲೀಕರಣ ಕಾರ್ಯ-ನೀತಿಯನ್ನು ಜಾರಿಗೆ ತರಲಾಗುವುದು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮಾದರಿಯಲ್ಲಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯನ್ನು ಪ್ರಾರಂಭಿಸಲಾಗುವುದು.

ಮಹಿಳಾ ಅಭಿವೃದ್ಧಿ ನಿಗಮವನ್ನು ಮಹಿಳಾ ಮತ್ತು ವಿಕಲಚೇತನರ ಅಭಿವೃದ್ಧಿ ನಿಗಮ ಎಂದು ಮರು ನಾಮಕರಣ ಮಾಡಲಾಗುವುದು ಮತ್ತು ವಿಕಲಚೇತನರಿಗೆ ಸಂಬಂಧಿಸಿದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಕೂಡಾ ಕೈಗೆತ್ತಿಕೊಳ್ಳಲಾಗುವುದು.

ಗ್ರಾಮೀಣ ಪುನರ್‌ವಸತಿ ಯೋಜನೆಯಡಿ ಗ್ರಾಮೀಣ / ವಿವಿಧೋದ್ದೇಶ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿರುವವರು, ಕಾರ್ಯ-ನಿರ್ವಹಿಸುತ್ತಿರುವ ಅವಧಿಯಲ್ಲಿ ಮರಣ ಹೊಂದಿದಲ್ಲಿ ಅವರ ಅವಲಂಬಿತರಿಗೆ ಪರಿಹಾರ ನೀಡಲಾಗುವುದು.

ರಾಜ್ಯ ಮಟ್ಟದಲ್ಲಿ ಹಿರಿಯ ನಾಗರಿಕರಿಗಾಗಿ ಸಂಪನ್ಮೂಲ ಕೋಶವನ್ನು ಸ್ಥಾಪಿಸಲಾಗುವುದು.

"ಸ್ಪರ್ಧಾ ಚೇತನ" ಯೋಜನೆ ಅಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗಳಿಗೆ ಐಎಎಸ್/ ಕೆಎಎಸ್ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು. ಇದಕ್ಕಾಗಿ 1 ಕೋಟಿ ರೂ.ಗಳ ಸಹಾಯಧನವನ್ನು ಒದಗಿಸಲಾಗುವುದು.

ಅಂಗವೈಕಲ್ಯವಿರುವ ವ್ಯಕ್ತಿಗಳ ಪೋಷಕರಲ್ಲಿ ಅವರ ಹೊಣೆಗಾರಿಕೆ ಕುರಿತು ಅರಿವು ಮೂಡಿಸಲು ಮತ್ತು ವಿಕಲಚೇತನ ವ್ಯಕ್ತಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸಲು "ಅರಿವಿನ ಸಿಂಚನ" ಎಂಬ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲಿ ಸಂಘಟಿಸಲಾಗುವುದು ಮತ್ತು ಈ ಕಾರ್ಯಕ್ರಮಕ್ಕಾಗಿ 1.50 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹ"ಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸಲಾಗುವುದು ಮತ್ತು ಅದಕ್ಕಾಗಿ 4 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ವಿಕಲಚೇತನ ವ್ಯಕ್ತಿಗಳಿಗೆ "ಸಾಧನಾ ಸಲಕರಣಾ ಯೋಜನೆ" ಅಡಿಯಲ್ಲಿ ಇಲ್ಲಿಯವರೆಗೆ ಒದಗಿಸಲಾಗುತ್ತಿದ್ದ ಮೊತ್ತವನ್ನು 15,000 ರೂ.ಗಳಿಗೆ ಹೆಚ್ಚಿಸಲಾಗಿದೆ ಮತ್ತು ಈ ಸಾಲಿನಲ್ಲಿ ಹೆಚ್ಚುವರಿಯಾಗಿ 2,000 ತೀವ್ರವಾದ ಅಂಗವೈಕಲ್ಯ ಹೊಂದಿದ ವ್ಯಕ್ತಿಗಳಿಗೆ ಯಂತ್ರಚಾಲಿತ ದ್ವಿಚಕ್ರ ವಾಹನಗಳನ್ನು ಒದಗಿಸಲಾಗುವುದು.

14 ಜಿಲ್ಲೆಗಳಲ್ಲಿರುವ "ಜಿಲ್ಲಾ ಪುನರ್ವಸತಿ ಕೇಂದ್ರಗಳಿಗೆ" ನೀಡುವ



ಸಹಾಯಧನದ ಸೌಲಭ್ಯವನ್ನು ಇನ್ನೂ 16 ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು 28 ಲಕ್ಷದಿಂದ 36 ಲಕ್ಷದವರೆಗೆ ದರ ಪರಿಷ್ಕರಣೆ ಮಾಡಲಾಗುವುದು.

ವಿಕಲಚೇತನ ವ್ಯಕ್ತಿಗಳ ವಿಶೇಷ ಶಾಲಾ ಕಟ್ಟಡಗಳ ರಿಪೇರಿ ಮತ್ತು ನಿರ್ಮಾಣಕ್ಕಾಗಿ, ಕೇಂದ್ರ ಸರ್ಕಾರದ "ಸ್ವಾವಲಂಬನ ಛಾತ್ರವಾಸ್" ಯೋಜನೆ ಅಡಿಯಲ್ಲಿ 10 ಕೋಟಿ ರೂ.ಗಳನ್ನು ನೀಡಲಾಗುವುದು.

2016-17ನೇ ಸಾಲಿನಲ್ಲಿ, ರಸ್ತೆ ಪಕ್ಕದಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ 10,000 ಮಹಿಳೆಯರಿಗೆ "ಸಮೃದ್ಧಿ" ಯೋಜನೆ ಅಡಿಯಲ್ಲಿ 10 ಕೋಟಿ ರೂ.ಗಳ ಸಹಾಯ ಧನವನ್ನು ನೀಡಲಾಗುವುದು.

ಶಿಶು ಕೇಂದ್ರೀಕೃತ ಯೋಜನೆಯಡಿ ಬುದ್ದಿಮಾಂದ್ಯ ಮಕ್ಕಳ ಶಾಲೆಗಳಿಗೆ ಪ್ರತಿ ಮಗುವಿಗೆ ನೀಡುತ್ತಿರುವ ಅನುದಾನವನ್ನು ವಸತಿ ಶಾಲೆಗಳಲ್ಲಿ ರೂ. 5,000 ರಿಂದ ರೂ.5,600ಕ್ಕೆ ಮತ್ತು ವಸತಿ ರಹಿತ ಶಾಲೆಗಳಿಗೆ ರೂ 4,000 ರಿಂದ ರೂ.4,800ಕ್ಕೆ ಪರಿಷ್ಕರಣೆ ಮಾಡಲಾಗುವುದು.

ಸ್ತ್ರೀ ಶಕ್ತಿ ಗುಂಪುಗಳ ಮಹಿಳೆಯರಿಗೆ ಕರ್ನಾಟಕ ರಾಜ್ಯ ಉದ್ಯೋಗ ತರಬೇತಿ ಇಲಾಖೆಯಿಂದ ನಡೆಸುವ ತರಬೇತಿ ಕಾರ್ಯಕ್ರಮಗಳ ಮೂಲಕ ತರಬೇತಿ ನೀಡಿ ಇವರನ್ನು ಸ್ವತಂತ್ರ ಉದ್ಯಮಿಗಳನ್ನಾಗಿ ರೂಪಿಸಲು "ಸ್ತ್ರೀ ಶಕ್ತಿ ಕೌಶಲ್ಯ" ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದೆ ಇದಕ್ಕೆ 2.50 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ಹೆಚ್‌ಐವಿ ಸೋಂಕಿತ ಸಂತ್ರಸ್ಥೆಯರಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಪ್ರತಿ ಫಲಾನುಭವಿಗೆ ರೂ.40,000 ಸಾಲವಾಗಿ ಹಾಗೂ

ರೂ.10,000 ಸಹಾಯಧನವಾಗಿ "ಧನಶ್ರೀ" ಯೋಜನೆಯಡಿ ನೀಡಲು 5 ಕೋಟಿ ರೂ. ಅನುದಾನವನ್ನು ಒದಗಿಸಲಾಗುವುದು.

2016-17ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಒಟ್ಟಾರೆಯಾಗಿ 4,497 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಸಮಾಜ ಕಲ್ಯಾಣ**

ಡಾ.ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯನ್ನು ರಾಜ್ಯದಲ್ಲಿ ಬೃಹತ್ ಮಟ್ಟದಲ್ಲಿ ಆಚರಿಸಲಾಗುವುದು.

ವಿದ್ಯಾರ್ಥಿನಿಲಯಗಳಲ್ಲಿ, ವಸತಿ ಶಾಲೆಗಳಲ್ಲಿ ಮತ್ತು ಅನುದಾನಿತ ವಸತಿನಿಲಯಗಳಲ್ಲಿ ಸುಮಾರು 3 ಲಕ್ಷದಷ್ಟು ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿ ವಿದ್ಯಾರ್ಥಿಯ ಮಾಸಿಕ ಭೋಜನ ವೆಚ್ಚ ದರವನ್ನು 200 ರೂ.ಗಳಷ್ಟು ಹೆಚ್ಚಿಸಲಾಗುವುದು. ಇದಕ್ಕೆ, 60 ಕೋಟಿ ರೂ. ಗಳನ್ನು ನೀಡಲಾಗುವುದು. ಇದರಿಂದ ಹೆಚ್ಚಿನ ಕ್ಯಾಲರಿ ಮತ್ತು ಪೌಷ್ಟಿಕಾಂಶವುಳ್ಳ ಆಹಾರವನ್ನು ಒದಗಿಸಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಬಯಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅನುಕೂಲವಾಗುವಂತೆ ಬೇಡಿಕೆಗನುಗುಣವಾಗಿ 100 ಹೊಸ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುವುದು.

2016-17ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕ/ಬಾಲಕಿಯರಿಗಾಗಿ ವಸತಿ ಶಾಲೆಗಳಿಲ್ಲದ ಹೋಬಳಿಗಳಲ್ಲಿ ಹೊಸದಾಗಿ 125 ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ಹಿಂದಿನ ವರ್ಷ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹೆಚ್ಚಿಸಲಾಗಿದೆ. ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ರ್‍ಯಾಂಕ್ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರೋತ್ಸಾಹಿಸಲು ಕಲೆ, ವಿಜ್ಞಾನ, ವೈದ್ಯಕೀಯ, ತಾಂತ್ರಿಕ, ವಾಣಿಜ್ಯ, ಕಾನೂನು ಸ್ನಾತಕೋತ್ತರ ಪದವಿಯಲ್ಲಿ ವಿಶ್ವವಿದ್ಯಾಲಯದಲ್ಲಿ 1 ರಿಂದ 5ನೇ ರ್‍ಯಾಂಕ್ ಪಡೆಯುವ ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳಿಗೆ ರೂ.50,000/- ಗಳ ಪ್ರೋತ್ಸಾಹಧನ ನೀಡಲಾಗುವುದು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಸರ್ಕಾರ ನೀಡುತ್ತಿರುವ ಶುಚಿ ಕಿಟ್‌ಗಳನ್ನು (ಸೋಪ್ಸ್, ಟೂತ್‌ಪೇಸ್ಟ್, ಆಯಿಲ್ ಇತ್ಯಾದಿ) ಮೆಟ್ರಿಕ್ ನಂತರದ ವಸತಿನಿಲಯಗಳಲ್ಲಿರುವ ಸುಮಾರು 75,000 ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಸಿ.ಎ / ಐ.ಸಿ.ಡಬ್ಲ್ಯೂ.ಎ / ಕಂಪನಿ ಸೆಕ್ರೆಟರಿ ವೃತ್ತಿಪರ ಕೋರ್ಸ್‌ಗಳಲ್ಲಿ ಇಂಟರ್ ಮತ್ತು ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ. 50,000 ಮತ್ತು 1 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡಲಾಗುವುದು.

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ 3 ವರ್ಷಗಳ ವಿವಿಧ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಲ್ಲಿ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ರೂ.20,000/- ರಂತೆ ಪ್ರೋತ್ಸಾಹಧನ ನೀಡಲಾಗುವುದು.

ಪರಿಶಿಷ್ಟ ಪಂಗಡಗಳ ಬಗ್ಗೆ ಸಮಗ್ರ ಅಧ್ಯಯನ ಮಾಡುವ ಸಲುವಾಗಿ ಹಂಪಿ ವಿಶ್ವವಿದ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠವನ್ನು ಪ್ರಾರಂಭಿಸಲಾಗುವುದು.

ವಾರ್ಷಿಕ ವರಮಾನ 2.50 ಲಕ್ಷ ರೂ.ಗಳಿಗಿಂತ ಹೆಚ್ಚು ಮತ್ತು 10 ಲಕ್ಷ ರೂ. ಗಳಿಗಿಂತ ಒಳಗಿರುವ ಸಿ.ಇ.ಟಿ. ಮೂಲಕ ತಾಂತ್ರಿಕ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಆಯ್ಕೆಯಾಗುವ ವಿದ್ಯಾರ್ಥಿಗಳಿಗೂ ಸಹ ಶೇ.100 ರಷ್ಟು ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳಿಂದ ಮರುಪಾವತಿಸಲಾಗುವುದು.



ಕೆ.ಎಸ್.ಎಫ್.ಸಿ. ಸಂಸ್ಥೆ ವತಿಯಿಂದ ಹಾಲಿ ಅನುಷ್ಠಾನ ಮಾಡುತ್ತಿರುವ ಶೇ.4ರಷ್ಟು ಬಡ್ಡಿ ಸಹಾಯಧನ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು/ಅಪೆಕ್ಸ್ ಬ್ಯಾಂಕ್/ಡಿಸಿಸಿ ಬ್ಯಾಂಕ್‌ಗಳಿಗೆ ವಿಸ್ತರಣೆ ಮಾಡಲಾಗುವುದು. ಈಗಿರುವ 5 ಕೋಟಿ ರೂ.ಗಳ ಸಾಲದ ಮಿತಿಯನ್ನು 10 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು. ಇದಕ್ಕಾಗಿ 40 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು. ಇದರಿಂದ ಯೋಜನೆಯು ರಾಜ್ಯದ ಎಲ್ಲಾ ಭಾಗಕ್ಕೂ ತಲುಪಲಿದ್ದು, ಹೆಚ್ಚಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಪ್ರಯೋಜನವಾಗಲಿದೆ. 2001 ರಿಂದ 2015 ರವರೆಗೆ ನೇರ ನೇಮಕಾತಿಯಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆ ಅಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ವಿವಿಧ ಯೋಜನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿವೆ. ಸದರಿ ಯೋಜನೆಗಳ ಪ್ರಯೋಜನ ಉದ್ದೇಶಿತ ಜನರಿಗೆ ತಲುಪುತ್ತಿರುವ ಬಗ್ಗೆ ಸೋಷಿಯಲ್ ಆಡಿಟ್ ಕೋಶವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಾರಂಭಿಸಲಾಗುವುದು.

ಆದಿವಾಸಿ ಸಮುದಾಯಗಳಾದ ಕೊರಗರು, ಮಲೆಕುಡಿಯ, ಸೋಲಿಗ, ಜೇನು ಕುರುಬ, ಕಾಡು ಕುರುಬ, ಇರುಳಿಗ ಮುಂತಾದ ಜನಾಂಗಗಳ ಸಮಗ್ರ ಅಭಿವೃದ್ಧಿಗಾಗಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಡಿಯಲ್ಲಿ ಪ್ರತ್ಯೇಕ ಮಂಡಳಿಯನ್ನು ಸ್ಥಾಪಿಸಲಾಗುವುದು. ರಾಜ್ಯದ ಗಡಿ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುವುದು.

2016–17ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 5464 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ಹಿಂದುಳಿದ ವರ್ಗಗಳ ಕಲ್ಯಾಣ**

87 ಮೆಟ್ರಿಕ್ – ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳನ್ನಾಗಿ ಉನ್ನತೀಕರಿಸಲು 5.67 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಬುಡಬುಡಕಿ, ಬೈಲು ಪತ್ತಾರ್, ಬುಂಡೆಬೆಸ್ತ, ದೊಂಬಿದಾಸ, ಹೆಳವ, ಗೊಂದಳಿ, ಪಿಚಗುಂಟಲ, ಗೊಲ್ಲ ಮುಂತಾದ ಅಲೆಮಾರಿ / ಅರೆ ಅಲೆಮಾರಿ ಜನಾಂಗದ ಸಮಗ್ರ ಅಭಿವೃದ್ಧಿಗೆ 100 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

37 ಆಶ್ರಮ ಶಾಲೆಗಳನ್ನು ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳನ್ನಾಗಿ ಉನ್ನತೀಕರಿಸಲಾಗುವುದು. ಹಿಂದುಳಿದ ವರ್ಗಗಳ ಆಶ್ರಮ ಶಾಲೆ, ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳ ಮಾಸಿಕ ಭೋಜನದ ವೆಚ್ಚಗಳನ್ನು 200 ರೂ.ಗಳಷ್ಟು ಮತ್ತು ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು ಹಾಗೂ ಅನಾಥಾಲಯಗಳ ವಿದ್ಯಾರ್ಥಿಗಳ ಮಾಸಿಕ ಭೋಜನ ದರವನ್ನು ಹಾಲಿ ದರಕ್ಕಿಂತ 200 ರೂ.ಗಳಷ್ಟು ಹೆಚ್ಚಿಸಲಾಗುವುದು. ಇದರಿಂದ ಹೆಚ್ಚಿನ ಪೌಷ್ಠಿಕ ಹಾಗೂ ಗುಣಮಟ್ಟದ ಆಹಾರವನ್ನು ಒದಗಿಸಲು ಸಾಧ್ಯವಾಗುತ್ತದೆ.

ನರ್ಸಿಂಗ್ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಮಾಸಿಕ ಶಿಷ್ಯವೇತನವನ್ನು 1000/– ರೂ.ಗಳಿಂದ 1500/– ರೂ.ಗಳಿಗೆ ಹೆಚ್ಚಿಸಲಾಗುವುದು.

ಕಾನೂನು ಪದವೀಧರರ ಮಾಸಿಕ ತರಬೇತಿ ಭತ್ಯೆಯನ್ನು 1000 ಐ.ಎ.ಎಸ್./ ಕೆ.ಎ.ಎಸ್/ಬ್ಯಾಂಕಿಂಗ್ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಪಡೆಯುತ್ತಿರುವ ಅಭ್ಯರ್ಥಿಗಳಿಗೆ ನೀಡುತ್ತಿರುವ ಮಾಸಿಕ ತರಬೇತಿ ಭತ್ಯೆಯನ್ನು ಎಲ್ಲರಿಗೂ ಸಮಾನವಾಗಿ 2000 ರೂ.ಗಳಷ್ಟು ಹೆಚ್ಚಳ ಮಾಡಲಾಗುವುದು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ 1 ಲಕ್ಷ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು. ವಸತಿಶಾಲೆ ಇಲ್ಲದೇ ಇರುವ ಹೋಬಳಿಗಳಲ್ಲಿ 155 ವಸತಿಶಾಲೆಗಳನ್ನು ಹಂತ ಹಂತವಾಗಿ ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ 7.75 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ವಸತಿಶಾಲೆಗಳ ಹಾಗೂ ಹಾಸ್ಟೆಲ್‌ಗಳ ನಿರ್ಮಾಣಕ್ಕಾಗಿ 276.96 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ಮಡಿವಾಳ, ಸವಿತಾ ಸಮಾಜ, ತಿಗಳ, ಕುಂಬಾರ ಹಾಗೂ ಉಪ್ಪಾರ ಸಮುದಾಯಗಳ ಅಭಿವೃದ್ಧಿಗಾಗಿ ತಲಾ 10 ಕೋಟಿ ರೂ.ಗಳಂತೆ 50 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

**ಅಲ್ಪ ಸಂಖ್ಯಾತರ ಕಲ್ಯಾಣ**

ನೂರು ಕೋಟಿ ರೂ. ಗಳ ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳ ಮೂಲಸೌಕರ್ಯಾಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಅಲ್ಪಸಂಖ್ಯಾತ ಸಮುದಾಯದ ಯುವ ಜನತೆಯಲ್ಲಿ ಅನುಭವಶಾಲಿ ನಾಯಕತ್ವ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು 13 ಕೋಟಿ ರೂ.ಗಳನ್ನು ಒದಗಿಸಲಾಗುವುದು. ರಾಜ್ಯದಲ್ಲಿನ ಮದರಸಗಳ ಆಧುನೀಕರಣ ಹಾಗೂ ಔಪಚಾರಿಕ ಮತ್ತು ಕಂಪ್ಯೂಟರ್ ಶಿಕ್ಷಣ ನೀಡಲು 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲಾ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಅವು ಈ ಮುಂದಿನಂತಿವೆ;

* ಎಂಎಸ್‌ಡಿಪಿ ಯೋಜನೆ ಅಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ ಸ್ಥಳಗಳಲ್ಲಿ 10 ವಿದ್ಯಾರ್ಥಿನಿಲಯ/ವಸತಿ ಶಾಲೆ/ ವಸತಿ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.
* 6 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು 10 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮತ್ತು 2 ಹೆಣ್ಣು ಮಕ್ಕಳ ಪದವಿ ಪೂರ್ವ ವಸತಿ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.



* 20 ಮೆಟ್ರಿಕ್ ಪೂರ್ವ ವಸತಿನಿಲಯಗಳನ್ನು ಮೆಟ್ರಿಕ್ ನಂತರ ವಸತಿ ನಿಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗೆ 10 ಮೆಟ್ರಿಕ್ ಪೂರ್ವ ವಸತಿ ನಿಲಯಗಳಲ್ಲಿಯೇ ಸ್ಥಳಾವಕಾಶ ಮಾಡಿಕೊಡಲಾಗುವುದು.
* ಉತ್ತಮ ಮೂಲಸೌಕರ್ಯ ಹೊಂದಿರುವ 20 ವಸತಿ ನಿಲಯಗಳಲ್ಲಿ, ಪ್ರತಿ ನಿಲಯದಲ್ಲಿ 25 ಸೀಟುಗಳನ್ನು ಹೆಚ್ಚಿಸಲಾಗುವುದು.
* ಉತ್ತಮ ಮೂಲಸೌಕರ್ಯ ಹೊಂದಿರುವ 35 ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ 50 ರಿಂದ 60 ಸೀಟುಗಳಿಗೆ ಹೆಚ್ಚಿಸಲಾಗುವುದು.
* ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಎಲ್ಲಾ ವಸತಿ ಶಾಲೆಯ/ ಕಾಲೇಜುಗಳ ಪ್ರತಿ ವಿದ್ಯಾರ್ಥಿಗೆ ಆಹಾರ ಭತ್ಯೆಯನ್ನು 200 ರೂ.ಗಳಷ್ಟು ಹೆಚ್ಚಿಸಲಾಗುವುದು.

ಅಲ್ಪಸಂಖ್ಯಾತ ಸಂಬಂಧಿತ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯಗಳಲ್ಲಿ ಪಿಹೆಚ್.ಡಿ ಮತ್ತು ಎಂ.ಫಿಲ್. ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಜೆ.ಆರ್.ಎಫ್ ಮಾದರಿಯಲ್ಲಿ ಫೆಲೋಶಿಫ್ ನೀಡಲಾಗುವುದು. ಬೀದರ್‌ನಲ್ಲಿ ಮೊಹಮ್ಮದ್ ಗವಾನ್ ಗ್ರಂಥಾಲಯವಿದ್ದು, ಅಲ್ಲಿ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಗುವುದು.

ಧಾರ್ಮಿಕ ಅಲ್ಪಸಂಖ್ಯಾತ ವಿಷಯದ ಬಗ್ಗೆ ಕಲಬುರಗಿ ವಿಶ್ವವಿದ್ಯಾನಿಲಯದಲ್ಲಿ ಪೀಠ ಸ್ಥಾಪಿಸಲಾಗುವುದು. ಎಸ್.ಎಸ್. ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ 500 ವಿದ್ಯಾರ್ಥಿಗಳಿಗೆ ಮುಖ್ಯ ಮಂತ್ರಿಗಳ ಪ್ರೋತ್ಸಾಹ ಬಹುಮಾನ ಹಣವನ್ನು ಅನುಕ್ರಮವಾಗಿ 10,000 ರೂ. ಮತ್ತು 20,000 ರೂ.ಗಳನ್ನು ನೀಡಲಾಗುವುದು.

ಜಿಲ್ಲಾ ಕೇಂದ್ರಗಳಲ್ಲಿ ಅರಿವು ಮೂಡಿಸುವ ಮಾಹಿತಿ ಕೇಂದ್ರಗಳು

ಕಾರ್ಯನಿರ್ವಹಿಸುತ್ತಿದ್ದು, ಇವುಗಳನ್ನು ತಾಲ್ಲೂಕು ಮಟ್ಟದಲ್ಲಿಯೂ ವಿಸ್ತರಿಸಲಾಗುವುದು.

* ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ 125 ಕೋಟಿ ರೂ.ಗಳನ್ನು ಒದಗಿಸಲಾಗುವುದು.

* ಏಡ್ಸ್ ರೋಗಿಗಳು ಮತ್ತು ವಿಕಲಚೇತನ ವ್ಯಕ್ತಿಗಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಹಣಕಾಸಿನ ನೆರವನ್ನು ಒದಗಿಸಲಾಗುವುದು.

* ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿ ನರ್ಸಿಂಗ್ ಕೋರ್ಸ್‌ಗಳನ್ನು ಅಧ್ಯಯನ ಮಾಡುತ್ತಿರುವ ಮುಸ್ಲಿಮ್, ಕ್ರಿಶ್ಚಿಯನ್, ಜೈನ್, ಸಿಖ್, ಮತ್ತು ಬೌದ್ಧ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕ ತುಂಬಿಕೊಡುವ ಸೌಲಭ್ಯವನ್ನು ವಿಸ್ತರಿಸಲಾಗುವುದು.

ಬೌದ್ಧ ಸಮುದಾಯದ ವಿಹಾರ (ದೇವಾಲಯ)ಗಳ ಜೀರ್ಣೋದ್ಧಾರಕ್ಕಾಗಿ ಸಹಾಯಧನ ನೀಡಲಾಗುವುದು. ಬಿದಾಯಿ ಯೋಜನೆಗೆ 50 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಜೈನ ಬಸದಿಗಳ ಅಭಿವೃದ್ಧಿಗೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಹಜ್ ಭವನವನ್ನು ಪೂರ್ಣಗೊಳಿಸಲು 25 ಕೋಟಿ ರೂ. ಗಳನ್ನು ಒದಗಿಸಲಾಗುವುದು.

2016–17ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್ ಇಲಾಖೆಗೆ ಒಟ್ಟಾರೆಯಾಗಿ 1374 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ವಸತಿ**

ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಇಲ್ಲಿಯವರೆಗೆ 8.22 ಲಕ್ಷ ಮನೆಗಳನ್ನು ನಿರ್ಮಿಸಲಾಗಿದ್ದು, ಏಪ್ರಿಲ್ 2016ರ ಒಳಗಾಗಿ 9 ಲಕ್ಷ ಮನೆಗಳ ನಿರ್ಮಾಣದ ಗುರಿ ತಲುಪಲಾಗುವುದು. 27,575 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಗೆ ಹೆಚ್ಚಿನ ಸಮಯ ತಗುಲುತ್ತದೆ. ಆದ್ದರಿಂದ ವಸತಿ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ 2016–17 ಮತ್ತು 2017–18ನೇ ಸಾಲಿನ ಗುರಿಗಳಿಗೆ ಅನುಗುಣವಾಗಿ ಆರು ಲಕ್ಷ ಫಲಾನುಭವಿಗಳನ್ನು (ಡಾ॥ ಬಿ.ಆರ್ ಅಂಬೇಡ್ಕರ್ ನಿವಾಸ ಯೋಜನೆ ಅಡಿಯಲ್ಲಿ 2.5 ಲಕ್ಷ, ಬಸವ ಗ್ರಾಮೀಣ ವಸತಿ ಯೋಜನೆ ಅಡಿ 2,10,000, ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ 80,000, ವಾಜಪೇಯಿ ನಗರ ವಸತಿ ಯೋಜನೆ ಅಡಿ 40,000 ಮತ್ತು "ದೇವರಾಜ್ ಅರಸು ವಸತಿ ಯೋಜನೆ" ಅಡಿ 20,000 ಮನೆಗಳು) ಏಕಕಾಲಕ್ಕೆ ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ.


2016–17ನೇ ವರ್ಷದಲ್ಲಿ 3 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗುವುದು.

ವಾಜಪೇಯಿ ನಗರ ವಸತಿ ಯೋಜನೆ ಅಡಿ 40,000 ಮನೆಗಳಿಗೆ ಘಟಕ ವೆಚ್ಚವನ್ನು ಕನಿಷ್ಠ 3.5 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುವುದು. ಈ ವೆಚ್ಚವು ಪ್ರಧಾನ ಮಂತ್ರಿ ಆವಾಸ್ ಯೋಜನೆಯ 1.5 ಲಕ್ಷ ರೂ. ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮತ್ತು ಇತರ ವರ್ಗದವರಿಗೆ ಕ್ರಮವಾಗಿ 1.8 ಲಕ್ಷ ರೂ. ಮತ್ತು 1.2 ಲಕ್ಷ ರೂ. ಸಹಾಯಧನವನ್ನು ಒಳಗೊಂಡಿದೆ. ಉಳಿದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ.

10,000 ನಿವೇಶನಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು 10,000 ನಿವೇಶಗಳನ್ನು ನಗರ ಪ್ರದೇಶಗಳಲ್ಲಿ ನಿವೇಶನ ರಹಿತ ಬಡ ಫಲಾನುಭವಿಗಳಿಗೆ ವಿತರಿಸಲಾಗುವುದು.

ಕರ್ನಾಟಕ ಗೃಹ ಮಂಡಳಿ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ನಡೆಸುವ ವಿವಿಧ ಚಟುವಟಿಕೆಗಳನ್ನು ಗಣಕೀಕರಿಸಲಾಗುವುದು.

2015–16ನೇ ಸಾಲಿನಲ್ಲಿ "ಹೊಸ ಕೊಳಗೇರಿ ನೀತಿ" ಯನ್ನು ಜಾರಿಗೊಳಿಸಲಾಗಿದ್ದು, 2016–17ನೇ ಸಾಲಿನಲ್ಲಿ 200 ಕೋಟಿ ರೂ.ಗಳ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳನ್ನು ಪ್ರಾರಂಭಿಸಲಾಗುವುದು.



2016–17ನೇ ಸಾಲಿನಲ್ಲಿ ವಸತಿ ಇಲಾಖೆಗೆ ಒಟ್ಟಾರೆಯಾಗಿ 3890 ಕೋಟಿ ರೂ. ಗಳನ್ನು ಒದಗಿಸಲಾಗಿದೆ

**ಕಾರ್ಮಿಕ, ಉದ್ಯೋಗ ಮತ್ತು ತರಬೇತಿ**

ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ವಿಮಾ ಯೋಜನೆಯಡಿ ನೋಂದಣಿ ಮಾಡಿರುವ 12 ಲಕ್ಷ ಆಟೋ ಚಾಲಕರಿಗೆ ಕಾರ್ಮಿಕ, ಒಳಾಡಳಿತ, ಸಾರಿಗೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ ಪ್ರಥಮ ಚಿಕಿತ್ಸೆ ತರಬೇತಿ ನೀಡಿ ಅವರನ್ನು ಅಪಘಾತ ಜೀವ ರಕ್ಷಕರನ್ನಾಗಿಸುವ ನಿಟ್ಟಿನಲ್ಲಿ 1 ಕೋಟಿ ರೂ.ಗಳ ಅನುದಾನದಲ್ಲಿ "ಅಪಘಾತ ಜೀವ ರಕ್ಷಕ" ಯೋಜನೆಯನ್ನು ಜಾರಿಗೆ ತರಲಾಗುವುದು.

ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.

* ವಿವಿಧ ಕ್ಷೇತ್ರಗಳಲ್ಲಿ ಹೊಸ ಕೌಶಲ್ಯ ಶಿಕ್ಷಣ ನೀಡಲು "ದೇವರಾಜ ಅರಸು ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿ ಶಿಕ್ಷಣ ಸಂಶೋಧನಾ ಸಂಸ್ಥೆ"ಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 5 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ.

* ಭಾರತೀಯ ಸೇನಾಪಡೆ ಮತ್ತು ಅರೆಸೇನಾಪಡೆಗಳಿಗೆ ಸೇರ್ಪಡೆಗೊಳ್ಳಲು "ಭಾರತೀಯ ಸೇನೆಯಲ್ಲಿ ಕನ್ನಡಿಗ" ಎಂಬ ಕಾರ್ಯಕ್ರಮದಡಿಯಲ್ಲಿ 1500 ಕನ್ನಡಿಗ ಅಭ್ಯರ್ಥಿಗಳಿಗೆ ನೇಮಕಾತಿ ಪೂರ್ವ ತರಬೇತಿ ನೀಡಲಾಗುವುದು. ಈ ಉದ್ದೇಶಿತ ಕಾರ್ಯಕ್ರಮಕ್ಕಾಗಿ 2 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ.

2016–17ನೇ ಸಾಲಿನಲ್ಲಿ ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಒಟ್ಟಾರೆಯಾಗಿ 1017 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಕನ್ನಡ ಮತ್ತು ಸಂಸ್ಕೃತಿ**

ಕರ್ನಾಟಕ ಏಕೀಕರಣದ 60 ನೇ ವರ್ಷಾಚರಣೆಯ ಅಂಗವಾಗಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲಾಗುವುದು. ಇದಕ್ಕಾಗಿ 30 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಕನ್ನಡದ ಪ್ರಮುಖ ಬರಹಗಳನ್ನು ಸಂರಕ್ಷಿಸಿ, ಗಣಕೀಕರಣಗೊಳಿಸಿ ವ್ಯಾಪಕವಾಗಿ ಪ್ರಸಾರ ಮಾಡುವ ಉದ್ದೇಶದಿಂದ ಅವುಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಲು 2.5 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ಕರ್ನಾಟಕ ಥಿಯಾಲಾಜಿಕಲ್ ಕಾಲೇಜಿನ ಮೂಲಕ 'ಕನ್ನಡಕ್ಕೆ ಬಾಸೆಲ್ ಮಿಷನರಿಯ ಕೊಡುಗೆ' ಎಂಬ ವಿಷಯದ ಕುರಿತು ಸಂಶೋಧನೆ ಕೈಗೆತ್ತಿಕೊಳ್ಳಲಾಗುವುದು. ಇದಕ್ಕಾಗಿ 2.5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

**ಈ ಕೆಳಕಂಡ ವಸ್ತುಸಂಗ್ರಹಾಲಯ ಗಳನ್ನು ಸ್ಥಾಪಿಸಲಾಗುವುದು**

* ಮಂಗಳೂರಿನಲ್ಲಿ 2.5 ಕೋಟಿ ರೂ. ಗಳ ವೆಚ್ಚದಲ್ಲಿ ಕೊಂಕಣಿ ಸಂಸ್ಕೃತಿ ಕುರಿತ ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ

* ಬೀದರ್ ಮತ್ತು ಬಾಗಲಕೋಟೆಯಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ವಸ್ತು ಸಂಗ್ರಹಾಲಯ.

* 1 ಕೋಟಿ ರೂ.ಗಳ ವೆಚ್ಚದಲ್ಲಿ ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಸವಣೂರು ನವಾಬರ ಕಾಲದ ಪಾರಂಪರಿಕ ಕಟ್ಟಡಗಳ ಆಧುನೀಕರಣ ವಸ್ತು ಸಂಗ್ರಹಾಲಯವಾಗಿ ಪರಿವರ್ತನೆ.

**ಈ ಕೆಳಕಂಡ ಸ್ಮಾರಕಗಳನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸಲಾಗುವುದು**

* 3 ಕೋಟಿ ರೂ.ಗಳ ವೆಚ್ಚದಲ್ಲಿ ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ಶಿರವಾಳದಲ್ಲಿರುವ ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಲುಕ್ಯರ ಕಾಲದ 47 ಸ್ಮಾರಕ ಸಮುಚ್ಚಯಗಳು.

* 3 ಕೋಟಿ ರೂ.ಗಳ ವೆಚ್ಚದಲ್ಲಿ ಬೆಳಗಾವಿ ನಗರದ ಕೋಟೆಯ ಸಂರಕ್ಷಣೆ ಮತ್ತು ಅಭಿವೃದ್ಧಿ.

* ಕರ್ನಾಟಕ ಜಾನಪದ ಪರಿಷತ್ತಿಗೆ 2 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.

* ಮಡಿವಾಳ ಮಾಚಿದೇವರ ಜನ್ಮ ಸ್ಥಳವಾದ ದೇವರ ಹಿಪ್ಪರಗಿಯನ್ನು ಅಭಿವೃದ್ಧಿಪಡಿಸಲು 3 ಕೋಟಿ ರೂ. ಗಳನ್ನು ಒದಗಿಸಲಾಗುವುದು.

* ಮುಂದಿನ ವರ್ಷದಿಂದ ಮಹಾವೀರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲಾಗುವುದು.

* ಗಡಿನಾಡು ಅಭಿವೃದ್ಧಿ ಪ್ರಾಧಿಕಾರಕ್ಕಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

2016–17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಟ್ಟಾರೆಯಾಗಿ 341 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ಕ್ರೀಡಾ ಮತ್ತು ಯುವಜನ ಸೇವೆ**

ಜನಪ್ರಿಯ ಗ್ರಾಮೀಣ ಕ್ರೀಡೆಯಾದ ಕಬಡ್ಡಿಯನ್ನು ಉತ್ತೇಜಿಸುವ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುವ ರಾಜ್ಯ ಕಬಡ್ಡಿ ಆಟಗಾರರನ್ನು ತಯಾರು ಮಾಡುವ ದಿಸೆಯಲ್ಲಿ ಪ್ರತಿಯೊಂದು ಜಿಲ್ಲೆಗೂ ಎರಡು ಕಬಡ್ಡಿ ಮ್ಯಾಟ್‌ಗಳನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 3.60 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

ಒಲಂಪಿಕ್‌ನ ಎಲ್ಲಾ ಕ್ರೀಡಾ ವಿಭಾಗಗಳಲ್ಲಿ ಎಲ್ಲಾ ವಯೋಮಾನ ಪ್ರವರ್ಗಗಳಿಗಾಗಿ ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ನಡೆಸುವ ರಾಜ್ಯ ಮಟ್ಟದ ಕ್ರೀಡಾ ಕೂಟಕ್ಕಾಗಿ 3 ಕೋಟಿ ರೂ. ಗಳ ಅನುದಾನವನ್ನುಒದಗಿಸಲಾಗುವುದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಸಹಯೋಗದೊಂದಿಗೆ ರಾಜ್ಯದ ಆಯ್ದ ಗ್ರಾಮಗಳಲ್ಲಿ ವಾಲಿಬಾಲ್, ಕಬಡ್ಡಿ, ಖೋಖೋ ಹಾಗೂ ಥ್ರೋಬಾಲ್ ಅಂಕಣಗಳಂಥ ಸೌಲಭ್ಯಗಳುಳ್ಳ ಆಟದಮೈದಾನಗಳನ್ನು ಅಭಿವೃದ್ಧಿ–ಪಡಿಸಲಾಗುವುದು. ಯುವಜನ ಸೇವೆ ಇಲಾಖೆಯಿಂದ ಗ್ರಾಮಗಳಲ್ಲಿ ಯುವಜನ ಕ್ರೀಡಾ ಸಂಘಗಳನ್ನು ರಚಿಸಿ ಅವುಗಳಿಗೆ ಕ್ರೀಡಾ ಸಲಕರಣೆಗಳನ್ನು ಒದಗಿಸಲಾಗುವುದು. ಕ್ರೀಡಾಂಗಣಗಳಿಲ್ಲದಿರುವ 40 ತಾಲ್ಲೂಕುಗಳ



ಪೈಕಿ 14 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 26 ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣವನ್ನು 2 ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು. ಸಾಹಸ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಕರಾವಳಿ ಪ್ರದೇಶಗಳಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸಹಯೋಗದೊಂದಿಗೆ ಜಲ ಸಾಹಸ ಕ್ರೀಡಾ ಕೇಂದ್ರಗಳನ್ನು 6 ಕೋಟಿ ರೂ.ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಗ್ರಾಮೀಣ ದೇಸಿ ಕ್ರೀಡೆಯಾದ ಕುಸ್ತಿಯನ್ನು 2016–17ನೇ ಸಾಲಿನಲ್ಲಿ ಇನ್ನೂ 50 ಗರಡಿ ಮನೆಗಳಿಗೆ ತಲಾ 5 ಲಕ್ಷ ರೂ.ಗಳಂತೆ 2.5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು. ಅರ್ಜುನ ಪ್ರಶಸ್ತಿ / ದ್ರೋಣಚಾರ್ಯ ಪ್ರಶಸ್ತಿ / ರಾಜೀವ್ ಖೇಲ್‌ರತ್ನ ಪ್ರಶಸ್ತಿ ಪಡೆದ ರಾಜ್ಯದ ಕ್ರೀಡಾ ಸಾಧಕರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲಾಗುವುದು. ರಾಜ್ಯದಲ್ಲಿರುವ ಕ್ರೀಡಾ ಹಾಸ್ಟೆಲ್‌ಗಳ ಪೈಕಿ ಆಯ್ದ 6 ಕ್ರೀಡೆಗಳಿಗೆಮೀಸಲಿಟ್ಟು ಕ್ರೀಡಾ ಅಕಾಡಮಿಗಳನ್ನಾಗಿ ಪರಿವರ್ತಿಸಲಾಗುವುದು.

2016–17ನೇ ಸಾಲಿನಲ್ಲಿ ಕ್ರೀಡಾ ಮತ್ತು ಯುವಜನಸೇವೆ ಇಲಾಖೆಗೆಒಟ್ಟಾರೆಯಾಗಿ 170 ಕೋಟಿ ರೂ. ಗಳನ್ನು ಒದಗಿಸಲಾಗಿದೆ

**ಆಹಾರ ಮತ್ತು ನಾಗರಿಕ ಸರಬರಾಜು**

ಕೇಂದ್ರ ಸರ್ಕಾರದ ನೆರವಿನೊಂದಿಗೆ ಧಾರವಾಡದಲ್ಲಿ "ರಾಷ್ಟ್ರ ಮಟ್ಟದ ಗ್ರಾಹಕರ ಸಂಶೋಧನೆ ಮತ್ತು ತರಬೇತಿ ಕೇಂದ್ರ" ವನ್ನು ಸ್ಥಾಪಿಸಲಾಗುವುದು ಕೇಂದ್ರ ಸರ್ಕಾರದ 1 ಕೋಟಿ ರೂ.ಗಳ ಅನುದಾನದೊಂದಿಗೆಕಾನೂನು ಮಾಪನಶಾಸ್ತ್ರ ಇಲಾಖೆಗೆ "ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ" ವನ್ನು ನಿರ್ಮಿಸಲಾಗುವುದು. 2016–17ನೇ ಸಾಲಿನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ

ಒಟ್ಟಾರೆಯಾಗಿ 2096 ಕೋಟಿ ರೂ. ಗಳನ್ನು ಒದಗಿಸಲಾಗಿದೆ

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**

ನಮ್ಮ ಸರ್ಕಾರ ಕಳೆದ ಅಧಿವೇಶನದಲ್ಲಿ ಮಂಡಿಸಿರುವ ಕ್ರಾಂತಿಕಾರಕಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿ ವಿಧೇಯಕಅಂಗೀಕಾರಗೊಂಡು ಕಾಯ್ದೆಯಾಗಿ ಅನುಷ್ಠಾನಕ್ಕೆ ಬಂದಿರುತ್ತದೆ. ಈ ಕಾಯ್ದೆಯನ್ನು ಜಾರಿಗೆ ತರಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು. 2016–17ನೇ ವರ್ಷಕ್ಕೆ ಹಣವನ್ನು 3,609 ಕೋಟಿ ರೂ.ಗಳಿಗೆ ಏರಿಸಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನಮಾರಾಟ ತೆರಿಗೆಯ ಹೆಚ್ಚಳದಿಂದಾಗಿ ಏರಿಕೆಯಾಗುವ ರಾಜಸ್ವದಿಂದ ಹಂಚಿಕೆಯಲ್ಲಿನ ಈ ಹೆಚ್ಚಳವನ್ನು ಭರಿಸಲಿದ್ದು, ಇದನ್ನು ಭಾಷಣದ ಮುಂದಿನಭಾಗದಲ್ಲಿ ನಾನು ವಿವರಿಸಲಿದ್ದೇನೆ.

“ನಮ್ಮ ಗ್ರಾಮ – ನಮ್ಮ ರಸ್ತೆ” (ಗಾಂಧಿ ಪಥ ಗ್ರಾಮ ಪಥ)ಯೋಜನೆ ಹಂತ–IVರಲ್ಲಿ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ 20ಕಿ.ಮೀ.ನಂತೆ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಯೋಜನೆಯನ್ನು ರೂಪಿಸಿ ಎಲ್ಲಾ ಪೂರ್ವಸಿದ್ದತಾ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಾಂದ್ರತೆ ಹೆಚ್ಚಾಗಿರುವಗ್ರಾಮಗಳಿಗೆ ಅನುಕ್ರಮವಾಗಿ 6 ಕಿ.ಮೀ. ಮತ್ತು 3 ಕಿ.ಮೀ ರಸ್ತೆ ನಿರ್ಮಾಣ ಕಾರ್ಯವು ಸೇರಿದೆ. ಈ ಕಾರ್ಯಕ್ರಮದ ಮೂಲಕ ಹಳ್ಳಿಯಿಂದ ಮುಖ್ಯರಸ್ತೆಯನ್ನು ಜೋಡಿಸಲು ಸರ್ವಋತು ಸಂಪರ್ಕ ರಸ್ತೆಗಳನ್ನು ನಿರ್ಮಿಸಲು ಒತ್ತು ನೀಡಲಾಗುವುದು.

ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರಲು ನೀರಿನ ವಿಷಯದಲ್ಲಿ ಸಮಾನತೆಯನ್ನು ಸಾಧಿಸಲು ಸರ್ಕಾರವು ದೃಢವಾದ ಹೆಜ್ಜೆಗಳನ್ನು ಇರಿಸಿದೆ. 2015–16ನೇ ಸಾಲಿನಲ್ಲಿ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮದಲ್ಲಿ ಇದುವರೆಗೆ 36,011 ಕಾಮಗಾರಿಗಳು ಪೂರ್ಣಗೊಂಡಿದ್ದು, ಹಂಚಿಕೆ ಮಾಡಿರುವ ಸಂಪೂರ್ಣ ಅನುದಾನವನ್ನು ಉಪಯೋಗಿಸಿ, ಬಾಕಿಯಿರುವ 6,188 ಕಾಮಗಾರಿಗಳು ಹಾಗೂ ಹೊಸದಾಗಿ ತೆಗೆದುಕೊಂಡಿರುವ ಬಹು ಗ್ರಾಮ ನೀರು ಸರಬರಾಜು ಕಾರ್ಯಕ್ರಮ, ಬೋರ್‌ವೆಲ್‌ಗಳು, ನೀರು ಶೋಧಕ ಘಟಕಗಳು ಇತ್ಯಾದಿ ಕಾಮಗಾರಿಗಳನ್ನು2016–17ನೇ ಸಾಲಿನಲ್ಲಿ ಪೂರ್ಣಗೊಳಿಸಲು ಒಟ್ಟು 1,980 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯಕ್ಕೆ 353 ಎಕರೆ ಭೂಮಿ ಖರೀದಿಸಲಾಗಿದ್ದು, ಈ ಶೈಕ್ಷಣಿಕ ವರ್ಷದಿಂದಲೇ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಲಾಗುವುದು. ಕರ್ನಾಟಕದ ಗತವೈಭವವನ್ನು ಸಾರುವ ಪರಂಪರಾಗತ ಗ್ರಾಮಗಳನ್ನು ಇನ್ನಷ್ಟು ಆಕರ್ಷಣೀಯ ಕೇಂದ್ರಗಳನ್ನಾಗಿಸುವ ಉದ್ದೇಶದಿಂದ ರಾಜ್ಯದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪ್ರಸಿದ್ಧ ತಾಣಗಳ ಗ್ರಾಮಗಳ ಪುನರ್‌ನಿರ್ಮಾಣ ಕಾರ್ಯಗಳನ್ನು 10 ಕೋಟಿ ರೂ.ಗಳಲ್ಲಿ ಕೈಗೊಳ್ಳಲಾಗುವುದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವಾಲಯ ಮತ್ತು 30 ಜಿಲ್ಲಾ ಪಂಚಾಯತ್ ಕಛೇರಿಗಳನ್ನು ಕನಿಷ್ಠ ಕಾಗದ ಬಳಕೆಯ ಕಛೇರಿಯನ್ನಾಗಿ ಪರಿವರ್ತಿಸಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು. ರಾಜ್ಯದ ಆಯ್ದ 100 ಗ್ರಾಮ ಪಂಚಾಯತಿಗಳಲ್ಲಿ ಸೋಲಾರ್‌ವಾಟರ್ ಪಂಪಿಂಗ್ ಅಳವಡಿಸಲಾಗುವುದು. ದೊಡ್ಡ ಗ್ರಾಮ ಪಂಚಾಯತ್‌ಗಳಲ್ಲಿ ‘ಹಳ್ಳಿ–ಸಂತೆ’ ಏರ್ಪಡಿಸಲು ವಿಲೇಜ್ ಹಾಟ್ ಮಾದರಿಯಲ್ಲಿ 25 ಕೋಟಿ ರೂ.ಗಳ ಮೂಲಭೂತಸೌಲಭ್ಯ ಕಲ್ಪಿಸಲಾಗುವುದು.

ಪ್ರತಿಯೊಂದು ಗ್ರಾಮದ ಐತಿಹ್ಯ ಹೊಂದಿರುವ ಗ್ರಾಮ ಚರಿತಕೋಶವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಹೊರ ತರಲು ಉದ್ದೇಶಹೊಂದಿದ್ದು, ಈಗಾಗಲೇ ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಯ ಗ್ರಾಮ ಚರಿತ ಕೋಶವನ್ನು ಕ್ರೋಢೀಕರಿಸಿ, ಬಿಡುಗಡೆಗೊಳಿಸಲಾಗಿದೆ. ಈ ಆರ್ಥಿಕ ವರ್ಷದಲ್ಲಿ ರಾಜ್ಯದ ಎಲ್ಲಾ ಗ್ರಾಮ ಚರಿತ ಕೋಶಗಳನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಲು ಮರದ ತಿಮ್ಮಕ್ಕನ ನೆರಳು ಯೋಜನೆ ಹೆಸರಿನಲ್ಲಿ 2016–17ನೇ ಸಾಲಿನಲ್ಲಿ 3,000 ಕಿ.ಮೀ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡಲು ಮತ್ತು 5 ವರ್ಷ ನಿರ್ವಹಣೆ ಮಾಡಲು ಕ್ರಮ ಜರುಗಿಸಲಾಗುವುದು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸುಮಾರು 10,000 ಎಕರೆ ಪ್ರದೇಶದಲ್ಲಿ ಹೊಸ ತೋಟಗಾರಿಕೆ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲಾಗುವುದು. 2016–17 ನೇ ಸಾಲಿನಲ್ಲಿ ರಾಜ್ಯದಲ್ಲಿ 3,000 ಎಕರೆ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ತೋಟದ ಅಭಿವೃದ್ಧಿ ಕಾಮಗಾರಿಗಳನ್ನು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರ್ಹ ವ್ಯಕ್ತಿಗತ ಫಲಾನುಭವಿಗಳ ಜಮೀನಿನಲ್ಲಿ ಕೈಗೊಳ್ಳಲಾಗುವುದು.



2016–17ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 5 ಲಕ್ಷ ವೈಯಕ್ತಿಕ ಕಾಮಗಾರಿಗಳು ಹಾಗೂ 1 ಲಕ್ಷ ಸಮುದಾಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ನಮ್ಮ ಗ್ರಾಮಗಳನ್ನು ತ್ಯಾಜ್ಯಮುಕ್ತ ಗ್ರಾಮಗಳನ್ನಾಗಿ ಪರಿವರ್ತಿಸಲು ತಿಪ್ಪೆ ಸಂಸ್ಕರಣೆಯು ಒಂದು ಮಹತ್ವದ ಕಾರ್ಯಕ್ರಮವಾಗಿದ್ದು ಕಣಕಿನಕೊಪ್ಪ/ ಹಿಟ್ನಾಳ ಗ್ರಾಮಗಳ ಮಾದರಿಯಲ್ಲಿ ತಿಪ್ಪೆ ಸಂಸ್ಕರಣೆ ಕಾರ್ಯಕ್ರಮವನ್ನು ಇತರೇ ಗ್ರಾಮಗಳಿಗೂ ಸ್ವಚ್ಛ ಭಾರತ ಅಭಿಯಾನದಡಿ ಹಂತ ಹಂತವಾಗಿವಿಸ್ತರಿಸಲಾಗುವುದು.300 ಗ್ರಾಮ ಪಂಚಾಯತಿಗಳಲ್ಲಿ ರಾಷ್ಟ್ರೀಯ ಸ್ವಚ್ಛ ಅಭಿಯಾನದಡಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ವ್ಯವಸ್ಥೆ ಮಾಡಲಾಗುವುದು.ಸ್ವಚ್ಛ ಭಾರತ ಅಭಿಯಾನದಡಿ 12 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದು. 2,500 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು. ಹೊಸದಾಗಿ ರಚಿಸಲಾದ 460 ಗ್ರಾಮ ಪಂಚಾಯಿತಿಗಳ

ಆಡಳಿತವ್ಯವಸ್ಥೆಗೆ ಅನುಕೂಲವಾಗುವಂತೆ ಕಟ್ಟಡ ಮುಂತಾದ ಮೂಲಸೌಕರ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುವುದು. 2016–17ನೇಸಾಲಿನಲ್ಲಿ ಈ ಉದ್ದೇಶಕ್ಕೆ 30 ಕೋಟಿ ರೂ. ಒದಗಿಸಲಾಗುವುದು.

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಹಿನ್ನಲೆಯಲ್ಲಿ ರಸ್ತೆಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ ಗ್ರಾಮ ಪರಿಮಿತಿಯಲ್ಲಿ ಬರುವ ರಾಜ್ಯ/ರಾಷ್ಟ್ರ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷಾ ಕ್ರಮ ಕೈಗೊಳ್ಳಲಾಗುವುದು. ವಿಶ್ವ ಬ್ಯಾಂಕ್ ನೆರವಿನ 2ನೇ ಹಂತದ ಗ್ರಾಮ ಸ್ವರಾಜ್–ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆಯನ್ನು 1,000 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯಡಿಯಲ್ಲಿ ಕಳೆದಸಾಲಿನಲ್ಲಿ 1.62 ಲಕ್ಷ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸ್ವ–ಉದ್ಯೋಗ ಮತ್ತು ವೇತನ ಉದ್ಯೋಗ ತರಬೇತಿಯನ್ನು ನೀಡಲಾಗಿದೆ. ಕಳೆದ ಸಾಲಿನಲ್ಲಿ ಪಂಚಾಯಿತಿಗೆ 40 ರಂತೆ ಗುರುತಿಸಲಾದ ಫಲಾನುಭವಿಗಳ ಆಯ್ಕೆಯ ಸಂಖ್ಯೆಯನ್ನು 2016–17ನೇ ಸಾಲಿನಲ್ಲಿ 50ಕ್ಕೆ ಹೆಚ್ಚಿಸಲಾಗುವುದು.

2016–17ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್‌ರಾಜ್ ಇಲಾಖೆಗೆ ಒಟ್ಟಾರೆಯಾಗಿ 13,018 ಕೋಟಿ ರೂ. ಗಳನ್ನುಒದಗಿಸಲಾಗಿದೆ.


## ಪ್ರದೇಶಾಭಿವೃದ್ಧಿ

ರಾಜ್ಯದಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ವಿಶೇಷಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವನ್ನು ಮುಂದುವರೆಸಲಾಗುವುದು. ಈ ಉದ್ದೇಶಕ್ಕಾಗಿ ಅನುದಾನವನ್ನು ಈಗಿನ 2300 ಕೋಟಿ ರೂ.ಗಳಿಂದ 3000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು ಪ್ರಾದೇಶಿಕ ಅಸಮಾನತೆಯ ಅಂತರವನ್ನು ಕಡಿಮೆ ಮಾಡಲು ಮೂಲಸೌಕರ್ಯ ಅಭಿವೃದ್ಧಿಗಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷವೂ 1000 ಕೋಟಿ ರೂ. ಗಳನ್ನು ನೀಡಲಾಗುವುದು. ವಿವಿಧ ಅಭಿವೃದ್ಧಿ ಮಂಡಳಿಗಳಿಗೆ ನೀಡುವ ಅನುದಾನವನ್ನು ಹೆಚ್ಚಿಸಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 50 ಕೋಟಿ ರೂ.ಗಳ, ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 45 ಕೋಟಿ ರೂ.ಹಾಗೂ ಕರಾವಳಿಅಭಿವೃದ್ಧಿ ಪ್ರಾಧಿಕಾರಕ್ಕೆ 15 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕೆ 600 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಮೊದಲ ಬಾರಿಗೆ ಬೆಂಗಳೂರು ನಗರದ ಮಾನವ ಅಭಿವೃದ್ಧಿ ವರದಿಯನ್ನು 2016–17 ರಲ್ಲಿ ಸಿದ್ಧಪಡಿಸಲಾಗುವುದು. ಸುಸ್ಥಿರ ಅಭಿವೃದ್ಧಿ ಗುರಿ 2030 ನ್ನು ಆಧರಿಸಿ ಕರ್ನಾಟಕ ರಾಜ್ಯದ ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು. ಸರ್ಕಾರದ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗುವಂತೆ ಮಾಡಲು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೌಲ್ಯಮಾಪನಗಳನ್ನು ಪುನರ್‌ರೂಪಿಸಲು ಅನುವಾಗುವಂತೆ 4 ಕೋಟಿ ರೂ. ಗಳನ್ನು ಒದಗಿಸಲಾಗುವುದು. 2016–17ನೇ ಸಾಲಿನಲ್ಲಿ ಯೋಜನೆ ಮತ್ತು ಪ್ರದೇಶಾಭಿವೃದ್ಧಿಲಾಖೆಗೆ ಒಟ್ಟಾರೆಯಾಗಿ 1816 ಕೋಟಿ ರೂ. ಗಳನ್ನು ಒದಗಿಸಲಾಗಿದೆ

## ನಗರಾಭಿವೃದ್ಧಿ – ಪೌರಾಡಳಿತ

ಕಳೆದ 2 ವರ್ಷಗಳಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 1876 ಕಿ.ಮೀ. ರಸ್ತೆಗಳನ್ನು 1095 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, 2016–17ನೇ ಸಾಲಿನಲ್ಲಿ 870 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ರಾಜೀವ್ ಆವಾಸ್ ಯೋಜನೆಯಡಿ 10 ನಗರಗಳ 20 ಯೋಜನೆಗಳಡಿ 22000 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ ಹಂತ–2ರಲ್ಲಿ ಸರ್ಕಾರದ ಅನುದಾನವನ್ನು ಎಲ್ಲಾ ಪೌರಸಂಸ್ಥೆಗಳಿಗೆ ಸಂಪೂರ್ಣವಾಗಿ ಬಿಡುಗಡೆಗೊಳಿಸಲಾಗಿದ್ದು, ಕಾಮಗಾರಿಗಳು ಅಂತಿಮ ಹಂತದಲ್ಲಿವೆ. ನಾವು ಈ ಯೋಜನೆಯ ಹಂತ–3 ನ್ನು ಎಲ್ಲಾಪೌರ ಸಂಸ್ಥೆಗಳಲ್ಲಿ 2093 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಿದ್ದು, ಇದಕ್ಕಾಗಿ ಪೂರ್ವ ಸಿದ್ಧತಾ ಕಾರ್ಯಗಳನ್ನು 2016–17ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು. 10 ಮಹಾನಗರ ಪಾಲಿಕೆಗಳಲ್ಲಿ ನಗರೋತ್ಥಾನ



ಹಂತ–3 ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯನ್ನು ಸಕಾಲದಲ್ಲಿ ಸಂಪೂರ್ಣಗೊಳಿಸಲು ಶ್ರಮಿಸುತ್ತೇವೆ. ಚಾಮರಾಜನಗರ, ಚಿಕ್ಕಬಳ್ಳಾಪುರ ಮತ್ತು ಹಾವೇರಿ ಪಟ್ಟಣಗಳ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ತಲಾ 50 ಕೋಟಿರೂ.ಗಳನ್ನು ಒದಗಿಸಲಾಗುವುದು.

ಘನತ್ಯಾಜ್ಯ ನಿರ್ವಹಣೆಯು ರಾಜ್ಯ ಸರ್ಕಾರದ ಆದ್ಯತೆಯ. ಪ್ರಸಕ್ತ ಸಾಲಿನಲ್ಲಿ ಪ್ರಮುಖ ನಗರಗಳಿಗೆ ಸಂಬಂಧಿಸಿದ 579 ಕೋಟಿ ರೂ.ಗಳಷ್ಟು ಅಂದಾಜು ಮೊತ್ತದ ಘನತ್ಯಾಜ್ಯ ನಿರ್ವಹಣೆಯ ಯೋಜನೆಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲೂ ವೈಜ್ಞಾನಿಕ ಘನ ತ್ಯಾಜ್ಯ ನಿರ್ವಹಣೆಯ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಬದ್ಧವಾಗಿದ್ದು 2016–17ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ 75 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು. ಬರುವ ವರ್ಷದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಸ್ಥಾನಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಕೇಂದ್ರ ಪುರಸ್ಕೃತ ಅಟಲ್ ನಗರ ಪರಿವರ್ತನಾ ಪುನರುಜ್ಜೀವನ ಅಭಿಯಾನ ಅಮೃತ್ ಯೋಜನೆಯಲ್ಲಿ ರಾಜ್ಯದ 26 ನಗರಗಳುಮತ್ತು ಪಾರಂಪರಿಕ ಪಟ್ಟಣ ಬಾದಾಮಿ ಸೇರಿ ಒಟ್ಟು 27 ನಗರಗಳು ಆಯ್ಕೆಯಾಗಿದ್ದು, 2015–16ನೇ ಸಾಲಿನಲ್ಲಿ 1258.54 ಕೋಟಿ ರೂ.ಮೊತ್ತದ ರಾಜ್ಯದ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮವಹಿಸಲಾಗಿದೆ.

## ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ರಾಜ್ಯ ಸರ್ಕಾರದ ಕಾರ್ಯಕ್ರಮದ ಅಡಿಯಲ್ಲಿ ಮಂಡಳಿಯು 72 ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು, ಈ

ಪೈಕಿ 2016-17ನೇ ಸಾಲಿನಲ್ಲಿ 451.62 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 12 ನೀರು ಸರಬರಾಜು ಯೋಜನೆಗಳಾದ ಹಳಿಯಾಳ, ಸಂಡೂರು, ಗಂಗಾವತಿ, ಮಂಗಳೂರು ಕಿಂಡಿ ಅಣೆಕಟ್ಟು, ಬೆಳ್ತಂಗಡಿ, ಮಡಿಕೇರಿ, ಹಿರಿಯೂರು-ಚಳ್ಳಕೆರೆ, ಶಿವಮೊಗ್ಗ, ಹೊನ್ನಾಳಿ, ರಾಮನಗರ-ಚನ್ನಪಟ್ಟಣ, ಶ್ರೀನಿವಾಸಪುರ, ಬೀದರ್ ವಿತರಣಾಜಾಲ ನವೀಕರಣ ಹಾಗೂ 274.27 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬೀಳಗಿ, ಮುಧೋಳ್, ಹಡಗಲಿ, ಕೂಡ್ಲಿಗಿ, ಚಿಕ್ಕಮಗಳೂರು, ಹುನಗುಂದ, ಮಾಲೂರು, ಹರಪನಹಳ್ಳಿ, ಬೈಲಹೊಂಗಲಗಳಲ್ಲಿ 9 ಒಳಚರಂಡಿ ಯೋಜನೆಗಳನ್ನು ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ.

ಪ್ರಸ್ತುತ ಪ್ರಗತಿಯಲ್ಲಿರುವ ಎಲ್ಲಾ 96 ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಕರ್ನಾಟಕ ನಗರನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡುವ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಲಾಗುವುದು. ಈ ಅನುದಾನವನ್ನು IEBR ಸೇರಿದಂತೆ 2015-16ರಲ್ಲಿ ಒದಗಿಸಿದ್ದ 310 ಕೋಟಿ ರೂ. ಗಳಿಂದ 2016-17ರಲ್ಲಿ 727.59 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

### ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ ಕೆ.ಯು.ಡಬ್ಲ್ಯೂ.ಎಸ್.ಎಮ್.ಪಿ) ಯಡಿ ನಿರಂತರ ನೀರು (24X7) ಸರಬರಾಜು ವ್ಯವಸ್ಥೆ ಅನುಷ್ಠಾನಗೊಳಿಸಲು 2016 ರಲ್ಲಿ ಹುಬ್ಬಳ್ಳಿ ಧಾರವಾಡದಲ್ಲಿ ಖಾಸಗಿ ವಲಯದ ಆಪರೇಟರನ್ನು ನೇಮಕ ಮಾಡಲಾಗಿದೆ. ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ.) ಧಾರವಾಡ, ದಾವಣಗೆರೆ, ಕಲಬುರಗಿಗಳಲ್ಲಿ ಸ್ಥಾಪಿಸಲಾಗುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು 2016 ರಲ್ಲಿ ಕಾರ್ಯಾರಂಭ ಮಾಡಲಿವೆ. ಬೆಳಗಾವಿ ಮತ್ತು ದಾವಣಗೆರೆ ನಗರಗಳು ಮೊದಲ ಹಂತದಸ್ಮಾರ್ಟ್ ಸಿಟಿ ಅಭಿಯಾನದಡಿ ಆಯ್ಕೆಯಾಗಿವೆ. 2016ರಲ್ಲಿ ಈ ಯೋಜನೆಯ ಅನುಷ್ಠಾನವನ್ನು ಆರಂಭಿಸಲಾಗುವುದು.

### ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಈ ಕೆಳಗಿನ ಯೋಜನೆಗಳನ್ನು ಅನುಮೋದಿಸಲಾಗಿದೆ:

* ಬೆಂಗಳೂರು ಮಹಾನಗರ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ 5018 ಕೋಟಿ ರೂ.ಗಳ ಅಂದಾಜಿನ **"ಜೈಕಾ"** ಸಾಲದ ಸಹಯೋಗದೊಂದಿಗಿನ ಯೋಜನೆ. ಇದರಲ್ಲಿ ಮಂಡಳಿಯಲ್ಲಿ ಸೋರಿಕೆಯಾಗುತ್ತಿರುವ ಸುಮಾರು 180 ಎಂ.ಎಲ್.ಡಿ ನೀರು ಉಳಿತಾಯ ಯೋಜನೆ ಸೇರ್ಪಡೆಯಾಗಿದೆ. ಒಟ್ಟು 160.33 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಸ್ತುತವಿರುವ ಸಂಸ್ಕರಿಸದೆ ಇರುವ ನೀರಿನ ಮುಖ್ಯ ಕೊಳವೆಯ ಜೊತೆಗೆ ಹೆಚ್ಚುವರಿಯಾಗಿ ಇನ್ನೊಂದು ಪ್ರತ್ಯೇಕ ಕೊಳವೆ ಮಾರ್ಗವನ್ನು ಘೋರ್ಬ್ಸ್ ಸಾಗರದಿಂದ ಎನ್.ಬಿ.ಆರ್. ರವರೆಗೆ ಮತ್ತು ಟಿ.ಕೆ. ಹಳ್ಳಿಯವರೆಗೆ ವಿಸ್ತರಿಸುವ ಯೋಜನೆ. ವೃಷಭಾವತಿ ಕಣಿವೆ, ಹೆಬ್ಬಾಳ, ಕೋರಮಂಗಲ ಮತ್ತು ಚಲ್ಲಘಟ್ಟ ಹಾಗೂ ದೊಡ್ಡ ಬೆಲೆಯಲ್ಲಿ ತ್ಯಾಜ್ಯನೀರು ಸಂಸ್ಕರಣಾ ಘಟಕಗಳನ್ನು ರಾಜ್ಯ ಸರ್ಕಾರದ ಶೇ. 25ರಷ್ಟು ಅಂದರೆ 355. ಕೋಟಿ ರೂ. ಆರ್ಥಿಕ ನೆರವಿನೊಂದಿಗೆ ಮುಂದಿನ ನಾಲ್ಕುವರ್ಷಗಳಲ್ಲಿ ಸ್ಥಾಪಿಸಲಾಗುವುದು.

### ಬೆಂಗಳೂರು ಮೆಟ್ರೋ ರೈಲು ಯೋಜನೆ

ನಮ್ಮ ಮೆಟ್ರೋ ಜಾಲದಲ್ಲಿ ಒಟ್ಟು 27 ಕಿ.ಮೀ ಕಾರ್ಯಾಚರಣೆಆರಂಭವಾಗಿದೆ. 2016ರ ಮಧ್ಯದಲ್ಲಿ ಹಂತ 1ರ ಯೋಜನೆ ಪೂರ್ಣಗೊಳ್ಳಲಿದೆ. ಎರಡನೇ ಹಂತದ ಕಾಮಗಾರಿಗಳ ಎರಡು ರೀಚ್‌ಗಳ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದೆ. ಈ ಯೋಜನೆಯನ್ನು 2020ರಲ್ಲಿ ಪೂರ್ಣಗೊಳಿಸಲಾಗುವುದು.

ರಾಜ್ಯ ಸರ್ಕಾರವು ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂ ಜಂಕ್ಷನ್‌ಹಾಗೂ ಇತರೆ ಮೆಟ್ರೋದ ಹೊಸ ಪಥಗಳಿಗೆ ಹಣಕಾಸು ವ್ಯವಸ್ಥೆ ಮಾಡಲುವಿನೂತನ ವಿಧಾನಗಳನ್ನು ಅಳವಡಿಸಲು ಯೋಜಿಸಿದೆ.



### ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಸಂಪನ್ಮೂಲಗಳಿಂದ ವಸತಿ ಹಾಗೂ ಮೂಲಸೌಕರ್ಯ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಈ ಮುಂದಿನ ಯೋಜನೆಗಳನ್ನು 2016-17 ರಲ್ಲಿ ಕೈಗೆತ್ತಿಕೊಳ್ಳಲಾಗುವುದು:

* ಆರ್ಥಿಕವಾಗಿ ದುರ್ಬಲ ವರ್ಗಗಳು, ಕಡಿಮೆ ಆದಾಯದಗುಂಪುಗಳು ಹಾಗೂ ಮಧ್ಯಮ ಆದಾಯದ ಗುಂಪುಗಳಿಗೆ ಕೈಗೆಟಕುವ ಬೆಲೆಯಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಕಳೆದಮೂರು ವರ್ಷಗಳಲ್ಲಿ 8259 ಫ್ಲಾಟ್‌ಗಳ ಪೈಕಿ 5059 ಫ್ಲಾಟ್‌ಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. 2016-17 ನೇ ಸಾಲಿನಲ್ಲಿಸುಮಾರು 3000 ಫ್ಲಾಟ್‌ಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾಮಗಾರಿ ಪ್ರಗತಿಯಲ್ಲಿದ್ದು 10,000 ನಿವೇಶನಗಳನ್ನು ಮಾರ್ಚ್ 2017 ರೊಳಗಾಗಿ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಡಿಎಮತ್ತು ಬಿಎಂಆರ್‌ಡಿಎಗಳ ಕೆರೆ ಅಭಿವೃದ್ಧಿ ಕರದಿಂದ ಹಾಗೂ ಕಾರ್ಪೊರೇಟ್ ಸಾಮಾಜಿಕ ಹೊಣೆ ಅಡಿಯಲ್ಲಿ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಪುನಶ್ಚೇತನ ಕ್ರಮಗಳನ್ನು ಪ್ರಾರಂಭಿಸಲಾಗುವುದು.

ಬೆಂಗಳೂರು ನಗರದಲ್ಲಿ ವಾಹನ ಸಂಚಾರ ದಟ್ಟಣೆ ತೀವ್ರವಾಗಿದ್ದು, ಇದನ್ನು ಸುಗಮಗೊಳಿಸಲು ಸುಮಾರು 100 ಕಿ.ಮೀ ಉದ್ದದ ಸುಮಾರು 18,000 ಕೋಟಿ ರೂ. ವೆಚ್ಚದಲ್ಲಿ ಸೆಂಟ್ರಲ್ ಸಿಲ್ಕ್

ಬೋರ್ಡ್‌ನಿಂದಹೆಬ್ಬಾಳ ಜಂಕ್ಷನ್ (ಉತ್ತರ–ದಕ್ಷಿಣ), ಕೆ.ಆರ್.ಪುರಂ ನಿಂದ ತುಮಕೂರುರಸ್ತೆ (ಪೂರ್ವ–ಪಶ್ಚಿಮ1) ಮತ್ತು ವರ್ತೂರು ಕೋಡಿಯಿಂದ ಮೈಸೂರು ರಸ್ತೆ (ಪೂರ್ವ–ಪಶ್ಚಿಮ2) ಹಾಗೂ ಇತರೆ ಮೂರು ಮೇಲ್ಮಟ್ಟದ ರಸ್ತೆಗಳನ್ನು ನಿರ್ಮಿಸಲು ಯೋಜನಾ ವರದಿ ತಯಾರಿಸಲಾಗುತ್ತಿದೆ. ಅವುಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲು ಕ್ರಮವಹಿಸಲಾಗುವುದು.

**ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ**

ಬೆಂಗಳೂರು ಮಹಾನಗರವು ಕರ್ನಾಟಕದ ಪ್ರಗತಿ ಕೇಂದ್ರ; ರಾಷ್ಟ್ರಪ್ರಗತಿಯ ಚಾಲನಾ ಇಂಜಿನ್, ಭಾರತದ ಮಾಹಿತಿ ತಂತ್ರಜ್ಞಾನ ಮತ್ತು ನವೋದ್ಯಮಗಳ ರಾಜಧಾನಿ

"ಹೂಡಿಕೆದಾರರ ನಡಿಗೆ ಕರುನಾಡಿನೆಡೆಗೆ"ಎಂಬ ಘೋಷ ವಾಕ್ಯವನ್ನು ಸಾಕಾರಗೊಳಿಸಲು ಮುಖ್ಯಮಂತ್ರಿಗಳ ವಿಶೇಷ ಪ್ಯಾಕೇಜಿನಡಿಯಲ್ಲಿ ಬೆಂಗಳೂರು ನಗರಕ್ಕೆ ಮುಂದಿನ ಎರಡು ವರ್ಷಗಳಲ್ಲಿ 5000 ಕೋಟಿ ರೂ.ಗಳ ವೆಚ್ಚದಲ್ಲಿ ಈ ಮುಂದಿನ ಕಾಮಗಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

ನಗರದ ಆಯ್ದ ಪ್ರಮುಖ 300 ಕಿ.ಮೀ. ಉದ್ದದ ರಸ್ತೆಗಳಿಗೆವೈಟ್ ಟಾಪಿಂಗ್.

* ನಗರದ ಹಳೆ ಮತ್ತು ಹೊಸ ಕೇಂದ್ರ ವಾಣಿಜ್ಯ ಪ್ರದೇಶದ ಪ್ರಮುಖರಸ್ತೆಗಳ ಜಾಲವನ್ನು ಟೆಂಡರ್ ಶ್ಯೂರ್ ಮಾದರಿಯಡಿ ಅಭಿವೃದ್ಧಿಪಡಿಸುವುದು. ರಸ್ತೆ ಜಾಲದಲ್ಲಿ ಪರ್ಯಾಯ ಮಾರ್ಗಗಳನ್ನು ಒದಗಿಸುವುದಕ್ಕಾಗಿ 1500 ಕಿಮೀ ಉದ್ದದ ರಸ್ತೆಗಳ ಅಭಿವೃದ್ಧಿ. ಪಾರಂಪರಿಕ ಮಹತ್ವ ಹೊಂದಿರುವ ರಸೆಲ್ ಮಾರುಕಟ್ಟೆ, ಜಾನ್ಸನ್‌ಮಾರುಕಟ್ಟೆ ಮತ್ತು ಕೃಷ್ಣರಾಜೇಂದ್ರ ಮಾರುಕಟ್ಟೆಗಳ ಅಭಿವೃದ್ಧಿ. ನಗರದ ವೈಟ್‌ಫೀಲ್ಡ್ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶಗಳೂ ಸೇರಿದಂತೆ ಪ್ರಮುಖ ಐಟಿ–ಬಿಟಿ ವಲಯಗಳ ಸಮಗ್ರ ಅಭಿವೃದ್ಧಿ.

ನಗರದ ಆಯ್ದ ಪ್ರಮುಖ ಸ್ಥಳಗಳಲ್ಲಿ ಬಹುಮಹಡಿಕಾರ್ ಪಾರ್ಕಿಂಗ್ ವ್ಯವಸ್ಥೆ ಸುರಂಜನದಾಸ ರಸ್ತೆ– ಹಳೆ ಮದ್ರಾಸ್ ರಸ್ತೆ, ಸರ್ಜಾಪುರ – ಹರಳೂರು ರಸ್ತೆ ಜಂಕ್ಷನ್ ಹಾಗೂ ಬನ್ನೇರುಘಟ್ಟ ರಸ್ತೆಯಲ್ಲಿ ಹುಳಿಮಾವು ಜಂಕ್ಷನ್, ಅರಕೆರೆ ಜಂಕ್ಷನ್‌ಗಳಲ್ಲಿ ಗ್ರೇಡ್‌ಸೆಪರೇಟರ್‌ಗಳ ನಿರ್ಮಾಣ.

* ಕೆರೆಗಳ ಅಭಿವೃದ್ಧಿಗೆ 100 ಕೋಟಿ ರೂ. ಘನತ್ಯಾಜ್ಯ ನಿರ್ವಹಣೆಗೆ 500 ಕೋಟಿ ರೂ. ಮಳೆನೀರು ಚರಂಡಿ ನಿರ್ಮಾಣಕ್ಕೆ 800 ಕೋಟಿ ರೂ.

* ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಹಳ್ಳಿಗಳು ಮತ್ತು ನಗರಸಭೆ – ಪುರಸಭೆ ಪ್ರದೇಶಗಳ ಅಭಿವೃದ್ಧಿಗೆ 250 ಕೋಟಿ ರೂ.2016–17ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆಯಡಿ 1000 ಕೋಟಿ ರೂ., ವಿಶೇಷ ಬಂಡವಾಳ ಯೋಜನೆಗಳಡಿ 2158 ಕೋಟಿ ರೂ. ಮತ್ತು ಹಣಕಾಸು ಆಯೋಗ ಮತ್ತು ಇತರೆ ಅನುದಾನಗಳಿಂದ 1064.73 ಕೋಟಿರೂ. ಹೀಗೆ ಒಟ್ಟಾರೆಯಾಗಿ 4222.73 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇವೆ.

**ನಗರ ಭೂ ಸಾರಿಗೆ**

ಭಾರತ ಸರ್ಕಾರವು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಉಪ ನಗರ ರೈಲು ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ಘೋಷಿಸಿದೆ. ಈ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಇಲಾಖೆಯು ಕ್ರಮ ವಹಿಸಲಿದ್ದು ಈ ಕಾರ್ಯಕ್ರಮಕ್ಕಾಗಿ ಪ್ರಾರಂಭಿಕವಾಗಿ 100 ರೂ. ಒದಗಿಸಲಾಗುವುದು.

**ಬಿಎಂಆರ್‌ಡಿಎ**

ಉಪ ನಗರ ವರ್ತುಲ ರಸ್ತೆ (STRR) ಹಾಗೂ ಬೃಹತ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಎಲ್‌ಪಿಎ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗುವುದು ಮತ್ತು ಬಿಡದಿ ಸ್ಮಾರ್ಟ್ ಸಿಟಿ ಸವಿವರ ಯೋಜನಾವರದಿಯನ್ನು ತಯಾರಿಸಲಾಗುವುದು. ನಗರಾಭಿವೃದ್ಧಿ ಇಲಾಖೆಗೆ 2016–17ರಲ್ಲಿ ಒಟ್ಟು 14,853 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಇದರಲ್ಲಿ ಬೆಂಗಳೂರು ಸಂಬಂಧಿತ ಕಾರ್ಯಕ್ರಮಗಳಿಗೆ 6044 ಕೋಟಿ ರೂ.ಗಳು ಒಳಗೊಂಡಿದೆ.

**ಕಂದಾಯ**

**ತಂತ್ರಾಂಶಗಳ ಅಭಿವೃದ್ಧಿಯ ಮೂಲಕ ಆಡಳಿತ ಸುಧಾರಣೆ :** * ಭೂ ಮಾಲೀಕರಿಗೆ ಪಹಣಿ ಪತ್ರದಲ್ಲಿ ಆಗುವ ಬದಲಾವಣೆಗಳ ಕುರಿತು ಎಸ್.ಎಂ.ಎಸ್



ಮೂಲಕ ಮಾಹಿತಿ ರವಾನೆ ಮಾಡಲು ತಂತ್ರಾಂಶ ಅಭಿವೃದ್ಧಿ ಪಡಿಸಲಾಗುವುದು. ಇದಕ್ಕಾಗಿ ಭೂ ಮಾಲೀಕರ ಆಧಾರ್‌ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯನ್ನು, ಭಾವಚಿತ್ರವನ್ನು ಸರ್ವೆನಂಬರ್‌ನೊಂದಿಗೆ ಜೋಡಿಸಲಾಗುವುದು. ಇದರಿಂದ ಕಾನೂನು ಬಾಹಿರ ವ್ಯವಹಾರಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುವುದು.

* ಸೆಕ್ಷನ್ 109 ಅಡಿಯಲ್ಲಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸಿ ಸಕಾಲದಲ್ಲಿ ವಿಲೇ ಮಾಡಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುವುದು.

ಪೋಡಿ ಮುಕ್ತ ಗ್ರಾಮ ಯೋಜನೆಯನ್ನು 1000 ಹಳ್ಳಿಗಳಿಗೆ ವಿಸ್ತರಿಸಲಾಗಿದ್ದು ಇನ್ನೂ 1500 ಹಳ್ಳಿಗಳಿಗೆ ವಿಸ್ತರಿಸಲಾಗುವುದು. ಗ್ರಾಮ ಸಹಾಯಕರಿಗೆ ನೀಡಲಾಗುತ್ತಿರುವ ಮಾಸಿಕ ಗೌರವಧನವನ್ನು ರೂ. 7000 ನಿಂದ ರೂ.10,000ಗಳಿಗೆ ಹೆಚ್ಚಿಸಲಾಗುವುದು. ನೊಂದಣಿ ಇಲಾಖೆಯಲ್ಲಿ 1857ನೇ ಇಸವಿಯಿಂದ ಇರುವ ಶಾಶ್ವತ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಮೈಕ್ರೊ ಫಿಲ್ಮ್ ಮತ್ತು ಫಿಶ್ ರೂಪದಲ್ಲಿ ಸಂರಕ್ಷಿಸಿಡುವ ಕಾರ್ಯಕ್ರಮವನ್ನು ಕೇಂದ್ರಸರ್ಕಾರದ ಡಿಜಿಟಲ್ ಇಂಡಿಯಾ ಯೋಜನೆಯಡಿ 301 ಕೋಟಿ ರೂ.ಗಳವೆಚ್ಚದಲ್ಲಿ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗುವುದು.

2016–17ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ ಒಟ್ಟಾರೆಯಾಗಿ 5532 ಕೋಟಿ ರೂ. ಗಳನ್ನು ಒದಗಿಸಲಾಗಿದೆ

**ಇಂಧನ**

ರಾಜ್ಯವು 2016–17ನೇ ಸಾಲಿನಲ್ಲಿ ಯರಮರಸ್ ಘಟಕ–2 ರಿಂದ 800 ಮೆ. ವಾ, ಕೇಂದ್ರ ಉತ್ಪಾದನಾ ಘಟಕದಿಂದ 705.40 ಮೆ.ವ್ಯಾ. ಮತ್ತು ಪರ್ಯಾಯ ಇಂಧನ ಮೂಲಗಳಿಂದ 1150 ಮೆ.ವ್ಯಾ

ಸೇರಿ2,655.40 ಮೆ.ವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ರೂಪಿಸಿದೆ. ಯಲಹಂಕದಲ್ಲಿ ಅನಿಲ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸುವ ಕಾರ್ಯವು 2016-17ರಲ್ಲಿ ಪ್ರಾರಂಭವಾಗಲಿದೆ. 1320 ಮೆ.ವ್ಯಾ. ಗುಲ್ಬರ್ಗಾ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಬಿಡ್‌ಗಳನ್ನು ಆಹ್ವಾನಿಸಲಾಗುವುದು. ಕೆ.ಪಿ.ಸಿ.ಎಲ್ ವತಿಯಿಂದ 200 ಮೆ.ವ್ಯಾ ಸೌರವಿದ್ಯುತ್ ಸ್ಥಾವರವನ್ನು ಸ್ಥಾಪಿಸುವ ಕಾರ್ಯವು ಪ್ರಾರಂಭವಾಗಲಿದೆ. 2000 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಸ್ಥಾಪಿಸಲು ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಮಾರ್ಚ್ 2017ರ ಅಂತ್ಯಕ್ಕೆ ಸುಮಾರು 600 ಮೆ.ವ್ಯಾ ವಿದ್ಯುತ್ ಉತ್ಪಾದನೆಯಾಗುವ ಸಂಭವವಿದೆ. ಸರ್ಕಾರವು ತಲಾ 20ಮೆ.ವ್ಯಾ.ಗಳಂತೆ 60 ಹಿಂದುಳಿದ ತಾಲ್ಲೂಕುಗಳಲ್ಲಿ ಒಟ್ಟು 1,200 ಮೆ.ವ್ಯಾ.ಗಳ ಸೋಲಾರ್ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಯೋಜನೆಯನ್ನು ಸಹಕೈಗೆತ್ತಿಕೊಂಡಿದೆ ಮತ್ತು ಅದರ ಟೆಂಡರ್ ಪ್ರಗತಿಯಲ್ಲಿದೆ. ಕೆಪಿಟಿಸಿಎಲ್ ವತಿಯಿಂದ 77 ಉಪ ಕೇಂದ್ರಗಳನ್ನು ಸ್ಥಾಪಿಸಲುಕ್ರಮ ಕೈಗೊಳ್ಳಲಾಗುವುದು. ಹೊಸಬೆಳಕು ಯೋಜನೆಯಡಿ ರಾಜ್ಯ ವಿದ್ಯುತ್‌ಸರಬರಾಜು ಕಂಪನಿಗಳು ರಿಯಾಯಿತಿ ದರದಲ್ಲಿ 42 ಲಕ್ಷ ಐಇಆಬಲ್ಬ್‌ಗಳನ್ನು ಗ್ರಾಹಕರಿಗೆ ವಿತರಿಸಲಾಗಿದೆ. 2016-17ನೇ ಸಾಲಿನಲ್ಲಿ 50,000 ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು.

ಆರ್‌ಇಸಿ ಮತ್ತು ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರಂತರ ಜ್ಯೋತಿ ಮೂರನೇ ಹಂತದ ಫೀಡರ್ ವಿಭಜನಾ ಯೋಜನೆಯನ್ನು 2016-17ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುವುದು 2016-17ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆಯಾಗಿ 12,632 ಕೋಟಿ ರೂ.ಗಳನ್ನು ಒದಗಿಸಲಾಗಿದೆ

### ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-3 ರಲ್ಲಿ 2795ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು ಅರ್ಹವಾಗಿರುವ 1520 ಕಿ.ಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಆಭಿವೃದ್ಧಿಗೊಳಿಸಲು 3500 ಕೋಟಿ ರೂ.ಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-2 ರ ಬಾಕಿಉಳಿದಿರುವ 131 ಕಿ.ಮೀ. ಉದ್ದದ ರಸ್ತೆಯನ್ನು 262 ಕೋಟಿ ರೂ.ಗಳ ವೆಚ್ಚದಲ್ಲಿ 2016-17ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. 350. ಕೆ.ಆರ್.ಡಿ.ಸಿ.ಎಲ್. ವತಿಯಿಂದ 2016-17ನೇ ಸಾಲಿನಲ್ಲಿ ಈ ಮುಂದಿನ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

* 130 ಕೋಟಿ ರೂ.ಗಳ ವೆಚ್ಚದಲ್ಲಿ ಸವಳಂಗ - ಹೊನ್ನಾಳಿನಡುವಿನ 48 ಕಿ.ಮಿ. ಉದ್ದದ ರಸ್ತೆ. * 155 ಕೋಟಿ ರೂ.ಗಳ ವೆಚ್ಚದಲ್ಲಿ ಸಿಂಧನೂರು. * ಕುಷ್ಟಗಿ ನಡುವಿನ 63 ಕಿ.ಮಿ. ಉದ್ದದ ರಸ್ತೆ. ಕಲಬುರಗಿ ಪಟ್ಟಣಕ್ಕೆ ಬೈಪಾಸ್ ರಸ್ತೆ ನಿರ್ಮಿಸಲು ಯೋಜನಾವರದಿ ತಯಾರಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆ ದೊರೆತಿದ್ದು, ಡಿ.ಪಿ.ಆರ್. ತಯಾರಿಕೆ ಪ್ರಗತಿಯಲ್ಲಿದೆ.ರಾಷ್ಟ್ರೀಯ ಹೆದ್ದಾರಿ 212ರ ಕೊಳ್ಳೇಗಾಲ - ಕೇರಳ ಗಡಿವರೆಗಿನ 130 ಕಿ.ಮೀ. ರಸ್ತೆಯನ್ನು ರೂ.585 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಈ ರಸ್ತೆ 2016-17ನೇ ಸಾಲಿನಲ್ಲಿ ಪೂರ್ಣಗೊಳ್ಳಲಿದೆ. ಬೆಂಗಳೂರು - ಮೈಸೂರು ರಸ್ತೆಯನ್ನು 6 ಪಥಗಳ ರಸ್ತೆಯನ್ನಾಗಿ ನಿರ್ಮಿಸುವ ಯೋಜನೆಗೆ ಕೇಂದ್ರ ಸರ್ಕಾರವು ಭೂಸ್ವಾಧೀನ ವೆಚ್ಚಕ್ಕಾಗಿ 2400 ಕೋಟಿ ರೂ.ಗಳಿಗೆ ಅನುಮೋದನೆ ನೀಡಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಇದನ್ನು 2016-17ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಸಮುದ್ರ ಕರಾವಳಿ ತೀರ ಸಂರಕ್ಷಣೆಯ-2ನೇ ಹಂತದ ಯೋಜನೆಗೆ 650 ಕೋಟಿ ರೂ.ಗಳನ್ನು ಸಾಲ ರೂಪದ ಏಷಿಯನ್ ಅಭಿವೃದ್ಧಿ ಬ್ಯಾಂಕ್ ಆರ್ಥಿಕ ನೆರವಿನಡಿಯಲ್ಲಿ ಕೈಗೊಳ್ಳಲು 8 ಉಪ ಯೋಜನೆಗಳ ಡಿಪಿಆರ್ ಸಿದ್ಧಪಡಿಸಿ ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಸಲ್ಲಿಸಿದೆ. ಅನುಮೋದನೆ ನಂತರ ಕಾಮಗಾರಿ ಕೈಗೊಳ್ಳಲಾಗುವುದು. ಕಾರವಾರ ಬಂದರಿನ ಉತ್ತರ ಭಾಗದಲ್ಲಿ ಅಲೆ ತಡೆಗೋಡೆಯನ್ನು 125 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಯೋಜಿಸಲಾಗಿದೆ. 2016-17ನೇ ಸಾಲಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ



ಇಲಾಖೆಗೆ ಒಟ್ಟಾರೆಯಾಗಿ 7922 ಕೋಟಿ ರೂ.ಗಳನ್ನು ಒದಗಿಸಲಾಗಿದೆ

### ಮೂಲಸೌಲಭ್ಯ ಅಭಿವೃದ್ಧಿ

ರೈಲ್ವೆ ಯೋಜನೆಗಳಿಗಾಗಿ ರಾಜ್ಯ ಸರ್ಕಾರವು 2015-16 ರಲ್ಲಿ 441 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ರಾಜ್ಯದ ಪ್ರಮುಖ ರೈಲ್ವೆಯೋಜನೆಗಳ ಪ್ರಗತಿ ಈ ಮುಂದಿನಂತಿದೆ:

* ರಾಮನಗರ - ಮೈಸೂರು ಜೋಡಿ ಹಳಿ ಯೋಜನೆ ಸಂಚಾರಕ್ಕೆ ತೆರವುಗೊಳಿಸಲಾಗಿದೆ. * ಬೀದರ್-ಕಲಬುರಗಿ ಹೊಸ ರೈಲು ಮಾರ್ಗ ಶೇ. 80 ರಷ್ಟು ಪೂರ್ಣಗೊಂಡಿದೆ. * ಬೆಂಗಳೂರು-ಹಾಸನ ರೈಲು ಮಾರ್ಗ ಮುಕ್ತಾಯದ ಹಂತದಲ್ಲಿದೆ. * ಬಾಗಲಕೋಟೆ-ಕುಡುಚಿ, ಚಿಕ್ಕಮಗಳೂರು-ಸಕಲೇಶಪುರ, ಗದಗ-ವಾಡಿ, ತುಮಕೂರು-ರಾಯದುರ್ಗ ಮತ್ತು ಗಿಣಿಗೇರ ರಾಯಚೂರು ರೈಲು ಮಾರ್ಗಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದ್ದು, ಭೂಸ್ವಾಧೀನಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. * ರಸ್ತೆ ಮೇಲುಸೇತುವೆ ಮತ್ತು ಕೆಳಸೇತುವೆಗಳ ನಿರ್ಮಾಣವನ್ನು ರೈಲ್ವೆ ಮಂತ್ರಾಲಯದೊಂದಿಗೆ ಶೇ. 50:50 ವೆಚ್ಚ ಹಂಚಿಕೆ ಆಧಾರದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸ್ಟ್ರಿಪ್‌ಗಳ ಅಭಿವೃದ್ಧಿ ಮತ್ತು ವೇಳಾಪಟ್ಟಿಯಲ್ಲಿರದ ವಿಮಾನಗಳ ಹಾರಾಟ ನಿರ್ವಹಣೆಗಾಗಿ ವಿಮಾನಯಾನ ಅಭಿವೃದ್ಧಿ ಕೋಶವನ್ನುತೆರೆಯಲಾಗುವುದು.

ಹುಬ್ಬಳ್ಳಿ ವಿಮಾನ ನಿಲ್ದಾಣದ ವಿಸ್ತರಣೆಗಾಗಿ 588 ಎಕರೆ ಭೂಮಿ ಹಸ್ತಾಂತರಿಸಲಾಗಿದೆ. ಇದರಿಂದ ಎ320 ಮತ್ತು ಎ321 ಮಾದರಿಯ ವಿಮಾನಗಳ ಹಾರಾಟ ಸಾಧ್ಯವಾಗಲಿದೆ. ಬೆಳಗಾವಿ ವಿಮಾನ ನಿಲ್ದಾಣಕ್ಕೆ 370 ಎಕರೆ ಭೂಮಿಯನ್ನು ಹಸ್ತಾಂತರಿಸಲಾಗಿದೆ. ರನ್‌ವೇ ವಿಸ್ತರಣಾ

ಮತ್ತು ವಿಮಾನ ನಿಲ್ದಾಣಗಳ ವಿಸ್ತರಣೆಯು 2016–17ರಲ್ಲಿ ಪೂರ್ಣಗೊಳ್ಳುತ್ತದೆ. ಕಲಬುರಗಿ ವಿಮಾನ ನಿಲ್ದಾಣವನ್ನು ಲೋಕೋಪಯೋಗಿ ಇಲಾಖೆಯು ಅಭಿವೃದ್ಧಿ ಪಡಿಸುತ್ತಿದ್ದು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು ಪಿಪಿಪಿ ಮಾದರಿಯಲ್ಲಿ ತೆಗೆದುಕೊಳ್ಳಲಾಗುವುದು. ಧಾಬೋಲ್–ಬೆಂಗಳೂರು ಅನಿಲ ಕೊಳವೆ ಮಾರ್ಗಕಾರ್ಯಾರಂಭ ಮಾಡಿದ್ದು, ಬೆಂಗಳೂರಿನ ಕೈಗಾರಿಕೆ ಮತ್ತು ವಾಣಿಜ್ಯ ಉದ್ದಿಮೆಗಳಿಗೆ ನೈಸರ್ಗಿಕ ಅನಿಲ ಪೂರೈಕೆ ಮಾಡಲಾಗುತ್ತಿದೆ. ಇದಲ್ಲದೇ ಬೆಂಗಳೂರು ನಗರದಲ್ಲಿ ಗೃಹಗಳಿಗೆ ಪೈಪುಗಳ ಮೂಲಕ ನೈಸರ್ಗಿಕ ಅನಿಲ ಪೂರೈಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಇದನ್ನು ಬೆಳಗಾವಿ, ತುಮಕೂರು ಮತ್ತು ಧಾರವಾಡದಲ್ಲಿಯೂ ಅನುಷ್ಠಾನಗೊಳಿಸಲಾಗುತ್ತಿದೆ. ಬೆಂಗಳೂರಿನ ಸಂಚಾರ ಒತ್ತಡವನ್ನು ನಿವಾರಿಸಲು, ರೈಲು ಆಧಾರಿತಸಮೂಹ ಸಾರಿಗೆ ವ್ಯವಸ್ಥೆಯ ಅವಶ್ಯಕತೆ ಇದೆ. ಮೆಟ್ರೊ ರೈಲಿನಹಂತ–1 ಮತ್ತು 2 ಕ್ಕೆ ಪೂರಕವಾಗಿ ನಗರದ ಪಶ್ಚಿಮ ಭಾಗಗಳಲ್ಲಿ 42ಕಿ.ಮೀ. ಹಗುರ ರೈಲು ಸಂಚಾರ ವ್ಯವಸ್ಥೆಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ. ನವೀನ ಭೂಆಧಾರಿತ ಹಣಕಾಸು ವ್ಯವಸ್ಥೆ ಹಾಗೂ ಈ ಮೂಲವನ್ನು ಬಳಸಿಕೊಂಡ ಮೀಸಲು ನಿಧಿಯನ್ನು ಸ್ಥಾಪಿಸಲಾಗುವುದು. 2016–17ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 780 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

### ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ

ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಯೋಗಾವಕಾಶ ಹೆಚ್ಚಿಸುವ ಏಕೈಕ ಉದ್ದೇಶದಿಂದ ಒಂದೇ ಇಲಾಖೆಯಡಿ ತರಲು ಉದ್ದೇಶಿಸಿದ್ದು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲಾಗುವುದು. ಇದು ಮುಖ್ಯಮಂತ್ರಿಗಳ ನೇರ ನಿಯಂತ್ರಣದಲ್ಲಿ ಇರುತ್ತದೆ. ಇದು ಕೌಶಲ್ಯಾಭಿವೃದ್ಧಿಯನ್ನು ತೀವ್ರ ಗತಿಯಲ್ಲಿ ಹೆಚ್ಚಿಸುವ ದಿಸೆಯಲ್ಲಿ ಸಾಧ್ಯವಾಗುವುದರೊಂದಿಗೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸುವುದನ್ನು ಖಾತರಿಪಡಿಸುತ್ತದೆ. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ವಿಧಾನಗಳಲ್ಲಿ ಹಣಕಾಸು ದೊರಕಿಸುವ ಸಾಧ್ಯತೆಗಳನ್ನು ಸಹ ಈ ಧ್ಯೇಯವು ಕಂಡುಕೊಳ್ಳಲಿದೆ. ಈ ಉದ್ದೇಶಕ್ಕಾಗಿ 2016–17ನೇ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುವುದು.

### ವಾಣಿಜ್ಯ ಮತ್ತು ಕೈಗಾರಿಕೆ

ಕರ್ನಾಟಕದಲ್ಲಿ ಕೈಗಾರಿಕೆಯನ್ನು ಉತ್ತೇಜಿಸಲು, ಯೋಜನಾ ಪ್ರಸ್ತಾವನೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ಮಾರುಕಟ್ಟೆ ಇಂಟಲಿಜೆನ್ಸ್ ಅಭಿವೃದ್ಧಿಪಡಿಸಲು "ಇನ್‌ವೆಸ್ಟ್ ಕರ್ನಾಟಕ" ಎಂಬ ಲಾಭ ನಿರೀಕ್ಷೆಯಿಲ್ಲದ ಕಂಪನಿಯನ್ನು ರಚಿಸಲಾಗುವುದು. ಈ ಕಂಪನಿಯ ಬೋರ್ಡಿನಲ್ಲಿ ಕೈಗಾರಿಕೋದ್ಯಮಿಗಳು ಮತ್ತು ಸರ್ಕಾರದ ಅಧಿಕಾರಿಗಳ ಜೊತೆಗೆ ವೃತ್ತಿಪರ ಸಿಬ್ಬಂದಿಗಳು ಇರುತ್ತಾರೆ.

ಬೆಂಗಳೂರಿನ ಪೀಣ್ಯ ಮತ್ತು ಬೊಮ್ಮಸಂದ್ರ, ಮೈಸೂರು, ಬೆಳಗಾವಿ ಮತ್ತು ಹುಬ್ಬಳ್ಳಿಗಳಲ್ಲಿನ ಭಾರೀ ಕೈಗಾರಿಕಾ ಪ್ರದೇಶಗಳನ್ನು ಮತ್ತು ಎಸ್ಟೇಟ್‌ಗಳನ್ನು ಕೈಗಾರಿಕಾ ಪಟ್ಟಣ ಪ್ರದೇಶಗಳೆಂದು ಘೋಷಿಸಲು ಪ್ರಸ್ತಾಪಿಸಲಾಗಿದೆ. ಪ್ರಸ್ತುತ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು 175 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಗೋಡಂಬಿ ತಂತ್ರಜ್ಞಾನ ತರಬೇತಿ ಕೇಂದ್ರವನ್ನು ಕುಮಟಾ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೈಗಾರಿಕೆಗಳಿಗೆ ಭೂಮಿ ಕಳೆದುಕೊಂಡವರಿಗೆ ಮತ್ತು ಸ್ಥಳೀಯ ಗ್ರಾಮೀಣ ಯುವ ಜನತೆಗೆ, ಉದ್ಯೋಗ ಕೌಶಲ್ಯಗಳನ್ನು ಹೆಚ್ಚಿಸಿ, ಸ್ಥಳೀಯ ಕೈಗಾರಿಕೆಗಳಲ್ಲಿ ಕಾರ್ಯಸ್ಥಳಗಳಲ್ಲಿಯೇ ಉದ್ಯೋಗ ತರಬೇತಿ ನೀಡಿ ಉದ್ಯೋಗ ಒದಗಿಸಲಾಗುವುದು.

ಮಹಿಳಾ ಉದ್ಯಮ ಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮಂಗಳೂರು, ಬಳ್ಳಾರಿ, ಧಾರವಾಡ ಹಾಗೂ ಮೈಸೂರಿನಲ್ಲಿ ಮಹಿಳಾ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಈ ಮುಂದಿನವುಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ.

* ಕಲ್ಬುರ್ಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಬಂಡವಾಳ ಹೂಡಿಕೆ ಮತ್ತು ಉತ್ಪಾದನಾ ವಲಯ.



* ಜಪಾನ್ ದೇಶದ ಆರ್ಥಿಕ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಸಹಯೋಗದೊಂದಿಗೆ ತುಮಕೂರು ಜಿಲ್ಲೆ ವಸಂತ ನರಸಾಪುರದಲ್ಲಿ Japanese Industrial Township ನ ಅಭಿವೃದ್ಧಿ.

* ಭಾರತ ಸರ್ಕಾರದೊಡನೆ ಶೇ.50 ರಷ್ಟು ವೆಚ್ಚವನ್ನು ಹಂಚಿಕೊಳ್ಳುವುದರೊಡನೆ ಬೆಂಗಳೂರಿನ ಸಮೀಪದಲ್ಲಿ 87 ಕೋಟಿ ರೂ. ಗಳ ಯೋಜನಾ ವೆಚ್ಚದಲ್ಲಿ "Advanced Polymer Design and Development Research Laboratory (APDDRL)" ರ ಸ್ಥಾಪನೆ.

* ಭಾರತ ಸರ್ಕಾರದ MSME-CDP ಯೋಜನೆಯಡಿಯಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಹೊಸದಾಗಿ 30 ಕೈಗಾರಿಕಾ ಪ್ರದೇಶಗಳನ್ನು ಕ್ಲಸ್ಟರ್ ವಿಧಾನದ ಮೂಲಕ ಉನ್ನತೀಕರಿಸಲಾಗುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಮತ್ತು ಕೈಗಾರಿಕಾ ಸಾಮರ್ಥ್ಯವನ್ನು ತುಂಬಲು ಈ ಮುಂದಿನ ಕ್ರಮಗಳನ್ನು ಪ್ರಸ್ತಾಪಿಸಿದೆ:

* ಶೇ.50 ದರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಶೆಡ್ ಮತ್ತು ಭೂಮಿಯನ್ನು ಹಂಚಿಕೆ ಮಾಡಲಾಗುವುದು. ಭೂಮಿ ಮತ್ತು ಶೆಡ್‌ಗಳ ಮೌಲ್ಯದ ಪಾವತಿಯನ್ನು ಕಂತುಗಳಲ್ಲಿ ಪರಿಗಣಿಸಲಾಗುವುದು. ಇದರಲ್ಲಿ ಶೇ.50ರಷ್ಟನ್ನು ಮೊದಲಿಗೆ ಪಾವತಿಸಬೇಕಾಗಿದ್ದು, ಬಾಕಿ ಶೇ.50ರಷ್ಟನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ.

* ದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 3 ಕೋಟಿ ರೂ. ಸರ್ಕಾರಿ ಅನುದಾನದೊಡನೆ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳ ಸಂಘದ ಮೂಲಕ

ಕೌಶಲ್ಯ / ಇ.ಡಿ.ಪಿ. ತರಬೇತಿ ಕೇಂದ್ರದ ಅಭಿವೃದ್ಧಿ.

2014ರಲ್ಲಿ ತರಲಾದ ಕೈಗಾರಿಕಾ ನೀತಿಯಲ್ಲಿ ಕೆಐಎಡಿಬಿ ಸಂಸ್ಥೆಯು ಅಭಿವೃದ್ಧಿಪಡಿಸುವ ಕೈಗಾರಿಕಾ ಶೆಡ್ / ನಿವೇಶನಗಳಲ್ಲಿ ಶೇ.5ರಷ್ಟನ್ನು ಹಿಂದುಳಿದ ವರ್ಗಗಳ ಪ್ರವರ್ಗ–1 ಮತ್ತು 2ಎ, ಅಲ್ಪ ಸಂಖ್ಯಾತರಿಗೆ, ಅಂಗವಿಕಲರಿಗೆ ಮತ್ತು ಮಾಜಿ ಸೈನಿಕರಿಗೆ ಮೀಸಲಿರಿಸಲಾಗಿದ್ದು, ಇದನ್ನು ಶೇ.5ರಿಂದ 10ಕ್ಕೆ ಹೆಚ್ಚಿಸಲಾಗುವುದು. ಈ ಮೀಸಲಾತಿಯನ್ನು ಕೆಐಎಡಿಬಿ ಮತ್ತು ಕೆಎಸ್ಎಸ್ಐಡಿಸಿ ಸಂಸ್ಥೆಗಳು ಅಭಿವೃದ್ಧಿಪಡಿಸಿ ಹಂಚಿಕೆ ಮಾಡುವ ಕೈಗಾರಿಕಾ ಶೆಡ್ / ನಿವೇಶನಗಳಿಗೆ ಅನ್ವಯಿಸಲಾಗುವುದು. ಈ ಮೊತ್ತವನ್ನು 6 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಬಹುದಾಗಿರುತ್ತದೆ.

ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಹೊರಬರುತ್ತಿರುವ ಕೌಶಲ್ಯಪೂರ್ಣ ಮಾನವ ಸಂಪನ್ಮೂಲವನ್ನು ನೆಲೆಗೊಳಿಸಲು, ರಾಜ್ಯದಾದ್ಯಂತ ಜಿ.ಟಿ.ಟಿ.ಸಿ ಉಪ ಕೇಂದ್ರಗಳಲ್ಲಿ ಶ್ರೇಷ್ಠತಾ ಕೇಂದ್ರಗಳನ್ನು (ಸಿ.ಒ.ಇ) ಸ್ಥಾಪಿಸಲು ಉದ್ದೇಶಿಸಲಾಗಿದೆ. ಅದರ ಮೂಲಕ ಉತ್ಪನ್ನ ವಿನ್ಯಾಸ ಮತ್ತು ಅಭಿವೃದ್ಧಿ, ಉತ್ಪಾದನಾ ಉಪಕರಣ ವಿನ್ಯಾಸ, ರೊಬೊಟಿಕ್ಸ್, ರಿವರ್ಸ್ ಇಂಜಿನಿಯರಿಂಗ್, ರ್ಯಾಪಿಡ್ ಪ್ರೊಟೋ ಟೈಪಿಂಗ್ ಪ್ರಯೋಗ ಶಾಲೆಗಳು ಇತ್ಯಾದಿ ವಲಯಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. 2016–17ನೇ ಸಾಲಿನಲ್ಲಿ ಬೆಂಗಳೂರು, ಕಲ್ಬುರ್ಗಿ, ದಾಂಡೇಲಿ ಹಾಗು ಮೈಸೂರುಗಳಲ್ಲಿ ಅಂತಹ ನಾಲ್ಕು ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

**ನೇಕಾರರ ಅಭಿವೃದ್ಧಿ**

* ವಾಸದ ಮತ್ತು ಕೆಲಸದ ಶೆಡ್‌ಗಳನ್ನು ನಿರ್ಮಿಸಲು ನೇಕಾರರಿಗೆ ಹಲವಾರು ಯೋಜನೆಗಳ ಅಡಿಯಲ್ಲಿ ನೀಡಲಾದ 17 ಕೋಟಿ ರೂ.ಗಳ ಸಾಲ ಮತ್ತು ಬಡ್ಡಿಯ ಮನ್ನಾ.

* ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ಸಹಕಾರ ಬ್ಯಾಂಕ್‌ಗಳು ಮತ್ತು ಸಂಘಗಳ ಮೂಲಕ ಶೇ.1ರ ಬಡ್ಡಿ ದರದಲ್ಲಿ 2 ಲಕ್ಷ ರೂ.ಗಳವರೆಗೆ ಸಾಲ ಮತ್ತು ಶೇ.3 ರ ಬಡ್ಡಿ ದರದಲ್ಲಿ 2 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗಳವರೆಗೆ ಸಾಲ ಸೌಲಭ್ಯ.



* ಗ್ರಾಮೀಣ ಪ್ರದೇಶಗಳಲ್ಲಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗಗಳ ಘಟಕಗಳಿಗೆ 50% ಸಹಾಯಧನದೊಡನೆ ಸೌರಶಕ್ತಿ ಉಪಕರಣಗಳ ನೀಡಿಕೆ.

* ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿಯಲ್ಲಿ ವಿದ್ಯುತ್ ಮಗ್ಗಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಮಗ್ಗಕ್ಕೆ 10,000 ರೂ.ಗಳ ಕೊಡುಗೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕಾವೇರಿ ಹ್ಯಾಂಡ್‌ಲೂಮ್ಸ್‌ಗಳ ವಿಸ್ತೃತ ಪುನರ್ ರಚನೆ ಹಾಗೂ ಅವುಗಳನ್ನು ಸಂಯೋಜಿಸಲು ಕ್ರಮ ಕೈಗೊಳ್ಳಲಾಗುವುದು.

ಸಾಗರೋತ್ಪನ್ನಗಳ ರಫ್ತಿಗಾಗಿ ಕುಮಟ ತಾಲ್ಲೂಕಿನ ತದಡಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು. ಕೆಲವು ಉಪ ಖನಿಜಗಳಿಗೆ ಸಂಬಂಧಿಸಿದಂತೆ Ad-valorem ರಾಜಧನ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಪ್ರಾರಂಭಿಕವಾಗಿ ನಾವು Ad-valorem ರಾಜಧನವನ್ನು ಗ್ರಾನೈಟ್‌ಗೆ ಅನ್ವಯಿಸಲು ಉದ್ದೇಶಿಸಿದ್ದು ಸೂಕ್ತವಾದ ಅಧಿಸೂಚನೆ ಹೊರಡಿಸಲಾಗುವುದು. 2016–17ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 1814 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಐಟಿ, ಎಲೆಕ್ಟ್ರಾನಿಕ್ಸ್ ಮತ್ತು ಆನಿಮೇಷನ್ ಇತ್ಯಾದಿ ವಲಯಗಳಲ್ಲಿ ಶ್ರೇಷ್ಠತಾ ಕೇಂದ್ರಗಳು ಮತ್ತು ಫಿನಿಷಿಂಗ್ ಶಾಲೆಗಳನ್ನು ಸೃಜಿಸಲು ವಿಶ್ವವಿದ್ಯಾನಿಲಯಗಳು, ಮತ್ತಿತರ ಶೈಕ್ಷಣಿಕ ಸಂಸ್ಥೆಗಳು ಮತ್ತು ಉದ್ಯಮಗಳ ಸಹಯೋಗದೊಂದಿಗೆ ಕಾರ್ಯಗತಗೊಳಿಸಲು ಪ್ರಸ್ತಾಪಿಸ–ಲಾಗಿದೆ. 2ನೇ ಹಂತದ ಬಿಟಿಎಫ್ಎಸ್ ಕಾರ್ಯಕ್ರಮವನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಆರಂಭಿಸಲಾಗುವುದು. ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರು ತಾವಾಗಿಯೇ ಕೌಶಲ್ಯಗಳೊಂದಿಗೆ ಸಜ್ಜುಗೊಳ್ಳುವ ಅವಕಾಶವನ್ನು ಕಲ್ಪಿಸಲು ಕೆಲವು ಫಿನಿಷಿಂಗ್ ಸ್ಕೂಲುಗಳನ್ನೂ ಸಹ ವಿನ್ಯಾಸಗೊಳಿಸಲಾಗಿದೆ.

ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ನವೋದ್ಯಮಗಳ ಬೆಳವಣಿಗೆಗಾಗಿ ಮತ್ತು ಸಂಶೋಧನೆಯನ್ನು ಬಲಪಡಿಸಲು ಬಾಗಲಕೋಟೆಯಲ್ಲಿ ಒಂದು ಇನ್‌ಕ್ಯೂಬೇಟರ್‌ನ್ನು ಸ್ಥಾಪಿಸಲಾಗುವುದು.

ನ್ಯೂಏಜ್ ಇನ್‌ಕ್ಯುಬೇಷನ್ ನೆಟ್ ವರ್ಕ್ ಅಡಿ ರಾಜ್ಯದಾದ್ಯಂತ ಸ್ನಾತಕೋತ್ತರ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ 10 ಹೊಸ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸಲಾಗುವುದು.

2016–17ನೇ ಸಾಲಿನಲ್ಲಿ ರಾಜ್ಯಾದ್ಯಂತ ಹಂತಹಂತವಾಗಿ ಇಂಟರ್‌ನೆಟ್ ಆಫ್ ಥಿಂಗ್ಸ್, ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ ಮತ್ತು ಮ್ಯಾನುಫ್ಯಾಕ್ಚರಿಂಗ್, ರೋಬೋಟಿಕ್ಸ್, 3ಡಿ ಪ್ರಿಂಟಿಂಗ್, ನ್ಯಾನೋ ಟೆಕ್ನಾಲಜಿ, ಮೆಡಿಕಲ್ ಡಿವೈಸಸ್, ಹೆಲ್ತ್ ಟೆಕ್ನಾಲಜಿ, ಕ್ಲೀನ್ ಟೆಕ್ನಾಲಜಿ, ಮೊದಲಾದ ಸಂಭಾವ್ಯ ಕ್ಷೇತ್ರಗಳಲ್ಲಿ 4 ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್‌ಗಳ ಸ್ಥಾಪನೆಗೆ ನೆರವು ನೀಡಲು ಉದ್ದೇಶಿಸಲಾಗಿದೆ.

ಬೆಂಗಳೂರು ಮತ್ತು ಶಿವಮೊಗ್ಗ, ಬಾಗಲಕೋಟೆ ಮತ್ತು ಕಲ್ಬುರ್ಗಿ ಐಟಿ ಪಾರ್ಕುಗಳಲ್ಲಿ ಕಿಯೋನಿಕ್ಸ್ ಸಂಸ್ಥೆಯು ಇನ್‌ಕ್ಯುಬೇಟರ್ ಮತ್ತು ಸಾಮಾನ್ಯ ಇನ್‌ಸ್ಟ್ರುಮೆಂಟೇಷನ್ ಸೌಲಭ್ಯಗಳನ್ನು ಒದಗಿಸುವುದು. ಬೆಳಗಾವಿ, ಬೀದರ್ ಮತ್ತು ವಿಜಯಪುರಗಳಲ್ಲಿ ಹೊಸ ಐಟಿ ಪಾರ್ಕ್–ಇನ್‌ಕ್ಯೂಬೇಟರ್‌ಗಳನ್ನು ಸ್ಥಾಪಿಸಲು ಪೂರ್ವಭಾವಿ ಸಿದ್ಧತೆ ಮಾಡಲಾಗುವುದು.

ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ತಾಲ್ಲೂಕುಗಳ 500 ಪ್ರೌಢಶಾಲೆಗಳಿಗೆ "ಸೈನ್ಸ್ ಲ್ಯಾಬ್ – ಇನ್ ಎ ಬಾಕ್ಸ್" ಕಿಟ್‌ಗಳನ್ನು ವಿತರಿಸುವ ಮುಖಾಂತರ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಮೂಲವಿಜ್ಞಾನದ ಬೋಧನೆ ಮತ್ತು ಕಲಿಕಾ ಸಾಮರ್ಥ್ಯವನ್ನು ಬಲಪಡಿಸಲು ಉದ್ದೇಶಿಸಲಾಗಿದೆ. ಕಿರು ತಾರಾಲಯವನ್ನು ವಿಜಯಪುರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಉನ್ನತ ಕಲಿಕಾ ಕೇಂದ್ರಗಳಲ್ಲಿ ಮಾಹಿತಿ ಗುಣಮಟ್ಟ

ಇತ್ಯಾದಿಗಳನ್ನು ಮತ್ತಷ್ಟು ಉತ್ತಮಪಡಿಸುವ ಉದ್ದೇಶದಿಂದ "ವಿಷನ್ ಗ್ರೂಪ್" ವತಿಯಿಂದ ಸೂಚಿಸುವ ಕಾರ್ಯಕ್ರಮಕ್ಕಾಗಿ 2016–17ನೇ ಸಾಲಿನಲ್ಲಿ 8 ಕೋಟಿ ರೂ. ಗಳನ್ನು ನಿಗದಿಪಡಿಸಲಾಗಿದೆ.

2016–17ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಟ್ಟಾರೆಯಾಗಿ 222 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

### ಇ–ಆಡಳಿತ

ದೇಶದಲ್ಲೇ ಪ್ರಥಮ ಬಾರಿಗೆ ಮೊಬೈಲ್‌ನಲ್ಲಿ 4000 ಸೇವೆಗಳು ಲಭ್ಯವಾಗುವಂತೆ ಮಾಡಲಾಗಿದೆ. ಇದಕ್ಕೆ 2 ಕೋಟಿಗೂ ಹೆಚ್ಚಿನ ಸೇವಾದಾರರು ಸಂಪರ್ಕಿಸಿದ್ದು, 62 ಲಕ್ಷಕ್ಕಿಂತ ಹೆಚ್ಚಿನ IVR ಕರೆಗಳು ಸ್ವೀಕೃತವಾಗಿರುತ್ತವೆ.

ಬೆಂಗಳೂರು ನಗರದ ಪ್ರತಿಯೊಂದು ವಾರ್ಡ್‌ನಲ್ಲಿ ಒಂದು ಬೆಂಗಳೂರು ಒನ್ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕೆ 33 ಕೇಂದ್ರಗಳನ್ನು ಗುರುತಿಸಲಾಗಿದ್ದು, ಈ ಕೇಂದ್ರಗಳಲ್ಲಿ ಶೀಘ್ರದಲ್ಲಿಯೇ ಸೇವೆಯನ್ನು ಪ್ರಾರಂಭಿಸಲಾಗುವುದು.

ನಾಗರಿಕ ಸ್ನೇಹಿ ಇ–ಆಡಳಿತ ಯೋಜನೆಗಳನ್ನು ರಾಜ್ಯ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಇಲಾಖೆಗಳು, ಸಂಸ್ಥೆಗಳಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ.

ಇ–ಆಡಳಿತ ಕೇಂದ್ರದ ಮಾಹಿತಿ ತಂತ್ರಜ್ಞಾನದ ಎಲ್ಲಾ ರಕ್ಷಣಾ ಚಟುವಟಿಕೆಗಳನ್ನು ಮಾಹಿತಿ ತಂತ್ರಜ್ಞಾನದ ಪ್ರಮಾಣಗಳಿಗೆ ಅನುಗುಣವಾಗಿ ಬಲವರ್ಧಿಸಿ ಮುಂಬರುವ ವಿಸ್ತರಣೆಗೂ ಅನುವು ಮಾಡಲು ಸೆಕ್ಯೂರಿಟಿ ಆಪರೇಷನಲ್ ಸೆಂಟರ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 1997ರಿಂದ ಪ್ರತಿ ವರ್ಷ ರಾಷ್ಟ್ರೀಯ ಇ–ಆಡಳಿತ ಸಮ್ಮೇಳನವನ್ನು ನಡೆಸುತ್ತಿದ್ದು, ಈ ವರ್ಷ ಅದರ 20ನೇ ಅಧಿವೇಶನವನ್ನು ಫೆಬ್ರವರಿ 2017ರಲ್ಲಿ ರಾಜ್ಯದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

2016–17ನೇ ಸಾಲಿನಲ್ಲಿ ಇ–ಆಡಳಿತ ಇಲಾಖೆಗೆ ಒಟ್ಟಾರೆಯಾಗಿ 115 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

### ಪ್ರವಾಸೋದ್ಯಮ

ಈ ಮುಂದಿನಂತೆ ಪ್ರವಾಸೋದ್ಯಮ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಲಾಗುವುದು ಮತ್ತು ಮೇಲ್ದರ್ಜೆಗೇರಿಸಲಾಗುವುದು.

* ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ ಮತ್ತು ಐಹೊಳೆ ಹಾಗೂ ಮುಚಖಂಡಿ ಗ್ರಾಮದ ಬ್ರಿಟಿಷ್ ಕಾಲದ ಕೆರೆಯನ್ನು ಅಭಿವೃದ್ಧಿಪಡಿಸಲು ಹಾಗೂ ಕಾರವಾರ, ಬೀದರ್ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಪ್ರವಾಸಿ ತಾಣಗಳನ್ನು 10 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಮಾದರಿ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲಾಗುವುದು.

* ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ವತಿಯಿಂದ ಜಂಗಲ್ ಕ್ಯಾಂಪ್ಸ್ ಮತ್ತು ಟ್ರೇಲ್ಸ್ ಹೆಸರಿನ ಸಾಮಾನ್ಯ ದರ್ಜೆಯ ವಸತಿ ಅವಕಾಶವನ್ನು ಕಲ್ಪಿಸಲಾಗುವುದು.

* ಪ್ರವಾಸಿಗರಿಗೆ ಮಾಹಿತಿ ಹಾಗೂ ಇತರ ಸೇವೆಗಳನ್ನು ನೀಡಲು ಸಮಗ್ರ ಡಿಜಿಟಲ್ ಪೋರ್ಟಲ್‌ನ್ನು ಪ್ರಾರಂಭಿಸಲಾಗುವುದು.

* ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಖಾಯಂ ವಸ್ತು ಪ್ರದರ್ಶನ ಕೇಂದ್ರ ನಿರ್ಮಿಸಲಾಗುವುದು.

"ಕುಟೀರ" ಹೆಸರಿನಡಿ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತ್ಯುತ್ತಮ ದರ್ಜೆಯ ಮೂಲ ಸೌಲಭ್ಯಗಳನ್ನು ಪ್ರವಾಸಿಗರಿಗೆ ಒದಗಿಸಲು ಉದ್ದೇಶಿಸಲಾಗಿದೆ. ಬೆಂಗಳೂರಿನಲ್ಲಿ ನಡೆದ ಓಪನ್ ಸ್ಟ್ರೀಟ್ ಕಾರ್ಯಕ್ರಮವನ್ನು ಹೆಚ್ಚು ದೇಶಿ ಹಾಗೂ ವಿದೇಶಿ ಪ್ರವಾಸಿಗರನ್ನು ಆಕರ್ಷಣೆ ಮಾಡಲು ಅಂತಾರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸಲಾಗುವುದು ಹಾಗೂ ಇತರೆ ಸ್ಥಳಗಳಿಗೆ ವಿಸ್ತರಿಸಲಾಗುವುದು. ಗೋಲ್ಡನ್ ಚ್ಯಾರಿಯಟ್ ಐಶಾರಾಮಿ ರೈಲಿನಲ್ಲಿ ಹೆಚ್ಚಿನ ದೇಶಿಯ ಪ್ರವಾಸಿಗರನ್ನು ಆಕರ್ಷಿಸಲು ಕೈಗೆಟಕುವ ಬೆಲೆಯ ಪ್ರವಾಸಿ ಪ್ಯಾಕೇಜ್‌ಗಳನ್ನು ಪರಿಚಯಿಸಲಾಗುವುದು. ಬೆಂಗಳೂರಿನಲ್ಲಿ ಎರಡು ವರ್ಷಗಳಿಗೊಮ್ಮೆ ಕರ್ನಾಟಕ ಟ್ರಾವೆಲ್ ಮಾರ್ಟ್‌ನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಏರ್ ಮತ್ತು ಹೆಲಿ ಟ್ಯಾಕ್ಸಿ ಸೇವೆಗಳನ್ನು ಪ್ರೋತ್ಸಾಹಿಸಲಾಗುವುದು. ಬೀದರ್ ಹಾಗೂ ವಿಜಯಪುರ ನಗರಗಳಲ್ಲಿ ಕಂಡು ಬಂದಿರುವ ಪ್ರಾಚೀನ ಕಾಲದ ನೀರು ಸರಬರಾಜು ವ್ಯವಸ್ಥೆಯನ್ನು ಪುನರುತ್ಥಾನಗೊಳಿಸಿ ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದು.

2016–17ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಒಟ್ಟಾರೆಯಾಗಿ 507 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

### ವಾರ್ತಾ

ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ಅವರ ಬದುಕು ಮತ್ತು ಸಾಧನೆಗಳನ್ನು ಬಿಂಬಿಸುವ ಧ್ವನಿ–ಬೆಳಕು ಪ್ರದರ್ಶನವನ್ನು ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುವುದು.

ರಾಜ್ಯ ಏಕೀಕರಣದ 60ನೇ ವರ್ಷಾಚರಣೆಯ ಅಂಗವಾಗಿ ನಾಡುನುಡಿಯ ಬಗ್ಗೆ ಅಭಿಮಾನ ಮೂಡಿಸುವ ಧ್ಯೇಯಗೀತೆಯ ರಚನೆ, ದೃಶ್ಯ ಸಂಯೋಜನೆ, ಅಪರೂಪದ ಛಾಯಾಚಿತ್ರ ಪ್ರದರ್ಶನ ಮತ್ತು ಲೇಸರ್ ಪ್ರದರ್ಶನಗಳನ್ನು ಆಯೋಜಿಸಲಾಗುವುದು. ಮಹಾತ್ಮ ಗಾಂಧಿಯವರ ವಿಚಾರಧಾರೆಗಳನ್ನು ಪ್ರಚುರಪಡಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಲಾ 3 ಕೋಟಿ ರೂ. ವೆಚ್ಚದಲ್ಲಿ ಮುಂದಿನ 2 ವರ್ಷಗಳಲ್ಲಿ ಗಾಂಧಿ ಭವನಗಳನ್ನು ನಿರ್ಮಿಸಲಾಗುವುದು.

ಕನ್ನಡ ಚಿತ್ರರಂಗದ ಪ್ರಗತಿಯನ್ನು ದಾಖಲಿಸುವ ಅತ್ಯುತ್ತಮ ಕಥಾ ಚಿತ್ರಗಳು, ಸಾಕ್ಷ್ಯಚಿತ್ರಗಳು, ಆತ್ಮಕಥಾ ಚಿತ್ರಗಳು ಇತ್ಯಾದಿ ಎಲ್ಲಾ ಬಗೆಯ ಚಿತ್ರಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಿಡಲು ವಾರ್ತಾ ಇಲಾಖೆಯಲ್ಲಿ ಸುಸಜ್ಜಿತ ಚಲನಚಿತ್ರ ಭಂಡಾರವನ್ನು ಸ್ಥಾಪಿಸಲಾಗುವುದು.

2016-17ನೇ ಸಾಲಿನಿಂದ ಜನತಾ ಚಿತ್ರಮಂದಿರಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ ನೀಡಲಾಗುವುದು.

ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನೀಡುತ್ತಿರುವ ಮಾಶಾಸನವನ್ನು ರೂ.6000 ದಿಂದ ರೂ.8,000ವರೆಗೆ ಹೆಚ್ಚಿಸಲಾಗುವುದು.

2016-17ನೇ ಸಾಲಿನಲ್ಲಿ ವಾರ್ತಾ ಇಲಾಖೆಗೆ ಒಟ್ಟಾರೆಯಾಗಿ 156 ಕೋಟಿ ರೂ.ಗಳನ್ನು ಒದಗಿಸಲಾಗಿದೆ

**ಒಳಾಡಳಿತ**

ತುಮಕೂರಿನಲ್ಲಿ ಹೊಸ ಕೆ.ಎಸ್. ಆರ್.ಪಿ ಪಡೆಯನ್ನು ಹಾಗೂ ಬೆಂಗಳೂರಿನಲ್ಲಿ 3 ಸಿ.ಎ.ಆರ್ ಪಡೆಗಳನ್ನು ಮುಂದಿನ ಮೂರು ವರ್ಷಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಬೆಳಗಾವಿ ಮತ್ತು ಬೆಂಗಳೂರು ಕೆಎಸ್‌ಆರ್‌ಪಿ ಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ವಸತಿ ಸೌಲಭ್ಯ ಒದಗಿಸಲು ತಲಾ 100 ಮಂದಿ ಸಾಮರ್ಥ್ಯದ ವಸತಿ ನಿಲಯಗಳನ್ನು ನಿರ್ಮಿಸಲಾಗುವುದು.

2016-17ನೇ ಸಾಲಿನಲ್ಲಿ 5 ಹೊಸ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಪೊಲೀಸ್ ಠಾಣೆ ಸ್ಥಾಪಿಸಿದಂತಾಗುತ್ತದೆ. ಪೊಲೀಸ್ ಆಧುನೀಕರಣ ಯೋಜನೆಯಡಿ 35 ಪೊಲೀಸ್ ಠಾಣೆಗಳು, ವೃತ್ತ ಕಛೇರಿಗಳು, ಉಪ ವಿಭಾಗ ಕಛೇರಿಗಳಿಗೆ ಮುಂದಿನ 2 ವರ್ಷಗಳಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.

ಜನಸ್ನೇಹಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ತಲಾ ಒಂದು ಲಕ್ಷ ರೂ. ಗಳ ವೆಚ್ಚದಲ್ಲಿ ಹಾಲಿ ಇರುವ ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಒಟ್ಟಾರೆ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

"ಪೊಲೀಸ್ ಗೃಹ 2020" ಅಡಿಯಲ್ಲಿ 6802 ವಸತಿಗೃಹ ನಿರ್ಮಾಣ ಕಾರ್ಯವು ಆರಂಭಗೊಂಡಿದೆ. 2786 ವಸತಿಗೃಹಗಳ ನಿರ್ಮಾಣವನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ. ಉಳಿದ ವಸತಿ ಗೃಹಗಳನ್ನು 2016-17ರಲ್ಲಿ ಪೂರ್ಣಗೊಳಿಸಲಾಗುವುದು.

ಹೊಯ್ಸಳ, ಗರುಡ ಮಾದರಿ ವಾಹನಗಳ ಸಂಖ್ಯೆಯನ್ನು 184 ರಿಂದ 384ಕ್ಕೆ ಹೆಚ್ಚಿಸಿ, ಬೆಂಗಳೂರಿನ ಜೊತೆಗೆ ಬೇರೆ ಕಮಿಷನರೇಟ್‌ಗಳಿಗೆ ನೀಡಲಾಗುವುದು. ಕಾರಾಗೃಹ ಆಡಳಿತ ಯಂತ್ರವನ್ನು ಗಣಕೀಕರಿಸುವ ನಿಟ್ಟಿನಲ್ಲಿ ವಿದ್ಯುನ್ಮಾನ ಬಂದೀಖಾನೆ ತಂತ್ರಾಂಶದ ವಿಸ್ತರಿತ ಮಾಡ್ಯೂಲ್‌ಗಳ ಅನುಷ್ಠಾನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಗೃಹ ರಕ್ಷಕರ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸಲಾಗುವುದು.

2016-17ನೇ ಸಾಲಿನಲ್ಲಿ ಒಳಾಡಳಿತ ಇಲಾಖೆಗೆ ಒಟ್ಟಾರೆಯಾಗಿ 4462 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಸಾರಿಗೆ**

ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ (ಆರ್.ಟಿ.ಓ) ಪರೀಕ್ಷಾ ಪ್ರಕ್ರಿಯೆಯನ್ನು ಹಾಗೂ ಕಲಿಕಾದಾರರ ಲೈಸೆನ್ಸ್ ಮತ್ತು ಚಾಲನಾ ಲೈಸೆನ್ಸ್ ನೀಡುವಿಕೆಯನ್ನು ಸಂಪೂರ್ಣವಾಗಿ ಸ್ವಯಂ ಚಾಲಿತಗೊಳಿಸಲಾಗುವುದು.

ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ಯ ಎಲ್ಲಾ ಡಿಪೋಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ವಿಭಾಗೀಯ ಕಾರ್ಯಾಗಾರಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸಲಾಗುವುದು. ಕೆ.ಎಸ್.ಆರ್.ಟಿ.ಸಿ, ಎನ್.ಡಬ್ಲ್ಯೂ. ಕೆ.ಆರ್.ಟಿ.ಸಿ ಮತ್ತು ಎನ್.ಇ.ಕೆ.ಆರ್.ಟಿ.ಸಿ ಯ ಇಡೀ ಸಮೂಹದಲ್ಲಿ ವಾಹನ ಟ್ರಾಕಿಂಗ್ ಘಟಕಗಳನ್ನು ಸ್ಥಾಪಿಸಲಾಗುವುದು.

ಬಿ.ಎಂ.ಟಿ.ಸಿ ಯಲ್ಲಿ ಇಂಟೆಲಿಜೆಂಟ್ ಸಾರಿಗೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗುವುದು ಮತ್ತು ಟಿಕೆಟಿಂಗ್‌ಗಾಗಿ ಸ್ಮಾರ್ಟ್‌ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು.



ಬಿ.ಎಂ.ಟಿ.ಸಿ ಯು ತನ್ನ ಸಂಪನ್ಮೂಲದಿಂದ ಮುಂಬರುವ ವರ್ಷದಲ್ಲಿ 650 ಬಸ್ಸುಗಳನ್ನು ಖರೀದಿಸಲು ಉದ್ದೇಶಿಸಿದೆ.

ವೈಟ್‌ಫೀಲ್ಡ್ ಮುಂತಾದ ಐ.ಟಿ. ಪ್ರದೇಶದಲ್ಲಿನ ಹೆಚ್ಚಿದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಹೆಚ್ಚುವರಿ 1,000 ಬಸ್ಸುಗಳನ್ನು ಖರೀದಿಸಲು ನಮ್ಮ ಸರ್ಕಾರವು ಒಂದು ಬಾರಿಯ ಕ್ರಮವಾಗಿ ಬಿ.ಎಂ.ಟಿ.ಸಿ.ಗೆ ಬಡ್ಡಿ ಸಹಾಯಧನವನ್ನು ಒದಗಿಸಲಿದೆ.

2016-17ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ ಒಟ್ಟಾರೆಯಾಗಿ 1656 ಕೋಟಿ ರೂ.ಗಳನ್ನು ಒದಗಿಸಲಾಗಿದೆ

**ಕಾನೂನು ಮತ್ತು ನ್ಯಾಯಾಲಯಗಳು**

ರಾಜ್ಯದ ವಕೀಲರ ಸಂಘಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಸ್ತುತ ತಾಲ್ಲೂಕು ವಕೀಲರ ಸಂಘಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ರೂ.20 ಸಾವಿರಗಳಿಂದ ರೂ.40 ಸಾವಿರಕ್ಕೆ, ಜಿಲ್ಲಾ ವಕೀಲರ ಸಂಘಗಳಿಗೆ ನೀಡಲಾಗುತ್ತಿರುವ ರೂ.35 ಸಾವಿರಗಳ ಮೊತ್ತವನ್ನು ರೂ. 70 ಸಾವಿರಕ್ಕೆ ಬೆಂಗಳೂರು ಬಾರ್ ಅಸೋಷಿಯೇಷನ್‌ಗಳಿಗೆ ನೀಡಲಾಗುತ್ತಿರುವ ರೂ. 1.25 ಲಕ್ಷಗಳ ಮೊತ್ತವನ್ನು 2.50 ಲಕ್ಷ ರೂ.ಗಳಿಗೆ ಹಾಗೂ ಉಳಿದ ಮೂರು ವಿಭಾಗೀಯ ಕೇಂದ್ರ ಸ್ಥಾನದಲ್ಲಿರುವ ವಕೀಲರ ಸಂಘಗಳಿಗೆ ನೀಡಲಾಗುತ್ತಿರುವ 50 ಸಾವಿರ ರೂ. ಗಳ ಮೊತ್ತವನ್ನು ರೂ. 1 ಲಕ್ಷ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ.

ರಾಜ್ಯದಲ್ಲಿನ ವಕೀಲರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಕೀಲರ ಪರಿಷತ್‌ಗೆ ಪ್ರಸ್ತುತ ನೀಡಲಾಗುತ್ತಿರುವ 2 ಕೋಟಿ ರೂ. ಅನುದಾನವನ್ನು 2016-17ನೇ ಸಾಲಿನಲ್ಲಿ 5 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ.

ಪ್ರಕರಣಗಳನ್ನು ವೃತ್ತಿಪರತೆ ಹಾಗೂ ದಕ್ಷತೆಯಿಂದ ವಿಲೇವಾರಿ ಮಾಡಲು ಸಹಾಯಕವಾಗುವಂತೆ ಅಡ್ವೋಕೇಟ್ ಜನರಲ್ ಕಛೇರಿಯನ್ನು ಗಣಕೀಕರಿಸಲಾಗುವುದು. ಸ್ವಚ್ಛ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಪೂರೈಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲಾ ನ್ಯಾಯಾಲಯ ಸಂಕೀರ್ಣಗಳಲ್ಲಿ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಲು ಉದ್ದೇಶಿಸಿದೆ. ಕೌಟುಂಬಿಕ ವ್ಯಾಜ್ಯ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಹೊಸದಾಗಿ 22 ಕುಟುಂಬ ನ್ಯಾಯಾಲಯಗಳನ್ನು ಹಂತಹಂತವಾಗಿ ಸ್ಥಾಪಿಸಲಾಗುವುದು. 2016–17ನೇ ಸಾಲಿನಲ್ಲಿ ಕಾನೂನು ಮತ್ತು ನ್ಯಾಯಾಲಯಗಳ ಇಲಾಖೆಗೆ ಒಟ್ಟಾರೆಯಾಗಿ 671 ಕೋಟಿ ರೂ. ಗಳನ್ನು ಒದಗಿಸಲಾಗಿದೆ

**ತೆರಿಗೆ ಪ್ರಸ್ತಾವನೆಗಳು**

**ಸರಕು ಮತ್ತು ಸೇವಾ ತೆರಿಗೆ**

ನಮ್ಮ ರಾಜ್ಯದಲ್ಲಿ "ವ್ಯಾಪಾರ ಉದ್ದಿಮೆ ಮಾಡುವುದನ್ನು ಸುಲಭಗೊಳಿಸುವಿಕೆ"ಗೆ ಸೌಕರ್ಯಗಳನ್ನು ಕಲ್ಪಿಸುವುದು ನಮ್ಮ ನಿರಂತರ ಪ್ರಯತ್ನವಾಗಿದೆ. ಈ ದಿಸೆಯಲ್ಲಿ ನಮ್ಮ ಪ್ರಯತ್ನಗಳಿಗೆ ಪೂರಕವಾಗಿ ವಾಣಿಜ್ಯೋದ್ಯಮಗಳು ತಮ್ಮ ಹೆಚ್ಚಿನ ಅನುಸರಣೆಯಿಂದ ಸ್ಪಂದಿಸಿ ಪ್ರೋತ್ಸಾಹಿಸುತ್ತಿರುವುದಕ್ಕೆ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ವಿಶ್ವ ಬ್ಯಾಂಕ್ ತನ್ನ 2015ರ "ವ್ಯಾಪಾರ ಸುಧಾರಣೆಗಳ ರಾಜ್ಯ ಅನುಷ್ಠಾನದ ಮೌಲ್ಯಮಾಪನ"ದ ವರದಿಯಲ್ಲಿ "ನೋಂದಣಿಯ ಹಾಗೂ ತೆರಿಗೆ ಕಾರ್ಯವಿಧಾನಗಳ ಅನುಸರಣೆ"ಗೆ ಸಂಬಂಧಿಸಿದಂತೆ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ನೀಡಿದೆ.

**ವಾಣಿಜ್ಯ ತೆರಿಗೆಗಳು**

2015–16 ವರ್ಷದಲ್ಲಿ ಕಚ್ಚಾ ತೈಲದ ಬೆಲೆಗಳ ನಿರಂತರ ಕುಸಿತದ ಪರಿಣಾಮವಾಗಿ ಸಂಪನ್ಮೂಲ ಕ್ರೋಢೀಕರಣದ ಪ್ರಯತ್ನಗಳಿಗೆ ಬಾಧಿತವಾದುದರಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯ ಸಂಗ್ರಹಣೆಯಲ್ಲಿ ಕೊರತೆಯಾಗಿರುತ್ತದೆ. ಆದರೂ ಸರ್ಕಾರದ ದೃಢ ನಿಶ್ಚಯದ ಪ್ರಯತ್ನಗಳಿಂದಾಗಿ ಪರಿಣಾಮಕಾರಿಯಾಗಿ ನಿಗಾವಹಿಸಿ ಗುರಿಗಳನ್ನು ತಲುಪುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. 2016–17ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಇಲಾಖೆಗೆ ರಾಜಸ್ವ ಸಂಗ್ರಹಣಾ ಗುರಿಯನ್ನು 51,338 ಕೋಟಿ ರೂ.ಗಳಿಗೆ ನಿಗದಿ ಮಾಡಲಾಗಿದೆ. ಹಿಂದಿನ ಮೂರು ವರ್ಷಗಳ ಉತ್ತಮ ದಾಖಲೆಯುಳ್ಳ ಬೆಂಗಳೂರಿನ ಪ್ರತೀ ವ್ಯಾಟ್ ವಿಭಾಗಗಳ ಐದು ನಿಸ್ಪೃಹ ತೆರಿಗೆ ಪಾವತಿದಾರರನ್ನು ಹಾಗೂ ಬೆಂಗಳೂರು ಹೊರಗಿನ ಪ್ರತೀ ಮೌಲ್ಯವರ್ಧಿತ ತೆರಿಗೆ ವಿಭಾಗಗಳ ಮೂರು ನಿಸ್ಪೃಹ ತೆರಿಗೆ ಪಾವತಿದಾರರನ್ನು ಗುರುತಿಸಿ ಸನ್ಮಾನಿಸುವ ಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾಪಿಸುತ್ತೇನೆ. ಇ–ಉಪಕ್ರಮಗಳನ್ನು ತೆರಿಗೆ ಆಡಳಿತದ ಎಲ್ಲಾ ಸ್ತರಗಳಿಗೂ ವಿಸ್ತರಿಸುವುದು ನಮ್ಮ ನಿರಂತರ ಪ್ರಯತ್ನವಾಗಿದೆ. ಈ ದಿಸೆಯಲ್ಲಿ

* ಸರಕುಗಳ ಅಡಚಣೆ ರಹಿತ ಸುಗಮ ಸಾಗಣಿಕೆಗೆ ಹಾಗೂ ಇಲಾಖೆಯು ನಿರ್ವಹಿಸುವ ರಸ್ತೆ ಮೇಲಿನ ಜಾಗೃತಿ ಕಾರ್ಯಗಳಲ್ಲಿ ಅವಶ್ಯವಾಗಿ ಬೇಕಿದ್ದ ಪಾರದರ್ಶಕತೆಯನ್ನು ತರಲು ಸರಕು ಸಾಗಾಣಿಕೆದಾರರಿಗೆ ವಿದ್ಯುನ್ಮಾನ ವಿಧಾನದಲ್ಲಿ ಸಾಗಣೆ ಮಾಡುವ ಸರಕುಗಳ ವಿವರಗಳನ್ನು ಅಳವಡಿಸಲು ಪ್ರತ್ಯೇಕವಾದ ಉಪಕ್ರಮವನ್ನು ಅಭಿವೃದ್ಧಿ ಪಡಿಸಲು,

* ಸಣ್ಣ ವ್ಯಾಪಾರಿಗಳ ಉಪಯೋಗಕ್ಕಾಗಿ ಮೊಬೈಲ್ ಅನ್ವಯಿಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು,


* ಅರ್ಹ ವ್ಯಾಪಾರಿಗಳಿಗೆ ಮರುಪಾವತಿಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ನೀಡಲು,

* ಇಲಾಖೆಯ ಶಾಸನಬದ್ಧ ನಡವಳಿಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂಕಿ ಚಿಹ್ನೆ ಪ್ರಮಾಣ ಪತ್ರ ಉಪಯೋಗಿಸಿ ಜಾರಿಗೊಳಿಸಲು ಪ್ರಸ್ತಾಪಿಸುತ್ತೇನೆ.

ಸರ್ ಎಂ.ವಿಶ್ವೇಶ್ವರಯ್ಯ ರವರ ನೆನಪಿನಲ್ಲಿ ಶತಮಾನೋತ್ಸವ ಕಟ್ಟಡ ನಿರ್ಮಾಣಕ್ಕಾಗಿ ಎಫ್‌ಕೆಸಿಸಿಐಗೆ 10 ಕೋಟಿ ರೂ.ಗಳ ಅನುದಾನವನ್ನು ಇವರ ಸಾಮರ್ಥ್ಯ ಸಂವರ್ಧನೆ, ತರಬೇತಿ ಹಾಗೂ ಸಂಶೋಧನೆಯ ಪ್ರಯತ್ನಗಳನ್ನು ಬಲಪಡಿಸಲು ನೀಡಲು ಪ್ರಸ್ತಾಪಿಸುತ್ತೇನೆ.

**ಪರಿಹಾರಗಳು**

ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಮುಂದಿನ ಪರಿಹಾರ ಕ್ರಮಗಳನ್ನು ಪ್ರಸ್ತಾಪಿಸುತ್ತೇನೆ.



(1) 2016ರ ಏಪ್ರಿಲ್‌ನಿಂದ ಮತ್ತೊಂದು ವರ್ಷಕ್ಕೆ ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ ಮತ್ತು ಗೋಧಿ ಪದಾರ್ಥಗಳ ಮೇಲೆ ತೆರಿಗೆ ವಿನಾಯಿತಿಯನ್ನು ಮುಂದುವರೆಸಲು,

(2) ರಾಗಿ ರೈಸ್ (ಸಂಸ್ಕರಿಸಿದ ರಾಗಿ) ಮೇಲಿನ ತೆರಿಗೆಯನ್ನು 2016ರ ಏಪ್ರಿಲ್‌ನಿಂದ ಒಂದು ವರ್ಷಕ್ಕೆ ವಿನಾಯಿತಿ ನೀಡಲು,

(3) ಉತ್ತರ ಕರ್ನಾಟಕದ ಪ್ರಮುಖ ಆಹಾರವಾದ ಜೋಳದ ರೊಟ್ಟಿ ಮತ್ತು ದಕ್ಷಿಣ ಕರ್ನಾಟಕದ ಪ್ರಮುಖ ಆಹಾರವಾದ ರಾಗಿ ರೊಟ್ಟಿ ಮೇಲಿನ ತೆರಿಗೆಯನ್ನು ವಿನಾಯಿತಿ ನೀಡಲು,

(4) ಬಡ ಜನರ ಅನುಕೂಲಕ್ಕಾಗಿ ಅಲ್ಯೂಮಿನಿಯಂ ಗೃಹೋಪಯೋಗಿ ಪಾತ್ರೆಗಳ ಮೇಲಿನ ತೆರಿಗೆಯನ್ನು ಪ್ರೆಷರ್ ಕುಕ್ಕರ್ ಮತ್ತು ಕಟ್ಲರಿ ಹೊರತುಪಡಿಸಿದಂತೆ ವಿನಾಯಿತಿ ನೀಡಲು,

(5) ಹತ್ತಿ ಮೇಲಿನ ತೆರಿಗೆಯನ್ನು ಕಡಿಮೆಗೊಳಿಸುವಂತೆ ಹತ್ತಿ ಉದ್ಯಮದ ಬಹುದಿನಗಳ ಬೇಡಿಕೆಯನ್ನು ಈಡೇರಿಸಲು, 1956ರ ಕೇಂದ್ರ ಮಾರಾಟ ತೆರಿಗೆ ಅಧಿನಿಯಮದ ಪ್ರಕರಣ 14(ii) ರ ಅಡಿಯಲ್ಲಿ ನಮೂದಿಸಿರುವ ಹತ್ತಿಯ ಮೇಲಿನ ತೆರಿಗೆಯನ್ನು ಶೇ.5 ರಿಂದ ಶೇ.2ಕ್ಕೆ ಇಳಿಸಲು,

(6) ಪರಿಸರ ಸ್ನೇಹಿ ಕ್ರಮವಾಗಿ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಮಾನ್ಯತೆ ಮಾಡಿದ ವ್ಯಾಪಾರಿಯು ತಯಾರಿಸಿ ಮಾರಾಟ ಮಾಡುವ ಕೈಯಿಂದ ತಯಾರಿಸಿದ ಕಾಗದ ಮತ್ತು ಕಾಗದದ ಬೋರ್ಡ್‌ಗಳನ್ನೂ ಒಳಗೊಂಡಂತೆ ಕೈಯಿಂದ ತಯಾರಿಸಿದ

ಕಾಗದದ ಉತ್ಪನ್ನಗಳ ಮೇಲಿನ ತೆರಿಗೆ ವಿನಾಯಿತಿ ನೀಡಲು,

(7) ಉತ್ತರ ಕರ್ನಾಟಕದ ಆಹಾರ ಪದ್ಧತಿಯ ಭಾಗವಾದ ಶೇಂಗಾ, ಗುರೆಳ್ಳು (ಹುಚ್ಚೆಳ್ಳು), ಕೊಬ್ಬರಿ, ಕಡಲೇ ಬೇಳೆ, ಬೆಳ್ಳುಳ್ಳಿ, ಅಗಸಿ ಮತ್ತು ಪುಠಾಣಿ (ಹುರಿಗಡಲೆ) ಇವುಗಳಿಂದ ತಯಾರಿಸಿದ ಚಟ್ನಿ ಪುಡಿಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ.5.5ಕ್ಕೆ ಇಳಿಸಲು,

(8) ಕಾಗದ ಮತ್ತು ಕಾಗದ ಬೋರ್ಡ್‌ಗಳಿಂದ ತಯಾರಿಸಿದ ಆಫೀಸ್ ಫೈಲ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ.5.5ಕ್ಕೆ ಇಳಿಸಲು,

(9) ಹಿರಿಯ ನಾಗರೀಕರಿಗೆ ಅನುಕೂಲವಾಗಲು ಅಡಲ್ಟ್ ಡಯಾಪರ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ.5.5ಕ್ಕೆ ಇಳಿಸಲು,

(10) ಏರೋಸ್ಪೇಸ್ ಉದ್ಯಮವನ್ನು ಪ್ರೋತ್ಸಾಹಿಸಲು ಹೆಚ್‌ಎಸ್‌ಎನ್ ಕೋಡ್‌ನ ಶೀರ್ಷಿಕೆ 7505, 7506 ಹಾಗೂ 8108 ರ ಅಡಿಯಲ್ಲಿ ಬರುವ ನಿಕ್ಕಲ್ ಮತ್ತು ಟೈಟಾನಿಯಂ ವಸ್ತುಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ.5.5ಕ್ಕೆ ಇಳಿಸಲು,

(11) ರಬ್ಬರ್‌ಶೀಟ್ ಮಾಡುವ ಹಸ್ತ ಚಾಲಿತ ಯಂತ್ರ (ಹ್ಯಾಂಡ್ ಆಪರೇಟೆಡ್ ರಬ್ಬರ್‌ಶೀಟ್ ಮೇಕಿಂಗ್ ಮೆಷಿನ್)ದ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ. 14.5 ರಿಂದ ಶೇ. 5.5ಕ್ಕೆ ಇಳಿಸಲು,

(12) ದೂರದರ್ಶನ ವೀಕ್ಷಣೆಗಾಗಿನ ಸೆಟ್ ಟಾಪ್ ಬಾಕ್ಸ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ. 14.5 ರಿಂದ ಶೇ. 5.5ಕ್ಕೆ ಇಳಿಸಲು,

(13) ನಾನ್ ಓವನ್ ಫ್ಯಾಬ್ರಿಕ್ಸ್‌ನಿಂದ ತಯಾರಿಸಿದ ಒಮ್ಮೆ ಮಾತ್ರ ಉಪಯೋಗಿಸಲ್ಪಡುವ ಶಸ್ತ್ರ ಚಿಕಿತ್ಸೆ ಗೌನ್‌ಗಳು, ಕೋಟುಗಳು, ಮಾಸ್ಕ್‌ಗಳು, ಕ್ಯಾಪ್‌ಗಳು, ಹಾಗೂ ಡ್ರೇಪ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ.5.5ಕ್ಕೆ ಇಳಿಸಲು,

(14) ಯಾವುದೇ ಮೌಲ್ಯದ ಮಿತಿಯಿಲ್ಲದೆ, ಮಲ್ಟಿ ಮೀಡಿಯಾ ಸ್ಪೀಕರ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ. 14.5 ರಿಂದ ಶೇ. 5.5ಕ್ಕೆ ಇಳಿಸಲು,

(15) ಸಾಮಾನ್ಯ ಜನರ ಉಪಯೋಗಕ್ಕಾಗಿ ಹೆಲ್ಮೆಟ್‌ಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ.14.5 ರಿಂದ ಶೇ. 5.5ಕ್ಕೆ ಇಳಿಸಲು,

(16) ವಿದ್ಯುಚ್ಛಕ್ತಿ ಉಳಿತಾಯದ ಕ್ರಮವಾಗಿ ಎಲ್‌ಇಡಿ (ಐಇಳ) ಬಲ್ಬುಗಳ ಮೇಲಿನ ತೆರಿಗೆಯನ್ನು ಪ್ರಸ್ತುತ ಶೇ. 14.5 ರಿಂದ ಶೇ. 5.5ಕ್ಕೆ ಇಳಿಸಲು,

(17) ಭಾರತೀಯ ತೈಲ ರಿಫೈನರಿಗಳು ನೇರವಾಗಿ ಆಮದು ಮಾಡಿಕೊಳ್ಳುವ ಕಚ್ಚಾ ತೈಲಕ್ಕೆ ಸಮಾನಾಗುವಂತೆ ಮಂಗಳೂರು ಮತ್ತು ಪದೂರಿನಲ್ಲಿ ಸ್ಥಾಪಿಸಿರುವ ತೈಲಾಗಾರಗಳಿಂದ ಮಾರಾಟ ಮಾಡುವ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು ಪ್ರಸ್ತಾಪಿಸುತ್ತೇನೆ.

### ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮ

ಸಕ್ಕರೆ ಅಥವಾ ಸಿಹಿಯುಳ್ಳ ವಸ್ತು ಅಥವಾ ಸುವಾಸನೆಯುಕ್ತ ಅಥವಾ ಇನ್ನಾವುದಾದರೂ ಒಳಗೊಂಡಿರುವ ಅಥವಾ ಇಲ್ಲದಿರುವ ಏರೇಟೆಡ್ ಮತ್ತು ಕಾರ್ಬೋನೇಟೆಡ್ ಮದ್ಯರಹಿತ ಪಾನೀಯಗಳು ಮೃದು ಪಾನೀಯ ಮತ್ತು ಮೃದು ಪಾನೀಯ ಕಾನ್ಸೆಂಟ್ರೇಟ್‌ಗಳನ್ನು ಒಳಗೊಂಡಂತೆ ಎಲ್ಲಾ ಪಾನೀಯಗಳ ಮೇಲಿನ ತೆರಿಗೆಯನ್ನು ಶೇ.14.5 ರಿಂದ ಶೇ.20ಕ್ಕೆ ಏರಿಸಲು ಪ್ರಸ್ತಾಪಿಸುತ್ತೇನೆ.

### ಕೃಷಿ ವರಮಾನ ತೆರಿಗೆ

ಕಾಫಿ, ಟೀ, ರಬ್ಬರ್ ಮತ್ತು ಇತರೆ ತೋಟದ ಬೆಳೆಗಳ ಬೆಳೆಗಾರರಿಂದ ಇಂತಹ ತೋಟದ ಬೆಳೆಗಳ ಮೇಲಿನ ಕೃಷಿ ವರಮಾನ ತೆರಿಗೆಯನ್ನು ರದ್ದುಗೊಳಿಸಬೇಕೆಂದು ಬಹುದಿನಗಳ ಬೇಡಿಕೆ ಇರುತ್ತದೆ. 1ನೇ ಏಪ್ರಿಲ್ 2016 ರಿಂದ ಎಲ್ಲಾ ತೋಟದ ಬೆಳೆಗಳ ಮೇಲಿನ ಕೃಷಿ ವರಮಾನ ತೆರಿಗೆಯನ್ನು ರದ್ದುಗೊಳಿಸಲು ಪ್ರಸ್ತಾಪಿಸುತ್ತೇನೆ.

### ಮಾರಾಟ ತೆರಿಗೆ

### ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮ

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ



ಕಚ್ಚಾತೈಲ ಬೆಲೆಗಳು ನಿರಂತರವಾಗಿ ಇಳಿಕೆಯಾಗಿವೆ. ರಾಜಸ್ವದ ಕ್ರೋಡೀಕರಣಕ್ಕಾಗಿ ಡೀಸೆಲ್ ಮತ್ತು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರವು ಮೂರು ಬಾರಿ ಹೆಚ್ಚಿಸಿದೆ ಹಾಗೂ ಅನೇಕ ರಾಜ್ಯಗಳು ವರ್ಷದಲ್ಲಿ ತೆರಿಗೆ ದರಗಳನ್ನು ಹೆಚ್ಚಿಸಿದಾಗ್ಯೂ, ನಮ್ಮ ರಾಜ್ಯವು ಡೀಸೆಲ್ ಮತ್ತು ಪೆಟ್ರೋಲ್ ಮೇಲಿನ ತೆರಿಗೆ ದರಗಳನ್ನು ವರ್ಷದ ಮಧ್ಯ ಭಾಗದಲ್ಲಿ ಹೆಚ್ಚಿಸದೇ ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಿರುತ್ತದೆ. ಇದೇ ಪ್ರವೃತ್ತಿ ಮುಂದುವರಿಯುವಂತೆ ಕಾಣಿಸುತ್ತಿರುವುದರಿಂದ ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಅಭಿವೃದ್ಧಿ ಅವಶ್ಯಕತೆಗಳಿಗಾಗಿ ಪೆಟ್ರೋಲ್ ಮೇಲಿನ ತೆರಿಗೆ ದರವನ್ನು ಶೇ.26 ರಿಂದ ಶೇ.30ಕ್ಕೆ ಡೀಸೆಲ್ ಮೇಲಿನ ತೆರಿಗೆ ದರವನ್ನು ಶೇ.16.65 ರಿಂದ ಶೇ.19ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಈ ಕ್ರಮದಿಂದಾಗಿ ಪೆಟ್ರೋಲ್‌ನ ಬೆಲೆಯು ರೂ.1.89ರಷ್ಟು ಹಾಗೂ ಡೀಸೆಲ್‌ನ ಬೆಲೆಯು ರೂ.0.98ರಷ್ಟು ಅಲ್ಪ ಪ್ರಮಾಣದ ಹೆಚ್ಚಳವಾಗುತ್ತದೆ.

### ಕೇಂದ್ರ ಮಾರಾಟ ತೆರಿಗೆ

### ಸುಧಾರಣಾ ಕ್ರಮಗಳು

ಪ್ರಸ್ತಾವಿತ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನ ಮತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮವನ್ನು ರದ್ದುಪಡಿಸುವ ಹಿನ್ನೆಲೆಯಲ್ಲಿ, 2003ರ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ಹೂಡುವಳಿ ತೆರಿಗೆಯ ರಿಬೇಟನ್ನು ಅಂತರರಾಜ್ಯ ಮಾರಾಟದ ವಹಿವಾಟುಗಳ ಮೇಲೂ ಪಡೆಯಲು ಅವಕಾಶ ಇರುವುದರಿಂದ, ವ್ಯಾಟ್ ಜಾರಿಯಾಗುವ ಮುನ್ನ ಕೆಲವು ಸರಕುಗಳ ಅಂತರರಾಜ್ಯ ಮಾರಾಟದ ಮೇಲಿನ ತೆರಿಗೆಯನ್ನು ಶೇ.1 ಕ್ಕೆ ಇಳಿಸಿ 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆ, ಅಡಿಯಲ್ಲಿ ಹೊರಡಿಸಿದ್ದ ಅಧಿಸೂಚನೆಗಳನ್ನು ರದ್ದುಪಡಿಸಲು ಪ್ರಸ್ತಾಪಿಸುತ್ತೇನೆ.

### ಮನರಂಜನಾ ತೆರಿಗೆ

2006 ರಿಂದ ಮಲ್ಟಿ ಸಿಸ್ಟಂ ಆಪರೇಟರ್‌ಗಳು ಮತ್ತು ಡೈರೆಕ್ಟ್ ಟು ಹೋಂ ಸರ್ವಿಸ್ ಪ್ರೊವೈಡರ್‌ಗಳಿಗೆ ಶೇ.6ರಂತೆ ಪ್ರಕರಣ 4–ಜಿ ಅಡಿಯಲ್ಲಿ ಮನರಂಜನಾ ತೆರಿಗೆ ವಿಧಿಸಿ ಸಂಗ್ರಹಿಸಲಾಗುತ್ತಿದೆ. ತೆರಿಗೆಯನ್ನು ಶೇ.6 ರಿಂದ ಶೇ.10ಕ್ಕೆ ಏರಿಸಲು ಪ್ರಸ್ತಾಪಿಸುತ್ತೇನೆ.

### ಪ್ರವೇಶ ತೆರಿಗೆ


ಪ್ರವೇಶ ತೆರಿಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡಿ, ಪ್ರಥಮ ಮನವಿ ಪ್ರಾಧಿಕಾರ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಿಂದ ತಡೆಯಾಜ್ಞೆ ಪಡೆಯಲು ವಿವಾದಿತ ತೆರಿಗೆ ಮತ್ತು ಇತರೆ ಮೊತ್ತಗಳ ಕಡ್ಡಾಯ ಪಾವತಿಯನ್ನು ಶೇ.30ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಪ್ರವೇಶ ತೆರಿಗೆ ಕಾಯ್ದೆಗೆ ತಿದ್ದುಪಡಿ ಮಾಡಿ ಪ್ರಥಮ ಮನವಿ ಪ್ರಾಧಿಕಾರಕ್ಕೆ ವಿದ್ಯುನ್ಮಾನ ವಿಧಾನದಲ್ಲಿ ಮನವಿಗಳನ್ನು ಸಲ್ಲಿಸಲು ವ್ಯಾಪಾರಿಗಳಿಗೆ ಅನುವು ಮಾಡಿಕೊಡಲು ಪ್ರಸ್ತಾಪಿಸುತ್ತೇನೆ.

### ಅಬಕಾರಿ

ಅಬಕಾರಿ ಇಲಾಖೆಗೆ 2015–16 ಸಾಲಿಗೆ ನಾವು 15,200 ಕೋಟಿ ರೂ. ಗಳ ರಾಜಸ್ವ ಗುರಿ ನಿಗಧಿಪಡಿಸಿದ್ದೆವು. ಈ ಗುರಿಯನ್ನು ಸಾಧಿಸಲಾಗುವುದೆಂಬ ಭರವಸೆಯನ್ನು ನಾವು ಹೊಂದಿದ್ದೇವೆ.

ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಹಾಲಿ ಇರುವ ರೂ.45 ರಿಂದ ರೂ.50 ಕ್ಕೆ ಹಾಗೂ ಬಿಯರ್ ಮೇಲಿನ ಅಬಕಾರಿ ಸುಂಕವನ್ನು ಹಾಲಿ ಇರುವ ರೂ.5 ರಿಂದ ರೂ.10 ಕ್ಕೆ ಹೆಚ್ಚಿಸಲು ನಾನು ಪ್ರಸ್ತಾಪಿಸುತ್ತೇನೆ. ಮದ್ಯದ ಎಲ್ಲಾ 17 ಸ್ಲ್ಯಾಬ್‌ಗಳ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಅನುಬಂಧ–I ರಲ್ಲಿರುವಂತೆ ಹಾಲಿ ಇರುವ ದರಗಳ ಮೇಲೆ ಶೇಕಡ 4ರಿಂದ ಶೇಕಡ 12ರಷ್ಟು ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಹಾಗೆಯೇ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇ.135 ರಿಂದ ಶೇ.150 ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

ಸ್ಪಿರಿಟ್ (ಎಥನಾಲ್ ಹೊರತುಪಡಿಸಿ) ರಫ್ತು ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ



ರೂ.1 ರಂತೆ ಆಡಳಿತಾತ್ಮಕ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

ಈ ಎಲ್ಲಾ ಬದಲಾವಣೆಗಳು ದಿನಾಂಕ:01.04.2016 ರಿಂದ ಜಾರಿಗೆ ಬರುತ್ತವೆ. ಮದ್ಯದ ಎಲ್ಲಾ 17 ಸ್ಲ್ಯಾಬ್‌ಗಳ ಘೋಷಿತ ಬೆಲೆಯನ್ನು ತಲಾ ರೂ. 35 ಗಳಂತೆ ಹೆಚ್ಚಿಸಿ ಅನುಬಂಧ–II ರಲ್ಲಿರುವಂತೆ ಮರುವಿನ್ಯಾಸಗೊಳಿಸಲು ಪ್ರಸ್ತಾಪಿಸುತ್ತೇನೆ. ಮದ್ಯ ಮಾರಾಟದ ಸನ್ನದು ಶುಲ್ಕಗಳ ಅಂತರಗಳನ್ನು ಕಡಿಮೆಗೊಳಿಸಿ ಅದನ್ನು ಶೇ.25 ರಷ್ಟು ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

ಈ ಬದಲಾವಣೆಗಳು ದಿನಾಂಕ:01.07.2016 ರಿಂದ ಜಾರಿಗೆ ಬರುತ್ತವೆ. ದ್ರಾಕ್ಷಿ ಬೆಳೆಗಾರರ ಕ್ಷೇಮಾಭಿವೃದ್ಧಿ ಮತ್ತು ದ್ರಾಕ್ಷಾರಸ ಉತ್ಪಾದನೆ ಮತ್ತು ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವ ದಿಸೆಯಲ್ಲಿ ಸೂಕ್ತ ಪ್ರೋತ್ಸಾಹ ನೀಡುವ ಸಲುವಾಗಿ ಅಬಕಾರಿ ನಿಯಮಗಳಿಗೆ ತಿದ್ದುಪಡಿ ತಂದು fortified wine ಉತ್ಪಾದಿಸುವಾಗ ನ್ಯೂಟ್ರಲ್ ಸ್ಪಿರಿಟ್ ಅಥವಾ ರೆಕ್ಟಿಫೈಡ್ ಸ್ಪಿರಿಟ್‌ನ್ನು ಬಳಸುವ ಬದಲಿಗೆ ಗ್ರೇಪ್ ಸ್ಪಿರಿಟ್ ಅಥವಾ ಪರಿಶುದ್ಧ ಹಣ್ಣಿನ ಬ್ರಾಂಡಿಯನ್ನು ಮಾತ್ರ ಬಳಸಿ fortification ಮಾಡಲು ಅವಕಾಶ ಕಲ್ಪಿಸಲಾಗುವುದು. ಮದ್ಯ ಗ್ರಾಹಕರ ಹಿತರಕ್ಷಣೆ ಹಾಗೂ ಮದ್ಯಸೇವನೆಯಿಂದ ಉಂಟಾಗುವ ಪರಿಣಾಮಗಳನ್ನು ನಿಯಂತ್ರಿಸುವ ಸಲುವಾಗಿ ಮದ್ಯ ಉತ್ಪಾದಕ ಸಂಸ್ಥೆಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ) ಸಹಭಾಗಿತ್ವದಲ್ಲಿ ಜವಾಬ್ದಾರಿಯುತ ಮದ್ಯಸೇವನೆ ಪರಿಕಲ್ಪನೆಯನ್ನು ವ್ಯಾಪಕವಾಗಿ ಪ್ರಚಾರಗೊಳಿಸಲಾಗುವುದು.

ಮದ್ಯ ಸೇವಿಸಿ ವಾಹನ ಚಾಲನೆ, ಅಕ್ರಮ ಮದ್ಯ ಸೇವನೆ, ಅಪ್ರಾಪ್ತ ವಯಸ್ಕ ಮಕ್ಕಳ ಮದ್ಯಪಾನ, ಅತಿ ಕುಡಿತಗಳ ವಿರುದ್ಧ ಮತ್ತು ವಿವಿಧ ಮದ್ಯಗಳ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು ಇದರ ಉದ್ದೇಶಗಳಾಗಿವೆ. ಈ ಕಾರ್ಯಕ್ರಮಕ್ಕಾಗಿ 2016–17 ನೇ ಸಾಲಿನಲ್ಲಿ ಸಮ ಸಹಭಾಗಿತ್ವದ ಆಧಾರದಲ್ಲಿ ಸರ್ಕಾರದಿಂದ 10 ಕೋಟಿ. ರೂ.ಗಳನ್ನು ಒದಗಿಸಲಾಗುವುದು. ಇದರೊಂದಿಗೆ ಮತ್ತು ಪರಿಣಾಮಕಾರಿಯಾದ ಜಾರಿ ಮತ್ತು ತನಿಖಾ ಕಮಗಳ ಮೂಲಕ ಇಲಾಖೆಯು 2016–17 ನೇ ಆರ್ಥಿಕ ವರ್ಷಕ್ಕೆ ನಿಗದಿಪಡಿಸಲಾದ 16,510 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ಸಾಧಿಸಲಿದೆ.

### ಮುದ್ರಾಂಕ ಮತ್ತು ನೋಂದಣಿ

2015–16 ಸಾಲಿಗೆ ಇಲಾಖೆಗೆ 8200 ಕೋಟಿ ರೂ.ಗಳ ರಾಜಸ್ವ ಗುರಿ ನಿಗದಿಪಡಿಸಲಾಗಿದೆ. ನಾವು 8100 ಕೋಟಿ ರೂ.ಗಳ ಗುರಿ ತಲುಪುತ್ತೇವೆಂಬ ನಿರೀಕ್ಷೆ ಇದೆ. ಕರ್ನಾಟಕ ಮುದ್ರಾಂಕ ಕಾಯ್ದೆ 1957ಕ್ಕೆ ತಿದ್ದುಪಡಿ.

* ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 71 ಮುನೋಮು 2014 ದಿನಾಂಕ:10–02–2016ರಲ್ಲಿ ನಮೂದಿಸಿರುವ ದಸ್ತಾವೇಜುಗಳಿಗೆ ದಿನಾಂಕ:10–02–2016 ರಿಂದಲೇ ಅನ್ವಯವಾಗುವಂತೆ ಮುದ್ರಾಂಕ ಶುಲ್ಕ ವಿನಾಯಿತಿ ನೀಡಲು ಕರ್ನಾಟಕ ಮುದ್ರಾಂಕ ಕಾಯ್ದೆ 1957ಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ಸದರಿ ಅಧಿಸೂಚನೆಯನ್ನು ಕ್ರಮಬದ್ಧಗೊಳಿಸಲು ಉದ್ದೇಶಿಸಿದೆ.
* ಕರ್ನಾಟಕ ಮುದ್ರಾಂಕ ಕಾಯ್ದೆ 1957ಕ್ಕೆ ಸೂಕ್ತ ತಿದ್ದುಪಡಿ ತರುವುದರೊಂದಿಗೆ ಸದರಿ ಕಾಯ್ದೆಯ ಷೆಡ್ಯೂಲ್ / ಅನುಸೂಚಿಯಲ್ಲಿನ ಅನುಚ್ಛೇಧಗಳನ್ನು, ಈ ಕೂಡ ಲಗತ್ತಿಸಿರುವ ಅನುಬಂಧ– III ರಲ್ಲಿ ವಿವರಿಸಿರುವಂತೆ ಪರಿಷ್ಕರಣೆ ಸರಳೀಕರಣಗೊಳಿಸಲಾಗುವುದು. ಇದರಿಂದಾಗಿ, ಮುದ್ರಾಂಕ/ನೋಂದಣಿ ಶುಲ್ಕಗಳ ರೂಪದಲ್ಲಿ, ಸರ್ಕಾರಕ್ಕೆ ಅಂದಾಜು 100 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. 2016–17ನೇ ಸಾಲಿಗೆ 9100 ಕೋಟಿ ರೂ. ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನೀಡಲಾಗಿದೆ.

### ಸಾರಿಗೆ

2015–16 ಸಾಲಿಗೆ ನಿಗಧಿಪಡಿಸಿದ ಗುರಿ 4800 ಕೋಟಿ ರೂ.ಗಳಾಗಿತ್ತು. ಈ ಗುರಿ ತಲುಪುತ್ತೇವೆಂಬ ಆಶಯ ಹೊಂದಿದ್ದೇವೆ.

ಮೋಟಾರು ವಾಹನ ತೆರಿಗೆಗಳನ್ನು 2010ನೇ ಸಾಲಿನಿಂದ ಇಲ್ಲಿಯವರೆಗೆ ಹೆಚ್ಚಳ ಮಾಡಲಾಗಿರುವುದಿಲ್ಲ. ಆದುದರಿಂದ, ಈ ಸಾಲಿನಲ್ಲಿ ಈ ಮುಂದಿನಂತೆ ಹೆಚ್ಚಳ ಮಾಡುವ ಬಗ್ಗೆ ಪ್ರಸ್ತಾಪಿಸಿದೆ.

* ಖಾಸಗಿ ಮಜಲು ವಾಹನ ತೆರಿಗೆಯನ್ನು ಪ್ರತಿ ಆಸನಕ್ಕೆ ರೂ.600 ರಿಂದ ರೂ.900 ಗಳಿಗೆ ಹೆಚ್ಚಳ ಮಾಡಲಾಗುವುದು.

* ಖಾಸಗಿ ನಗರ ಸಾರಿಗೆ (ಸಿಟಿ ಸರ್ವೀಸ್) ಮಜಲು ವಾಹನಗಳ ತೆರಿಗೆಯನ್ನು ಪ್ರತಿ ಆಸನಕ್ಕೆ ರೂ.300 ರಿಂದ ರೂ.450ಕ್ಕೆ ಹೆಚ್ಚಳ ಮಾಡಲಾಗುವುದು.

* ಒಪ್ಪಂದ ವಾಹನಗಳ (ಕಾಂಟ್ರಾಕ್ಟ್ ಕ್ಯಾರೇಜ್) ತೆರಿಗೆಯನ್ನು ಪ್ರತಿ ಆಸನಕ್ಕೆ ರೂ.1000ದಿಂದ ರೂ.1500ಕ್ಕೆ ಏರಿಕೆ ಮಾಡಲಾಗುವುದು.

* ಅಖಿಲ ಭಾರತ ಪ್ರವಾಸಿ ವಾಹನಗಳ ತೆರಿಗೆಯನ್ನು ಪ್ರತಿ ಆಸನಕ್ಕೆ ರೂ.2750ರಿಂದ ರೂ.3500ಕ್ಕೆ ಏರಿಕೆ ಮಾಡಲಾಗುವುದು.

* ವಿಶೇಷ ಪರವಾನಗಿ ಹೊಂದಿರುವ ಮಜಲು ವಾಹನಗಳ ತೆರಿಗೆಯನ್ನು ಪ್ರತಿ ಆಸನಕ್ಕೆ ರೂ.1000ದಿಂದ ರೂ.1500ಕ್ಕೆ ಏರಿಕೆ ಮಾಡಲಾಗುವುದು.

* ವಿದ್ಯುತ್ ಚಾಲಿತ ಸಾರಿಗೇತರ ಮತ್ತು ಸಾರಿಗೆ ವಾಹನಗಳು ಪರಿಸರ ಸ್ನೇಹಿ ವಾಹನಗಳಾಗಿರುವುದರಿಂದ ಸಂಪೂರ್ಣ ತೆರಿಗೆ ವಿನಾಯ್ತಿ ನೀಡಲಾಗುವುದು.

ಈ ಪ್ರಸ್ತಾವನೆಗಳಿಂದ ಸರ್ಕಾರಕ್ಕೆ ಸುಮಾರು 121 ಕೋಟಿ ರೂ.ಗಳ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. 2016–17ನೇ ಸಾಲಿಗೆ 5160 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನೀಡಲಾಗಿದೆ.

**ಪರಿಷ್ಕೃತ ಅಂದಾಜು 2015–16**

2015–16ರ ಪರಿಷ್ಕೃತ ಅಂದಾಜುಗಳನ್ವಯ ಆಯವ್ಯಯದಲ್ಲಿ ಅಂದಾಜಿಸಲಾದ 1,39,476 ಕೋಟಿ. ರೂ. ಗಳಿಗೆ ಹೋಲಿಸಿದಲ್ಲಿ ಒಟ್ಟಾರೆ ರಾಜಸ್ವವು 1,39,387 ಕೋಟಿ ರೂ.ಗಳಾಗಿದೆ.

ರಾಜ್ಯದ ರಾಜಸ್ವ ಕ್ರೋಢೀಕರಣದ ಪ್ರಯತ್ನಗಳು 1,17,731 ಕೋಟಿ ರೂ. ಗಳಾಗಿದ್ದು, ಇದರಲ್ಲಿ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯು 75,568 ಕೋಟಿ ರೂ. ಗಳಾಗಿರುತ್ತದೆ. ಪರಿಷ್ಕೃತ ಅಂದಾಜಿನ ಪ್ರಕಾರ ಒಟ್ಟು ವೆಚ್ಚವು 1,42,503 ಕೋಟಿ ರೂ.ಗಳಾಗಿದೆ. 2015–16ರ ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನಾ ವೆಚ್ಚವು ರಾಜ್ಯ ಸಂಪನ್ಮೂಲಗಳಿಂದ 63521 ಕೋಟಿ ರೂ.ಗಳು ಹಾಗೂ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸಂಪನ್ಮೂಲಗಳಿಂದ 7533 ಕೋಟಿ ರೂ.ಗಳು ಸೇರಿದಂತೆ 71054 ಕೋಟಿ ರೂ.ಗಳಾಗಿದೆ. ಇದು 2014–15ಕ್ಕೆ ಹೋಲಿಸಿದಲ್ಲಿ ಶೇ. 14.89ರಷ್ಟು ಹೆಚ್ಚಳ ಕಂಡಿದೆ.

2016–17ನೇ ಸಾಲಿನಲ್ಲಿ ಒಟ್ಟು ಜಮೆಗಳು 1,61,956 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,30,758 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 31,036 ಕೋಟಿ ರೂ.ಗಳ. ಸಾಲ ಸೇರಿದಂತೆ 31,198 ಕೋಟಿ ರೂ.ಗಳ ಬಂಡವಾಳ ಜಮೆಗಳು ಒಳಗೊಂಡಿರುತ್ತದೆ.

1,30,236 ಕೋಟಿ ರೂ.ಗಳ ರಾಜಸ್ವ ವೆಚ್ಚ, 26,341 ಕೋಟಿ ರೂ.ಗಳ ಬಂಡವಾಳ ಹಾಗೂ ಸಾಲದ ಮರುಪಾವತಿ 6841 ಕೋಟಿ ರೂ.ಗಳ ವೆಚ್ಚವನ್ನು ಒಳಗೊಂಡು, ಒಟ್ಟು ವೆಚ್ಚವು 1,63,419 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.

ರಾಜಸ್ವ ಹೆಚ್ಚುವರಿಯನ್ನು 522 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ವಿತ್ತೀಯ ಕೊರತೆಯು 25,657 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದ್ದು, ಅದು ರಾಜ್ಯದ ಆಂತರಿಕ ಉತ್ಪನ್ನದ ಶೇ.2.12 ರಷ್ಟಾಗಿರುತ್ತದೆ.

2016–17ರ ಕೊನೆಯಲ್ಲಿ 2,08,557 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇ.17.22 ರಷ್ಟಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಡಿ 2016–17ನೇ ವರ್ಷಕ್ಕೆ ಆದೇಶಿಸಲಾದ ಶೇ. 25ರ ಮಿತಿಯೊಳಗಿರುತ್ತದೆ. ಆದ್ದರಿಂದ ಎಲ್ಲಾ ಮೂರು ವಿತ್ತೀಯ ಪರಿಮಾಣಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವು ನಿಗದಿಪಡಿಸಿರುವ ಮಿತಿಯೊಳಗಿರುತ್ತದೆ. ಇದು ರಾಜ್ಯದ ವಿತ್ತೀಯ ಶಿಸ್ತನ್ನು ಪ್ರತಿಬಿಂಬಿಸುತ್ತದೆ.




**ಸಂಪನ್ಮೂಲಗಳ ಕ್ರೋಢೀಕರಣ**

2016–17ನೇ ಸಾಲಿನ ರಾಜ್ಯದ ಒಟ್ಟು ಸ್ವಂತ ತೆರಿಗೆ ರಾಜಸ್ವವನ್ನು 2015–16ನೇ ಸಾಲಿನ ಪರಿಷ್ಕೃತ ಅಂದಾಜು ಮೀರಿ ಶೇ.10.98ರ ಹೆಚ್ಚಳದೊಂದಿಗೆ 83,864 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ತೆರಿಗೆಯೇತರ ರಾಜಸ್ವಗಳಿಂದ 6,220 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ.

ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 26,979 ಕೋಟಿ ರೂ.ಗಳನ್ನು ಹಾಗೂ 13,694 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಹಾಯಧನ ರೂಪದಲ್ಲಿ ರಾಜ್ಯ ಸರ್ಕಾರವು ನಿರೀಕ್ಷಿಸಿದೆ. ಈ ರಾಜಸ್ವ ಜಮೆಗಳಿಗೆ ಪೂರಕವಾಗಿ 31,036 ಕೋಟಿ ರೂ.ಗಳ ಒಟ್ಟು ಸಾಲಗಳು, 75 ಕೋಟಿ ರೂ.ಗಳ ಋಣೇತರ ಸ್ವೀಕೃತಿಗಳು ಮತ್ತು 87 ಕೋಟಿ ರೂ.ಗಳ ಸಾಲಗಳ ವಸೂಲು ಮೊತ್ತವನ್ನು ಅಂದಾಜಿಸಲಾಗಿದೆ.

ರಾಜ್ಯ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 9,710 ಕೋಟಿ ರೂ.ಗಳನ್ನು ಕ್ರೋಢಿಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ. ಈಗ ಆಯವ್ಯಯವನ್ನು ಗೌರವಾನ್ವಿತ ಸದನದ ಪರಿಗಣನೆಗಾಗಿ ಮಂಡಿಸುತ್ತಿದ್ದೇನೆ ಹಾಗೂ ಆಯವ್ಯಯ ಅಂದಾಜಿನನ್ವಯ 2016–17ನೇ ಸಾಲಿನ 31ನೇ ಜುಲೈ 2016 ರವರೆಗಿನ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್

ಜೈ ಕರ್ನಾಟಕ

❑

# ನಿಮಗಿದು ತಿಳಿದಿದೆಯೇ?

**ಬೆಲೆ ಸ್ಥಿರೀಕರಣ ನಿಧಿ**

ಕೃಷಿ ಉತ್ಪನ್ನಗಳ ಬೆಲೆ ನಿಗದಿತ ಮಟ್ಟಕ್ಕಿಂತ ಕುಸಿದ ಸಂದರ್ಭಗಳಲ್ಲಿ ರೈತರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸಲಾಗಿದೆ. ಈ ನಿಧಿ ರೈತರಿಗೆ ಬಿಕ್ಕಟ್ಟಿನ ಸಮಯದಲ್ಲಿ, ಸುಸ್ಥಿರ, ದೀರ್ಘಾವಧಿ ನೆರವು ಒದಗಿಸುತ್ತದೆ.

ಕಳೆದ ಕೆಲ ವರ್ಷಗಳಿಂದ ಟೀ, ಕಾಫಿ, ರಬ್ಬರ್ ಮತ್ತು ತಂಬಾಕು ಬೆಳೆಗಳು ಅಂತಾರಾಷ್ಟ್ರೀಯ ಮತ್ತು ದೇಶೀಯ ಬೆಳೆಗಳ ದರಗಳಲ್ಲಿ ತೀವ್ರ ಕುಸಿತ ಉಂಟಾದಾಗ, ಪ್ರಾಥಮಿಕ ಬೆಳೆಗಾರರು ಸಂಕಷ್ಟಕ್ಕೀಡಾದರು. ಬೆಳೆಗಾರರ ಬವಣೆ, ಮನವಿಗೆ ಸ್ಪಂದಿಸಿದ ವಾಣಿಜ್ಯ ಇಲಾಖೆ, ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ 2002 ಜೂನ್ ನಲ್ಲಿ ನೀಡಿದ ತಾತ್ವಿಕ ಒಪ್ಪಿಗೆ ಮೇರೆಗೆ ನಿಧಿ ಸ್ಥಾಪನೆಗೆ ಮುಂದಾಯಿತು. 2003ರ ಫೆಬ್ರವರಿಯಲ್ಲಿ ಅನುಮತಿ ದೊರೆತು ಏಪ್ರಿಲ್ – 2003ರಲ್ಲಿ ನಿಧಿ ಸ್ಥಾಪಿಸಲಾಯಿತು.

ಈ ಯೋಜನೆಯಡಿ ಬೆಳೆಗಾರರು ಮತ್ತು ಸರ್ಕಾರ ಬೆಳೆ ಉತ್ಪನ್ನದ ಪ್ರಮಾಣಕ್ಕೆ ಅನುಗುಣವಾಗಿ ನಿಗದಿತ ತಮ್ಮ ಪಾಲನ್ನು ನೀಡಬೇಕಾಗುತ್ತದೆ. ಪ್ರತಿ ವರ್ಷ ಸರ್ಕಾರ ಮತ್ತು ಬೆಳೆಗಾರ ತಲಾ ರೂ. 500 ಠೇವಣಿ ಇಡುತ್ತಾರೆ. ಆದರೆ ಈ ಹಣವನ್ನು ಹಿಂತೆಗೆದುಕೊಳ್ಳುವಂತಿಲ್ಲ.

ಬೆಳೆ ಬೆಲೆ ಅತ್ಯುತ್ತಮವಾಗಿ ಬಂದ ವರ್ಷದಲ್ಲಿ ಬೆಳೆಗಾರ 1000 ರೂ. ಠೇವಣಿ ಇಡುತ್ತಾನೆ. ಈಗಲೂ ಹಣವನ್ನು ಹಿಂದಕ್ಕೆ ಪಡೆಯುವಂತಿಲ್ಲ. ಆದರೆ, ಸಂಕಷ್ಟದ ವರ್ಷದಲ್ಲಿ ಸರ್ಕಾರ ಪ್ರತಿ ಬೆಳೆಗಾರನಿಗೆ ತಲಾ 1000/– ರೂ. ಠೇವಣಿ ಇಡುತ್ತದೆ. ಬೆಳೆಗಾರ ಈ ಹಣವನ್ನು ಪಡೆಯಬಹುದು. ಇದಕ್ಕಾಗಿ ಬೆಳೆಗಾರ ನಿಗದಿತ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರಬೇಕಾಗಿರುತ್ತದೆ. ಸಣ್ಣ ಬೆಳೆಗಾರರೂ ಕೂಡಾ ಠೇವಣಿ ಮುಕ್ತ ರೂ. 500 ರೂ. ಪಾವತಿಸಿ, ಈ ಯೋಜನೆಯಡಿ ನೊಂದಾಯಿಸಿಕೊಳ್ಳಬಹುದು.

2003 ಏಪ್ರಿಲ್ 1 ರಿಂದ ಅನ್ವಯವಾಗುವಂತೆ 10 ವರ್ಷ ಕಾಲ ಕಾರ್ಯಾನ್ವಯದಲ್ಲಿದ್ದ ಈ ಯೋಜನೆಯನ್ನು ನಂತರ ಮತ್ತೆ ಐದು ವರ್ಷಗಳ ಕಾಲ ಮುಂದುವರೆಸಲಾಗಿದೆ.

ಆರಂಭಿಕವಾಗಿ 3.42 ಲಕ್ಷ ಸಣ್ಣ ಬೆಳೆಗಾರರು ಈ ಯೋಜನೆಯಡಿಯಲ್ಲಿದ್ದರು. ಪ್ರಸ್ತುತ 2016–17 ಕೇಂದ್ರ ಬಜೆಟ್‌ನಲ್ಲಿ ಮಾರುಕಟ್ಟೆ ಮಧ್ಯಪ್ರವೇಶ ಬೆಲೆ ಬೆಂಬಲಕ್ಕಾಗಿ ಬೆಲೆ ಸ್ಥಿರೀಕರಣ ನಿಧಿಗಾಗಿ ರೂ. 900 ಕೋಟಿ ತೆಗೆದಿರಿಸಲಾಗಿದೆ. ❑

(39ನೇ ಪುಟದಿಂದ)

## ಬೃಹತ್ ಉದ್ಯೋಗ ಸೃಷ್ಟಿ, ಬೆಳವಣಿಗೆಗೆ ಚಾಲನೆ



ಮಾರ್ಚ್ 1, 2016ರ ನಂತರ ಆರಂಭವಾದ ಹೊಸ ಉತ್ಪಾದನಾ ಕಂಪೆನಿಗಳು ಲಾಭ ಸಂಬಂಧಿ ಅಥವಾ ಹೂಡಿಕೆ ಸಂಬಂಧಿ ಕಡಿತಗಳನ್ನು ಬಯಸದಿದ್ದರೆ ಮತ್ತು ಹೂಡಿಕೆ ಭತ್ಯೆ ಮತ್ತು ವೇಗವರ್ಧಿತ ಅಪಮೌಲ್ಯೀಕರಣವನ್ನು ಸ್ವೀಕರಿಸದೆ ಇದ್ದರೆ ಅಂಥವುಗಳಿಗೆ ಶೇ. 25ರ (ಸರ್ಚಾರ್ಜ್ ಮತ್ತು ಸೆಸ್ ಪ್ರತ್ಯೇಕ) ದರದಲ್ಲಿ ತೆರಿಗೆ ವಿಧಿಸುವ ಆಯ್ಕೆ ನೀಡುವ ಯೋಜನೆಯಿದೆ. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿಯಲ್ಲಿ ಒದಗಿಸಲಾದ ಸೇವೆಗಳಿಗೆ ಹಾಗೂ ಕೌಶಲಾಭಿವೃದ್ಧಿ ಹಾಗೂ ಉದ್ಯಮಶೀಲತೆ ಸಚಿವಾಲಯದ ಮೌಲ್ಯೀಕರಣ ಮಂಡಳಿ ಒದಗಿಸಿದ ಸೇವೆಗಳಿಗೆ ಸೇವಾ ತೆರಿಗೆಯಿಂದ ವಿನಾಯಿತಿ ನೀಡುವ ಪ್ರಸ್ತಾಪವೂ ಇದೆ.

ಚಿಲ್ಲರೆ ಮಾರಾಟ ರಂಗವು ಅತಿದೊಡ್ಡ ಸೇವಾ ರಂಗದ ಉದ್ಯೋಗಕರ್ತ ಕ್ಷೇತ್ರವಾಗಿದೆ. ನೀತಿನಿಯಮಗಳನ್ನು ಸರಳಗೊಳಿಸಿದರೆ ಈ ರಂಗದಲ್ಲಿ ಇನ್ನಷ್ಟು ಉದ್ಯೋಗಗಳನ್ನು ಸೃಷ್ಟಿಸಬಹುದು ಎಂಬುದು ಸರ್ಕಾರದ ಅಭಿಪ್ರಾಯ.

ಶಾಪಿಂಗ್ ಮಾಲ್‌ಗಳು ವಾರದ ಎಲ್ಲ ದಿನಗಳಲ್ಲಿಯೂ ತೆರೆದಿರಬಹುದಾದರೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಅಂಗಡಿಗಳು ಯಾಕೆ ಇದನ್ನು ಅನುಸರಿಸಬಾರದು ಎಂದು ಹಣಕಾಸು ಸಚಿವರು ಕೇಳಿದರು. ಕಾರ್ಮಿಕರ ಕಡ್ಡಾಯ ವಾರದ ರಜೆಯ ಹಕ್ಕು ಹಾಗೂ ದೈನಿಕ ಕೆಲಸದ ಅವಧಿಯ ಹಕ್ಕುಗಳ ರಕ್ಷಣೆಯೊಂದಿಗೇ ಅಂಗಡಿಗಳು ಸ್ವಯಂಪ್ರೇರಿತರಾಗಿ ವಾರದ ಎಲ್ಲ ಏಳು ದಿನಗಳಲ್ಲೂ ತೆರೆದಿರುವ ಅವಕಾಶವನ್ನು ನೀಡಬೇಕು.

ರಾಜ್ಯಗಳು ಸ್ವಯಂ ಇಚ್ಛೆಯಿಂದ ಅಳವಡಿಸಿಕೊಳ್ಳಬಲ್ಲ ಮಾದರಿ ಅಂಗಡಿ ಮುಂಗಟ್ಟುಗಳ ಮಸೂದೆಯನ್ನು ತಯಾರಿಸಿಕೊಡುವ ಉದ್ದೇಶವನ್ನು ಸರ್ಕಾರ ಹೊಂದಿದೆ. 35 ವರ್ಷ ವಯಸ್ಸಿಗಿಂತ ಕೆಳಗಿನ ಶೇ. 65ರಷ್ಟು ಜನಸಂಖ್ಯೆಯನ್ನು ಹೊಂದಿರುವ ಭಾರತದಲ್ಲಿ ಸರ್ಕಾರವು ಉದ್ಯೋಗಗಳನ್ನು ಸೃಷ್ಟಿಸಲು ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತಿದೆ. ದೊಡ್ಡ ಪ್ರಮಾಣದ ನಿರುದ್ಯೋಗಿ ಯುವಕರನ್ನು ಹೀರಿಕೊಳ್ಳುವ ಪರಿಸರವನ್ನು ಸೃಷ್ಟಿಸುವುದು ದೊಡ್ಡ ಸವಾಲು ಮತ್ತು ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ.

ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯವನ್ನು ಇಮ್ಮಡಿಗೊಳಿಸುವುದು, ಗ್ರಾಮೀಣ ಉದ್ಯೋಗ ಮತ್ತು ಮೂಲಸೌಕರ್ಯ, ಆರೋಗ್ಯ, ಶಿಕ್ಷಣ, ಕೌಶಲ ಮತ್ತು ಉದ್ಯೋಗ ಸೃಷ್ಟಿ, ಮೂಲಸೌಕರ್ಯ ಮತ್ತು ಬಂಡವಾಳ ಹೂಡಿಕೆ, ಹಣಕಾಸು ರಂಗದ ಸುಧಾರಣೆಗಳು, ಆಡಳಿತ ಮತ್ತು ಉದ್ಯಮ ನಿರ್ವಹಣೆಯ ಸರಳೀಕರಣ, ಹಣಕಾಸು ಶಿಸ್ತು ಮತ್ತು ತೆರಿಗೆ ಸುಧಾರಣೆ ಮುಂತಾದ ಕ್ರಮಗಳ ಮೂಲಕ ಭಾರತವನ್ನು ಪರಿವರ್ತಿಸುವುದು ಸರ್ಕಾರದ ಗುರಿಯಾಗಿದೆ. ❑

# ವಾರ್ತಾ ವಿಶೇಷ

ದೇಶದಲ್ಲಿ ದಲಿತರು, ಬುಡಕಟ್ಟು ಜನಾಂಗದವರು ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಒದಗಿಸಲಾಗಿರುವ ಮೀಸಲಾತಿ, ಅವರ ಹಕ್ಕಾಗಿದ್ದು ಅದರಲ್ಲಿ ಯಾವುದೇ ಅಸ್ಥಿರತೆ ಇರುವುದಿಲ್ಲ ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ಮಾರ್ಚ್ 21 ರಂದು ಡಾ. ಅಂಬೇಡ್ಕರ್ ಸ್ಮಾರಕ ಉಪನ್ಯಾಸ ನೀಡಿದ ಅವರು, ಮೀಸಲಾತಿಯನ್ನು ಯಾರೂ ಕಸಿದುಕೊಳ್ಳಲಾಗದು ಎಂದರು.

* * *

ಲೋಕಸಭೆಯು 2016ರ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ವಿಧೇಯಕಕ್ಕೆ ಮಾರ್ಚ್ 15 ರಂದು ಒಪ್ಪಿಗೆ ನೀಡಿದೆ.

* * *

ಕೇಂದ್ರ ಚುನಾವಣಾ ಆಯೋಗ ಕೇರಳ, ತಮಿಳು ನಾಡು, ಪಶ್ಚಿಮ ಬಂಗಾಳ, ಪುದುಚೇರಿ ಮತ್ತು ಅಸ್ಸಾಂ ರಾಜ್ಯ ವಿಧಾನ ಸಭೆಗಳಿಗೆ ಚುನಾವಣೆ ಪ್ರಕಟಿಸಿದೆ.

| ರಾಜ್ಯ | ಮತದಾನ ದಿನಾಂಕ |
|---|---|
| ಅಸ್ಸಾಂ 2 ಹಂತ | ಏಪ್ರಿಲ್ 04.04.2016 ಹಾಗೂ 11.04.2016 |
| ಕೇರಳ | ಮೇ 16.05.2016 |
| ತಮಿಳುನಾಡು | ಮೇ 04.05.2016 |
| ಪುದುಚೇರಿ | ಮೇ 04.05.2016 |
| ಪಶ್ಚಿಮ ಬಂಗಾಳ | ಏಪ್ರಿಲ್ 04.04.2016 |
| 1 ಹಂತ | ಏಪ್ರಿಲ್ 11.04.2016 |
| 2 ಹಂತ | ಏಪ್ರಿಲ್ 17.04.2016 |
| 3 ಹಂತ | ಏಪ್ರಿಲ್ 21.04.2016 |
| 4 ಹಂತ | ಏಪ್ರಿಲ್ 25.04.2016 |
| 5 ಹಂತ | ಮೇ 30.05.2016 |

* * *

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೊ – ಶ್ರೀ ಹರಿಕೋಟಾದಿಂದ ಮಾರ್ಚ್ 10 ರಂದು – ನ್ಯಾವಿಗೇಷನ್ ಉಪಗ್ರಹ ಐಆರ್‌ಎನ್‌ಎಸ್‌ಎಸ್ – 1 ಎಫ್ ಉಪಗ್ರಹವನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ.

ಈ ಉಪಗ್ರಹ ಭಾರತೀಯ ಮುಖ್ಯ ಭೂಮಿಯ 1500 ಕಿಲೋಮೀಟರ್ ವ್ಯಾಪ್ತಿಯಲ್ಲಿ ಸ್ಥಿತಿ ಮಾಹಿತಿ ಒದಗಿಸುವ ಸಾಮರ್ಥ್ಯ ಹೊಂದಿದೆ.

* * *

ವಿಶ್ವ ಆರೋಗ್ಯ ಸಂಸ್ಥೆಯು ಜಿಕಾ ವೈರಸ್ ರೋಗವನ್ನು, ಅಂತಾರಾಷ್ಟ್ರೀಯ ಮಟ್ಟದ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಎಂದು ಪ್ರಕಟಿಸಿದೆ. ಏಡಿಸ್ ಸೊಳ್ಳೆಯಿಂದ ಪ್ರಸರಣವಾಗುವ ಈ ರೋಗ 2015–16ರಿಂದ ವಿಶ್ವದ 41 ದೇಶಗಳಲ್ಲಿ ಪ್ರಚಲಿತದಲ್ಲಿದೆ. ❑

## ಪ್ರಕಟಣಾ ವಿಭಾಗದ ವಿವಿಧ ನಿಯತಕಾಲಿಕೆಗಳ ಪರಿಷ್ಕೃತ ಚಂದಾದರಗಳು

## New Rates for Subscription of Journals

| S.No | Name of the Journal | Subscription Price Per Copy Rs | Subscription Price for 1 Year Rs | Subscription Price for 2 Years Rs | Subscription Price for 3 Years Rs | Subscription Price for Special Issue Rs |
|---|---|---|---|---|---|---|
| 1 | Yojana * | 22 | 230 | 430 | 610 | 30 |
| 2 | Kurukshetra * | 22 | 230 | 430 | 610 | 30 |
| 3 | Ajkal * | 22 | 230 | 430 | 610 | 30 |
| 4 | Bal Bharti * | 15 | 160 | 300 | 420 | 20 |
| 5 | Employment News # | 12 | 530 | 1000 | 1400 | NA |

*** The prices of Journals are being revised from April 2016 issue onwards**

**# The Price of Employment News is being revised from 6th February 2016 issue onwards.**